ಬುಧವಾರ, ಮಾರ್ಚ್ 20, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕಣ್ಣ ಹೊಳಪು
ಮುಂಬೈನಲ್ಲಿ
ನಡೆದ ಕಾರ್ಯಕ್ರಮದಲ್ಲಿ
ನಟ ತಮನ್ನಾ
ಭಾಟಿಯಾ
ಕಾಣಿಸಿಕೊಂಡಿದ್ದು
ಹೀಗೆ...



ರಾಜ್ಯದಲ್ಲಿ 3 ದಿನ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕರಾವಳಿ, ದಕ್ಷಿಣ ಒಳನಾಡು ಹಾಗೂ ಮಲೆನಾಡು ಭಾಗದ ಅಲ್ಲಲ್ಲಿ ಮಾರ್ಚ್ 21ರಿಂದ ಮೂರು ದಿನಗಳ ಕಾಲ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ. ಕರಾವಳಿ ಭಾಗದ ಎಲ್ಲ ಜಿಲ್ಲೆಗಳಲ್ಲಿ ಮೋಡ ಕವಿದ ವಾತಾವರಣ ಇರಲಿದೆ.

ಉತ್ತರ ಒಳನಾಡಿನ ಬಾಗಲಕೋಟೆ, ಕೊಪ್ಪಳ ಜಿಲ್ಲೆಗಳಲ್ಲಿ ಗರಿಷ್ಠ ತಾಪಮಾನ ಸಾಮಾನ್ಯಕ್ಕಿಂತ 2ರಿಂದ 3 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗುವ ಸಾಧ್ಯತೆಯಿದೆ. ದಕ್ಷಿಣ ಒಳನಾಡಿನ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಗರಿಷ್ಠ ಉಷ್ಣಾಂಶ ಸಾಮಾನ್ಯಕ್ಕಿಂತ 2 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗಲಿದೆ. ರಾಜ್ಯದಲ್ಲಿಯೇ ಕೊಪ್ಪಳ ಜಿಲ್ಲೆಯಲ್ಲಿ ಮಂಗಳವಾರ ಗರಿಷ್ಠ ಉಷ್ಣಾಂಶ 38.9 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು.

ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣ • ಕೊಯಮತ್ತೂರು ಕಾರು ಸ್ಫೋಟಕ್ಕೆ ನಂಟು ಶಂಕೆ

ಅರೇಬಿಕ್ ಶಿಕ್ಷಕರು ಎನ್ಐಎ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಸ್ಲಾಮಿಕ್ ಸ್ಟೇಟ್(ಐಎಸ್) ಭಯೋತ್ಪಾದನಾ ಸಂಘಟನೆ ಜೊತೆ ನಂಟು ಹೊಂದಿದ್ದ ಹಾಗೂ ಕೊಯಮತ್ತೂರು ಕಾರು ಬಾಂಬ್ ಸ್ಫೋಟದಲ್ಲಿ ಭಾಗಿಯಾಗಿದ್ದ ಪ್ರಕರಣದಲ್ಲಿ ಬಂಧಿತರಾಗಿರುವ ಮದ್ರಾಸ್ ಅರೇಬಿಕ್ ಕಾಲೇಜು ಶಿಕ್ಷಕರನ್ನು ವಶಕ್ಕೆ ಪಡೆದಿರುವ ಎನ್ಐಎ (ರಾಷ್ಟ್ರೀಯ ತನಿಖಾ ದಳ) ಅಧಿಕಾರಿಗಳು, ದಿ ರಾಮೇಶ್ವರಂ ಕೆಫೆ ಪ್ರಕರಣ ಸಂಬಂಧ ವಿಚಾರಣೆ ನಡೆಸುತ್ತಿದ್ದಾರೆ.

ಬ್ರೂಕ್‌ಫೀಲ್ಡ್‌ನಲ್ಲಿ ಇರುವ ರಾಮೇಶ್ವರಂ ಕೆಫೆಯಲ್ಲಿ ಮಾರ್ಚ್ 1ರಂದು ನಡೆದಿದ್ದ ಬಾಂಬ್ ಸ್ಫೋಟ ಪ್ರಕರಣದ ತನಿಖೆ ನಡೆಸುತ್ತಿರುವ ಎನ್ಐಎ ಅಧಿಕಾರಿಗಳು, ಬಾಂಬ್ ಇಟ್ಟಿದ್ದವನ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದಾರೆ. ಐಎಸ್ ಜೊತೆ ನಂಟು ಹೊಂದಿದ್ದ ಶಂಕಿತರು ಕೃತ್ಯ ಎಸಗಿರುವ ಬಗ್ಗೆ ಅಧಿಕಾರಿಗಳು ಅನುಮಾನ ಹೊಂದಿದ್ದಾರೆ. ಇದೇ ಕಾರಣಕ್ಕೆ, ಹಳೇ ಬಾಂಬ್ ಸ್ಫೋಟ ಪ್ರಕರಣದ ಆರೋಪಿಗಳನ್ನು ಜೈಲಿನಿಂದ ಕಸ್ಟಡಿಗೆ ಪಡೆದು ವಿಚಾರಣೆಗೆ ಒಳಪಡಿಸುತ್ತಿದ್ದಾರೆ.

'ಐಎಸ್ ಜೊತೆ ನಂಟು ಹಾಗೂ ಕೊಯಮತ್ತೂರು ಕಾರು ಬಾಂಬ್ ಸ್ಫೋಟ ಪ್ರಕರಣದಲ್ಲಿ 2024ರ ಫೆಬ್ರುವರಿಯಲ್ಲಿ 21 ಸ್ಥಳಗಳ ಮೇಲೆ ದಾಳಿ ಮಾಡಲಾಗಿತ್ತು. ಚೆನ್ನೈನ ಜಮೀಲ್ ಬಾಷಾ ಉಮರಿ (55), ಕೊಯಮತ್ತೂರು ಮೌಲ್ವಿ ಎಂ. ಮೊಹಮ್ಮದ್ ಹುಸೇನ್ ಅಲಿಯಾಸ್ ಹುಸೇನ್ ಫೈಜಿ (38), ಐ. ಇರ್ಷಾತ್ (32) ಹಾಗೂ ಸೈಯದ್ ಅಬ್ದುರ್ ರಹಮಾನ್ ಉಮರಿಯನ್ನು(52) ಬಂಧಿಸಲಾಗಿತ್ತು. ನಾಲ್ವರೂ ತಮಿಳುನಾಡಿನ ಜೈಲಿನಲ್ಲಿದ್ದರು' ಎಂದು ತನಿಖಾ ಸಂಸ್ಥೆ ಮೂಲಗಳು ಹೇಳಿವೆ.

'ದಾಳಿ ಸಂದರ್ಭದಲ್ಲಿ ಶಂಕಿತರಿಂದ 6 ಲ್ಯಾಪ್‌ಟಾಪ್, 25 ಮೊಬೈಲ್, 34 ಸಿಮ್ ಕಾರ್ಡ್, 3 ಹಾರ್ಡ್ ಡಿಸ್ಕ್ ಹಾಗೂ 6 ಎಸ್‌ಡಿ ಕಾರ್ಡ್ ಜಪ್ತಿ ಮಾಡಲಾಗಿತ್ತು. ಇದೇ ಶಂಕಿತರು, ತಮಿಳುನಾಡು, ಕರ್ನಾಟಕ, ಕೇರಳ ಹಾಗೂ ಇತರೆ ರಾಜ್ಯಗಳಲ್ಲಿ ಸ್ಫೋಟಕ್ಕೆ ಸಂಚು ರೂಪಿಸಿದ್ದ ಸಂಗತಿ ತನಿಖೆಯಿಂದ ಕಂಡುಬಂದಿತ್ತು.

ಹೀಗಾಗಿ, ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟದ ವಿಚಾರಣೆಗಾಗಿ ನಾಲ್ವರನ್ನೂ ನ್ಯಾಯಾಲಯದ ಅನುಮತಿಯಂತೆ ಸೋಮವಾರ (ಮಾರ್ಚ್ 18) ಕಸ್ಟಡಿಗೆ ಪಡೆಯಲಾಗಿದೆ. ಮಾರ್ಚ್ 28ರವರೆಗೆ ವಿಚಾರಣೆ ನಡೆಸಲು ಅವಕಾಶವಿದೆ' ಎಂದು ಮೂಲಗಳು ತಿಳಿಸಿವೆ.

ಅರೇಬಿಕ್ ಕಾಲೇಜಿನಲ್ಲಿ ಕೆಲಸ: 'ಶಂಕಿತ ಜಮೀಲ್ ಬಾಷಾ ಉಮರಿ, ಮದ್ರಾಸ್ ಅರೇಬಿಕ್ ಕಾಲೇಜು ಶಿಕ್ಷಕರು. ಇವರ ಬಳಿ ಕಲಿತಿದ್ದ ಮೌಲ್ವಿ ಎಂ. ಮೊಹಮ್ಮದ್ ಹುಸೇನ್, ಐ. ಇರ್ಷಾತ್ ಹಾಗೂ ಸೈಯದ್ ಅಬ್ದುರ್ ರಹಮಾನ್ ಉಮರಿ ಸಹ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. ಇವರೆಲ್ಲರೂ ಸೇರಿಕೊಂಡು ಭಯೋತ್ಪಾದನಾ ಕೃತ್ಯಕ್ಕೆ ಸಂಚು ರೂಪಿಸುತ್ತಿದ್ದರು' ಎಂದು ಮೂಲಗಳು ಹೇಳಿವೆ.

'ಕಾಲೇಜು ವಿದ್ಯಾರ್ಥಿಗಳು ಹಾಗೂ ಮುಸ್ಲಿಂ ಸಮುದಾಯದ ಯುವಕರನ್ನು ಧಾರ್ಮಿಕವಾಗಿ ಪ್ರಚೋದಿಸುತ್ತಿದ್ದ ಶಂಕಿತರು, ಅವರನ್ನು ಭಯೋತ್ಪಾದನಾ ಸಂಘಟನೆಗೆ ಸೇರಿಸಿಕೊಳ್ಳುತ್ತಿದ್ದರು. ಶಂಕಿತ ಸೈಯದ್ ಅಬ್ದುರ್ ರಹಮಾನ್ ಉಮರಿ, ವಾಟ್ಸ್‌ಆ್ಯಪ್, ಟೆಲಿಗ್ರಾಂ ಹಾಗೂ ಇತರೆ ಸಾಮಾಜಿಕ ಮಾಧ್ಯಮಗಳ ಮೂಲಕ ಯುವಕರನ್ನು ಸಂಪರ್ಕಿಸುವ ಜವಾಬ್ದಾರಿ ವಹಿಸಿಕೊಂಡಿದ್ದ.'

'ಅರೇಬಿಕ್ ಭಾಷೆ ಕಲಿಸುವ ಸೋಗಿನಲ್ಲಿ ವಿದ್ಯಾರ್ಥಿಗಳನ್ನು ಪ್ರಚೋದಿಸುತ್ತಿದ್ದರು. 2022ರ ಅಕ್ಟೋಬರ್‌ನಲ್ಲಿ ನಡೆದಿದ್ದ ಕಾರು ಬಾಂಬ್ ಸ್ಫೋಟ ಹಾಗೂ ಇತರೆ ಪ್ರಕರಣಗಳಲ್ಲೂ ಶಂಕಿತರು ಭಾಗಿಯಾಗಿರುವ ಮಾಹಿತಿ ಇದೆ' ಎಂದು ತಿಳಿಸಿವೆ.

ಬಾಂಬ್ ಇಟ್ಟವನ ಪರಿಚಯ

'ರಾಮೇಶ್ವರಂ ಕೆಫೆಯಲ್ಲಿ ಸಿಕ್ಕಿರುವ ಸ್ಫೋಟಕ ಅವಶೇಷಗಳು ಹಾಗೂ ಕೊಯಮತ್ತೂರು ಕಾರು ಸ್ಫೋಟ ಸ್ಥಳದಲ್ಲಿ ಸಿಕ್ಕ ಅವಶೇಷಗಳಿಗೆ ಹೋಲಿಕೆಯಾಗುತ್ತಿವೆ. ಎರಡೂ ಪ್ರಕರಣಗಳಿಗೂ ಸಾಮ್ಯತೆ ಇರಬಹುದು. ಜಮೀಲ್ ಬಾಷಾ ಉಮರಿಗೆ ಬಾಂಬ್ ಇಟ್ಟವನ ಪರಿಚಯವಿರುವ ಅನುಮಾನವಿದ್ದು, ಇದೇ ಆಯಾಮದಲ್ಲಿ ತನಿಖೆ ಮುಂದುವರಿಸಲಾಗಿದೆ' ಎಂದು ಮೂಲಗಳು ಹೇಳಿವೆ.

'ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಯ ಫಿಶ್ ಮಾರ್ಕೆಟ್ ರಸ್ತೆಯ ಮಾಝ್ ಮುನೀರ್ ಅಹ್ಮದ್‌ನನ್ನು (26) ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಈತನಿಂದ ಕೆಲ ಮಾಹಿತಿ ಲಭ್ಯವಾಗಿದೆ' ಎಂದು ತಿಳಿಸಿವೆ.

ಸುದ್ದಿ 2 ನಿಮಿಷ

ಸಾಹಿತ್ಯ ಸಮ್ಮೇಳನ: ಲಾಂಛನ, ಧ್ಯೇಯವಾಕ್ಯ ಆಹ್ವಾನ

ಬೆಂಗಳೂರು: ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಲಾಂಛನ ಹಾಗೂ ಧ್ಯೇಯವಾಕ್ಯವನ್ನು ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಆಹ್ವಾನಿಸಿದೆ.

ಜೂನ್ 7ರಿಂದ 9ರವರೆಗೆ ಸಮ್ಮೇಳನ ನಡೆಯಲಿದೆ. ಲಾಂಛನ ಮತ್ತು ಅರ್ಥಪೂರ್ಣ ಧ್ಯೇಯವಾಕ್ಯವನ್ನು ಸಿದ್ಧಪಡಿಸುವ ಅವಕಾಶವನ್ನು ಸಾರ್ವಜನಿಕರಿಗೆ ನೀಡಲಾಗಿದೆ. ಪರಿಷತ್ತಿನ ಪರಂಪರೆ ಮತ್ತು ಹಿರಿಮೆ, ಮಂಡ್ಯ ಜಿಲ್ಲೆಯ ವಿಶೇಷತೆ ಮತ್ತು ಅನನ್ಯತೆ, ಅಲ್ಲಿನ ಸಾಧಕರು, ಉತ್ಪನ್ನಗಳ ವೈಶಿಷ್ಟ್ಯ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಮಹತ್ವ ಎಲ್ಲವನ್ನೂ ವಿವರಿಸುವಂತೆ ಲಾಂಛನ ಮತ್ತು ಧ್ಯೇಯವಾಕ್ಯ ಇರಬೇಕು ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ಆಯ್ಕೆಯಾದ ಧ್ಯೇಯವಾಕ್ಯ ಮತ್ತು ಲಾಂಛನಗಳನ್ನು ರೂಪಿಸಿದವರಿಗೆ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ವೇದಿಕೆಯ ಮೇಲೆ ಸನ್ಮಾನಿಸಲಾಗುವುದು. ಆಸಕ್ತರು ಧ್ಯೇಯ ವಾಕ್ಯ ಮತ್ತು ಲಾಂಛನಗಳನ್ನು ಏ.30ರೊಳಗೆ ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-18 ಈ ವಿಳಾಸಕ್ಕೆ ಕಳುಹಿಸಬೇಕು. ಬಂದ ಎಲ್ಲಾ ಸ್ವೀಕೃತಿಗಳನ್ನು ಪರಿಣತರ ಸಮಿತಿ ಪರಿಶೀಲಿಸಿ, ಸೂಕ್ತ ನಿರ್ಧಾರ ತೆಗೆದುಕೊಳ್ಳುತ್ತದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೀರಿನ ಸಮಸ್ಯೆ ನಿವಾರಣೆಗೆ ಆಗ್ರಹ: ಟವರ್ ಏರಿದ ಯುವಕ



ಇಂಡಿ (ವಿಜಯಪುರ ಜಿಲ್ಲೆ): ತಾಲ್ಲೂಕಿನ ತೆಗ್ಗೆಳ್ಳಿ ಗ್ರಾಮದಲ್ಲಿ ನೀರಿನ ಸಮಸ್ಯೆ ಪರಿಹರಿಸುವಂತೆ ಒತ್ತಾಯಿಸಿ ಗ್ರಾಮದ ನಿವಾಸಿ ಶಂಕರ ಚಂದ್ರಶೇಖರ ಕಡಣಿ ಎಂಬುವವರು ಮಂಗಳವಾರ ಇಂಡಿ ಪಟ್ಟಣದ ಬಸ್ ನಿಲ್ದಾಣದ ಬಳಿಯಿರುವ 250 ಅಡಿ ಎತ್ತರದ ಬಿಎಸ್ಎನ್ಎಲ್ ಮೊಬೈಲ್ ಟವರ್ ಏರಿದ್ದು ಆತಂಕಕ್ಕೆ ಕಾರಣವಾಯಿತು.

'ತೆಗ್ಗೆಳ್ಳಿ ಗ್ರಾಮದಲ್ಲಿ ನೀರಿನ ಸಮಸ್ಯೆಯಿದ್ದು, ಪರಿಹರಿಸಲು ಜನಪ್ರತಿನಿಧಿಗಳು, ಅಧಿಕಾರಿಗಳು ಆಸಕ್ತಿ ತೋರುತ್ತಿಲ್ಲ. ನೀರಿನ ಸಮಸ್ಯೆ ಬಗೆಹರಿಸಿದರೆ ಮಾತ್ರ ಕೆಳಗಿಳಿಯುವೆ' ಎಂದು ಶಂಕರ ಕಡಣಿ ತಿಳಿಸಿದರು.

'ನೀರಿನ ಸಮಸ್ಯೆ ನಿವಾರಿಸುವುದಾಗಿ ಗ್ರಾಮ ಪಂಚಾಯಿತಿ ಪಿಡಿಒ ಮತ್ತು ತಹಶೀಲ್ದಾರ್ ಮನವೊಲಿಸಿದ ಬಳಿಕ ಶಂಕರ ಟವರ್‌ನಿಂದ ಕೆಳಗಿಳಿದು ಬಂದರು. ತೆಗ್ಗೆಳ್ಳಿ ಗ್ರಾಮದಲ್ಲಿ ನೀರಿನ ಸಮಸ್ಯೆ ಪರಿಹರಿಸಲು ಆದ್ಯತೆ ನೀಡಲಾಗುವುದು' ಎಂದು ಉಪವಿಭಾಗಾಧಿಕಾರಿ ಅಬೀದ ಗದ್ಯಾಳ ಸುದ್ದಿಗಾರರಿಗೆ ತಿಳಿಸಿದರು.

ಜನರ ಬೆಂಬಲ ಗಳಿಸಲು ನಕ್ಸಲರ ಪ್ರಯತ್ನ

'ಬಡವರ ಪರ ಹೋರಾಟ': ಸಹಕಾರ ನೀಡುವಂತೆ ಕೊಡಗು ಜಿಲ್ಲೆಯ ಕಾಡಂಚಿನ ಜನರಲ್ಲಿ ಮನವಿ

ಪ್ರಜಾವಾಣಿ ವಾರ್ತೆ

ಮಡಿಕೇರಿ: 'ಬಡವರ ಪರವಾಗಿ ಹೋರಾಟ ಮಾಡುತ್ತಿದ್ದೇವೆ. ನಮಗೆ ಬೆಂಬಲ ನೀಡಿ' ಎಂದು ನಕ್ಸಲರು ತಾಲ್ಲೂಕಿನ ಕಾಡಂಚಿನ ಜನರಿಗೆ ಮನವಿ ಮಾಡಿರುವ ಸಂಗತಿ ತನಿಖೆಯಿಂದ ಗೊತ್ತಾಗಿದೆ. ಈ ಮೂಲಕ ನಕ್ಸಲರು ರಾಜ್ಯದಲ್ಲಿ ಮತ್ತೆ ತಮ್ಮ ಚಟುವಟಿಕೆಗಳನ್ನು ಚುರುಕುಗೊಳಿಸಿದ್ದಾರೆ ಎಂಬುದು ದೃಢಪಟ್ಟಿದೆ.

ಈ ಕುರಿತು ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ತಾಲ್ಲೂಕಿನ ಕಡಮಕಲ್ ಸಮೀಪದ ಕೂಜಿಮಲೆಯಲ್ಲಿ ಕಾಣಿಸಿಕೊಂಡಿದ್ದ ನಾಲ್ವರಲ್ಲಿ ಒಬ್ಬಾತ ನಕ್ಸಲರ ಪ್ರಮುಖ ನಾಯಕ ವಿಕ್ರಮ್‌ಗೌಡ ಎಂಬುದು ಬಹುತೇಕ ದೃಢಪಟ್ಟಿದೆ. ನಕ್ಸಲರ ಗುಂಪು ಅಂಗಡಿಯಲ್ಲಿ ದಿನಸಿ ಖರೀದಿಸಿ ತಮಗೆ ಬೆಂಬಲ ನೀಡುವಂತೆ ಮನವಿ ಮಾಡಿದೆ. ಸದ್ಯ, 40ಕ್ಕೂ ಅಧಿಕ ಮಂದಿ ಸಿಬ್ಬಂದಿ ಶೋಧ ನಡೆಸುತ್ತಿದ್ದಾರೆ' ಎಂದು ತಿಳಿಸಿದರು.

'ನಾಲ್ವರ ತಂಡದಲ್ಲಿ ಇಬ್ಬರು ಮಹಿಳೆಯರು, ಇಬ್ಬರು ಪುರುಷರಿದ್ದರು. ಎಲ್ಲರ ಕೈಯಲ್ಲೂ ಕೇವಲ ಬಂದೂಕು ಮಾತ್ರವಲ್ಲ ನಿಯತಕಾಲಿಕೆಗಳೂ ಇದ್ದವು. ತಮ್ಮ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡದಂತೆಯೂ ಎಚ್ಚರಿಕೆ ನೀಡಿದ್ದರು ಎಂದು ಸ್ಥಳೀಯರು ಹೇಳಿದ್ದಾರೆ. ಸದ್ಯ, ನಮಗೆ ಅವರ ಚಲನವಲನ ಕುರಿತು ಮಾಹಿತಿಗಳು ಸಿಕ್ಕಿದ್ದು, ಬಹಿರಂಗ ಪಡಿಸಲು ಸಾಧ್ಯವಿಲ್ಲ' ಎಂದರು.

ಸ್ಥಳದಲ್ಲೇ ಎಸ್.ಪಿ ಮೊಕ್ಕಾಂ: ನಕ್ಸಲ್ ನಿಗ್ರಹ ಪಡೆಯ ಎಸ್.ಪಿ ಜಿತೇಂದ್ರ ಕುಮಾರ್ ದಯಂ ಅವರು ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದು, ಶೋಧ ಕಾರ್ಯಾಚರಣೆಯ ಉಸ್ತುವಾರಿ ವಹಿಸಿಕೊಂಡಿದ್ದಾರೆ.

'ಇತ್ತ ಕೇರಳಕ್ಕೆ ಹೊಂದಿಕೊಂಡಂತಿರುವ ಕರಿಕೆಯಲ್ಲಿ ಭದ್ರತೆಯನ್ನು ಬಿಗಿಗೊಳಿಸಲಾಗಿದೆ. ಇಲ್ಲಿನ ಅಂತರರಾಜ್ಯ ಚೆಕ್‌ಪೋಸ್ಟ್‌ನಲ್ಲಿದ್ದ ಸಿಬ್ಬಂದಿ ಸಂಖ್ಯೆಯನ್ನು ದುಪ್ಪಟ್ಟುಗೊಳಿಸಲಾಗಿದೆ. ಇಲ್ಲಿ ಸಂಚರಿಸುವ ವಾಹನಗಳ ಮೇಲೆ ಚುನಾವಣಾ ದೃಷ್ಟಿಯಿಂದ ಮಾತ್ರವಲ್ಲದೆ, ನಕ್ಸಲರ ಕುರಿತೂ ಹೆಚ್ಚಿನ ನಿಗಾ ವಹಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ದುರ್ಗಮ ಅರಣ್ಯದೊಳಗೆ ನುಸುಳಿದ ತಂಡ?: ಕಳೆದ ತಿಂಗಳು ಕೇರಳದಿಂದ ಕರ್ನಾಟಕಕ್ಕೆ ನಕ್ಸಲರ ತಂಡವು ದುರ್ಗಮ ಅರಣ್ಯದ ಮೂಲಕ ನುಸುಳಿರಬಹುದು ಎಂಬ ಶಂಕೆ ಬಲವಾಗಿದೆ.

'ಕುಟ್ಟ ಭಾಗದಲ್ಲಿ ನಕ್ಸಲ್ ನಿಗ್ರಹ ಪಡೆಯ ಸಿಬ್ಬಂದಿ ನಿರಂತರವಾಗಿ ಶೋಧ ನಡೆಸುತ್ತಿರುವುದರಿಂದ ಭಾಗಮಂಡಲದ ಅರಣ್ಯದೊಳಗಿಂದ ನಕ್ಸಲರು ನುಸುಳಿರಬಹುದು. ಅದಕ್ಕೆ ಪೂರಕ ಎಂಬಂತೆ ಫೆಬ್ರುವರಿ 16ರಂದು ಕರ್ನಾಟಕದ ಗಡಿಗೆ ಸಮೀಪದ ಕೇರಳದ ಕಾಂಜಿರಕೊಲ್ಲಿ ಎಂಬಲ್ಲಿ 6 ಮಂದಿ ಇದ್ದ ನಕ್ಸಲರ ಗುಂಪು ಕಾಡಾನೆಯೊಂದರ ದಾಳಿಗೆ ಸಿಲುಕಿತು. ಆ ವೇಳೆ ಕಳೆದ 21 ವರ್ಷಗಳಿಂದ ಭೂಗತನಾಗಿದ್ದ ಚಿಕ್ಕಮಗಳೂರು ಜಿಲ್ಲೆಯ ಶಂಕಿತ ನಕ್ಸಲ್ ಸುರೇಶ್ ಎಂಬಾತ ತೀವ್ರವಾಗಿ ಗಾಯಗೊಂಡಿದ್ದರಿಂದ ನಕ್ಸಲರ ಗುಂಪು ಆತನನ್ನು ಅಲ್ಲಿಯೇ ಬಿಟ್ಟು ತೆರಳಿತು. ಬಳಿಕ ಸುರೇಶ್‌ನನ್ನು ಕೇರಳದ ಪೊಲೀಸರು ಆಸ್ಪತ್ರೆಗೆ ದಾಖಲಿಸಿ ಬಂಧಿಸಿದರು. ಅಲ್ಲಿಂದ ತೆರಳಿದ ಗುಂಪು ದುರ್ಗಮ ಅರಣ್ಯ ಎನಿಸಿದ ಭಾಗಮಂಡಲ– ತಲಕಾವೇರಿ ವನ್ಯಜೀವಿ ವಲಯದ ಮೂಲಕ ರಾಜ್ಯಕ್ಕೆ ಬಂದಿದೆ ಎಂಬ ಅನುಮಾನ ಪೊಲೀಸರದ್ದು' ಎಂದು ಮೂಲಗಳು ತಿಳಿಸಿವೆ.



ಕರ್ನಾಟಕ– ಕೇರಳ ಗಡಿ ಪ್ರದೇಶ ಕರಿಕೆಯ ಚೆಕ್‌ಪೋಸ್ಟ್‌ನಲ್ಲಿ ಮಂಗಳವಾರ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ

ಹಾಸನದಲ್ಲೂ ಕಟ್ಟೆಚ್ಚರ

ಹಾಸನ: ನೆರೆಯ ಕೊಡಗು ಜಿಲ್ಲೆಯಲ್ಲಿ ನಕ್ಸಲ್ ಚಟುವಟಿಕೆ ಕಂಡು ಬಂದಿರುವುದರಿಂದ ಜಿಲ್ಲೆಯಲ್ಲಿಯೂ ಕಟ್ಟೆಚ್ಚರ ವಹಿಸಲಾಗಿದೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ನೇತೃತ್ವದಲ್ಲಿ ಉನ್ನತ ಮಟ್ಟದ ಸಭೆ ನಡೆಸಲಾಗಿದ್ದು, ಶೋಧ ಕಾರ್ಯಾಚರಣೆ ಬಗ್ಗೆ ಚರ್ಚಿಸಲಾಗಿದೆ. ಪರಿಸ್ಥಿತಿ ನೋಡಿಕೊಂಡು, ಪಕ್ಕದ ಜಿಲ್ಲೆಯ ಪೊಲೀಸರಿಂದ ಮಾಹಿತಿ ಪಡೆದು, ಶೋಧ ಕಾರ್ಯಾಚರಣೆ ನಡೆಸುವ ಬಗ್ಗೆ ಯೋಚಿಸಲಾಗುತ್ತಿದೆ.

'ಸಕಲೇಶಪುರ ಭಾಗದಲ್ಲಿ ಈ ಹಿಂದೆ ನಕ್ಸಲರು ಕಾಣಿಸಿಕೊಂಡಿರುವ ಘಟನೆಗಳು ನಡೆದಿವೆ. ಇದೀಗ ಕೊಡಗು ಗಡಿಭಾಗದಲ್ಲಿ ನಕ್ಸಲರು ಕಾಣಿಸಿಕೊಂಡಿರುವುದರಿಂದ ಜಿಲ್ಲೆಯಲ್ಲೂ ಕಟ್ಟೆಚ್ಚರ ವಹಿಸಲಾಗಿದೆ' ಎಂದು ಎಸ್ಪಿ ಮೊಹಮ್ಮದ್ ಸುಜೀತಾ ತಿಳಿಸಿದ್ದಾರೆ.

ಹೃದಯ ಶಸ್ತ್ರಚಿಕಿತ್ಸೆ: ಚೆನ್ನೈಗೆ ತೆರಳಿದ ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ಹೃದಯದ ಶಸ್ತ್ರಚಿಕಿತ್ಸೆಗಾಗಿ ಮಂಗಳವಾರ ಚೆನ್ನೈಗೆ ತೆರಳಿದರು. ಗುರುವಾರ ಶಸ್ತ್ರಚಿಕಿತ್ಸೆ ನಡೆಯಲಿದೆ.

ಚೆನ್ನೈ ಪ್ರಯಾಣಕ್ಕೂ ಮೊದಲು ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದ ಕುಮಾರಸ್ವಾಮಿ, 'ಹುಟ್ಟಿನಿಂದಲೇ ನನ್ನ ಹೃದಯದ ಕವಾಟ ಒಂದರಲ್ಲಿ ಸಮಸ್ಯೆ ಇದೆ. ಹಿಂದೆ ಎರಡು ಬಾರಿ ಪ್ರಾಣಿಜನ್ಯ ಪದಾರ್ಥಗಳಿಂದ ತಯಾರಿಸಿದ 'ಟಿಶ್ಯೂ ಸ್ಟೆಂಟ್' ಅಳವಡಿಸಲಾಗಿತ್ತು. ಈಗ ಲೋಹದ ಸ್ಟೆಂಟ್ ಅಳವಡಿಸುವ ಶಸ್ತ್ರಚಿಕಿತ್ಸೆಗಾಗಿ ಹೋಗುತ್ತಿದ್ದೇನೆ' ಎಂದರು.



ಜಲ ಸಂಕಟ... ಕಲಬುರಗಿಯ ಹುಮನಾಬಾದ್ ರಿಂಗ್ ರಸ್ತೆಯ ಭವಾನಿನಗರದಲ್ಲಿ ನೀರಿನ ಸಮಸ್ಯೆ ತೀವ್ರವಾಗಿದ್ದು, ವಾರಕ್ಕೊಮ್ಮೆ ನಲ್ಲಿಗಳಲ್ಲಿ ಬರುವ ನೀರು ತುಂಬಿಸಿಕೊಳ್ಳಲು ಜನ ಪೈಪೋಟಿಗೆ ಇಳಿಯಬೇಕಿದೆ –ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

ಕಾಲೇಜು ಶೌಚಾಲಯದಲ್ಲಿ ಕ್ಯಾಮೆರಾ ಪ್ರಕರಣ

ಸಿಐಡಿಯಿಂದ ಚಾರ್ಜ್‌ಶೀಟ್ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಉಡುಪಿ: ಇಲ್ಲಿಯ ನೇತ್ರಜ್ಯೋತಿ ಪ್ಯಾರಾ ಮೆಡಿಕಲ್ ಕಾಲೇಜಿನ ಶೌಚಾಲಯದಲ್ಲಿ ನಡೆದಿದೆ ಎನ್ನಲಾದ ವಿಡಿಯೊ ಚಿತ್ರೀಕರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಅಧಿಕಾರಿಗಳು ಮಂಗಳವಾರ ಉಡುಪಿಯ ಪ್ರಧಾನ ಸಿವಿಲ್ ಮತ್ತು ಜೆಎಂಎಫ್ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಪ್ರಕರಣದ ತನಿಖಾಧಿಕಾರಿ ಸಿಐಡಿ ಡಿವೈಎಸ್ಪಿ ಅಂಜು ಮಾಲಾ, ದೋಷಾರೋಪ ಪಟ್ಟಿ ಸಲ್ಲಿಸಿದ್ದು, ಅದರಲ್ಲಿಯ ಅಂಶಗಳು ಬಹಿರಂಗವಾಗಬೇಕಿದೆ.

ಪ್ರಕರಣದ ಹಿನ್ನೆಲೆ: 2023ರ ಜುಲೈ 18 ರಂದು ಉಡುಪಿಯ ನೇತ್ರಜ್ಯೋತಿ ಪ್ಯಾರಾ ಮೆಡಿಕಲ್ ಕಾಲೇಜಿನ ಶೌಚಾಲಯದಲ್ಲಿ ಮೂವರು ವಿದ್ಯಾರ್ಥಿನಿಯರು ವಿಡಿಯೊ ಚಿತ್ರೀಕರಣ ನಡೆಸಿದ್ದರು ಎಂಬ ಆರೋಪ ಕೇಳಿಬಂದಿತ್ತು. ಘಟನೆ ಸಂಬಂಧ ಹಿಂದೂಪರ ಸಂಘಟನೆಗಳು ತೀವ್ರ ಪ್ರತಿಭಟನೆ ನಡೆಸಿದ್ದವು. ಪ್ರತಿಭಟನೆ ರಾಜಕೀಯ ಸ್ವರೂಪ ಪಡೆದುಕೊಂಡು ಕೋಲಾಹಲ ಸೃಷ್ಟಿಸಿತ್ತು.

ಆರಂಭದಲ್ಲಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ಮಲ್ಪೆ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದರು. ಬಳಿಕ ಸರ್ಕಾರ ತನಿಖೆಯನ್ನು ಸಿಐಡಿಗೆ ವಹಿಸಿತ್ತು. ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯೆ ಖುಷ್ಬು ಸುಂದರ್ ಕಾಲೇಜಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡಿದ್ದರು.

ಪ್ರಕರಣದಲ್ಲಿ ಆರೋಪಿತ ಮೂವರು ವಿದ್ಯಾರ್ಥಿನಿಯರು ಹಾಗೂ ಕಾಲೇಜು ಆಡಳಿತ ಮಂಡಳಿಗೆ ನ್ಯಾಯಾಲಯ ಹಿಂದೆ ಜಾಮೀನು ನೀಡಿತ್ತು.

ಚುನಾವಣಾ ಬಾಂಡ್: ಆಯೋಗಕ್ಕೆ ಬಗೆಬಗೆಯ ಉತ್ತರ

ನವದೆಹಲಿ (ಪಿಟಿಐ): ಚುನಾವಣಾ ಬಾಂಡ್‌ಗಳ ವಿವರ ನೀಡುವಂತೆ ಚುನಾವಣಾ ಆಯೋಗವು ರಾಜಕೀಯ ಪಕ್ಷಗಳಿಗೆ ಮಾಡಿರುವ ಮನವಿಗೆ ಪ್ರತಿಯಾಗಿ ಬಗೆಬಗೆಯ ಉತ್ತರಗಳು ಬರುತ್ತಿವೆ. ಕೆಲವು ಸಂದರ್ಭಗಳಲ್ಲಿ ಕೇಳದೆ ಇರುವ ಪ್ರಶ್ನೆಗಳಿಗೂ ಉತ್ತರ ಬರುತ್ತಿದೆ.

ಪಕ್ಷವೊಂದು ತನ್ನ ನೋಂದಣಿ ರದ್ದುಪಡಿಸುವಂತೆ ಕೋರಿದೆ. ಇನ್ನೊಂದು ಪಕ್ಷವು ತನ್ನ ಮುಖ್ಯಸ್ಥ ಪ್ರತಿ ಮೂರು ತಿಂಗಳಿಗೊಮ್ಮೆ ₹500ನ್ನು ಪಕ್ಷದ ನಿಧಿಗೆ ಖುದ್ದಾಗಿ ನೀಡುತ್ತಿದ್ದಾರೆ ಎಂದು ಹೇಳಿದೆ.

ಚುನಾವಣಾ ಬಾಂಡ್ ಮೂಲಕ ಹಣ ಪಡೆದುಕೊಳ್ಳದೆ ಇರುವುದಕ್ಕೆ ಕಾರಣ ಏನು ಎಂಬುದನ್ನು ಕೆಲವು ಪಕ್ಷಗಳು ಆಯೋಗಕ್ಕೆ ತಿಳಿಸಿವೆ. ಇನ್ನು ಕೆಲವು ಪಕ್ಷಗಳು ಮಾಹಿತಿ ನೀಡಲು ತಮ್ಮಿಂದ ಆಗುತ್ತಿಲ್ಲ ಎಂದು ತಿಳಿಸಿವೆ.

ತಾನು ಹೊಸ ಪಕ್ಷ, ಚುನಾವಣೆಯಲ್ಲಿ ತಾನು ಮತ ಗಳಿಸಿಲ್ಲದ ಕಾರಣ ಹಂಚಿಕೊಳ್ಳಲು ತನ್ನಲ್ಲಿ ಯಾವ ವಿವರವೂ ಇಲ್ಲ ಎಂದು ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷ ಹೇಳಿದೆ. ಸರ್ವಜನ ಲೋಕಶಕ್ತಿ ಪಕ್ಷವು ತಾನು ಇದುವರೆಗೆ ದೇಣಿಗೆ ಸ್ವೀಕರಿಸಿಲ್ಲ ಎಂದು ತಿಳಿಸಿದೆ.

ಹತಾಶೆ ತೋಡಿಕೊಂಡಿರುವ ಭಾರತ್ ಕಾ ಕಿಸಾನ್ ಮಜ್ದೂರ್ ಪಕ್ಷವು, ತನಗೆ ಉದ್ಯಮಿಗಳಿಂದಾಗಲಿ ಬಂಡವಾಳಶಾಹಿಗಳಿಂದಾಗಲಿ ಬೆಂಬಲ ಇಲ್ಲ ಎಂದು ಹೇಳಿದೆ. ಹೀಗಾಗಿ ಚುನಾವಣಾ ಬಾಂಡ್ ಮೂಲಕ ತನಗೆ ಹಣ ಬಂದಿಲ್ಲ ಎಂದಿದೆ.

ತಮಿಳುನಾಡು ಮೂಲದ ತಮಿಳರ್ ದೇಶಿಯ ಮುನ್ನಣಿ ಪಕ್ಷವು ತನ್ನ ನಾಯಕರಿಗೆ ಆರೋಗ್ಯ ಸರಿ ಇಲ್ಲದ ಕಾರಣ ನಿಗದಿತ ಅವಧಿಯೊಳಗೆ ಮಾಹಿತಿ ನೀಡಲು ಆಗುತ್ತಿಲ್ಲ ಎಂದು ತಿಳಿಸಿದೆ. ಅಲ್ಲದೆ, 2023ರ ಸೆಪ್ಟೆಂಬರ್ 30ರವರೆಗೆ ತಾನು ಬಾಂಡ್ ಮೂಲಕ ದೇಣಿಗೆ ಪಡೆದಿಲ್ಲ ಎಂಬುದನ್ನೂ ತಿಳಿಸಿದೆ.

ಎಂಎನ್‌ಕೆ ಪಕ್ಷವು ತನ್ನ ಅಧ್ಯಕ್ಷ ಎಸ್. ಸತ್ಯಮೂರ್ತಿ ಅವರು ಪ್ರತಿ ಮೂರು ತಿಂಗಳಿಗೆ ಒಮ್ಮೆ ₹500ಅನ್ನು ಪಕ್ಷದ ನಿಧಿಗೆ ನೀಡುತ್ತಾರೆ ಎಂದು ಹೇಳಿದೆ. ಪಕ್ಷದ ವಿಸರ್ಜನೆಗೆ ಈಗಾಗಲೇ ನಿರ್ಣಯ ಕೈಗೊಂಡಿರುವ ಕನ್ನಡನಾಡು ಪಕ್ಷವು ತನಗೆ ನೀಡಿರುವ ಮಾನ್ಯತೆಯನ್ನು ಹಿಂಪಡೆಯಬೇಕು ಎಂದು ಆಯೋಗವನ್ನು ಕೋರಿದೆ.

ಆಸ್ರಾ ಲೋಕಮಂಚ ಪಕ್ಷ, ಭಾರತೀಯ ಸಾರ್ಥಕ ಪಕ್ಷ, ರಾಷ್ಟ್ರೀಯ ಭ್ರಷ್ಟಾಚಾರ ಮುಕ್ತಿ ಪಕ್ಷ ತಾವು ಚುನಾವಣಾ ಬಾಂಡ್ ಮೂಲಕ ದೇಣಿಗೆ ಪಡೆಯುವ ಅರ್ಹತೆ ಹೊಂದಿಲ್ಲ ಎಂಬುದನ್ನು ತಿಳಿಸಿವೆ.

1,980 ಶುದ್ಧ ನೀರಿನ ಘಟಕ ಬಂದ್

• ಗೋವರ್ಧನ ಎಸ್.ಎನ್,

ಹುಬ್ಬಳ್ಳಿ: ತೀವ್ರ ಬರದಿಂದ ಒಂದೆಡೆ ಕುಡಿಯುವ ನೀರಿನ ಕೊರತೆಯಾದರೆ, ಮತ್ತೊಂದೆಡೆ ಪೂರೈಕೆಯಾಗುತ್ತಿರುವ ನೀರು ಶುದ್ಧವಾಗಿಲ್ಲ ಎಂಬ ಆರೋಪ ವ್ಯಕ್ತವಾಗಿದೆ. ಇದರ ಮಧ್ಯೆ ವಿವಿಧ ಜಿಲ್ಲೆಗಳಲ್ಲಿ ಶುದ್ಧ ಕುಡಿಯುವ ನೀರು ಪೂರೈಸುವ 1,980 ಘಟಕಗಳು ಬಂದ್ ಆಗಿವೆ.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಮಾಹಿತಿಯಂತೆ ರಾಜ್ಯದಲ್ಲಿ ಒಟ್ಟು 18,893 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ನಿರ್ಮಿಸಲಾಗಿತ್ತು, ಈ ಪೈಕಿ 16,913 ಘಟಕಗಳು ಸಕ್ರಿಯವಾಗಿವೆ. ಫೆಬ್ರುವರಿ 29ವರೆಗೆ 1,980 ಘಟಕಗಳು ಬಂದ್ ಆಗಿವೆ.

'ಘಟಕಗಳಲ್ಲಿ ಸಣ್ಣ ಪುಟ್ಟ ಸಮಸ್ಯೆ ಇದ್ದರೆ, ನಿರ್ವಹಣೆ ಗುತ್ತಿಗೆ ಪಡೆದವರು ದುರಸ್ತಿ ಮಾಡುತ್ತಾರೆ. ಹಲವು ಬಾರಿ ದೂರು ಬಂದರೂ ದುರಸ್ತಿ ಮಾಡದ ಗುತ್ತಿಗೆದಾರರ ಗುತ್ತಿಗೆ ಒಪ್ಪಂದ ರದ್ದು ಮಾಡಲಾಗುತ್ತದೆ. ಶಾಶ್ವತ ದುರಸ್ತಿ ಅವಶ್ಯವಿರುವ ಘಟಕಗಳು ಬಂದ್ ಆಗಿವೆ. ಕಳೆದ ಮೂರು ವರ್ಷಗಳಿಂದ ಹೊಸ ಘಟಕ ಸ್ಥಾಪನೆಗೆ ಇಲಾಖೆಯಿಂದ ಅನುಮತಿ ನೀಡಿಲ್ಲ' ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

'ಖಾಸಗಿ ಘಟಕಗಳು ಬಂದ್ ಆದರೂ ಜನರು ಸ್ಥಳೀಯ ಸಂಸ್ಥೆಯ ಅಧಿಕಾರಿಗಳನ್ನು ಪ್ರಶ್ನಿಸುತ್ತಾರೆ. ಇವು ಇಲಾಖೆ ವ್ಯಾಪ್ತಿಗೆ ಬರುವುದಿಲ್ಲ. ಇಲಾಖೆ ಅನುಮತಿ ನೀಡಿದ, ಸ್ಥಳೀಯ ಸಂಸ್ಥೆಗಳು ನಿರ್ವಹಿಸುತ್ತಿರುವ ಘಟಕಗಳಲ್ಲಿ ಸಮಸ್ಯೆ ಕಂಡು ಬಂದರೆ, ದೂರು ಸಲ್ಲಿಸಬಹುದು. ಪಿಡಿಒ ಮಟ್ಟದಿಂದ ಜಿಲ್ಲಾ ಪಂಚಾಯಿತಿ ಮಟ್ಟದವರೆಗೆ ಸಮಸ್ಯೆ ಪರಿಹರಿಸಲು ಶ್ರಮಿಸಲಾಗುತ್ತದೆ. ಅಲ್ಲಿ ಪರಿಹಾರವಾಗದಿದ್ದರೆ ಇಲಾಖೆ ಪರಿಹರಿಸಲಿದೆ' ಎಂದು ಮಾಹಿತಿ ನೀಡಿದರು.

'ಘಟಕಗಳು ಸ್ಥಾಪನೆಯಾದ ಕಡೆಯಿಂದ ಸ್ಥಳಾಂತರ ಮಾಡಲು ಒತ್ತಾಯ ಮಾಡಿದಾಗ, ಬಳಕೆ ಇಲ್ಲದಾಗ ಶುದ್ಧ ಕುಡಿಯುವ ನೀರಿನ ಘಟಕಗಳು ಬಂದ್ ಆಗಿವೆ. ಕೆಲವೆಡೆ ಮಕ್ಕಳು ಹಾಳು ಮಾಡಿದ್ದಾರೆ. ಇನ್ನೂ ಕೆಲವೆಡೆ ಘಟಕಗಳಲ್ಲಿನ ಯಂತ್ರೋಪಕರಣಗಳನ್ನು ಕಳವು ಮಾಡಲಾಗಿದೆ. ಜನರು ಜವಾಬ್ದಾರಿಯಿಂದ ನೋಡಿಕೊಳ್ಳಬೇಕು' ಎಂದು ಧಾರವಾಡ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸ್ವರೂಪಾ 'ಪ್ರಜಾವಾಣಿ'ಗೆ ತಿಳಿಸಿದರು.

> **ಜಲಮೂಲಗಳಲ್ಲಿ ನೀರು ತಳ ಮುಟ್ಟಿದೆ, ಕೆಲವೆಡೆ ಫ್ಲೋರೈಡ್ ಸಮಸ್ಯೆ ಇದೆ. ಆದಷ್ಟು ಬೇಗ ಕುಡಿಯುವ ನೀರಿನ ಘಟಕ ದುರಸ್ತಿ ಮಾಡಿಸಬೇಕು**
> **ಶಿವರಾಜ ಹೂಗಾರ**
> ಹುಬ್ಬಳ್ಳಿ ನಿವಾಸಿ

ಇಬ್ಬರು ಮಕ್ಕಳೊಂದಿಗೆ ತಾಯಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಚಳ್ಳಕೆರೆ (ಚಿತ್ರದುರ್ಗ): ಕೌಟುಂಬಿಕ ಕಲಹದಿಂದ ಮನನೊಂದು ಮಹಿಳೆಯೊಬ್ಬರು ಇಬ್ಬರು ಮಕ್ಕಳೊಂದಿಗೆ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡ ತಾಲ್ಲೂಕಿನ ಮಲ್ಲಸಮುದ್ರ ಗ್ರಾಮದಲ್ಲಿ ಮಂಗಳವಾರ ನಡೆದಿದೆ.

ಗ್ರಾಮದ ತಲಾರಿ ಮಾರಕ್ಕ (24), ಮಕ್ಕಳಾದ ನಯನ್ (4), ಹರ್ಷವರ್ಧನ (2) ಮೃತಪಟ್ಟವರು. ಜಾಲಿ ಗಿಡದ ಬೇಲಿಯ ಬಳಿ ಇವರು ಪೆಟ್ರೋಲ್ ಸುರಿದುಕೊಂಡು ಬೆಂಕಿಗೆ ಆಹುತಿಯಾಗಿದ್ದಾರೆ ಎಂದು ತಳಕು ಠಾಣೆಯ ಪೊಲೀಸರು ಮಾಹಿತಿ ನೀಡಿದ್ದಾರೆ.

ವೃತ್ತಿಯಲ್ಲಿ ಚಾಲಕನಾಗಿರುವ ತಿಪ್ಪೇಸ್ವಾಮಿ ಹಾಗೂ ತಲಾರಿ ಮಾರಕ್ಕ ಏಳು ವರ್ಷಗಳ ಹಿಂದೆ ವಿವಾಹವಾಗಿದ್ದರು. ಕೌಟುಂಬಿಕ ಕಲಹದ ಕಾರಣಕ್ಕೆ ದಂಪತಿ ನಡುವೆ ವೈಮನಸ್ಸು ಉಂಟಾಗಿತ್ತು. ಇದರಿಂದ ಮನನೊಂದ ಮಾರಕ್ಕ, ಮಕ್ಕಳನ್ನು ಕರೆದುಕೊಂಡು ಗ್ರಾಮದ ಹೊರಭಾಗಕ್ಕೆ ತೆರಳಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮಾರಕ್ಕ ತನ್ನ ಇಬ್ಬರು ಮಕ್ಕಳ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದಾರೆ. ನಂತರ ತಾವೂ ಆಹುತಿಯಾಗಿದ್ದಾರೆ. ಬೆಂಕಿಯನ್ನು ಗಮನಿಸಿದ ಗ್ರಾಮಸ್ಥರು ಘಟನಾ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸುವ ಹೊತ್ತಿಗೆ ಮೂರು ಜೀವಗಳು ಸುಟ್ಟು ಕರಕಲಾಗಿದ್ದವು. ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಿನಾರಾಯಣ, ಡಿವೈಎಸ್‌ಪಿ ರಾಜಣ್ಣ ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಮೇಘನಾ ಫುಡ್ಸ್ ಮೇಲೆ ಐ.ಟಿ ದಾಳಿ

ಬೆಂಗಳೂರು: ಹೈದರಾಬಾದ್‌ನ ಮೇಘನಾ ಫುಡ್ಸ್ ಸಮೂಹದ ಬಿರಿಯಾನಿ ಹೋಟೆಲ್‌ಗಳ ಮೇಲೆ ಮಂಗಳವಾರ ದಾಳಿ ನಡೆಸಿರುವ ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು, ಇಡೀ ದಿನ ಶೋಧ ನಡೆಸಿದರು.

ಕೋರಮಂಗಲ, ಇಂದಿರಾನಗರ, ಜಯನಗರ, ರೆಸಿಡೆನ್ಸಿ ರಸ್ತೆ, ಮಾರತ್ತಹಳ್ಳಿ ಸೇರಿದಂತೆ ಬೆಂಗಳೂರಿನ ಹಲವೆಡೆ ಮೇಘನಾ ಫುಡ್ಸ್‌ನ ಹೋಟೆಲ್‌ಗಳಿವೆ. ನಗರದಲ್ಲಿರುವ ಎಂಟಕ್ಕೂ ಹೆಚ್ಚು ಮಳಿಗೆಗಳಲ್ಲಿ ಆದಾಯ ತೆರಿಗೆ ಅಧಿಕಾರಿಗಳು ಶೋಧ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮೇಘನಾ ಫುಡ್ಸ್ 2006ರಿಂದಲೂ ಬೆಂಗಳೂರಿನಲ್ಲಿ ಹೋಟೆಲ್ ವಹಿವಾಟು ನಡೆಸುತ್ತಿದೆ. ಆದಾಯ ತೆರಿಗೆ ಇಲಾಖೆಯ ಕರ್ನಾಟಕ– ಗೋವಾ ವಲಯದ ಅಧಿಕಾರಿಗಳು ಶೋಧ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ನಸುಕಿನ 5 ಗಂಟೆ ಸುಮಾರಿಗೆ ಆರಂಭವಾದ ಕಾರ್ಯಾಚರಣೆ ರಾತ್ರಿಯವರೆಗೂ ನಡೆಯಿತು.

ವೈರಮುಡಿ ಉತ್ಸವ ನಾಳೆ

ಮೇಲುಕೋಟೆ (ಮಂಡ್ಯ): ಇಲ್ಲಿನ ಚೆಲುವ ನಾರಾಯಣಸ್ವಾಮಿ ವೈರಮುಡಿ ಉತ್ಸವ ಮಾರ್ಚ್ 21ರಂದು ನಡೆಯಲಿದ್ದು, ಶ್ರೀಕ್ಷೇತ್ರಕ್ಕೆ ಹೊರ ರಾಜ್ಯಗಳಿಂದಲೂ ಅಪಾರ ಸಂಖ್ಯೆಯ ಭಕ್ತರು ಭೇಟಿ ನೀಡುತ್ತಿದ್ದಾರೆ.

ಮಾರ್ಚ್ 16ರಂದೇ 'ಅಂಕುರಾರ್ಪಣ' ಧಾರ್ಮಿಕ ಕಾರ್ಯಕ್ರಮದ ಮೂಲಕ 10 ದಿನಗಳ ಉತ್ಸವಕ್ಕೆ ಚಾಲನೆ ನೀಡಲಾಗಿದೆ. ಮಾರ್ಚ್ 21ರ ರಾತ್ರಿ 8.30ಕ್ಕೆ ಚೆಲುವ ನಾರಾಯಣಸ್ವಾಮಿಗೆ ವಜ್ರಖಚಿತ ಕಿರೀಟ ಧಾರಣೆ ಮಾಡಲಾಗುತ್ತದೆ, ನಂತರ ಉತ್ಸವ ಮೂರ್ತಿಯ ಮೆರವಣಿಗೆ ರಾತ್ರಿಯಿಡೀ ನಡೆಯಲಿದೆ.

ಮಂಡ್ಯದ ಜಿಲ್ಲಾ ಖಜಾನೆ ಕಚೇರಿಯಲ್ಲಿರುವ ವೈರಮುಡಿ ತಿರುವಾಭರಣ ಪೆಟ್ಟಿಗೆಯನ್ನು ಅಂದು ಬೆಳಿಗ್ಗೆ 6 ಗಂಟೆಗೆ ಜಿಲ್ಲಾಧಿಕಾರಿ ಸಮ್ಮುಖದಲ್ಲಿ ತೆರೆಯಲಾಗುತ್ತದೆ. ಮಂಡ್ಯದ ಲಕ್ಷ್ಮಿಜನಾರ್ದನ ದೇವಾಲಯದಲ್ಲಿ ಪ್ರಥಮ ಪೂಜೆ ಸಲ್ಲಿಸಿ ಪೆಟ್ಟಿಗೆಯನ್ನು ಬಿಗಿ ಪೊಲೀಸ್ ಬಂದೋಬಸ್ತ್ ನಡುವೆ ಪಟ್ಟಣಕ್ಕೆ ಕೊಂಡೊಯ್ಯಲಾಗುತ್ತದೆ.

ಶಿರಸಿ ಮಾರಿಕಾಂಬಾ ರಥೋತ್ಸವ ಇಂದು

ಶಿರಸಿ: ಎರಡು ವರ್ಷಕ್ಕೊಮ್ಮೆ ಜರುಗುವ ಇಲ್ಲಿನ ಮಾರಿಕಾಂಬಾ ದೇವಿಯ ಮಹಾರಥೋತ್ಸವ ಬುಧವಾರ (ಮಾರ್ಚ್ 20) ಬೆಳಿಗ್ಗೆ ನಡೆಯಲಿದೆ. ರಥೋತ್ಸವ ಕಣ್ತುಂಬಿಕೊಳ್ಳಲು ಹಾವೇರಿ, ಹಾನಗಲ್ ಸೇರಿ ವಿವಿಧ ಜಿಲ್ಲೆಗಳಿಂದ ಅಪಾರ ಸಂಖ್ಯೆಯ ಲಂಬಾಣಿ ಸಮುದಾಯದವರು ದೇವಾಲಯದಲ್ಲಿ ಬೀಡುಬಿಟ್ಟಿದ್ದಾರೆ.

ಮಾರ್ಚ್ 21ರ ನಸುಕಿನ 5ರಿಂದ ಜಾತ್ರಾ ಗದ್ದುಗೆಯಲ್ಲಿ ದೇವಿಗೆ ಹಣ್ಣು–ಕಾಯಿ, ಉಡಿ, ಹರಕೆ ಸೇವೆಗಳು, ದೇವಾಲಯದಲ್ಲಿ ಬೆಳಿಗ್ಗೆ 6 ರಿಂದ ಬೇವಿನ ಉಡುಗೆ ಸೇವೆ ಆರಂಭವಾಗುತ್ತವೆ. ಪ್ರಾಣಿ ಬಲಿ ಇಲ್ಲದಿರುವುದೇ ಶಿರಸಿ ಮಾರಿಕಾಂಬಾ ಜಾತ್ರೆಯ ವಿಶೇಷ. ದೇವಿಯ ಪತಿ ಎನ್ನಲಾಗುವ ಪಟ್ಟದ ಕೋಣದ ಹಣೆಗೆ ಎಣ್ಣೆ ಹಾಕಿ, ಅರಿಶಿನ–ಕುಂಕುಮ ಹಚ್ಚಿ ಇಲ್ಲಿನ ಜನರು ಪೂಜಿಸುತ್ತಾರೆ. ಬೂದುಗುಂಬಳ ಕಾಯಿಯ ಬಲಿ ನೀಡಿದ ನಂತರ, ರಥೋತ್ಸವ ಆರಂಭ ವಾಗುತ್ತದೆ.

ಕೋಲಾರ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ನಡೆದ ಘಟನೆ

ವಿದ್ಯಾರ್ಥಿಗಳಿಗೆ ಚಪ್ಪಡಿ ಕಲ್ಲು ಒಡೆಯುವ ಕೆಲಸ!

ಪ್ರಜಾವಾಣಿ ವಾರ್ತೆ

ಕೋಲಾರ: ನಗರದ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ನೀರಿನ ಪೈಪು ಅಳವಡಿಸಲು ಕಲ್ಲು ಒಡೆಯುವ, ಚಪ್ಪಡಿ ಕಲ್ಲು ಎತ್ತುವ ಹಾಗೂ ಮಣ್ಣು ಹೊರುವುದು ಸೇರಿದಂತೆ ವಿವಿಧ ಕೆಲಸಗಳಿಗೆ ಪ್ರೌಢಶಾಲೆ ವಿಭಾಗದ ವಿದ್ಯಾರ್ಥಿಗಳನ್ನು ಬಳಸಿಕೊಂಡಿರುವುದು ಗೊತ್ತಾಗಿದೆ.

ಶುಕ್ರವಾರ (ಮಾರ್ಚ್15) ಮಧ್ಯಾಹ್ನ 8, 9 ಹಾಗೂ 10ನೇ ತರಗತಿಯ ಹತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳಿಂದ ಈ ಕೆಲಸ ಮಾಡಿಸಿಕೊಂಡಿರುವುದು ತಿಳಿದುಬಂದಿದೆ. ಶಾಲಾ ಶಿಕ್ಷಣ ಹಾಗೂ ಸಾಕ್ಷರತೆ ಇಲಾಖೆಯ ಉಪನಿರ್ದೇಶಕರ ಕಚೇರಿ ಪಕ್ಕವೇ ಈ ಪ್ರೌಢಶಾಲೆ ಇದೆ.

ಮಕ್ಕಳು ಕೆಲಸ ಮಾಡುವ ದೃಶ್ಯಗಳನ್ನು ಸ್ಥಳದಲ್ಲಿದ್ದವರು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದಾರೆ. ಪ್ರೊಫೆಸರ್ ನಂಜುಂಡಸ್ವಾಮಿ ಸ್ಥಾಪಿತ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಯುವ ಘಟಕದ ಅಧ್ಯಕ್ಷ ಕಲ್ವಮಂಜಲಿ ರಾಮುಶಿವಣ್ಣ ಅವರು ವಿಡಿಯೊ ಹಾಗೂ ಫೋಟೊ ಹಂಚಿಕೊಂಡಿದ್ದಾರೆ.

ಪ್ರೌಢಶಾಲೆ ವಿಭಾಗದ ಉಪಪ್ರಾಂಶುಪಾಲೆ ರಾಧಮ್ಮ, ಶಿಕ್ಷಕರು ಹಾಗೂ ಸಿಬ್ಬಂದಿಯು ಮಕ್ಕಳನ್ನು ಈ ಕೆಲಸಕ್ಕೆ ಬಳಸಿಕೊಂಡಿದ್ದಾರೆ ಎಂದು ಅವರು ಆರೋಪಿಸಿದ್ದಾರೆ.

'ಇಂಥ ಕೆಲಸಗಳಿಗೆ ಮಕ್ಕಳನ್ನು ಬಳಸಿಕೊಂಡಿರುವುದು ಮೊದಲ ತಪ್ಪು. ಅಲ್ಲದೇ, ಇದೇ 25ರಂದು ಎಸ್ಸೆಸ್ಸೆಲ್ಸಿ ಪರೀಕ್ಷೆ ಆರಂಭವಾಗಲಿದೆ. ಪರೀಕ್ಷೆಗೆ ಸಿದ್ಧರಾಗಬೇಕಿದ್ದ ವಿದ್ಯಾರ್ಥಿಗಳಿಂದ ಮೂರು ದಿನ ಕೆಲಸ ಮಾಡಿಸಿದ್ದಾರೆ' ಎಂದು ಅವರು ದೂರಿದ್ದಾರೆ.

ಮಕ್ಕಳಿಂದ ಮಾಡಿಸಿದ್ದು ತೋಟಗಾರಿಕೆ ಕೆಲಸ

ಶಾಲೆ ಆವರಣದಲ್ಲಿ ತೋಟಗಾರಿಕೆ ಸಂಬಂಧಿಸಿದಂತೆ ಗಿಡಗಳ ಸುತ್ತಮುತ್ತ ಸ್ವಚ್ಛತೆ ಮಾಡಲು, ನೀರು ಹಾಕುವ ಕೆಲಸಕ್ಕೆ ವಿದ್ಯಾರ್ಥಿಗಳನ್ನು ಶಿಕ್ಷಕರು ಬಳಸಿಕೊಂಡಿದ್ದಾರೆ. ಕಲ್ಲು ಚಪ್ಪಡಿ ತೆಗೆಸಲು, ಕಲ್ಲು ಒಡೆಯಲು ಅಲ್ಲ. ದುರುದ್ದೇಶ ಹಾಗೂ ವೈಯಕ್ತಿಕ ದ್ವೇಷದಿಂದ ನನ್ನ ಮೇಲೆ ಈ ರೀತಿ ದೂರು ನೀಡಿದ್ದಾರೆ. ನಾನು ಮಕ್ಕಳ ಹಿತದೃಷ್ಟಿಯಿಂದ ಕೆಲಸ ಮಾಡುತ್ತಿದ್ದೇನೆ

ರಾಧಮ್ಮ, ಉಪಪ್ರಾಂಶುಪಾಲೆ, ಸರ್ಕಾರಿ ಜೂನಿಯರ್ ಕಾಲೇಜು, ಪ್ರೌಢಶಾಲೆ ವಿಭಾಗ

ನೋಟಿಸ್ ಕೊಡಲಾಗಿದೆ: ಡಿಡಿಪಿಐ

ಫೋಟೊ, ವಿಡಿಯೊ ಗಮನಿಸಿದರೆ ಮಕ್ಕಳ ಕೈಯಲ್ಲಿ ಕೆಲಸ ಮಾಡಿಸಿದಂತಿದೆ. ಉಪಪ್ರಾಂಶುಪಾಲೆ ರಾಧಮ್ಮ ಅವರೊಂದಿಗೆ ಮಾತನಾಡಿ ವಿವರಣೆ ಪಡೆದಿದ್ದೇನೆ. ಎಸ್ಸೆಸ್ಸೆಲ್ಸಿ ಅಲ್ಲ; 9ನೇ ತರಗತಿ ವಿದ್ಯಾರ್ಥಿಗಳ ಕೈಯಲ್ಲಿ ತೋಟಗಾರಿಕೆ ಕೆಲಸ ಮಾಡಿಸಿದ್ದಾಗಿ ವಿವರಣೆ ನೀಡಿದ್ದಾರೆ. ಯಾವುದೇ ವಿದ್ಯಾರ್ಥಿಗಳಿಂದ ಇಂಥ ಯಾವುದೇ ಕೆಲಸ ಮಾಡಿಸುವುದು ತಪ್ಪು. ಕ್ಷೇತ್ರ ಶಿಕ್ಷಣಾಧಿಕಾರಿ ಕನ್ನಯ್ಯ ನೋಟಿಸ್ ಕೊಟ್ಟಿದ್ದಾರೆ. ಬುಧವಾರ ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇನೆ

ಕೃಷ್ಣಮೂರ್ತಿ, ಡಿಡಿಪಿಐ, ಕೋಲಾರ



ಕೋಲಾರದ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ಪ್ರೌಢಶಾಲೆ ವಿಭಾಗದ ಮಕ್ಕಳಿಂದ ಚಪ್ಪಡಿ ಕಲ್ಲು ತೆಗೆದರು

ಬುಧವಾರ, ಮಾರ್ಚ್ 20, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 80 | ಪುಟ 18
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ


ತಂತ್ರಜ್ಞಾನ
ಬೆನ್ನುನೋವಿನ ಅಳತೆಗೊಂದು ಮಾಪಕ ದೊರೆಯುವಂತಿದ್ದು, ಉಪಶಮನಕ್ಕೆ ಹೊಸ ದಾರಿ ಸಿಕ್ಕಂತಾಗಿದೆ

ಸೆನ್ಸೆಕ್ಸ್	ನಿಫ್ಟಿ	₹/$
72,012	21,817	83.03

ಬಿಜೆಪಿ ನಾಯಕರಿಂದ ತಡರಾತ್ರಿವರೆಗೂ ಕಸರತ್ತು: ಕಾಂಗ್ರೆಸ್ ಪಟ್ಟಿ ಇಂದು ಬಿಡುಗಡೆ ಸಾಧ್ಯತೆ

16 'ಕೈ' ಅಭ್ಯರ್ಥಿಗಳು ಅಖೈರು

ನವದೆಹಲಿ: ಲೋಕಸಭಾ ಚುನಾವಣೆಗೆ ಸ್ಪರ್ಧಿಸುವ ಕರ್ನಾಟಕದ 16 ಕ್ಷೇತ್ರಗಳ ಅಭ್ಯರ್ಥಿಗಳ ಹೆಸರನ್ನು ಕಾಂಗ್ರೆಸ್ ಮಂಗಳವಾರ ಅಖೈರುಗೊಳಿಸಿದೆ. ಐದು ಅಥವಾ ಆರು ಕ್ಷೇತ್ರಗಳಿಗೆ ಹುರಿಯಾಳುಗಳ ಹೆಸರನ್ನು ಅಂತಿಮಗೊಳಿಸಲು ಬಿಜೆಪಿ ನಾಯಕರು ತಡರಾತ್ರಿ ವರೆಗೆ ಕಸರತ್ತು ನಡೆಸಿದರು. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ಪಕ್ಷದ ಕೇಂದ್ರ ಕಚೇರಿಯಲ್ಲಿ ಕೇಂದ್ರ ಚುನಾವಣಾ ಸಮಿತಿಯ ಸಭೆ ಸುಮಾರು ಮೂರು ಗಂಟೆಗಳ ಕಾಲ ಸಭೆ ನಡೆಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಕೇಂದ್ರ ಚುನಾವಣಾ ಸಮಿತಿ ಸದಸ್ಯ ಕೆ.ಜೆ.ಜಾರ್ಜ್ ಮತ್ತಿತರರು ಭಾಗಿಯಾದರು.

7ನೇ ಪುಟ ನೋಡಿ

ಕಾಂಗ್ರೆಸ್ ಸಂಭವನೀಯ ಅಭ್ಯರ್ಥಿಗಳು

ಬೆಂಗಳೂರು ದಕ್ಷಿಣ	ಸೌಮ್ಯಾರೆಡ್ಡಿ
ಬೆಂಗಳೂರು ಕೇಂದ್ರ	ಮನ್ಸೂರ್ ಅಲಿಖಾನ್
ಬೆಂಗಳೂರು ಉತ್ತರ	ಎಂ.ವಿ.ರಾಜೀವ್ ಗೌಡ
ಬೆಳಗಾವಿ	ಮೃಣಾಲ್ ಹೆಬ್ಬಾಳಕರ
ಚಿಕ್ಕೋಡಿ	ಪ್ರಿಯಾಂಕ ಜಾರಕಿಹೊಳಿ
ಬಾಗಲಕೋಟೆ	ಸಂಯುಕ್ತ ಶಿವಾನಂದ ಪಾಟೀಲ
ದಾವಣಗೆರೆ	ಪ್ರಭಾ ಮಲ್ಲಿಕಾರ್ಜುನ್
ಧಾರವಾಡ	ವಿನೋದ್ ಅಸೂಟಿ
ಕಲಬುರಗಿ	ರಾಧಾಕೃಷ್ಣ ದೊಡ್ಡಮನಿ
ರಾಯಚೂರು	ಜಿ.ಕುಮಾರ್ ನಾಯಕ್
ದಕ್ಷಿಣ ಕನ್ನಡ	ಪದ್ಮರಾಜ್
ಉಡುಪಿ-ಚಿಕ್ಕಮಗಳೂರು	ಕೆ.ಜಯಪ್ರಕಾಶ್ ಹೆಗ್ಡೆ
ಕೊಪ್ಪಳ	ರಾಜಶೇಖರ ಹಿಟ್ನಾಳ್
ಉತ್ತರ ಕನ್ನಡ	ಅಂಜಲಿ ನಿಂಬಾಳಕರ್
ಬೀದರ್	ರಾಜಶೇಖರ ಪಾಟೀಲ
ಮೈಸೂರು	ಲಕ್ಷ್ಮಣ್

ಮೂವರ ಚಿತ್ತ ಕಾಂಗ್ರೆಸ್‌ನತ್ತ?

ಬೆಂಗಳೂರು: ಬಿಜೆಪಿಯಲ್ಲಿ ಟಿಕೆಟ್ ಸಿಗದೇ ಅಸಮಾಧಾನ ಗೊಂಡಿರುವ ಸಂಸದರಾದ ಡಿ.ವಿ.ಸದಾನಂದಗೌಡ, ಕರಡಿ ಸಂಗಣ್ಣ, ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಕಾಂಗ್ರೆಸ್‌ನತ್ತ ವಾಲುತ್ತಿದ್ದಾರೆ. ಪಕ್ಷದ ವರಿಷ್ಠರ ಬಗ್ಗೆ ಮುನಿಸಿಕೊಂಡಿರುವ ಸದಾನಂದಗೌಡ ಅವರು ಮಂಗಳವಾರ ಒಕ್ಕಲಿಗರ ಸಂಘದ ಪದಾಧಿಕಾರಿಗಳ ಜತೆ ಸಭೆ ನಡೆಸಿ, ಪಕ್ಷದಲ್ಲಿ ಒಕ್ಕಲಿಗರಿಗೆ ಅನ್ಯಾಯವಾದರೆ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದರು. ತಮ್ಮ ಮುಂದಿನ ರಾಜಕೀಯ ನಡೆಯನ್ನು ಬುಧವಾರ ಸುದ್ದಿಗೋಷ್ಠಿ ನಡೆಸಿ ಬಹಿರಂಗ ಪಡಿಸುವುದಾಗಿಯೂ ತಿಳಿಸಿದರು.

ಜೆ.ಸಿ.ಮಾಧುಸ್ವಾಮಿ ಅವರಿಗೆ ಕಾಂಗ್ರೆಸ್ ಬಲೆ ಬೀಸಿದ್ದು, ಲೋಕಸಭೆ ಟಿಕೆಟ್ ಅಥವಾ ವಿಧಾನಪರಿಷತ್ ಸದಸ್ಯತ್ವ ನೀಡುವುದಾಗಿ ಭರವಸೆ ನೀಡಿದೆ. ಒಂದೆರಡು ದಿನಗಳಲ್ಲಿ ಅವರು ತಮ್ಮ ನಿರ್ಣಯ ಪ್ರಕಟಿಸಲಿದ್ದಾರೆ ಎಂದು ಮೂಲಗಳು ಹೇಳಿವೆ. 'ಅಂತಹ ಪ್ರಯತ್ನಗಳು ನಡೆದಿಲ್ಲ, ಮುಂದೆ ನೋಡೋಣ' ಎಂದಷ್ಟೇ ಮಾಧುಸ್ವಾಮಿ ಪ್ರತಿಕ್ರಿಯಿಸಿದ್ದಾರೆ.

ಕರಡಿ ಸಂಗಣ್ಣ ಅವರನ್ನೂ ಕಾಂಗ್ರೆಸ್ ನಾಯಕರು ಸಂಪರ್ಕಿಸಿದ್ದು, 'ಲೋಕಸಭೆಗೆ ಟಿಕೆಟ್ ನೀಡಲು ಸಾಧ್ಯವಿಲ್ಲ. ವಿಧಾನಪರಿಷತ್‌ಗೆ ನಾಮನಿರ್ದೇಶನ ಮಾಡುವುದಾಗಿ ಆಶ್ವಾಸನೆ ಕೊಟ್ಟಿದೆ. ಗುರುವಾರ ತಮ್ಮ ಬೆಂಬಲಿಗರ ಸಭೆಯಲ್ಲಿ ಚರ್ಚಿಸಿ, ಮುಂದಿನ ನಿರ್ಧಾರ ಪ್ರಕಟಿಸುವುದಾಗಿ ಸಂಗಣ್ಣ ತಿಳಿಸಿದ್ದಾರೆ.

'ಮೈತ್ರಿಯಲ್ಲಿ ಸಮಸ್ಯೆ ಇಲ್ಲ'

ಬೆಂಗಳೂರು: ಸೀಟು ಹಂಚಿಕೆ ಮತ್ತು ಪ್ರಚಾರದ ವಿಚಾರದಲ್ಲಿ ಬಿಜೆಪಿ ತಮ್ಮನ್ನು ಗೌರವಯುತವಾಗಿ ನಡೆಸಿಕೊಳ್ಳುತ್ತಿಲ್ಲ ಎಂದು ಸೋಮವಾರ ಅಸಮಾಧಾನ ಹೊರಹಾಕಿದ್ದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, 'ಬಿಜೆಪಿ–ಜೆಡಿಎಸ್ ಮೈತ್ರಿಕೂಟ ದಲ್ಲಿ ಯಾವ ಸಮಸ್ಯೆಯೂ ಇಲ್ಲ' ಎಂದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಜೆಡಿಎಸ್‌ನ ಮೂವರು ಮತ್ತು ಬಿಜೆಪಿಯ 25 ಅಭ್ಯರ್ಥಿಗಳ ಗೆಲುವಿಗೆ ನಾವು ಒಗ್ಗಟ್ಟಿನಿಂದ ಹೋರಾಡುತ್ತೇವೆ. ನಾನು ಹೃದಯದ ಚಿಕಿತ್ಸೆಗಾಗಿ ಚೆನ್ನೈಗೆ ತೆರಳುತ್ತಿದ್ದೇನೆ. ಈ ಕಾರಣದಿಂದ ಮೈತ್ರಿ ಧರ್ಮವನ್ನು ಪಾಲಿಸಿಕೊಂಡು ಒಟ್ಟಾಗಿ ಚುನಾವಣಾ ಪ್ರಚಾರ ನಡೆಸುವಂತೆ ಎರಡೂ ಪಕ್ಷಗಳ ಮುಖಂಡರು, ಕಾರ್ಯ-ಕರ್ತರಿಗೆ ಸೋಮವಾರ ಮನವಿ ಮಾಡಿದ್ದೆ. ನಮ್ಮ ಮಧ್ಯೆ ಯಾವ ಗೊಂದಲವೂ ಇಲ್ಲ' ಎಂದು ಹೇಳಿದರು

7ನೇ ಪುಟ ನೋಡಿ



ಬೆಂಗಳೂರಿನ ನಗರ್ತಪೇಟೆಯ ಸಿದ್ದಣ್ಣಗಲ್ಲಿಯಲ್ಲಿ ಮಂಗಳವಾರ ಬಿಜೆಪಿ ಹಾಗೂ ಬಜರಂಗದಳದ ಕಾರ್ಯಕರ್ತರು ರಸ್ತೆಯಲ್ಲಿ 'ಹನುಮಾನ್ ಚಾಲೀಸಾ' ಪಠಣ ಮಾಡಿದರು – ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ರಸ್ತೆಯಲ್ಲೇ ಭಜನೆ: ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹನುಮಾನ್ ಚಾಲೀಸಾ ಹಾಕಿದ್ದ ವಿಚಾರಕ್ಕೆ ಮೊಬೈಲ್ ಅಂಗಡಿ ಮಾಲೀಕನ ಕೊಲೆಗೆ ಯತ್ನಿಸಿದ್ದಾರೆ ಎನ್ನಲಾದ ಆರೋಪಿಗಳನ್ನು ಬಂಧಿಸಬೇಕು' ಎಂದು ಆಗ್ರಹಿಸಿ, ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ನಗರ್ತಪೇಟೆಯಲ್ಲಿ ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಿದರು.

ಇದರ ಬೆನ್ನಲ್ಲೇ ಅಂಗಡಿ ಮಾಲೀಕ, ಗಾಯಾಳು ಮುಕೇಶ್ ಅವರಿಂದ ಮರು ಹೇಳಿಕೆ ಪಡೆದಿರುವ ಪೊಲೀಸರು ಇದುವರೆಗೂ ಒಬ್ಬ ಬಾಲಕ, ಸುಲೇಮಾನ್, ಶಹನವಾಜ್, ರೋಹಿತ್, ತರುಣ್ ಎಂಬವರನ್ನು ಬಂಧಿಸಿದ್ದಾರೆ.

ಎಲ್ಲ ಆರೋಪಿಗಳನ್ನೂ ಬಂಧಿಸಬೇಕು ಎಂದು ಬಿಜೆಪಿ ನಾಯಕರು ಪಟ್ಟು ಹಿಡಿದಿದ್ದರು. ಪೊಲೀಸರ ಭರವಸೆ ಮೇರೆಗೆ ಪ್ರತಿಭಟನೆಯನ್ನು ಕೈಬಿಟ್ಟರು. ಆರೋಪಿಗಳ ವಿರುದ್ಧ ಕ್ರಮ ತೆಗೆದುಕೊಳ್ಳದಿದ್ದರೆ ಮತ್ತೆ ರ್‍ಯಾಲಿ ನಡೆಸುವುದಾಗಿ ಎಚ್ಚರಿಸಿದರು.

ಇದಕ್ಕೂ ಮೊದಲು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಂಸದರಾದ ಪಿ.ಸಿ. ಮೋಹನ್, ತೇಜಸ್ವಿ ಸೂರ್ಯ, ಶಾಸಕರಾದ ಎಸ್.ಸುರೇಶ್ ಕುಮಾರ್, ಸಿ.ಕೆ. ರಾಮಮೂರ್ತಿ ಸ್ಥಳಕ್ಕೆ ಬಂದು ಪ್ರತಿಭಟನಕಾರರಿಗೆ ಬೆಂಬಲ ಸೂಚಿಸಿ ದರು. ರಸ್ತೆಯಲ್ಲಿ ಕುಳಿತು ಹನುಮಾನ್ ಚಾಲೀಸಾ ಪಠಣಕ್ಕೆ ಮುಂದಾದ ವೇಳೆ ಶೋಭಾ ಸೇರಿದಂತೆ ಹಲವರನ್ನು ವಶಕ್ಕೆ ಪಡೆದು ಬಿಡುಗಡೆ ಮಾಡಲಾಯಿತು. ಈ ವೇಳೆ ವಾಗ್ವಾದವೂ ನಡೆಯಿತು.

ಭಾನುವಾರ ಸಂಜೆ 6.30ರ ಸುಮಾರಿಗೆ ಕಬ್ಬನ್‌ಪೇಟೆಯ ಸಿದ್ದಣ್ಣ ಗಲ್ಲಿಯಲ್ಲಿ ಮೊಬೈಲ್ ಅಂಗಡಿಯಲ್ಲಿ ಈ ಹಲ್ಲೆ ಘಟನೆ ನಡೆದಿತ್ತು. ಈ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು.

ಇನ್ನಷ್ಟು ಸುದ್ದಿಗಳು 5A

ಚಿನಕುರಳಿ
ಪ್ರಕಾಶ್ ಶೆಟ್ಟಿ



ನಿಧಿ ಬಳಕೆ: ಮಸೂದೆ ವಾಪಸ್

ಧರ್ಮಾದಾಯ: ಸ್ಪಷ್ಟನೆ ಕೇಳಿದ ರಾಜ್ಯಪಾಲ ಗೆಹಲೋತ್

• ರಾಜೇಶ್ ರೈ ಚಟ್ಲ

ಬೆಂಗಳೂರು: ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿರುವ ಶ್ರೀಮಂತ ದೇವಸ್ಥಾನಗಳಲ್ಲಿ ಸಂಗ್ರಹವಾಗುವ 'ಸಾಮಾನ್ಯ ಸಂಗ್ರಹಣಾ ನಿಧಿ'ಯನ್ನು ಆದಾಯ ಇಲ್ಲದಿರುವ 'ಸಿ' ವರ್ಗದ ದೇವಸ್ಥಾನಗಳಿಗೆ ಬಳಸುವುದನ್ನು ಕಡ್ಡಾಯಗೊಳಿಸುವ ತಿದ್ದುಪಡಿ ಮಸೂದೆಯನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ವಾಪಸ್ ಕಳುಹಿಸಿದ್ದಾರೆ.

'ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಮಸೂದೆ–2024' ಅನ್ನು ಸರ್ಕಾರ ಬಜೆಟ್ ಅಧಿವೇಶನದಲ್ಲಿ ಮಂಡಿಸಿತ್ತು. ಈ ಮಸೂದೆಗೆ ಬಿಜೆಪಿ ಮತ್ತು ಜೆಡಿಎಸ್ ಶಾಸಕರು ತೀವ್ರ ವಿರೋಧ ವ್ಯಕ್ತ-ಪಡಿಸಿದ್ದರು. ವಿಧಾನಪರಿಷತ್‌ನಲ್ಲಿ ಧ್ವನಿಮತಕ್ಕೆ ಹಾಕಿದಾಗ ಮಸೂದೆಗೆ ಸೋಲು ಉಂಟಾಗಿತ್ತು. ವಿಧಾನ ಸಭೆಯಲ್ಲಿ ಎರಡನೇ ಬಾರಿ ಮಂಡಿಸಿ ಮಸೂದೆಗೆ ಅಂಗೀಕಾರ ಪಡೆದು, ಮತ್ತೆ ಪರಿಷತ್‌ನಲ್ಲಿ ಮಂಡಿಸಿತ್ತು. ಗದ್ದಲದ ನಡುವೆಯೇ ಸರ್ಕಾರ ಅನುಮೋದನೆ ಪಡೆದುಕೊಂಡಿತ್ತು.

'ಹೈಕೋರ್ಟ್‌ನ ಧಾರವಾಡ ಪೀಠವು ರಿಟ್ ಅರ್ಜಿ 3440/2005ರಲ್ಲಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯ್ದೆ–1997 ಮತ್ತು ಅದಕ್ಕೆ ತಂದಿರುವ ತಿದ್ದುಪಡಿಗಳನ್ನು ಈಗಾಗಲೇ ವಜಾ ಮಾಡಿದೆ. ಹೈಕೋರ್ಟ್ ನೀಡಿದ್ದ ಈ ತೀರ್ಪು ಪ್ರಶ್ನಿಸಿ ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ. ಹೈಕೋರ್ಟ್ ನೀಡಿದ್ದ ತೀರ್ಪಿಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದ್ದು, ಅಂತಿಮ ವಿಚಾರಣೆ ಬಾಕಿ ಇದೆ. ಈ ಹಂತದಲ್ಲಿ ತಿದ್ದುಪಡಿ ಮಾಡಬಹುದೇ ಎಂಬ ಬಗ್ಗೆ ಹೆಚ್ಚಿನ ಸ್ಪಷ್ಟೀಕರಣದ ಅಗತ್ಯವಿದೆ' ಎಂದು ಉಲ್ಲೇಖಿಸಿರುವ ರಾಜ್ಯಪಾಲರು ಕಡತವನ್ನು ವಾಪಸ್ ಕಳುಹಿಸಿದ್ದಾರೆ.

'ರಾಜ್ಯಪಾಲರು ಕೇಳಿದ ವಿಷಯಗಳಿಗೆ ಸ್ಪಷ್ಟನೆ ನೀಡಿ ಮಸೂದೆಯನ್ನು ಅವರ ಒಪ್ಪಿಗೆಗೆ ಮತ್ತೆ ಕಳುಹಿಸಲಾ-ಗುವುದು' ಎಂದು ರಾಜ್ಯ ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ.

ತಿದ್ದುಪಡಿ ಮಸೂದೆಯಲ್ಲಿ ಏನಿದೆ?: ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯ್ದೆಯ ವ್ಯಾಪ್ತಿಯಲ್ಲಿರುವ ₹1 ಕೋಟಿಗೂ ಹೆಚ್ಚು ವರಮಾನ ಹೊಂದಿರುವ ದೇವಸ್ಥಾನಗಳ ಹುಂಡಿಯಿಂದ ವರ್ಷಕ್ಕೆ ಶೇ 10ರಷ್ಟು ಮತ್ತು ₹10 ಲಕ್ಷದಿಂದ ₹1 ಕೋಟಿವರೆಗಿನ ವರಮಾನ ಹೊಂದಿರುವ ದೇವಸ್ಥಾನಗಳಿಂದ ಶೇ 5ರಷ್ಟನ್ನು 'ಸಾಮಾನ್ಯ ಸಂಗ್ರಹಣಾ ನಿಧಿ'ಗೆ ಸಂದಾಯ ಮಾಡುವುದು ಮತ್ತು ಹೀಗೆ ಸಂಗ್ರಹವಾಗುವ ನಿಧಿಯನ್ನು 'ಸಿ' ವರ್ಗದ ದೇವಸ್ಥಾನಗಳಿಗೆ ಬಳಸುವುದು.

7ನೇ ಪುಟ ನೋಡಿ

'ಇತರೆ ಧಾರ್ಮಿಕ ಸಂಸ್ಥೆಗಳನ್ನೂ ಸೇರಿಸುತ್ತೀರಾ?'

'ಹಿಂದೂ ಧಾರ್ಮಿಕ ಸಂಸ್ಥೆಗಳಿಗೆ ಸಂಬಂಧಿಸಿ ತರಲಾದ ತಿದ್ದು-ಪಡಿಯನ್ನು ಇತರೆ ಧಾರ್ಮಿಕ ಸಂಸ್ಥೆಗಳಿಗೂ ಅನ್ವಯಿಸಿ ಈ ಮಸೂದೆ ಮಾದರಿಯಲ್ಲಿ ಯಾವುದಾದರೂ ಕಾಯ್ದೆ ಮಾಡುವ ಪರಿಕಲ್ಪನೆ ರಾಜ್ಯ ಸರ್ಕಾರಕ್ಕೆ ಇದೆಯೇ' ಎಂದು ರಾಜ್ಯಪಾಲ ಗೆಹಲೋತ್ ಪ್ರಶ್ನಿಸಿದ್ದಾರೆ.

ವಾಪಸ್ ಕಳುಹಿಸಿರುವ ಮಸೂದೆಗೆ ಸಂಬಂಧಿಸಿದ ಕಡತದಲ್ಲಿ ಈ ಕುರಿತು ಅವರು ಪ್ರಸ್ತಾಪಿಸಿದ್ದಾರೆ.

ಟೀ ಎಸ್ಟೇಟ್‌ಗಳಲ್ಲಿ ನೀರಿನ ಕೊರತೆ: ಬತ್ತಿದ ಝರಿ, ತೊರೆಗಳು

3,500 ಕಾರ್ಮಿಕರಿಗೆ ಅತಂತ್ರ ಸ್ಥಿತಿ?

• ವಿಜಯಕುಮಾರ್ ಎಸ್.ಕೆ.

ಚಿಕ್ಕಮಗಳೂರು: ಬಿರು ಬಿಸಿಲಿಗೆ ಜಿಲ್ಲೆಯ ನದಿಗಳು, ಝರಿ, ತೊರೆಗಳು ಬತ್ತಿ ಹೋಗಿದ್ದರೆ, ಅಂತರ್ಜಲ ಪಾತಾಳ ಸೇರಿದೆ. ಟೀ ಉದ್ಯಮದ ಮೇಲೆ ಇದೇ ಮೊದಲ ಬಾರಿಗೆ ಪರಿಣಾಮ ಬೀರಿದ್ದು, 3,500ಕ್ಕೂ ಹೆಚ್ಚು ಕಾರ್ಮಿಕರು ಉದ್ಯೋಗ ಇಲ್ಲದೆ ಅತಂತ್ರರಾಗುವ ಆತಂಕದಲ್ಲಿದ್ದಾರೆ.

ಜಿಲ್ಲೆಯಲ್ಲಿ ಒಂಬತ್ತು ಟೀ ಎಸ್ಟೇಟ್‌ಗಳಿದ್ದು, ಒಟ್ಟಾರೆ 4,500 ಎಕರೆಯಷ್ಟು ಚಹಾ ತೋಟವಿದೆ. ಕೆಲವು ಎಸ್ಟೇಟ್‌ಗಳಲ್ಲಿ ಒಂದು ಸಾವಿರ ಎಕರೆ ತನಕ ತೋಟವಿದ್ದರೆ, ಸಣ್ಣ ಎಸ್ಟೇಟ್‌ಗಳೆಂದರೆ 500ರಿಂದ 600 ಎಕರೆಯಷ್ಟಿವೆ. ಈ ತೋಟಗಳಲ್ಲಿ ವರ್ಷದ 365 ದಿನವೂ ಕೆಲಸ ಇದ್ದೇ ಇರುತ್ತದೆ.

ಎಲ್ಲಾ ಎಸ್ಟೇಟ್‌ಗಳಲ್ಲಿ ಅಲ್ಲಿಯೇ ಕಾರ್ಖಾನೆಗಳಿದ್ದು, ಚಹಾ ಪುಡಿ ತಯಾರಿಸಿ ಮಾರುಕಟ್ಟೆಗೆ ಕಳುಹಿಸ-ಲಾಗುತ್ತದೆ. ಟೀ ಎಲೆ ಕೊಯ್ಲಿಗೆ ಮತ್ತು ಚಹಾ ಪುಡಿ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಭಾನುವಾರ ಹೊರತುಪಡಿಸಿ ಉಳಿದೆಲ್ಲಾ ದಿನವೂ ಕೆಲಸ ಇರುತ್ತದೆ. ಬಲಿತ ಎಲೆಗಳನ್ನು ಕಟಾವು ಮಾಡಲು ಪರಿಣತ ಕಾರ್ಮಿಕ-ರಿದ್ದಾರೆ.



ವಾಡಿಕೆಗಿಂತ ಕಡಿಮೆ ಮಳೆ ಆಗಿರುವುದರಿಂದ ಟೀ ತೋಟಗಳಲ್ಲಿ ನೀರಿಲ್ಲವಾಗಿದೆ. ಝರಿ, ತೊರೆಗಳು, ನದಿಗಳು, ಕೆರೆಗಳೇ ಈ ತೋಟಗಳಿಗೆ ನೀರಿನ ಮೂಲ. ಅಲ್ಲಲ್ಲಿ ಕೊಳವೆ ಬಾವಿಗಳನ್ನು ಕೊರೆದಿದ್ದರೂ ಅಲ್ಲೂ ನೀರಿಲ್ಲವಾಗಿದೆ. ಇನ್ನಷ್ಟು ಆಳಕ್ಕೆ ಇಳಿಸಿ ನೀರೆತ್ತುವ ಪ್ರಯತ್ನಗಳೂ ವಿಫಲವಾಗಿವೆ.

ನೀರು ಸಮೃದ್ಧವಾಗಿದ್ದರೆ ಎಲೆಗಳು ಸಕಾಲಕ್ಕೆ ಚಿಗುರಿ ಟೀ ಸೊಪ್ಪು ಕೊಯ್ಲಿಗೆ ಬರುತ್ತದೆ. ನೀರಿಲ್ಲದಿದ್ದರೆ ಎಲೆಗಳು ಚಿಗುರುವುದಿಲ್ಲ. ಸದ್ಯ ಎರಡು–ಮೂರು ದಿನಕ್ಕೊಮ್ಮೆ ಟೀ ಸೊಪ್ಪು ಕೊಯ್ಲು ಮಾಡಲಾಗುತ್ತಿದೆ. ಇನ್ನೂ ಕೆಲವು ದಿನ ಕಳೆದರೆ ಸಂಪೂರ್ಣ ನಿಲ್ಲಿಸಬೇಕಾದ ಅನಿವಾರ್ಯ ಎದುರಾಗುತ್ತದೆ ಎಂದು ಟೀ ತೋಟಗಳ ಜವಾಬ್ದಾರಿ ನಿರ್ವಹಿಸುವ ಸಿಬ್ಬಂದಿ ಹೇಳುತ್ತಾರೆ.

'ಟೀ ಎಸ್ಟೇಟ್‌ಗೆ ನಿರಂತರವಾಗಿ ಬರುವ ಕಾರ್ಮಿಕರಿದ್ದಾರೆ. ಎಲೆ ಹೆಚ್ಚಾಗಿ ಚಿಗುರುವ ಸಮಯದಲ್ಲಿ ಕಾರ್ಮಿಕರು ಭಾನುವಾರವೂ ಕೆಲಸ ಮಾಡುತ್ತಾರೆ. ಈಗ ನಾವೇ ರಜೆ ಕೊಡಬೇಕಾಗಿ ಬಂದಿದೆ' ಎಂದು ಅವರು ಬೇಸರ ವ್ಯಕ್ತ-ಪಡಿಸುತ್ತಿದ್ದಾರೆ.

ಈ ತೋಟಗಳನ್ನೇ ನಂಬಿರುವ ಕಾರ್ಮಿಕರು ಕೂಲಿ ಇಲ್ಲದೆ ಖಾಲಿ ಕೈ ಆಗುವ ಆತಂಕ ಇದೆ. ಮಳೆ ಬರಲಿದೆ ಎಂದು ಹವಾಮಾನ ಇಲಾಖೆ ಹೇಳುತ್ತಿದೆ. ಆದರೆ, ಮಳೆ ಬರುವ ಲಕ್ಷಣ ಕಾಣಿಸುತ್ತಿಲ್ಲ ಎಂದು ಅವರು ಬೇಸರ ವ್ಯಕ್ತಪಡಿಸುತ್ತಾರೆ.

ಉತ್ಪಾದನೆಯೂ ಕುಂಠಿತ

ಜಿಲ್ಲೆಯಲ್ಲಿ ವರ್ಷಕ್ಕೆ 60 ಲಕ್ಷ ಕೆ.ಜಿಯಷ್ಟು ಟೀ ಉತ್ಪಾದನೆಯಾಗುತ್ತಿದ್ದು, ಈ ವರ್ಷ ಅರ್ಧದಷ್ಟು ಉತ್ಪಾದನೆ ಕಡಿಮೆಯಾಗುವ ಸಾಧ್ಯತೆ ಇದೆ.

ನೀರಿನ ಕೊರತೆ ಆಗಿರುವುದ ರಿಂದ ಗಿಡದಲ್ಲಿ ಚಿಗುರು ಕಡಿಮೆ ಯಾಗಿದ್ದು, ಪ್ರತಿನಿತ್ಯ 5 ಸಾವಿರ ಕೆ.ಜಿ ಎಲೆ ಕಟಾವಾಗುತ್ತಿದ್ದ ತೋಟಗಳಲ್ಲಿ ಈಗ 2,500 ಕೆಜಿಯಷ್ಟೇ ಕಟಾವಾಗುತ್ತಿದೆ. ಎರಡು–ಮೂರು ದಿನಕ್ಕೊಮ್ಮೆ ಕಟಾವು ಮಾಡಲಾಗುತ್ತಿದೆ. ಇದು ಒಟ್ಟು ಟೀ ಉತ್ಪಾದನೆ ಮೇಲೆ ಪರಿಣಾಮ ಬೀರಲಿದ್ದು, ಬೆಲೆ ಹೆಚ್ಚಾಗುವ ಸಾಧ್ಯತೆಯೂ ಇದೆ ಎನ್ನುತ್ತಾರೆ ಪರಿಣತರು.

ನಗರದಲ್ಲಿ ಇಂದು

'ಪುಸ್ತಕ ಪ್ರೀತಿ' ಕುರಿತು ಉಪನ್ಯಾಸ: ಕಾನ್ಸೆಪ್ಟಾ ಫರ್ನಾಂಡಿಸ್, ಉಪಸ್ಥಿತಿ: ಎಂ. ಕೃಷ್ಣಮೂರ್ತಿ, ಸುಭಾಷ್ ರೆಡ್ಡಿ ಬಿ., ಆಯೋಜನೆ: ಕರ್ನಾಟಕ ರಾಜ್ಯ ಗ್ರಂಥಾಲಯ ಸಂಘ, ಸ್ಥಳ: ಗ್ರಂಥಾಂಗಣ, ನಗರ ಕೇಂದ್ರ ಗ್ರಂಥಾಲಯ, ಪಶ್ಚಿಮ ವಲಯ, ಹಂಪಿನಗರ, ಸಂಜೆ 5

ಡಾ. ಗಿರೀಶ್ ಕಾರ್ನಾಡರ ರಾಜ್ಯಮಟ್ಟದ ನಾಟಕೋತ್ಸವ: ಉದ್ಘಾಟನೆ: ಹಿ.ಚಿ. ಬೋರಲಿಂಗಯ್ಯ, ಅತಿಥಿ: ಪಟೇಲ್ ಪಾಂಡು, 'ಅಗ್ನಿ ಮತ್ತು ಮಳೆ' ನಾಟಕ ಪ್ರದರ್ಶನ: ಪ್ರಸ್ತುತಿ: ನಗ್ನ ಥಿಯೇಟರ್, ನಿರ್ದೇಶನ: ಅಭಿನವ ಗ್ರೂವರ್, ಸ್ಥಳ: ಕಲಾಗ್ರಾಮ, ಮಲತ್ತಹಳ್ಳಿ, ಸಂಜೆ 6.30ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಯುಪಿಎಸ್‌ಸಿ: ಪೂರ್ವಭಾವಿ ಪರೀಕ್ಷೆ ಜೂನ್ 16ಕ್ಕೆ ಮುಂದೂಡಿಕೆ

ನವದೆಹಲಿ (ಪಿಟಿಐ): ಕೇಂದ್ರ ಲೋಕಸೇವಾ ಆಯೋಗವು (ಯುಪಿಎಸ್‌ಸಿ) ನಾಗರಿಕ ಸೇವೆಗೆ ಹೋಗಬಯಸುವವರಿಗಾಗಿ ನಡೆಸುವ ಪೂರ್ವಭಾವಿ ಪರೀಕ್ಷೆಯನ್ನು ಜೂನ್ 16ಕ್ಕೆ ಮುಂದೂಡಿದೆ.

ಈ ಹಿಂದೆ ಮೇ 26ರಂದು ಪೂರ್ವಭಾವಿ ಪರೀಕ್ಷೆ ನಡೆಸುವುದಾಗಿ ಯುಪಿಎಸ್‌ಸಿ ಅಧಿಸೂಚನೆ ಹೊರಡಿಸಿತ್ತು. ಲೋಕಸಭಾ ಚುನಾವಣೆಯ ಕಾರಣದಿಂದಾಗಿ ಪರೀಕ್ಷೆ ಮುಂದೂಡಿರುವುದಾಗಿ ಮಂಗಳವಾರ ಪ್ರಕಟಿಸಿದೆ.

'ಭಾರತೀಯ ಅರಣ್ಯ ಸೇವೆ ಪರೀಕ್ಷೆಯ ಸ್ಕ್ರೀನಿಂಗ್ ಟೆಸ್ಟ್ ಕೂಡ ಇದಾಗಿದೆ' ಎಂದು ಯುಪಿಎಸ್‌ಸಿ ತಿಳಿಸಿದೆ.

ಈ ವರ್ಷ ಅಂದಾಜು 1056 ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಯುಪಿಎಸ್‌ಸಿ ಪರೀಕ್ಷೆ ನಡೆಸುತ್ತಿದೆ.

ವಿದ್ಯಾರ್ಥಿ ಕಥಾಸ್ಪರ್ಧೆ: ಕಥೆ ಆಹ್ವಾನ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಇಲ್ಲಿನ ಅಕ್ಷರ ಸಾಹಿತ್ಯ ವೇದಿಕೆಯು ಕಥೆಗಾರ ಪ್ರಹ್ಲಾದ ಅಗಸನಕಟ್ಟೆ ಸ್ಮರಣಾರ್ಥ ಪ್ರಹ್ಲಾದ ಅಗಸನಕಟ್ಟೆ ವಿದ್ಯಾರ್ಥಿ ಕಥಾಸ್ಪರ್ಧೆ-2024 ಏರ್ಪಡಿಸಿದ್ದು, ರಾಜ್ಯದ ಎಲ್ಲ ಕಾಲೇಜುಗಳ ವಿದ್ಯಾರ್ಥಿಗಳಿಂದ ಆಹ್ವಾನಿಸಿದೆ.

ಕಥೆಗಳನ್ನು ಸಲ್ಲಿಸಲು ಏಪ್ರಿಲ್ 20 ಕೊನೆಯ ದಿನ. ಅತ್ಯುತ್ತಮ ಕಥೆಗೆ ₹5 ಸಾವಿರ ನಗದು ಬಹುಮಾನ ಮತ್ತು ಪ್ರಶಸ್ತಿ ಫಲಕ ಕೊಡಲಾಗುವುದು. ಜೂನ್ 3ರಂದು ಬಹುಮಾನ ವಿತರಿಸಲಾಗುವುದು.

ವಿದ್ಯಾರ್ಥಿಗಳು ಅಪ್ರಕಟಿತ, ಸ್ವರಚಿತ ಕಥೆಯನ್ನು ಕಾಗದದ ಒಂದೇ ಬದಿ ಕಾಗುಣಿತ ತಪ್ಪಿಲ್ಲದೆ ಶುದ್ಧವಾಗಿ ಬರೆದು ಅಥವಾ ಟೈಪ್ ಮಾಡಿರಬೇಕು.


ಪ್ರಹ್ಲಾದ ಅಗಸನಕಟ್ಟೆ

ಇ–ಮೇಲ್ ಮೂಲಕವೂ ಕಥೆ ಸಲ್ಲಿಸಬಹುದು. ವಿದ್ಯಾರ್ಥಿ ತಮ್ಮ ಕಾಲೇಜಿನ ಮುಖ್ಯಸ್ಥರಿಂದ ದೃಢೀಕೃತ ಪತ್ರ ಲಗತ್ತಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕ ವಿಳಾಸ: ಪ್ರಹ್ಲಾದ ಅಗಸನಕಟ್ಟೆ ಸ್ಮರಣಾರ್ಥ ವಿದ್ಯಾರ್ಥಿ ಕಥಾ ಸ್ಪರ್ಧೆ, ಅಕ್ಷರ ಸಾಹಿತ್ಯ ವೇದಿಕೆ, ಹುಬ್ಬಳ್ಳಿ, c/o ಸುನಂದಾ ಪ್ರಕಾಶ ಕಡಮೆ, 90, ನಾಗಸುಧೆ, 6/ಬಿ ಕ್ರಾಸ್, ಕಾಳಿದಾಸ ನಗರ, ವಿದ್ಯಾನಗರ ವಿಸ್ತೀರ್ಣ, ಹುಬ್ಬಳ್ಳಿ-580031. ದೂರವಾಣಿ ಸಂಖ್ಯೆ- 9845779387. ಇ–ಮೇಲ್ ವಿಳಾಸ: sunandakadame@gmail.com

ಬೇಸಿಗೆ ಪ್ರಾರಂಭ, ನಿಂಬೆಹಣ್ಣಿಗೆ ಹೆಚ್ಚಿದ ಬೇಡಿಕೆ • ತರಕಾರಿ ದರ ಸ್ಥಿರ

ಹಣ್ಣು, ಸೊಪ್ಪಿನ ಬೆಲೆಯಲ್ಲಿ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಸಿಲ ಝಳ ಹೆಚ್ಚಾಗುತ್ತಿದ್ದಂತೆ ದಾಹ ತಣಿಸುವ ಹಣ್ಣುಗಳ ಬೆಲೆ ತುಸು ಏರಿಕೆಯಾಗಿದೆ. ತರಕಾರಿ ದರ ಸ್ಥಿರವಾಗಿದ್ದರೆ, ಸೊಪ್ಪು, ನಿಂಬೆಹಣ್ಣಿನ ಬೆಲೆ ತುಸು ಏರಿಕೆ ಕಂಡಿದೆ.

ಮಾರ್ಚ್‌ನಿಂದ ಜೂನ್‌ವರೆಗಿನ ಬೇಸಿಗೆ ಅವಧಿಯಲ್ಲಿ ಹಣ್ಣುಗಳಿಗೆ ಭಾರಿ ಬೇಡಿಕೆ ಇರುತ್ತದೆ. ಮಾರುಕಟ್ಟೆಗಳಿಗೆ ತರಕಾರಿಗಳ ಆವಕ ಪ್ರಮಾಣ ಹೆಚ್ಚಾಗುತ್ತಿರುವುದರಿಂದ ತರಕಾರಿಗಳ ದರ ಹೆಚ್ಚಾಗಿಲ್ಲ. ಹದಿನೈದು ದಿನಗಳ ಹಿಂದೆ ಬೀನ್ಸ್ ದರ ಕೆ.ಜಿ.ಗೆ ₹80ಕ್ಕಿಂತ ಹೆಚ್ಚಿತ್ತು. ಈಗ ₹50ರಂತೆ ಮಾರಾಟವಾಗುತ್ತಿದೆ. ಆಲೂಗಡ್ಡೆ ಕೆ.ಜಿಗೆ ₹30, ಬೆಂಡೆಕಾಯಿ ಮತ್ತು ಬದನೆಕಾಯಿ ₹40, ಹೂಕೋಸು ₹50ರಂತೆ ಮಾರಾಟವಾಗುತ್ತಿದೆ' ಎಂದು ಕೆ.ಆರ್. ಮಾರುಕಟ್ಟೆಯ ವ್ಯಾಪಾರಿಗಳಾದ ಸುಭಾಷ್, ಅಕ್ರಮ್ ತಿಳಿಸಿದರು.

ಟೊಮೆಟೊ ಕೆ.ಜಿಗೆ ₹20ರಂತೆ ಮಾರಾಟವಾಗುತ್ತಿದೆ. ಮಾರುಕಟ್ಟೆಗೆ ತಮಿಳುನಾಡು ಏಲಕ್ಕಿ ಬಾಳೆಹಣ್ಣು ಬರುತ್ತಿಲ್ಲ. ಸ್ಥಳೀಯ ಹಣ್ಣು ಮಾತ್ರ ಮಾರಾಟವಾಗುತ್ತಿದೆ. ಹೀಗಾಗಿ ಪ್ರತಿ ಕೆ.ಜಿಗೆ ₹70ರಂತೆ ಮಾರಾಟವಾಗುತ್ತಿದೆ.

ಹಣ್ಣು ದುಬಾರಿ: 'ಬೇಸಿಗೆಯಲ್ಲಿ ದೇಹದ ದಾಹ ತಣಿಸಲು ಹಣ್ಣಿನ ಪಾನೀಯಗಳಿಗೆ ಜನರು ಮೊರೆಹೋಗುತ್ತಿದ್ದು, ಬಳಿಕ ಜೊತೆಗೆ ಬೇಡಿಕೆ ಹೆಚ್ಚಾಗಿದೆ. ಹೀಗಾಗಿ ಬೆಲೆ ಕೂಡ ಜಾಸ್ತಿ ಆಗಿದೆ. ಕೆ.ಜಿ. ಸೇಬು ಹಣ್ಣು ₹120– ₹180ರವರೆಗೆ ಮಾರಾಟವಾಗುತ್ತಿದೆ. ದಾಳಿಂಬೆ, ದ್ರಾಕ್ಷಿ ಕೆ.ಜಿಗೆ ₹120ರ ದರದಲ್ಲಿ ಮಾರಾಟವಾಗುತ್ತಿದೆ' ಎಂದು ಕೆ.ಆರ್. ಮಾರುಕಟ್ಟೆಯ ಹಣ್ಣಿನ ವ್ಯಾಪಾರಿ ಲಕ್ಷ್ಮಣ ತಿಳಿಸಿದರು.

'ಬೇಸಿಗೆಯಲ್ಲಿ ಸೊಪ್ಪಿನ ದರವೂ ಸ್ವಲ್ಪ ಏರಿಕೆಯಾಗಿದೆ. ಮೆಂತ್ಯ, ಕೊತ್ತಂಬರಿ ಮತ್ತು ಸಬ್ಬಿಗೆ ಪ್ರತಿ ಕಟ್ಟಿಗೆ ₹20, ಪುದೀನಾ, ಪಾಲಕ್ ಸೊಪ್ಪು ₹10ಕ್ಕೆ ಮಾರಾಟವಾಗುತ್ತಿದೆ' ಎಂದು ಸೊಪ್ಪಿನ ವ್ಯಾಪಾರಿ ಶಿವರಾಜ್ ಹೇಳಿದರು.

ನಿಂಬೆಹಣ್ಣಿಗೆ ಬೇಡಿಕೆ: ವಾತಾವರಣದ ತಾಪಮಾನದಲ್ಲಿ ಏರಿಕೆ ಕಂಡು ಬರುತ್ತಿದ್ದಂತೆಯೇ, ಮಾರುಕಟ್ಟೆಯಲ್ಲಿ ನಿಂಬೆಹಣ್ಣಿಗೆ ಬೇಡಿಕೆ ಹೆಚ್ಚಾಗಿದೆ. ಇದರಿಂದಾಗಿ ಧಾರಣೆಯೂ ಜಾಸ್ತಿಯಾಗಿದೆ.

ಕೆ.ಆರ್. ಮಾರುಕಟ್ಟೆಯಲ್ಲಿ ಗಾತ್ರಕ್ಕೆ ಅನುಗುಣವಾಗಿ ಒಂದು ನಿಂಬೆಹಣ್ಣಿಗೆ ₹8ರಿಂದ ₹15ರವರೆಗೂ ದರವಿದೆ. ಚಿಕ್ಕ ಗಾತ್ರದ ನಿಂಬೆಗಳ ಬೆಲೆ ₹6 ಇದ್ದು, ಅದರಲ್ಲಿ ರಸ ಕಡಿಮೆಯಿರುವ ಕಾರಣ ಬೇಡಿಕೆಯೂ ಕಡಿಮೆ ಇದೆ ಎಂದು ವ್ಯಾಪಾರಿಗಳು ತಿಳಿಸಿದರು.


ನಗರದ ಕೆ.ಆರ್. ಮಾರ್ಕೆಟ್‌ನಲ್ಲಿ ಜನರು ತರಕಾರಿಗಳನ್ನು ಖರೀದಿಸುತ್ತಿರುವುದು

ಕೆ.ಆರ್. ಮಾರುಕಟ್ಟೆಯಲ್ಲಿ ಪ್ರತಿ ಕೆ.ಜಿಗೆ ದರ

ತರಕಾರಿ	ಕಳೆದ ವಾರ	ಈ ವಾರ
ಬೀನ್ಸ್	70	50
ಕ್ಯಾಪ್ಸಿಕಮ್	50	60
ಕ್ಯಾರೆಟ್	40	40
ಹೀರೆಕಾಯಿ	50	40
ಬೆಂಡೇಕಾಯಿ	30	40
ಚವಳಿಕಾಯಿ	40	30
ಮೆಣಸಿನಕಾಯಿ	60	80
ಬಟಾಣಿ	60	80
ಆಲೂಗಡ್ಡೆ	30	30
ಟೊಮೆಟೊ	15	20
ಈರುಳ್ಳಿ	20	20
ಹೂಕೋಸು	40	30
ಬದನೆಕಾಯಿ	30	40

ಸೊಪ್ಪುಗಳ ಮಧ್ಯಮ ಗಾತ್ರದ ಕಟ್ಟಿಗೆ ದರಗಳು

ಕೊತ್ತಂಬರಿ	10	20
ಸಬ್ಬಕ್ಕಿ	10	20
ಮೆಂತೆ	10	20
ಪಾಲಾಕ್	10	15
ಪುದೀನಾ	10	15

ಹಣ್ಣುಗಳ ದರ ಕೆ.ಜಿಗೆ

ಸೇಬು	100	120
ಕಿತ್ತಳೆ	80	120
ದಾಳಿಂಬೆ	100	120
ಸಪೋಟ	80	100
ಕಲ್ಲಂಗಡಿ	30	40
ದ್ರಾಕ್ಷಿ	80	120
ಯಾಲಕ್ಕಿ ಬಾಳೆ ಹಣ್ಣು	50	70
ಬಾಳೆಹಣ್ಣು	40	40

ಮುಖ್ಯಾಂಶಗಳು

- ಒಂದು ನಿಂಬೆಹಣ್ಣಿಗೆ ₹15ರವರೆಗೆ ದರ
- ಬೇಸಿಗೆಯಲ್ಲಿ ದಾಹ ತಣಿಸಿಕೊಳ್ಳಲು ಜನರಿಂದ ಹಣ್ಣಿನ ಪಾನಿಯಗಳ ಮೊರೆ
- ತಮಿಳುನಾಡಿನಿಂದ ಪೂರೈಕೆಯಾಗದ ಏಲಕ್ಕಿ ಬಾಳೆಹಣ್ಣು

29 ಲಕ್ಷ ಪ್ರಕರಣಗಳು ಇತ್ಯರ್ಥ

ರಾಷ್ಟ್ರೀಯ ಲೋಕ ಅದಾಲತ್ ಸಾಧನೆ • ₹ 2,541 ಕೋಟಿ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ (ಕೆಎಸ್‌ಎಲ್‌ಎಸ್‌ಎ) ವತಿಯಿಂದ ಇದೇ 16ರಂದು ರಾಜ್ಯದಾದ್ಯಂತ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಒಟ್ಟು 29 ಲಕ್ಷ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಲಾಗಿದ್ದು, ₹2,541 ಕೋಟಿ ಮೊತ್ತದ ಪರಿಹಾರ ಕೊಡಿಸಲಾಗಿದೆ' ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷರೂ ಆದ ಹೈಕೋರ್ಟ್ ಹಿರಿಯ ನ್ಯಾಯಮೂರ್ತಿ ಕೆ.ಸೋಮಶೇಖರ್ ತಿಳಿಸಿದ್ದಾರೆ.

ಹೈಕೋರ್ಟ್‌ನಲ್ಲಿ ಬುಧವಾರ ಮಾಧ್ಯಮ ಗೋಷ್ಠಿಯಲ್ಲಿ ಈ ವಿವರ ನೀಡಿದ ಅವರು, 'ಬೆಂಗಳೂರಿನ ಹೈಕೋರ್ಟ್ ಪ್ರಧಾನ ಪೀಠ, ಧಾರವಾಡ ಮತ್ತು ಕಲಬುರಗಿ ಪೀಠಗಳೂ ಸೇರಿದಂತೆ ರಾಜ್ಯದಾದ್ಯಂತ ಒಟ್ಟು 1,041 ನ್ಯಾಯಪೀಠಗಳು ಅದಾಲತ್‌ನಲ್ಲಿ ಕಾರ್ಯನಿರ್ವಹಿಸಿದ್ದವು. ಈ ಬಾರಿಯ ಅದಾಲತ್‌ಗೆ 3,76,577 ಪ್ರಕರಣ ಶಿಫಾರಸು ಆಗಿದ್ದವು. ಅವುಗಳ ಪೈಕಿ ನ್ಯಾಯಾಲಯದಲ್ಲಿ ಬಾಕಿಯಿದ್ದ 2,52,277 ಮತ್ತು ವ್ಯಾಜ್ಯ ಪೂರ್ವ 26,48,035 ಸೇರಿದಂತೆ ಒಟ್ಟು 29,00,312 ಪ್ರಕರಣಗಳನ್ನು ಇತ್ಯರ್ಥ-ಪಡಿಸಲಾಗಿದೆ' ಎಂದರು.

'967 ಮೋಟರು ಅಪಘಾತ ಅಮಲ್ಜಾರಿ ಪ್ರಕರಣಗಳನ್ನು ಇತ್ಯರ್ಥ ಪಡಿಸಿ, ₹62 ಕೋಟಿ ಪರಿಹಾರ ನೀಡಲಾಗಿದೆ. ಇತರೆ 4,435 ಅಮಲ್ಜಾರಿ ಪ್ರಕರಣಗಳನ್ನು ವಿಲೇವಾರಿ ಮಾಡಿ ₹181 ಕೋಟಿ, 49 ರೇರಾ ಕೇಸುಗಳನ್ನು ವಿಲೇವಾರಿ ಮಾಡಿ ₹1.32 ಕೋಟಿ ಮತ್ತು 113 ಗ್ರಾಹಕರ ವ್ಯಾಜ್ಯಗಳ ಪ್ರಕರಣಗಳನ್ನು ಇತ್ಯರ್ಥಪಡಿಸಿ, ₹3.23 ಕೋಟಿ ಪರಿಹಾರ ಕಲ್ಪಿಸಲಾಗಿದೆ' ಎಂದು ತಿಳಿಸಿದರು.

'ಧಾರವಾಡದ ಪ್ರಧಾನ ಹಿರಿಯ ನ್ಯಾಯಾಧೀಶರ ನ್ಯಾಯಾಲಯದಲ್ಲಿದ್ದ ಅಸಲು ದಾವೆ ಪ್ರಕರಣವನ್ನು ₹6 ಕೋಟಿ ಮೊತ್ತಕ್ಕೆ ಇತ್ಯರ್ಥಪಡಿಸಲಾಗಿದೆ. ಮಂಗಳೂರಿನ ಅಪರ ಜಿಲ್ಲಾ ನ್ಯಾಯಾಲಯವು ವಾಣಿಜ್ಯ ಪ್ರಕರಣವೊಂದನ್ನು ₹ 2.14 ಕೋಟಿಗೆ, ಧಾರವಾಡ ಪ್ರಧಾನ ಹಿರಿಯ ಸಿವಿಲ್ ಮತ್ತು ಸಿಜೆಎಂ ನ್ಯಾಯಾಲಯವು ₹2 ಕೋಟಿಯ ಮೊತ್ತಕ್ಕೆ ಎಂವಿಸಿ ಪ್ರಕರಣವೊಂದನ್ನು ಇತ್ಯರ್ಥಪಡಿಸಿದೆ. ಮಂಡ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯವು ಶ್ರೀರಂಗಪಟ್ಟಣದ ಎಂವಿಸಿ ಪ್ರಕರಣವೊಂದನ್ನು ₹50 ಲಕ್ಷ ಮೊತ್ತಕ್ಕೆ ಇತ್ಯರ್ಥಪಡಿಸಿದೆ' ಎಂದು ವಿವರಿಸಿದರು.

ಮುಖ್ಯಾಂಶಗಳು

- * 4,853 ಮೋಟರು ವಾಹನ ಅಪರಾಧ ಪರಿಹಾರ ಪ್ರಕರಣ ಇತ್ಯರ್ಥ– ₹ 249 ಕೋಟಿ ಪರಿಹಾರ
- * 12,563 ಚೆಕ್ ಬೌನ್ಸ್ ಪ್ರಕರಣ ವಿಲೇವಾರಿ
- * 3,689 ವಿಭಾಗ ದಾವೆಗಳ ವಿಲೇವಾರಿ



ಈ ಬಾರಿಯ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ 771 ವೈವಾಹಿಕ ಪ್ರಕರಣಗಳನ್ನು ರಾಜಿಯ ಮೂಲಕ ಇತ್ಯರ್ಥಪಡಿಸಲಾಗಿದ್ದು, 281 ದಂಪತಿಗಳನ್ನು ಜೊತೆಗೂಡಿಸಲಾಗಿದೆ.
ನ್ಯಾ. ಕೆ.ಸೋಮಶೇಖರ್
ಕಾರ್ಯನಿರ್ವಾಹಕ ಅಧ್ಯಕ್ಷರು, ಕೆಎಸ್‌ಎಲ್‌ಎಸ್‌ಎ

20 ಲಕ್ಷಕ್ಕೂ ಹೆಚ್ಚು ಪ್ರಕರಣ ವಿಲೇಗೆ ಬಾಕಿ

'ರಾಜ್ಯದ ಎಲ್ಲಾ ಕೋರ್ಟ್‌ಗಳಲ್ಲಿ 2024ರ ಮಾರ್ಚ್ 1ರ ವೇಳೆಗೆ ಒಟ್ಟು 20,43,999 ಪ್ರಕರಣ ವಿಲೇವಾರಿಗೆ ಬಾಕಿಯಿವೆ. ಅವುಗಳ ಪೈಕಿ ಹೈಕೋರ್ಟ್‌ನಲ್ಲಿ 2,82,870 ಇತ್ಯರ್ಥಕ್ಕೆ ಬಾಕಿ ಇವೆ. ಬೆಂಗಳೂರು ಪೀಠದಲ್ಲಿ 1,75,41, ಧಾರವಾಡ ಪೀಠದಲ್ಲಿ 61,630 ಮತ್ತು ಕಲಬುರಗಿ ಪೀಠದಲ್ಲಿ 26,199 ಪ್ರಕರಣಗಳು ವಿಲೇವಾರಿಗೆ ಬಾಕಿಯಿವೆ' ಎಂದು ನ್ಯಾಯಮೂರ್ತಿ ಕೆ.ಸೋಮಶೇಖರ್ ತಿಳಿಸಿದರು.

200 ಕಾರ್ಮಿಕರು ಪುನಃ ಸೇವೆಗೆ

'ಧಾರವಾಡದ ಔದ್ಯೋಗಿಕ ನ್ಯಾಯಾಲಯವು ಹುಬ್ಬಳ್ಳಿಯ ಟಾಟಾ ಮಾರ್ಕೋ ಪೋಲೊ ಕಂಪನಿಯ 200 ಕಾರ್ಮಿಕರನ್ನು ಪುನಃ ಸೇವೆಗೆ ತೆಗೆದುಕೊಳ್ಳಲು ಆದೇಶಿಸಲಾಗಿದೆ. ಚಿಕ್ಕಮಗಳೂರಿನ ಮೂಡಿಗೆರೆಯ ಹಿರಿಯ ಸಿವಿಲ್ ಮತ್ತು ಜೆಎಫ್‌ಎಂಸಿ ಕೋರ್ಟ್‌ನಲ್ಲಿದ್ದ 20 ವರ್ಷಗಳಷ್ಟು ಹಳೆಯದಾದ ಪ್ರಕರಣವನ್ನು, ಮಂಡ್ಯ ಪ್ರಧಾನ ಸಿವಿಲ್ ನ್ಯಾಯಾಲಯ, ಶ್ರೀರಂಗಪಟ್ಟಣದ ಹತ್ತು ವರ್ಷ ಹಳೆಯದಾದ ಅಮಲ್ಜಾರಿ ಹಾಗೂ ಸಿಜೆ-ಜೆಎಂಎಫ್‌ಸಿ ನ್ಯಾಯಾಲಯವು ಪಾಂಡವಪುರದ ಹತ್ತು ವರ್ಷದ ಹಳೆಯ ವಿಭಾಗ ಪ್ರಕರಣವನ್ನು ಈ ಬಾರಿಯ ಲೋಕ ಅದಾಲತ್‌ನಲ್ಲಿ ಇತ್ಯರ್ಥಪಡಿಸಲಾಗಿದೆ' ಎಂದು ನ್ಯಾಯಮೂರ್ತಿ ಸೋಮಶೇಖರ್ ವಿವರಿಸಿದರು.

ಸುಟ್ಟ ರಥಕ್ಕೆ ಅಂತಿಮ ಸಂಸ್ಕಾರ!

ಪ್ರಜಾವಾಣಿ ವಾರ್ತೆ

ಗುಬ್ಬಿ: ಕಿಡಿಗೇಡಿಯೊಬ್ಬ ಇಟ್ಟ ಬೆಂಕಿಗೆ ಸಂಪೂರ್ಣವಾಗಿ ಸುಟ್ಟು ಕರಕಲಾದ ನಿಟ್ಟೂರು ಹೋಬಳಿ ಎನ್.ಪುರ ಗ್ರಾಮದ ಕಲ್ಲೇಶ್ವರ ರಥದ ಅವಶೇಷಗಳನ್ನು ಮಂಗಳವಾರ ಧಾರ್ಮಿಕ ವಿಧಿ-ವಿಧಾನಗಳಂತೆ ಅಂತಿಮ ಸಂಸ್ಕಾರ ನಡೆಸಲಾಯಿತು.

ತೇವಡಿಹಳ್ಳಿ ಮಠದ ಚನ್ನಬಸವೇಶ್ವರ ಶಿವಾಚಾರ್ಯರು ಹಾಗೂ ಬೆಟ್ಟದಹಳ್ಳಿ ಚಂದ್ರಶೇಖರ ಸ್ವಾಮೀಜಿ ಮಾರ್ಗದರ್ಶನದಲ್ಲಿ ಸುಟ್ಟ ರಥದ ಅವಶೇಷಗಳನ್ನು ಗುಂಡಿಯಲ್ಲಿ ಹೂಳಿ ಮಣ್ಣು ಮಾಡಲಾಯಿತು.

ರಥೋತ್ಸವಕ್ಕೆ ಗ್ರಾಮದ ಸಿದ್ದಲಿಂಗೇಶ್ವರ ದೇವಾಲಯದ ರಥ ಬಳಸಿಕೊಳ್ಳಲು ಗ್ರಾಮಸ್ಥರು ನಿರ್ಧರಿಸಿದ್ದಾರೆ.

ಪ್ರವಾಸಿಗರ ವೀಕ್ಷಣೆಗೆ ತಿಮಿಂಗಿಲ ಕಳೇಬರ

ಪ್ರಜಾವಾಣಿ ವಾರ್ತೆ

ಪಡುಬಿದ್ರಿ (ಉಡುಪಿ): ಪಡುಬಿದ್ರಿ ಮುಖ್ಯ ಬೀಚ್‌ನಲ್ಲಿ ಮಂಗಳವಾರ ತಿಮಿಂಗಿಲದ 100 ವರ್ಷಕ್ಕೂ ಹಳೆಯದಾದ ಕಳೇಬರ ಪತ್ತೆಯಾಗಿದೆ.

ಬೀಚ್ ಸಿಬ್ಬಂದಿ, ಬ್ಲೂ ಫ್ಲ್ಯಾಗ್ ಬೀಚ್ ಸಿಬ್ಬಂದಿ ಹಾಗೂ ಸ್ಥಳೀಯರು ಕಳೇಬರವನ್ನು ಮೇಲಕ್ಕೆತ್ತಿ ಸ್ವಚ್ಛ-ಗೊಳಿಸಿದ್ದಾರೆ. ಅದನ್ನು ಪಡುಬಿದ್ರಿ ಎಂಡ್‌ಪಾಯಿಂಟ್ ಬ್ಲೂ ಫ್ಲ್ಯಾಗ್ ಬೀಚ್‌ನಲ್ಲಿ ಪ್ರವಾಸಿಗರ ವೀಕ್ಷಣೆಗಾಗಿ ಇರಿಸಲಾಗಿದೆ.



ನಾರಿ ಶಕ್ತಿ ಸನ್ಮಾನ

ಭಾರತೀಯ ಮಹಿಳಾ ವಕೀಲರ ಸಂಘಗಳ ಒಕ್ಕೂಟ ಹಾಗೂ 'ವಕೀಲರ ವಾಹಿನಿ' ಮಾಸಪತ್ರಿಕೆ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನಗರದಲ್ಲಿ ಹಮ್ಮಿಕೊಳ್ಳಲಾಗಿದ್ದ 'ನಾರಿ ಶಕ್ತಿ ಸನ್ಮಾನ' ಕಾರ್ಯಕ್ರಮದಲ್ಲಿ ಹಿರಿಯ ವಕೀಲೆಯರಾದ ನಳಿನ ಮಾಯಿಗೌಡ, ಸುಶೀಲಾ ಚಿಂತಾಮಣಿ, ಪ್ರಮೀಳಾ ನೇಸರ್ಗಿ, ಪ್ರತಿಮಾ ಹೊನ್ನಾಪುರ, ಎಸ್.ಆರ್. ಅನುರಾಧ, ಜೈನ ಕೊಠಾರಿ ಅವರನ್ನು ಸನ್ಮಾನಿಸಲಾಯಿತು. ಪ್ರಭಾ ಮೂರ್ತಿ, 'ವಕೀಲರ ವಾಹಿನಿ' ಮಾಸಪತ್ರಿಕೆಯ ಸಂಪಾದಕ ಡಿ.ಎಂ. ಹೆಗಡೆ, ವಿವೇಕ್ ಸುಬ್ಬಾರೆಡ್ಡಿ, ಮುಖ್ಯ ನ್ಯಾಯಮೂರ್ತಿ ನಿಲಯ್ ವಿಪಿನ್ ಚಂದ್ರ ಅಂಜಾರಿಯ, ನ್ಯಾಯಮೂರ್ತಿ ಕೆ.ಎಸ್. ಮುದಗಲ್, ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, ವಿಶಾಲ್ ರಘು, ಡಿ.ಎಲ್. ಜಗದೀಶ್, ಕಲ್ಯಾಣ್ ಬಸವರಾಜ್, ಚಂದ್ರಕಾಂತ ಪಾಟೀಲ ಕೆ., ಹಂಸ ಉಪಸ್ಥಿತರಿದ್ದರು

ಮಹಿಳಾ ಸಾಧಕರಿಗೆ ಸನ್ಮಾನ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಮಹಿಳೆಯರು ಸರಳ, ಸ್ವಾವಲಂಬನೆಯ ಜೀವನಶೈಲಿಗೆ ಒತ್ತು ನೀಡಿದರೆ ಕುಟುಂಬ ಹಾಗೂ ಸಮಾಜದಲ್ಲಿ ಸಮೃದ್ಧಿ ನೆಲೆಸಲಿದೆ' ಎಂದು ಸೂರಜ್ ಫೌಂಡೇಶನ್ ಸಂಸ್ಥಾಪಕಿ ಸುಜಾತ ಎಸ್. ಮುನಿರಾಜು ತಿಳಿಸಿದರು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಕಮ್ಮಗೊಂಡನಹಳ್ಳಿಯ ನವಶಕ್ತಿ ಮಹಿಳಾ ಸಂಘಟನೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಧನೆ ಮಾಡಿದ ಮಹಿಳಾ ಸಾಧಕರಿಗೆ ಅಭಿನಂದಿಸಿ ಅವರು ಮಾತನಾಡಿದರು.

'ಬೆಲೆ ಬಾಳುವ ವಸ್ತ್ರ ಹಾಗೂ ಒಡವೆ ಧರಿಸಿದರೆ ಸಮಾಜದಲ್ಲಿ ಉತ್ತಮ ಸ್ಥಾನ ಮಾನ ಲಭಿಸುವುದಿಲ್ಲ. ಸಾಧನೆಯಿಂದ ಮಹಿಳೆಯರಿಗೆ ಘನತೆ ಲಭಿಸುತ್ತದೆ. ಮಹಿಳೆಯರು ಜೀವನದಲ್ಲಿ ಯಾವುದೇ ಸಂಕಷ್ಟ ಎದುರಾದರೂ ಎದೆಗುಂದಬಾರದು. ಸಮಸ್ಯೆಯನ್ನು ಸಮರ್ಥವಾಗಿ ನಿಭಾಯಿಸುವ ಮನೋಬಲ ರೂಢಿಸಿಕೊಳ್ಳಬೇಕು' ಎಂದರು.

ಪಾಲಿಕೆ ಮಾಜಿ ಸದಸ್ಯ ಕೆ.ನಾಗಭೂಷಣ್ ಮಾತನಾಡಿ, 'ಮಹಿಳೆ ಸ್ವಾವಲಂಬಿಯಾದರೆ ಕುಟುಂಬದ ಏಳಿಗೆಯ ಜತೆಗೆ ದೇಶದ ಪ್ರಗತಿಯೂ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ನಿರಂತರವಾಗಿ ಕ್ಷೇತ್ರ ವ್ಯಾಪ್ತಿಯಲ್ಲಿ ಸಬಲೀಕರಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಹಿಳೆಯರಿಗೆ ಬದುಕು ಕಟ್ಟಿಕೊಳ್ಳಲು ಅಗತ್ಯ ನೆರವು ನೀಡಲಾಗುತ್ತಿದೆ. ಮಹಿಳೆಯರ ಸುರಕ್ಷತೆ ಹಾಗೂ ಸುಭದ್ರತೆಗಾಗಿ ದಿಟ್ಟ ಕ್ರಮಗಳನ್ನು ಕೈಗೊಂಡಿರುವ ಕಾರಣ ಕ್ಷೇತ್ರದಲ್ಲಿ ಲಕ್ಷಾಂತರ ಮಹಿಳೆಯರು ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ನಿರಾತಂಕವಾಗಿ ಉದ್ಯೋಗ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ' ಎಂದು ಹೇಳಿದರು.

ನಿರ್ದೇಶಕರ ಅಧಿಕಾರ ಮೊಟಕುಗೊಳಿಸಿದ ಸರ್ಕಾರ • ಗೊಂದಲದಲ್ಲಿ ವೈದ್ಯರು, ಸಿಬ್ಬಂದಿ

ಕಿದ್ವಾಯಿ ಸಂಸ್ಥೆ: 'ಅಧಿಕಾರ' ಸಂಘರ್ಷ

• ವರುಣ ಹೆಗಡೆ

ಬೆಂಗಳೂರು: ಕ್ಯಾನ್ಸರ್ ಚಿಕಿತ್ಸೆಗೆ ಹೆಸರಾಗಿದ್ದ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ವಹಣೆಗೆ ಸಂಬಂಧಿಸಿದಂತೆ ಆಡಳಿತಾಧಿಕಾರಿ ಮತ್ತು ನಿರ್ದೇಶಕರ ನಡುವೆ ಆಂತರಿಕ ಸಂಘರ್ಷ ಏರ್ಪಟ್ಟಿದೆ. ಇದರಿಂದಾಗಿ ಸರ್ಕಾರವು ನಿರ್ದೇಶಕರ ಅಧಿಕಾರವನ್ನೇ ಮೊಟಕುಗೊಳಿಸಿದೆ.

ಸಂಸ್ಥೆಯ ಆಡಳಿತ ಸುಧಾರಣೆಗೆ ಸಂಬಂಧಿಸಿದಂತೆ ಸರ್ಕಾರವು ಕಳೆದ ತಿಂಗಳು ಐಎಎಸ್ ಅಧಿಕಾರಿ ಎನ್. ಮಂಜುಶ್ರೀ ಅವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿತ್ತು. ಇದೇ ವೇಳೆ ಸಂಸ್ಥೆಯ ನಿರ್ದೇಶಕ ಹುದ್ದೆಯಿಂದ ವಜಾಗೊಂಡಿದ್ದ ರೇಡಿಯೇಷನ್ ಆಂಕಾಲಜಿ ವಿಭಾಗದ ಮುಖ್ಯಸ್ಥ ಡಾ.ವಿ.ಲೋಕೇಶ್ ಅವರನ್ನು ಸೇವೆಯಿಂದಲೇ ಅಮಾನತುಗೊಳಿಸಲಾಗಿತ್ತು. ಸರ್ಜಿಕಲ್ ಆಂಕಾಲಜಿ ವಿಭಾಗದ ಮುಖ್ಯಸ್ಥ ಡಾ. ಸೈಯದ್ ಅಲ್ತಾಫ್ ಅವರನ್ನು ಪ್ರಭಾರ ನಿರ್ದೇಶಕರನ್ನಾಗಿ ನೇಮಿಸಿ, ಸರ್ಕಾರ ಆದೇಶ ಹೊರಡಿಸಿತ್ತು. ಸರ್ಕಾರದ ಈ ಆದೇಶದ ವಿರುದ್ಧ ಡಾ. ಲೋಕೇಶ್ ಕೋರ್ಟ್ ಮೆಟ್ಟಿಲೇರಿದ್ದರು. ಬಳಿಕ ಸರ್ಕಾರದ ಆದೇಶಗಳಿಗೆ ಕೋರ್ಟ್ ಮಧ್ಯಂತರ ತಡೆಯಾಜ್ಞೆ ನೀಡಿತ್ತು. ಇದರಿಂದಾಗಿ ಸರ್ಕಾರ ಹೊಸದಾಗಿ ಆದೇಶ ಹೊರಡಿಸದಿದ್ದರೂ ಡಾ. ಲೋಕೇಶ್ ನಿರ್ದೇಶಕ ಹುದ್ದೆಗೆ ಮತ್ತೆ ಮರಳಿದ್ದಾರೆ. ಅವರ ಈ ನಡೆಯಿಂದ ಸಂಸ್ಥೆಯ ವೈದ್ಯರು ಹಾಗೂ ಸಿಬ್ಬಂದಿ ಗೊಂದಲಕ್ಕೆ ಒಳಗಾಗಿದ್ದಾರೆ.

ಕರ್ತವ್ಯಕ್ಕೆ ಹಾಜರಾಗಿರುವ ಡಾ. ಲೋಕೇಶ್ ಅವರು, ಅಧಿಕಾರ ದುರ್ಬಳಕೆ, ಅಕ್ರಮ ಸೇವಾ ಬಡ್ತಿ, ವೈದ್ಯಕೀಯ ನಿರ್ಲಕ್ಷ್ಯ ಸೇರಿ ವಿವಿಧ ಆರೋಪಗಳಿಗೆ ಸಂಬಂಧಿ ಸಿದಂತೆ ಇಲಾಖೆ ವಿಚಾರಣೆ ಎದುರಿಸುತ್ತಿದ್ದಾರೆ. ಇಷ್ಟಾಗಿಯೂ ಅವರು ನಿರ್ದೇಶಕ ಹುದ್ದೆಯಲ್ಲಿ ಮುಂದುವರಿಯುತ್ತಿರುವುದು ಸಂಸ್ಥೆಯ ವೈದ್ಯರ ಅಸಮಾಧಾನಕ್ಕೆ ಕಾರಣವಾಗಿದೆ. ಕರ್ತವ್ಯಕ್ಕೆ ಮರಳಿದ ಅವರು ಟೆಂಡರ್‌ಗೆ ಸಂಬಂಧಿಸಿದ ಕೆಲವು ಕಡತಗಳನ್ನು ವಶಕ್ಕೆ ಪಡೆದಿರುವುದಾಗಿ ಸಂಸ್ಥೆಯ ಸಿಬ್ಬಂದಿ ಆಡಳಿತಾಧಿಕಾರಿಗೆ ದೂರು ನೀಡಿದ್ದರು. ಇದರ ಬೆನ್ನಲ್ಲಿಯೇ ಎಲ್ಲ ದಾಖಲೆಗಳನ್ನು ಒಪ್ಪಿಸಲು ಸೂಚಿಸಿದ್ದ ಆಡಳಿತಾಧಿಕಾರಿ, ಕಡತಗಳ ದಾಖಲೆಗಳಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ ನೀವೇ ಹೊಣೆಯೆಂದು ಎಚ್ಚರಿಸಿದ್ದರು.

ಕ್ಲಿನಿಕಲ್ ವಿಷಯಕ್ಕೆ ಅವಕಾಶ: ವೈದ್ಯಕೀಯ ಶಿಕ್ಷಣ ಇಲಾಖೆಯು ಇದೇ 15ರಂದು ಮತ್ತೊಂದು ಆದೇಶ ಹೊರಡಿಸಿ, ಸಂಸ್ಥೆಯ ಆಡಳಿತ ಹಾಗೂ ಹಣಕಾಸು ನಿರ್ವಹಣೆಗೆ ಸಂಬಂಧಿಸಿದ ಸಂಪೂರ್ಣ ಜವಾಬ್ದಾರಿಯನ್ನು ಆಡಳಿತಾಧಿಕಾರಿಗೆ ವಹಿಸಿದೆ. ನಿರ್ದೇಶಕರಿಗೆ ವಹಿಸಲಾಗಿದ್ದ ಸಾಮಾನ್ಯ ಆಡಳಿತಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಆಡಳಿತಾಧಿಕಾರಿ ವ್ಯಾಪ್ತಿಗೆ ನೀಡಲಾಗಿದೆ. ಔಷಧಗಳ ಖರೀದಿ ಸೇರಿ ವಿವಿಧ ವಸ್ತುಗಳ ಸಂಗ್ರಹಣೆ ಹಾಗೂ ಖರೀದಿ, ಮಾನವ ಸಂಪನ್ಮೂಲ ನಿರ್ವಹಣೆಯ ಅಧಿಕಾರವನ್ನೂ ನಿರ್ದೇಶಕರಿಂದ ಕಸಿದುಕೊಳ್ಳಲಾಗಿದೆ. ಆರೋಗ್ಯ ಸೇವೆಗಳನ್ನೊಳಗೊಂಡ ಕ್ಲಿನಿಕಲ್ ವಿಷಯಗಳ ನಿರ್ವಹಣೆಯನ್ನು ಮಾತ್ರ ನಿರ್ದೇಶಕರಿಗೆ ವಹಿಸಲಾಗಿದೆ.

ಡಾ. ವಿ. ಲೋಕೇಶ್ ಅವರ ವಿರುದ್ಧ ಸಂಸ್ಥೆಯ ವೈದ್ಯರೇ ಅಧಿಕಾರ ದುರ್ಬಳಕೆ, ಅಕ್ರಮ ಸೇವಾ ಬಡ್ತಿ, ವೈದ್ಯಕೀಯ ನಿರ್ಲಕ್ಷ್ಯ ಸೇರಿ ವಿವಿಧ ಆರೋಪಗಳನ್ನು ಈ ಹಿಂದೆ ಮಾಡಿದ್ದರು. ಈ ದೂರುಗಳ ಬಗ್ಗೆ ತನಿಖೆ ನಡೆಸಿದ ಐಎಎಸ್ ಅಧಿಕಾರಿ ಅರುಂಧತಿ ಚಂದ್ರಶೇಖರ್ ನೇತೃತ್ವದ ಸಮಿತಿ, ವರದಿಯಲ್ಲಿ ಆಡಳಿತ ವ್ಯವಸ್ಥೆ ಕುಸಿದಿರುವ ಬಗ್ಗೆ ತಿಳಿಸಿತ್ತು.



ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ

ಆಡಳಿತಾಧಿಕಾರಿಗೆ ನಿರ್ದೇಶಕರ ಕೊಠಡಿ

ಸಂಸ್ಥೆಯ ಆಡಳಿತ, ಹಣಕಾಸು ನಿರ್ವಹಣೆ ಸೇರಿ ಪ್ರಮುಖ ಜವಾಬ್ದಾರಿಗಳನ್ನು ಆಡಳಿತಾಧಿಕಾರಿಗೆ ನೀಡಿದ್ದರಿಂದ ಕೊಠಡಿಯನ್ನೂ ಅವರಿಗೇ ಬಿಟ್ಟುಕೊಡುವಂತೆ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ನಿರ್ದೇಶಕರಿಗೆ ಸೂಚಿಸಿದ್ದಾರೆ. ಪ್ರಸ್ತುತ ವೈದ್ಯಕೀಯ ಅಧೀಕ್ಷಕರು ಕಾರ್ಯನಿರ್ವಹಿಸುತ್ತಿರುವ ಕೊಠಡಿಯಲ್ಲಿ ನಿರ್ದೇಶಕರು, ಪ್ರಾಧ್ಯಾಪಕರ ಕೊಠಡಿಯಲ್ಲಿ ವೈದ್ಯಕೀಯ ಅಧೀಕ್ಷಕರು ಕಾರ್ಯನಿರ್ವಹಿಸುವಂತೆ ಆದೇಶ ಹೊರಡಿಸಿದ್ದಾರೆ. ಇದು ಕೂಡ ಸಂಘರ್ಷಕ್ಕೆ ಕಾರಣವಾಗಿದೆ.

ಅಂಕಿ ಅಂಶಗಳು

863 ರೋಗಿಗಳ ಚಿಕಿತ್ಸೆಗೆ ಸಂಸ್ಥೆ ಹೊಂದಿರುವ ಬೆಡ್‌ಗಳು

1,767 ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ

1,400 ನಿತ್ಯ ಭೇಟಿ ನೀಡುವ ಸರಾಸರಿ ಹೊರರೋಗಿಗಳು

3 ಲಕ್ಷ ಸಂಸ್ಥೆಯಲ್ಲಿ ಪ್ರತಿವರ್ಷ ಚಿಕಿತ್ಸೆ ಪಡೆದುಕೊಳ್ಳುವವರು

ಉತ್ತಮ ಆಡಳಿತ ಒದಗಿಸಲು ಸಂಸ್ಥೆಗೆ ಆಡಳಿತಾಧಿಕಾರಿಯನ್ನು ನೇಮಕ ಮಾಡಲಾಗಿದೆ. ಅವರಿಗೆ ಸಂಪೂರ್ಣ ಅಧಿಕಾರ ನೀಡಲಾಗಿದ್ದು, ಅವರೇ ಎಲ್ಲ ನಿರ್ಣಯ ಕೈಗೊಳ್ಳುತ್ತಾರೆ

ಡಾ. ಸುಜಾತಾ ರಾಥೋಡ್
ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕಿ

ಲಾಕ್‌ಡೌನ್ ವೇಳೆ ನಡೆದಿದ್ದ ಪಾದರಾಯನಪುರ ಗಲಭೆ


375 ಮಂದಿ ವಿರುದ್ಧದ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್-19ರ ಲಾಕ್‌ಡೌನ್ ಅವಧಿಯಲ್ಲಿ, ಪಾದರಾಯನಪುರದಲ್ಲಿ ಅಕ್ರಮವಾಗಿ ಗುಂಪುಗೂಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿ ಉಂಟುಮಾಡಿದ್ದಾರೆ' ಎಂಬ ಆರೋಪಕ್ಕೆ ಸಂಬಂಧಿಸಿದ ಗಲಭೆ ಪ್ರಕರಣದಲ್ಲಿ 375 ಆರೋಪಿಗಳ ವಿರುದ್ಧದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಈ ಸಂಬಂಧ ನವಾಜ್ ಪಾಷಾ ಸೇರಿದಂತೆ ಇತರೆ ಆರೋಪಿಗಳು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಗಳನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ.

ವಿಚಾರಣೆ ವೇಳೆ ಪ್ರಾಸಿಕ್ಯೂಷನ್ ಪರ ವಾದ ಮಂಡಿಸಿದ್ದ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್-2 ಬಿ.ಎನ್.ಜಗದೀಶ್, '2020ರ ಏಪ್ರಿಲ್ 19ರಂದು ಸಂಜೆ ಬಿಬಿಎಂಪಿ ಅಧಿಕಾರಿಗಳು ಕೋವಿಡ್ ಸೋಂಕು ತಗುಲಿದ್ದ 58 ಮಂದಿಯನ್ನು ವಶಕ್ಕೆ ತೆಗೆದಕೊಳ್ಳಲು ಪಾದರಾಯನಪುರಕ್ಕೆ ತೆರಳಿದ್ದರು. ಆಗ ಅಲ್ಲಿ ಅಕ್ರಮವಾಗಿ ಗುಂಪುಗೂಡಿದ್ದವರು ಕೈಯಲ್ಲಿ ಚಾಕು, ದೊಣ್ಣೆ ಮತ್ತು ರಾಡ್‌ಗಳನ್ನು ಹಿಡಿದುಕೊಂಡು ಆಶಾ ಕಾರ್ಯಕರ್ತೆಯರು, ವೈದ್ಯಾಧಿಕಾರಿಗಳು ಹಾಗೂ ಬಿಬಿಎಂಪಿ ಅಧಿಕಾರಿಗಳ ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸಿದ್ದರು. ಕುರ್ಚಿ, ಟೇಬಲ್‌ಗಳನ್ನು ಒಡೆದು ಹಾಕಿ ಅಲ್ಲಿದ್ದ ಟೆಂಟ್ ಕಿತ್ತೆಸೆದು ಅಕ್ಕಪಕ್ಕದ ರಸ್ತೆಗಳಲ್ಲಿನ ಸಾರ್ವಜನಿಕರ ಆಸ್ತಿಗಳಿಗೆ ಹಾನಿಯುಂಟು ಮಾಡಿದ್ದರು' ಎಂದು ವಿವರಿಸಿದ್ದರು.



ಇದನ್ನು ವಿರೋಧಿಸಿದ್ದ ಅರ್ಜಿದಾರರ ಪರ ವಕೀಲರು, 'ಅರ್ಜಿದಾರರಿಗೂ ಪ್ರಕರಣಕ್ಕೂ ಸಂಬಂಧವಿಲ್ಲ. ಅವರೆಲ್ಲರ ಮನೆಗಳು ಬೇರೆಡೆ ಇವೆ. ಪೊಲೀಸರು ನಿಜವಾದ ಆರೋಪಿಗಳನ್ನು ಗುರುತಿಸದೆ ಸಂಬಂಧ ಇಲ್ಲದವರ ಮೇಲೆಲ್ಲಾ ಪ್ರಕರಣ ದಾಖಲಿಸಿದ್ದಾರೆ. ಬಿಬಿಎಂಪಿ ಅಧಿಕಾರಿಗಳು ಘಟನಾ ಸ್ಥಳಕ್ಕೆ ಬಂದಾಗ ಅವರಲ್ಲಿ ಸೋಂಕಿತರ ಪಟ್ಟಿಯೇ ಇರಲಿಲ್ಲ. ಗಲಭೆ ನಡೆದಿದೆ ಎನ್ನಲಾಗಿದೆ. ಆದರೆ ಯಾರೊಬ್ಬರಿಗೂ ಗಾಯವಾಗಿಲ್ಲ. ಹಾಗಾಗಿ, ಪ್ರಕರಣ ರದ್ದುಗೊಳಿಸಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದ್ದರು.

ವಾದ-ಪ್ರತಿವಾದ ಆಲಿಸಿದ್ದ ನ್ಯಾಯಪೀಠ, 'ಭಾರತೀಯ ದಂಡ ಸಂಹಿತೆ-1860ರ ಕಲಂ 172ರಿಂದ 188ರವರೆಗಿನ ಮತ್ತು ವಿಪತ್ತು ನಿರ್ವಹಣಾ ಕಾಯ್ದೆಯ ವಿವಿಧ ಕಲಂಗಳನ್ನು ಉಲ್ಲಂಘಿಸಲಾಗಿದೆ ಎಂದು ಆರೋಪಿಸಲಾಗಿದೆ. ಆದರೆ, ಈ ಕುರಿತಂತೆ ಸಕ್ಷಮ ಪ್ರಾಧಿಕಾರ ದೂರು ದಾಖಲಿಸಿಲ್ಲ. ಅಂತೆಯೇ, ಬಿಬಿಎಂಪಿ ಅಧಿಕಾರಿಗಳು ಪಾದರಾಯನಪುರವನ್ನು ಸೀಲ್ ಡೌನ್ ಮಾಡಲು ಹೋದಾಗ 51 ಜನರಿಗೆ ಕೋವಿಡ್ ಸೋಂಕು ದೃಢಪಟ್ಟಿತ್ತು ಎಂದು ಹೇಳಿದ್ದಾರೆ. ಆದರೆ, ಯಾರಿಗೆಲ್ಲಾ ಆ ಸೋಂಕು ತಗುಲಿತ್ತು ಎಂಬ ಬಗ್ಗೆ ಯಾವುದೇ ವಿವರಗಳನ್ನು ಆರೋಪಪಟ್ಟಿಯಲ್ಲಿ ದಾಖಲಿಸಿಲ್ಲ' ಎಂದು ತಿಳಿಸಿದೆ.

'ಪೊಲೀಸರು 120ಕ್ಕೂ ಹೆಚ್ಚು ಜನರ ವಿರುದ್ಧ ಪ್ರಕರಣ ದಾಖಲಿಸಿದ್ದರೂ ಗಲಭೆ ನಡೆದಿದೆ ಎನ್ನಲಾದ ಸಮಯದಲ್ಲಿ ಯಾವುದೇ ಆಸ್ತಿ-ಪಾಸ್ತಿ ನಷ್ಟವಾಗಿಲ್ಲ. ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ. ಸಾಕ್ಷಿಗಳ ಹೇಳಿಕೆಗಳನ್ನು ಒಂದೇ ರೀತಿಯಲ್ಲಿ ದಾಖಲಿಸಿಕೊಳ್ಳಲಾಗಿದೆ' ಎಂಬ ಅಭಿಪ್ರಾಯದೊಂದಿಗೆ ಎಲ್ಲರ ವಿರುದ್ಧದ ಪ್ರಕರಣ ರದ್ದುಗೊಳಿಸಿದೆ.

'ಕೆಲಸದ ಸ್ಥಳದಲ್ಲಿ ವಿಶ್ರಾಂತಿ ಕೊಠಡಿ ಅಗತ್ಯ'

ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಆಯುಕ್ತೆ ಶಾಲಿನಿ ರಜನೀಶ್ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಲಸದ ಸ್ಥಳದಲ್ಲಿ ಮಹಿಳಾ ನೌಕರರು ವಿವಿಧ ಸಮಸ್ಯೆಗಳನ್ನು ಎದುರಿಸುವ ಸಾಧ್ಯತೆ ಇರುತ್ತದೆ. ಆದ್ದರಿಂದ ಅವರಿಗೆ ಪ್ರತ್ಯೇಕ ವಿಶ್ರಾಂತಿ ಕೊಠಡಿ ಹಾಗೂ ಶೌಚಾಲಯ ನಿರ್ಮಿಸಿಕೊಡುವ ಕೆಲಸವಾಗಬೇಕು' ಎಂದು ಅಭಿವೃದ್ಧಿ ಆಯುಕ್ತೆ ಶಾಲಿನಿ ರಜನೀಶ್ ಹೇಳಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

'ಸರ್ಕಾರಿ ನೌಕರರಲ್ಲಿ ಶೇ 42ರಷ್ಟು ಮಂದಿ ಮಹಿಳೆಯರಿದ್ದಾರೆ. ಆದ್ದರಿಂದ ಅವರ ಸಮಸ್ಯೆಯನ್ನೂ ಅರ್ಥ ಮಾಡಿಕೊಳ್ಳಬೇಕಿದೆ. ಗರ್ಭಿಣಿಯರು, ಬಾಣಂತಿಯರು, ತಡರಾತ್ರಿ ಕೆಲಸ ಮಾಡುವ ಮಹಿಳೆಯರು ಕೆಲವೊಂದು ಸಮಸ್ಯೆಗಳನ್ನು ಎದುರಿಸುತ್ತಾರೆ. ಕೆಲಸದ ಒತ್ತಡದಿಂದ ಹೊರಬರಲು ಪ್ರತ್ಯೇಕ ಶೌಚಾಲಯ ಹೊಂದಿದ ವಿಶ್ರಾಂತಿ ಕೊಠಡಿ ಸಹಕಾರಿಯಾಗಲಿದೆ. ಇಲ್ಲವಾದಲ್ಲಿ ಒತ್ತಡ ನಿರ್ವಹಿಸಲು ಸಾಧ್ಯವಾಗದೆ, ಕೆಲಸದ ಮೇಲೆ ಪರಿಣಾಮ ಬೀರುತ್ತದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸೇರಿ ವಿವಿಧ ಇಲಾಖೆಗಳ ನೆರವಿನಿಂದ ವಿವಿಧ ಕಚೇರಿಗಳು ಹಾಗೂ ಉದ್ಯೋಗ ಸ್ಥಳದಲ್ಲಿ ವಿಶ್ರಾಂತಿ ಕೊಠಡಿ ನಿರ್ಮಿಸಲಾಗುತ್ತಿದೆ. ಅವುಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕು' ಎಂದು ಹೇಳಿದರು.

'ಭಾರತೀಯ ಆಡಳಿತಾತ್ಮಕ ಸೇವೆಗೆ (ಐಎಎಸ್) ನಾನು ಬರುವ ವೇಳೆಗೆ ಐಎಎಸ್ ಅಧಿಕಾರಿಗಳಲ್ಲಿ ಶೇ 10ರಷ್ಟು ಮಾತ್ರ ಮಹಿಳೆಯರಿದ್ದರು. ಈಗ ಕರ್ನಾಟಕದ ಐಎಎಸ್ ಅಧಿಕಾರಿಗಳಲ್ಲಿಯೇ ಶೇ 30ರಷ್ಟು ಮಹಿಳೆಯರಿದ್ದಾರೆ. ಮಹಿಳೆಯರಲ್ಲಿ ಸಹಿಷ್ಣುತೆ, ಮಮತೆ, ಕರುಣೆಯಂತಹ ಗುಣಗಳು ಸ್ವಾಭಾವಿಕವಾಗಿ ಇರುತ್ತವೆ. ಇಂತಹ ಗುಣಗಳನ್ನು ಎಲ್ಲ ಸರ್ಕಾರಿ ನೌಕರರು ಅಳವಡಿಸಿಕೊಳ್ಳಬೇಕು. ಸರ್ಕಾರಿ ನೌಕರರೆಂದರೆ ಸೋಮಾರಿಗಳು, ಲಂಚ ಕೇಳುವವರು ಎಂಬ ಮನೋಭಾವ ಕೆಲವರಲ್ಲಿದೆ. ನೌಕರರಲ್ಲಿ ಕೆಲವರು ಮಾಡುವ ತಪ್ಪಿನಿಂದ ಇಡೀ ನೌಕರರ ಸಮಾಜಕ್ಕೆ ಕೆಟ್ಟ ಹೆಸರು ಬರಬಾರದು' ಎಂದು ತಿಳಿಸಿದರು.

ಆರ್ಥಿಕ ದೌರ್ಜನ್ಯ: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯುಕ್ತೆ ಬಿ.ಬಿ. ಕಾವೇರಿ, 'ವರದಕ್ಷಿಣೆ ಕಿರುಕುಳ, ಕೌಟುಂಬಿಕ ದೌರ್ಜನ್ಯ, ಭ್ರೂಣ ಹತ್ಯೆಯಂತಹ ಕೃತ್ಯಗಳು ಈಗಲೂ ನಡೆಯುತ್ತಿರುವುದು ವಿಪರ್ಯಾಸ. ಆಸ್ತಿಯಲ್ಲಿ ಸಮಪಾಲನ್ನು ನೀಡದಿರುವುದು, ಮಹಿಳೆಯ ಹೆಸರಿನಲ್ಲಿ ಸಾಲ ಪಡೆದು ವಂಚಿಸುವುದೂ ಸೇರಿ ವಿವಿಧ ಆರ್ಥಿಕ ದೌರ್ಜನ್ಯಗಳನ್ನು ವಿರೋಧಿಸಬೇಕು. ಶಿಕ್ಷಕರು, ಅಂಗನವಾಡಿ ಹಾಗೂ ಬಿಸಿಯೂಟದ ನೌಕರರಲ್ಲಿ ಮಹಿಳೆಯರೇ ಅಧಿಕ ಸಂಖ್ಯೆಯಲ್ಲಿದ್ದರೂ ಅವರ ಸಮಸ್ಯೆಗಳ ಬಗ್ಗೆ ಈಗಲೂ ಪುರುಷರೇ ಬಂದು ಮಾತನಾಡುತ್ತಾರೆ. ಮಹಿಳೆಯರು ಸಂಘಟಿತರಾಗಬೇಕು' ಎಂದು ಹೇಳಿದರು.

ಪಂಚಾಯತ್ ರಾಜ್ ಆಯುಕ್ತೆ ಪ್ರಿಯಾಂಕ ಮೇರಿ ಫ್ರಾನ್ಸಿಸ್, 'ಬಟ್ಟೆ, ವೇತನ ಸೇರಿ ವ್ಯಕ್ತಿತ್ವದ ಬಗ್ಗೆ ನಮ್ಮದೇ ಚಿಂತನೆ ಮಾಡಿ, ನಿರ್ಧಾರಗಳನ್ನು ತೆಗೆದುಕೊಳ್ಳುವ ಸ್ವಾತಂತ್ರ್ಯ ಪ್ರತಿಯೊಬ್ಬರಿಗೂ ಇರಬೇಕು. ಸರ್ಕಾರಿ ನೌಕರರು ಬೇರೆಯವರಿಗೆ ಮಾದರಿಯಾಗಿ ಕೆಲಸ ಮಾಡಬೇಕು. ಕೂಸಿನ ಮನೆಯಂತಹ (ಶಿಶುಪಾಲನಾ ಕೇಂದ್ರ) ಯೋಜನೆಗಳು ಸಮಾನತೆ ತರಲು ಸಹಕಾರಿಯಾಗಿವೆ' ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.



ಕಾರ್ಯಕ್ರಮದಲ್ಲಿ ಶಾಲಿನಿ ರಜನೀಶ್ ಮತ್ತು ಪ್ರಿಯಾಂಕ ಮೇರಿ ಫ್ರಾನ್ಸಿಸ್ ಚರ್ಚಿಸಿದರು. ಬಿ.ಬಿ. ಕಾವೇರಿ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ.

'ಕಣ್ಣು ದಾನದ ಮೂಲಕ ಬೆಳಕಾಗಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದಲ್ಲಿ ಸುಮಾರು 1.5 ಕೋಟಿ ಜನರು ಅಂಧತ್ವ ಸಮಸ್ಯೆ ಎದುರಿಸುತ್ತಿದ್ದಾರೆ. ಅಂತಹವರಿಗೆ ದೃಷ್ಟಿ ಒದಗಿಸಲು ನೇತ್ರದಾನದ ಸಂಕಲ್ಪವನ್ನು ಪ್ರತಿಯೊಬ್ಬರೂ ಕೈಗೊಳ್ಳಬೇಕು' ಎಂದು ನೇತ್ರಧಾಮ ಸೂಪರ್ ಸ್ಪೇಷಾಲಿಟಿ ಕಣ್ಣಿನ ಆಸ್ಪತ್ರೆ ಮನವಿ ಮಾಡಿಕೊಂಡಿದೆ.

'ಕಣ್ಣಿಗೆ ಗಾಯವಾಗುವಿಕೆ, ಅಪಘಾತ, ಜೀವಸತ್ವದ ಕೊರತೆ, ಆನುವಂಶಿಕ ಸಮಸ್ಯೆ ಸೇರಿ ವಿವಿಧ ಕಾರಣಗಳಿಂದ ಕೆಲವರು ದೃಷ್ಟಿ ಕಳೆದುಕೊಳ್ಳುತ್ತಿದ್ದಾರೆ. ಅಂತಹವರಿಗೆ ನೇತ್ರವನ್ನು ದಾನ ಮಾಡಿದಲ್ಲಿ ಸಾವಿನಲ್ಲಿಯೂ ಸಾರ್ಥಕತೆ ಕಾಣಲು ಸಾಧ್ಯ. ಹಾಗಾಗಿ, ಮರಣಾನಂತರ ನೇತ್ರದಾನ ಮಾಡುವುದಾಗಿ ಪ್ರತಿಜ್ಞೆ ಕೈಗೊಳ್ಳಬೇಕು. ಎರಡು ಕಣ್ಣಿನ ಕಾರ್ನಿಯಾದಿಂದ ಆರು ಮಂದಿಗೆ ದೃಷ್ಟಿ ಒದಗಿಸಹುದು' ಎಂದು ನೇತ್ರಧಾಮದ ಮುಖ್ಯ ಬಿಸಿನೆಸ್ ಅಧಿಕಾರಿ ಮೆಹಿರ್‌ನಾಥ್ ಚೋಪ್ರಾ ಹೇಳಿದ್ದಾರೆ.



'ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಡಾ. ಶ್ರೀ ಗಣೇಶ್ ಅವರು 1994ರಲ್ಲಿ ಶ್ರದ್ಧಾ ಐ ಕೇರ್ ಟ್ರಸ್ಟ್ ಸ್ಥಾಪಿಸಿದ್ದು, ಈ ಟ್ರಸ್ಟ್ ಮೂಲಕ ಕಣ್ಣಿನ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಪ್ರತಿ ವರ್ಷ 10 ಸಾವಿರ ಉಚಿತ ಶಸ್ತ್ರಚಿಕಿತ್ಸಾ ಸೇವೆಯನ್ನು ಬಡವರಿಗೆ ಒದಗಿಸುತ್ತಿದೆ. ನೇತ್ರಧಾಮ ಸಂಸ್ಥೆಯು ಚಿಕಿತ್ಸೆಯ ಜತೆಗೆ ಕಣ್ಣಿನ ಆರೈಕೆ ಬಗ್ಗೆಯೂ ಜಾಗೃತಿಯನ್ನೂ ಮೂಡಿಸುತ್ತಿದೆ' ಎಂದು ಹೇಳಿದ್ದಾರೆ.

'ಆರೋಗ್ಯಕರ ಕಣ್ಣುಗಳನ್ನು ಹೊಂದಲು ನಿಯಮಿತವಾಗಿ ಕಣ್ಣಿನ ತಪಾಸಣೆ ಮಾಡಿಸಿಕೊಳ್ಳಬೇಕು. ವೈದ್ಯರ ಸಲಹೆ ಪಡೆಯದೆ ಕಣ್ಣಿಗೆ ಯಾವುದೇ ಔಷಧವನ್ನು ಹಾಕಬಾರದು. 40 ವರ್ಷಗಳು ಮೇಲ್ಪಟ್ಟವರು ನಿಯಮಿತವಾಗಿ ಕಣ್ಣಿನ ಪರೀಕ್ಷೆ ಮಾಡಿಸಿಕೊಳ್ಳಬೇಕು' ಎಂದು ನೇತ್ರಧಾಮದ ಪ್ರಧಾನ ವ್ಯವಸ್ಥಾಪಕ ಯುವರಾಜ್ ಕೆ. ತಿಳಿಸಿದ್ದಾರೆ.

ಕಣ್ಣಿನ ಸಮಸ್ಯೆಗೆ ಸಹಾಯವಾಣಿ: 080 37815876

ಸೀತಾ–ರಾಮ ದೇವಾಲಯದಲ್ಲಿ ಮಂಡಲಪೂಜೆ

ಪ್ರಜಾವಾಣಿ ವಾರ್ತೆ

ಯಲಹಂಕ: ಮೈಲಪ್ಪನಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಲಕ್ಷ್ಮಣ, ಆಂಜನೇಯಸ್ವಾಮಿ ಸಮೇತ ಸೀತಾ–ರಾಮ ದೇವಾಲಯದಲ್ಲಿ ಆಯೋಜಿಸಿದ್ದ 48ನೇ ದಿನದ ಮಂಡಲಪೂಜೆ ವಿಧಿ-ವಿಧಾನಗಳು ವಿಜೃಂಭಣೆಯಿಂದ ನೆರವೇರಿದವು.

ಬೆಳಿಗ್ಗೆಯಿಂದಲೇ ಹೋಮ-ಹವನ, ಸ್ವಾಮಿಗೆ ಅಭಿಷೇಕ, ವಿಶೇಷ ಅಲಂಕಾರ ಸೇರಿ ವಿವಿಧ ಪೂಜಾಕೈಂಕರ್ಯಗಳನ್ನು ನೆರವೇರಿಸಲಾಯಿತು. ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಶಾಸಕ ಎಸ್.ಆರ್.ವಿಶ್ವನಾಥ್, ಸಿಂಗನಾಯಕನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಅಮರಾವತಮ್ಮ, ಸದಸ್ಯರಾದ ಎನ್.ಹರೀಶ್, ಶೋಭಾ ಗೋಪಾಲ್, ಚೈತ್ರ ಕೆಂಪೇಗೌಡ, ಮಾಜಿ ಸದಸ್ಯರಾದ ಅಶೋಕ್, ರಾಮಚಂದ್ರಪ್ಪ, ಗ್ರಾಮದ ಮುಖಂಡರಾದ ನಾರಾಯಣಪ್ಪ, ಗಜೇಂದ್ರ ಮತ್ತಿತರರು ಉಪಸ್ಥಿತರಿದ್ದರು.

'ಘನತೆಯಿಂದ ಬದುಕುವ ಸಮಾಜ ನಿರ್ಮಾಣ ಆಗಲಿ'

ಬೆಂಗಳೂರು: 'ಸಮಾಜದಲ್ಲಿ ಎಲ್ಲರೂ ಘನತೆಯಿಂದ ಬದುಕುವಂತಹ ಸಮಾಜ ನಿರ್ಮಾಣದಲ್ಲಿ ಸಮಾಜ ಕಾರ್ಯಕರ್ತರು ಹೆಚ್ಚು ತೊಡಗಿಸಿಕೊಳ್ಳಬೇಕು' ಎಂದು ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಲಿಂಗರಾಜ ಗಾಂಧಿ ಕರೆ ನೀಡಿದರು.

ನಗರ ವಿಶ್ವವಿದ್ಯಾಲಯದ 'ಸ್ನಾತಕೋತ್ತರ ಸಮಾಜಕಾರ್ಯ ವಿಭಾಗ(ಎಂಎಸ್‌ಡಬ್ಲ್ಯು)ದಲ್ಲಿ ಆಯೋಜಿಸಿದ್ದ 'ವಿಶ್ವ ಸಮಾಜಕಾರ್ಯ ದಿನ'ದಲ್ಲಿ ಅವರು ಮಾತನಾಡಿದರು.

ವಿಶ್ವವಿದ್ಯಾಲಯದ ಸಮಾಜಕಾರ್ಯ ವಿಭಾಗದ ವಿದ್ಯಾರ್ಥಿಗಳು ಜ್ಞಾನ ಹಾಗೂ ಕೌಶಲ ಹೆಚ್ಚಿಸಿಕೊಂಡು ಸಮಾಜದ ಅಭಿವೃದ್ಧಿಗೆ ಸಮರ್ಪಿಸಿಕೊಳ್ಳಬೇಕು ಎಂದು ಹೇಳಿದರು.

ಪ್ರಕಟಗೊಂಡ ವರ್ಷವೇ ಪುಸ್ತಕ ಖರೀದಿಸಿ: ಪ್ರಕಾಶಕರ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪುಸ್ತಕಗಳು ಪ್ರಕಟವಾಗುವ ವರ್ಷವೇ ಆರ್ಥಿಕ ಲಭ್ಯತೆಗೆ ಅನುಗುಣವಾಗಿ ಪುಸ್ತಕಗಳನ್ನು ಖರೀದಿಸಿ, ಓದುಗರಿಗೆ ತಲುಪಿಸಬೇಕು' ಎಂದು ಪ್ರಕಾಶಕರು ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕರಿಗೆ ಮನವಿ ಮಾಡಿಕೊಂಡಿದ್ದಾರೆ.

ಇಲಾಖೆಯ ನೂತನ ನಿರ್ದೇಶಕರಾದ ಎಂ. ಕನಗವಲ್ಲಿ ಅವರನ್ನು ಕರ್ನಾಟಕ ಪ್ರಕಾಶಕರ ಸಂಘದ ನೇತೃತ್ವದಲ್ಲಿ ಪ್ರಕಾಶಕರು ನಗರದಲ್ಲಿ ಇತ್ತೀಚೆಗೆ ಭೇಟಿ ಮಾಡಿ, ಶುಭಹಾರೈಸಿದರು. ಈ ವೇಳೆ ಪುಸ್ತಕೋದ್ಯಮದ ವಿವಿಧ ಸಮಸ್ಯೆಗಳನ್ನು ಅವರ ಗಮನಕ್ಕೆ ತಂದು, ಬಗೆಹರಿಸುವಂತೆ ಮನವಿ ಮಾಡಿಕೊಂಡರು.

'ಇಲಾಖೆಯ ಏಕಗವಾಕ್ಷಿ ಯೋಜನೆಯಡಿ 2021ರ ಪುಸ್ತಕ ಆಯ್ಕೆ ಪ್ರಕ್ರಿಯೆಯು ಪೂರ್ಣಗೊಂಡಿದ್ದು, ಕೂಡಲೇ ಪಟ್ಟಿ ಬಿಡುಗಡೆಗೆ ಕ್ರಮ ಕೈಗೊಳ್ಳಬೇಕು. ಯೋಜನೆಯಡಿ 2020ರ ಪುಸ್ತಕ ಖರೀದಿ ಪ್ರಕ್ರಿಯೆ ಮುಗಿದಿದ್ದು, ಈಗಾಗಲೇ ಅರ್ಧದಷ್ಟು ಹಣ ಪಾವತಿಸಲಾಗಿದೆ. ಬಾಕಿ ಇರುವ ಬಿಲ್ ಪಾವತಿಗೆ ಕ್ರಮಕೈಗೊಳ್ಳಬೇಕು' ಎಂದು ಪ್ರಕಾಶಕರು ವಿನಂತಿಸಿಕೊಂಡರು.

'ಗ್ರಂಥಾಲಯ ಇಲಾಖೆಯ ಹಲವು ಚಟುವಟಿಕೆಗಳು ವರ್ಷಾಂತ್ಯದವರೆಗೂ ನಡೆಯದೆ, ಫೆಬ್ರುವರಿ ಮತ್ತು ಮಾರ್ಚ್ ತಿಂಗಳಲ್ಲಿ ಮಾತ್ರ ನಡೆಯುತ್ತಿರುವುದಕ್ಕೆ ಬಜೆಟ್ ಅನುಮೋದನೆಗೊಳ್ಳದಿರುವುದು ಕಾರಣ. ಗ್ರಂಥಾಲಯ ಅಧಿನಿಯಮದ ಪ್ರಕಾರ ಪ್ರತಿ ವರ್ಷ ಫೆಬ್ರವರಿ ತಿಂಗಳಿನಲ್ಲಿ ಎಲ್ಲ ಜಿಲ್ಲಾ ಮತ್ತು ನಗರ ಕೇಂದ್ರ ಗ್ರಂಥಾಲಯಗಳ ಬಜೆಟ್ ಅನುಮೋದನೆಗೆ ಕ್ರಮ ಕೈಗೊಳ್ಳಬೇಕು' ಎಂದರು.

'ಪುಸ್ತಕಗಳ ಪುಟವಾರು ಬೆಲೆ ನಿಗದಿ ಮಾಡಿ ಏಳು ವರ್ಷಗಳಾಗಿದ್ದು, ಕಾಗದ ಮತ್ತು ಮುದ್ರಣ ವೆಚ್ಚ ಈಗ ದುಪ್ಪಟ್ಟಾಗಿದೆ. ಹೀಗಾಗಿ, ಬೆಲೆ ಪರಿಷ್ಕರಣೆಗೆ ಕೂಡಲೇ ಕ್ರಮ ಕೈಗೊಳ್ಳಬೇಕು' ಎಂದು ಮನವಿ ಮಾಡಿಕೊಂಡರು.

ಪುಸ್ತಕ ಖರೀದಿ ಯೋಜನೆಯಲ್ಲಿ ಆಗಿರುವ ಲೋಪ ದೋಷಗಳನ್ನು ಸರಿಪಡಿಸುವ ಭರವಸೆಯನ್ನು ಕನಗವಲ್ಲಿ ನೀಡಿದರು. ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷ ಪ್ರಕಾಶ್ ಕಂಬತ್ತಳ್ಳಿ, ಕಾರ್ಯದರ್ಶಿ ಅಭಿನವ ರವಿಕುಮಾರ್, ಜಂಟಿ ಕಾರ್ಯದರ್ಶಿ ಸೃಷ್ಟಿ ನಾಗೇಶ್ ಮತ್ತು ನವ ಕರ್ನಾಟಕದ ಜನಾರ್ದನ್ ಉಪಸ್ಥಿತರಿದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED EXPERIENCED Teachers for PE, Nursery, Primary and High School (Science). Vijayanagar, Bangalore. Contact: 8431812577/ 7204225487.

POORNAPRAJNA EDUCATION CENTRE, INDIRANAGAR
(Promoted & Managed by Udupi Shree Adamaru Matha Education Council)
C.A Site No. 48, New Thippasandra, HAL 3rd Stage, Bangalore -75. Ph.080-25292930
Invites applications from experienced & qualified teachers for the following posts:
PRIMARY SCHOOL SECTION
ENGLISH TEACHER: B A / M A (English) with B Ed
PRE PRIMARY SCHOOL SECTION
ASST TEACHER: Graduation preferably Nursery Teachers Training
SPECIAL DEPARTMENT
SUPW /CRAFT TEACHER: Degree /Diploma with expert in craft, glass painting, tailoring, embroidery, cookery, etc
ASST LIBRARIAN: B Lib.Sc /M Lib.Sc with experience in digital library
Computer literacy is mandatory for all the posts
Apply to the Hon. Secretary on or before 23-03-2024 email to contact.indiranagar@ppec.edu.in

SRI BALAJI EDUCATIONAL CHARITABLE TRUST ®
Rainbow International School
Managed by : R R Institutions
Kereguddadahalli, Abbigere, Chikkabanavara
Applications are invited for the following positions for the Academic Year 2024-25
- **Pre – Primary**
  PG certification in Early childhood / NTT
- **Primary - English, Math & EVS**
  A Bachelor's degree in Science, Arts or Commerce with a degree in teaching experience would be preferred.
- **Secondary School**
  A Master's degree in English, Physics, Chemistry, Biology, Mathematics and Social Studies. Experience in teaching the relevant subject would be preferred.

Candidates must have good communication skills in English and adequate Computer Literacy Skills.
Updated Resume with a recent passport size colour photograph of the candidate to be mailed to principal@ris.ac.in
Applications to reach the school before 27th March, 2024
Incomplete applications will be rejected
www.ris.ac.in 74064 71111 | 97411 51177

SRI KK EDUCATION CENTRE
(Affiliated to CBSE, Aff. No. 830256)
Kadabagere, Magadi Road, Bangalore
RECRUITMENT OF STAFF

Grade	Pay Scale	Subject
Nursery	20K To 26K	Mother Teacher
Primary	25K To 30K	All Subjects
Middle School	27K To 35K	All Subjects
Secondary	29K To 40K	All Subjects, Physical Education

Qualification: B.Ed., M.Ed., B.Sc., BCA, B.P.Ed. with minimum 3 Years of experience in CBSE/ICSE Board
Email: srikkec@gmail.com Ph: 9886535292

SREE VENKATESHWARA ENGLISH SCHOOL #1 VS Layout Krishnarajapura Bangalore-560036. Wanted TEACHERS B.Sc B.Ed (Mathematics, Science) B.A,B.Ed (Social,English, Kannada,Hindi) NTT TCH D.Ed B.P.Ed M.P.Ed COMPUTER TEACHER Clerks B.Lib, Attractive salary. Contact: 080-25611873, 7411135627 Email- svs.krp.bangalore@gmail.com

SIR. M. Vishveshwaraiah Vidyaniketan, Shettihalli, T.Dasarahalli, Bangalore-57 requires Qualified, Experienced, dedicated Teachers to Teach English, Kannada, Hindi Computer Science for Nursery, Primary and High School. Contact 9731841931 9243464624 9980906909 smvvschool18@gmail.com

WANTED Lady Trained Teachers for Nursery,One PE Teacher,One Chemistry Teacher for High School`ICSE. Walk-in Interview on 21.03.2024 with the Secretary, Srikrishna International School, ITI-Layout, BSK`3rd Stage, Bangalore-85. Phone:26690799

Om Sai Ram
NEW BALDWIN GROUP OF INSTITUTIONS
* BANASWADI * MANDUR * T.C PALYA * ANEKAL * ANEKAL TOWN * CHANDAPUR * ATTIBELE
NEW BRANCHES AT: * HSR & * (KODATIGATE) SARJAPURA
About us: NBGI having 9 Schools, 4 PU College, 2 Degree College & Upcoming University are the Pioneers in providing quality education Since 1990, Our campuses are well facilitated in providing education of international standards. We are collaborated with ICSE, CBSE, & Cambridge (IGCSE) Boards. We cater to Day Schooling and on campus Boarding Facilities.
VICE PRICIPALS/CO-ORDINATORS/ SUBJECT EXPERTS
Candidates possessing with brilliant academy records. Post Graduate with 5 to 10 yrs experience & leadership qualities in reputed institution.
ADMINISTRATION: CO-ORDINATORS/RECORDS
Candidates having experience as Administrator, Admin Counsellor, Admin Executive, Records handling in relevant field will be recruited immediately and trained for respective postings.
Remuneration: at par with the institutional standard. With additional facilities like food & transport in the gross package.
APPLY IMMEDIATELY
Applying candidates should clearly specify the Position Applied for, branch Opted with updated resume
Contact: 98860 84799 / 78990 83463
hrcentral.nbgi@gmail.com www.newbaldwininstitutions.org

POORNAPRAJNA EDUCATION CENTRE, INDIRANAGAR
(Promoted & Managed by Udupi Shree Adamaru Matha Education Council)
C.A Site No. 48, New Thippasandra, HAL 3rd Stage,Bangalore -75. Ph.080-25292930
English medium school under Karnataka State syllabus invites applications for the following posts:
PRINCIPAL Master's degree with M Ed/ B Ed, 5 yrs experience as Principal & 10 yrs in teaching.
VICE PRINCIPAL Master's degree with M Ed/ B Ed. Experience as Vice Principal/ In charge Principal & 10 yrs in teaching.
*Preferred age 40 years and above.
Apply to the Hon. Secretary before 23-03-2024 through post or email to contact.indiranagar@ppec.edu.in

GANGA INTERNATIONAL SCHOOL
(Affiliated to ICSE: Grade-I to X & State: Grade-VIII to X)
GANGA PU COLLEGE
(Affiliated to ISC & State: PU-I & II - Science & Commerce)
POSITIONS VACANT
1) Principal - M.A/M.Sc with B.Ed having experience of minimum of 5 years in ICSE school.
2) Nursery Teacher - NTT+3 years experience.
3) PRT (Primary Teacher)
4) TGT (Trained Graduate Teacher) Physics, Chemistry, Biology, Computer Science, English & Physical Education.
5) PGT (Post Graduate Teacher) Physics, Chemistry, Biology, Computer Science, Accountancy, English & Physical Education.

FRESHERS ALSO CAN APPLY FOR TEACHER ROLE.
Walk-in for Interview & Demo during the working days between 10:30 am to 2:30 pm at the below mentioned address.
GANGA INTERNATIONAL SCHOOL & PU COLLEGE,
Nagaraja Farm, Gruhalakshmi Layout, Nelagadaranahalli, Bengaluru-560073.
Mob: 9241147487/9448087026/8277359000
Scan QR for applying
You can also forward your resume to email ID: gangacareers@gmail.com

KARNATAKA COLLEGE OF MANAGEMENT
33/2, Hegade Nagar Main Rd, Thirumenahalli, Bengaluru-64
The Karnataka College Group of Institutions (KCGI) formed in 2003 with an objective of providing quality education, is inviting faculty positions in management and science programs
FACULTY (MARKETING)
Qualification & Experience : MBA with Marketing specialisation, Ph.D desirable, Minimum 3-5 years teaching experience at Post Graduation level (Other than Marketing, required to teach general management subjects)
FACULTY (HR)
Qualification & Experience : MBA with HR specialisation, Ph.D desirable, Minimum 3-5 years teaching experience at Post Graduation level (Other than HR, required to teach general management subjects)
Applications are invited from eligible candidates who STRICTLY meet the above requirement. Apply within in one week from the date of this advertisement to directormbakcmi@gmail.com, Contact : 9886635719

WANTED QUALIFIED TEACHERS For Primary and High School, PMS Public School, Bettahalasur, Bangalore 9632329017/ 9880113895.

REQUIRED WELL Experienced, Qualified ENGLISH TEACHER for High School. 'EVERSHINE ENGLISH SCHOOL', Kalidasa Layout, Srinagar, Bangalore-50. Contact: 9845907518

SIDDAGANGA SREE SHIVAKUMARA SWAMIJI VIDYAPEETHA TRUST #1,1st Stage,2nd Phase, chandra`layout Bengaluru-560072. Ph:080-23397600 invites application for Siddaganga Public School, Chandra Layout & Vijayangara: (1)Kannada Teacher- BA/MA,B.Ed. (2)English Teacher- BA/MA,B.Ed. (3)Hindi Teacher- BA/MA,B.Ed. (4)General Science Teacher- B.Sc/M.Sc, B.Ed. (5)Mathematics Teacher- B.Sc./M.Sc, B.Ed. (6)Social Science Teacher- BA/MA,B.Ed. (7)Computer Teacher- BCA/MCA/B.E (8)Nursery Teacher- Any Degree with NTT/MTT, Trained. (9)Physical Instructor- B.P.Ed./M.P.Ed. (10)Music Teacher- Vidwath (11)Yoga Teacher-Diploma in Yoga (12)Drawing Teacher- BFA/MFA (13)Office Assistant Any degree with Tally ERP-9 & computer knowledge (14)Maintenance Asst.- ITI Candidates can also apply. Diploma in Automobile or Mechanical Engineering preferred. SSK PU College Lecturer in Computer Science- MCA Lab Technician: PUC Science/B.Sc. Interview date will be intimated. Interested candidates may send their resume, service`& salary certificates`& Testimonials to the Mail: sskvptrust.2001@gmail.com/ personally submit the above details to Trust office on or before 03/04/2024 between 9am to 4pm.

WANTED M.A, M.Sc, M.Com to Teach PCMB, PCMC, HEBA. Contact personally with resume, original documents between 2P.M to 4P.M. Manjula Nadgir Memorial PU College, Madavara Next to International Exhibition Center, Bangalore. Ph: 9731721446

Accounts & Finance

SENIOR ACCOUNTANT Wanted with 3-4 yearsExperience in Tally and accounting for a Food & Bakery Products manufacturing company.Contact: 6360449923

Drivers

HAEID REQUIRES Experienced Educated 4WH-Automatic car Driver at Rajajinagar Bangalore. Attractive package & immediate placement. CONTACT: 6366443134.

Engg/ Production Technical

ROTOFLEX GEARBOX MANUFACTURING COMPANY, MAGADI ROAD, BANGALORE-560091. REQUIRES, CNC LATHE/ VMC OPERATORS, GEAR HOBBING MACHINE OPERATORS, ASSEMBLY FITTERS FRESH OR EXPERIENCED, MALE CANDIDATES ONLY, GOOD SALARY WITH ALL BENEFITS. Contact: 8197996632 9845032663 EMAIL:rotoflexb@gmail.com

General

WANTED ACCOUNTANT Qualification: B.Com Graduates Experience 5-10years`With TDS & GST Salary: Rs.35,000/- Age`below 45years Free`Family Accommodation Call:7338084555 9845053636:Mail glprojects7889@gmail.com

EMPLOYEE NEEDED! Business Development Officer for property developer company No investment, age above 30 years No experienced required. Earning Rs. 50,000/- per month Retired persons are eligible. Contact:- 9845334751.

Wanted

WANTED MALE/ Female Office Adminstrative Assistant Below 40 Years Known Kannada English Hindi in and Around Rajajinagar Contact: 9108458798/ 080-23384085

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

Marketing & Sales

A REPUTED Security Agency Requires Field Officers, EX-Servicemen/ Civilians in Bengaluru. Ph No. 9900074600

RENTAL PROPERTIES

Accommodation Available

Commercial

FOR RENT: 3200 Sft New Commercial Building with Ground & First Floor Opp. Basaveshwaranagar police station. Ideal for showroom/ Banks/ Super Market. Contact: 9448278155

RENT OFFICE Space 1500sft Basaveshwaranagar, West of Chord Road, Opp. Planet Honda Showroom.+ Terrace, 2nd Floor, Interiors ready. Ideal for Professionals Chambers, Diagnostic Centres, Bank, Insurance Office. Contact: Hema +919980404993.

House

COX TOWN Rent 3 & 4 BHK Italian Kitchen, Wardrobe, posh, Lift, water. Charles Campbell Road. 9686897004.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

General

General

WE DO NA-Agricultural Land Conversions, Change of land use, Gomala Phodi Durasti,11E, Survey, NOC, All Property department works. Vernadevelopers.com, Barton Center, MG Road, BLR. 9916310226/ 9353128035

WANTED 4000- 20000Sqft Industrial/ Residential/ Commercial for Outrate-JV, CBD and Bengaluru Prime areas. Vernadevelopers.com, Barton Centre, MG Road, BLR. 9353128035/ 9916310226

REAL ESTATE SELLING

House

Jayanagar

JAYANAGAR 5TH Block, 35x65 corner, J.P.Nagar 50x80 old house North facing residential Good Location. -9845232711

Sites

Banashankari

2400 SFT BDA Site`for Sale in Banashankari 6th Stage`4th `B`Block Bangalore Rs.1.92 Crore.Contact:- -9341226696. (Brokers Excuse)

Nagarabhavi

"SALE 30X40, 40x60, 50x80 SITE NGEF LAYOUT, MALLATHAHALLI, GOOD LOCATIONS, GENUINE BUYERS CONTACT: 7760388034/ 9242135834"

Vishweshwariah Layout

VISVESWARIAH LAYOUT 5th BLock near KLE College & 100 feet Rd BDA West facing 30X40 Site for immediate sale. HN 9900339878/ 9844039878.

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

PERSONAL

Change of Name

CHANGE OF NAME
I, **SUHAIL BASHA,** Residing at # 5, Central Street, Coles Road Cross, Pulikeshinagar, Bangalore-05 have changed my name to **SUHAIL AHMED** vide affidavit dt:19/03/2024 before Notary L.Gopalakrishna, Bangalore. Henceforth I shall be called as **SUHAIL AHMED** only.

CHANGE OF NAME
I, **SEEMA MANJUNATH,** formerly known as P. Seema, aged 34 years, daughter of Gavenahalli Hanumegowda Prakash, residing at #69, Hedakanahalli, Hosakote Taluk, Korati, Bangalore Rural, Karnataka-562122, do hereby declare that I have legally changed my name from **"SEEMA MANJUNATH"** to **"P. SEEMA".** This change was made through an Affidavit dated March 19, 2024, sworn before an Advocate and Notary by Y.R. Chandrasekar, Bengaluru- 560 032.

I, PREETHA Kunnath Puthiyaveedu (K P Preetha) w/o A.C. Muralidharan r/o B3, Polaris Apartment, 29, North Road, Cooke Town, Bangalore 560084 declare that my name in my passport (No.A0581163) is mentioned as Preetha Muralidharan. Both names pertain to me, vide affidavit dt 11.03.2024 sworn before Notary Prasad Shetty K.B. Bangalore.

I, SHABEENA D/O. MOHAMED YACOOB R/a#217/55, 11th Main, 11th Cross, Wilson Garden, Bengaluru-27, have changed name SHABEENA TAJ D/O MOHAMMED YACOOB vide affidavit 19.3.2024 before Notary Hemalatha, Bengaluru.

PUBLIC NOTICE

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರು, ಶ್ರೀಮತಿ. ಲೇಖಾ ಬಿನ್ ಮಾಯಣ್ಣಗೌಡ ಕೆ ಕೋಂ. ಬಾನುಕಿರಣ್ ಇವರಿಂದ ಕೆಳಗಿನ ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಉದ್ದೇಶಿಸಿರುತ್ತಾರೆ. ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ/ಗಳಿಗೆ ಯಾವುದೇ ರೀತಿಯ ಹಕ್ಕು, ಕ್ಲೇಮು ಅಥವಾ ಹಿತಾಸಕ್ತಿ ಇದ್ದಲ್ಲಿ, ಅಂತಹವರು ಈ ಪ್ರಕಟಣೆಯ ದಿನಾಂಕದಿಂದ ಹದಿನೈದು ದಿನಗಳೊಳಗೆ, ಈ ಕೆಳಗಿನ ಸಹಿದಾರರಿಗೆ, ಪೂರಕ ದಾಖಲಾತಿಗಳ ಸಮೇತ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬೇಕು. ಕೆಳಗಿನ ಸಹಿದಾರರಿಗೆ ನಿಗದಿತ ಅವಧಿಯೊಳಗೆ ಯಾವುದೇ ಕ್ಲೇಮುಗಳು ಸಲ್ಲಿಕೆಯಾಗದಿದ್ದಲ್ಲಿ, ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಇನ್ನಿತರ ಯಾವುದೇ ವ್ಯಕ್ತಿಗಳ ಕ್ಲೇಮುಗಳಿರುವುದಿಲ್ಲ ಎಂದು ಪರಿಗಣಿಸುತ್ತ, ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಮುಂದಾಗುತ್ತಾರೆ.

ಷೆಡ್ಯೂಲ್ ಪ್ರಾಪರ್ಟಿ

ಬೈರನಹಳ್ಳಿ ಗ್ರಾಮ, ಕಸಬಾ–2 ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದ ಸರ್ವೆ ನಂ. 99/19 ರಲ್ಲಿ ಸ್ಥಿತಗೊಂಡಿರುವ, 20 ಗುಂಟಾ ವಿಸ್ತೀರ್ಣವುಳ್ಳ ಕೃಷಿ ಜಮೀನಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 100 ರಲ್ಲಿನ ಜಮೀನು, ಪಶ್ಚಿಮಕ್ಕೆ: ಸರ್ವೆ ನಂ. 99/23 ರಲ್ಲಿರುವ ಜಮೀನು, ಉತ್ತರಕ್ಕೆ: ಸರ್ವೆ ನಂ. 99/4 ಮತ್ತು ಸರ್ವೆ ನಂ. 99/20 ರಲ್ಲಿರುವ ಜಮೀನು, ದಕ್ಷಿಣಕ್ಕೆ: ಸರ್ವೆ ನಂ. 99/13 ರಲ್ಲಿರುವ ಜಮೀನು.

ರವಿ ಎ ಬೆಳಗಟ್ಟಿ, ವಕೀಲರು
ನಂ.24, 4ನೇ ಮಾಡೆಲ್ ಹೌಸ್ ಸ್ಟ್ರೀಟ್, ಬಸವನಗುಡಿ,
ಬೆಂಗಳೂರು–560004. ಫೋನ್: 9901578210.

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರು, ಶ್ರೀ. ಮೋಹನ್ ಸಾಯಿ ಸಿ ಬಿನ್ ಚಿಕ್ಕಕೆಂಪಯ್ಯ, ಶ್ರೀ. ನಾರಾಯಣ್ ಕೆ ಸಿ ಬಿನ್ ಚಿಕ್ಕಹನುಮಯ್ಯ, ಶ್ರೀ. ಕೆ. ಮಂಜುನಾಥ್ ಬಿನ್ ಕೆ ಬಿ ಕೆಂಪಯ್ಯ, ಶ್ರೀ. ಸತೀಶಕುಮಾರ್ ಡಿ ಬಿನ್ ದೊಡ್ಡನರಸಯ್ಯ, ಶ್ರೀ. ಎಂ ಗಂಗಯ್ಯ ಬಿನ್ ಮಾದಹನುಮಯ್ಯ ಇವರುಗಳಿಂದ ಕೆಳಗಿನ ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಉದ್ದೇಶಿಸಿರುತ್ತಾರೆ. ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ/ಗಳಿಗೆ ಯಾವುದೇ ರೀತಿಯ ಹಕ್ಕು, ಕ್ಲೇಮು ಅಥವಾ ಹಿತಾಸಕ್ತಿ ಇದ್ದಲ್ಲಿ, ಅಂತಹವರು ಈ ಪ್ರಕಟಣೆಯ ದಿನಾಂಕದಿಂದ ಹದಿನೈದು ದಿನಗಳೊಳಗೆ, ಈ ಕೆಳಗಿನ ಸಹಿದಾರರಿಗೆ, ಪೂರಕ ದಾಖಲಾತಿಗಳ ಸಮೇತ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬೇಕು. ಕೆಳಗಿನ ಸಹಿದಾರರಿಗೆ ನಿಗದಿತ ಅವಧಿಯೊಳಗೆ ಯಾವುದೇ ಕ್ಲೇಮುಗಳು ಸಲ್ಲಿಕೆಯಾಗದಿದ್ದಲ್ಲಿ, ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಇನ್ನಿತರ ಯಾವುದೇ ವ್ಯಕ್ತಿಗಳ ಕ್ಲೇಮುಗಳಿರುವುದಿಲ್ಲ ಎಂದು ಪರಿಗಣಿಸುತ್ತ, ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಮುಂದಾಗುತ್ತಾರೆ.

ಷೆಡ್ಯೂಲ್ ಪ್ರಾಪರ್ಟಿ

ಬೈರನಹಳ್ಳಿ ಗ್ರಾಮ, ಕಸಬಾ–2 ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದ ಸರ್ವೆ ನಂ. 99/4 ರಲ್ಲಿ ಸ್ಥಿತಗೊಂಡಿರುವ, 01 ಎಕರೆ 07 ಗುಂಟಾ ವಿಸ್ತೀರ್ಣವುಳ್ಳ ಕೃಷಿ ಜಮೀನಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 99/10 ಮತ್ತು ಸರ್ವೆ ನಂ. 100 ಗಳಲ್ಲಿನ ಜಮೀನು, ಪಶ್ಚಿಮಕ್ಕೆ: ಸರ್ವೆ ನಂ. 99/20 ರಲ್ಲಿರುವ ಜಮೀನು, ಉತ್ತರಕ್ಕೆ: ಕೆ.ಬಿ.ಜಗದೀಶ್‌ರವರ ಜಮೀನು, ದಕ್ಷಿಣಕ್ಕೆ: ಸರ್ವೆ ನಂ. 99/19 ರಲ್ಲಿರುವ ಜಮೀನು.

ರವಿ ಎ ಬೆಳಗಟ್ಟಿ, ವಕೀಲರು
ನಂ.24, 4ನೇ ಮಾಡೆಲ್ ಹೌಸ್ ಸ್ಟ್ರೀಟ್, ಬಸವನಗುಡಿ,
ಬೆಂಗಳೂರು–560004. ಫೋನ್: 9901578210.

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರು, ಶ್ರೀ ಬೈರಣ್ಣ ಬಿನ್ ಪುಟ್ಟಬೈರಯ್ಯ ಮತ್ತು ಶ್ರೀ ಅರುಣಕುಮಾರ್ ಬಿನ್ ಬೈರಣ್ಣ ಇವರುಗಳಿಂದ ಕೆಳಗಿನ ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಉದ್ದೇಶಿಸಿರುತ್ತಾರೆ. ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ/ಗಳಿಗೆ ಯಾವುದೇ ರೀತಿಯ ಹಕ್ಕು, ಕ್ಲೇಮು ಅಥವಾ ಹಿತಾಸಕ್ತಿ ಇದ್ದಲ್ಲಿ, ಅಂತಹವರು ಈ ಪ್ರಕಟಣೆಯ ದಿನಾಂಕದಿಂದ ಹದಿನೈದು ದಿನಗಳೊಳಗೆ, ಈ ಕೆಳಗಿನ ಸಹಿದಾರರಿಗೆ, ಪೂರಕ ದಾಖಲಾತಿಗಳ ಸಮೇತ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬೇಕು. ಕೆಳಗಿನ ಸಹಿದಾರರಿಗೆ ನಿಗದಿತ ಅವಧಿಯೊಳಗೆ ಯಾವುದೇ ಕ್ಲೇಮುಗಳು ಸಲ್ಲಿಕೆಯಾಗದಿದ್ದಲ್ಲಿ, ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಇನ್ನಿತರ ಯಾವುದೇ ವ್ಯಕ್ತಿಗಳ ಕ್ಲೇಮುಗಳಿರುವುದಿಲ್ಲ ಎಂದು ಪರಿಗಣಿಸುತ್ತ, ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಮುಂದಾಗುತ್ತಾರೆ.

ಷೆಡ್ಯೂಲ್ ಪ್ರಾಪರ್ಟಿ

ಐಟಂ ನಂ. 1: ಬೈರನಹಳ್ಳಿ ಗ್ರಾಮ, ಕಸಬಾ–2 ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದ ಸರ್ವೆ ನಂ. 99/23 (ಹಳೆಯ ಸರ್ವೆ ನಂ. 99/3) ರಲ್ಲಿ ಸ್ಥಿತಗೊಂಡಿರುವ, 9 1/2 ಗುಂಟಾ ವಿಸ್ತೀರ್ಣವುಳ್ಳ ಕೃಷಿ ಜಮೀನಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 99/13 ಮತ್ತು ಸರ್ವೆ ನಂ. 99/19 ಗಳಲ್ಲಿನ ಜಮೀನು, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಸರ್ವೆ ನಂ. 99/20 ರಲ್ಲಿರುವ ಜಮೀನು, ದಕ್ಷಿಣಕ್ಕೆ: ಕೆ.ಬಿ.ಜಗದೀಶ್‌ರವರ ಜಮೀನು.

ಐಟಂ ನಂ. 2: ಬೈರನಹಳ್ಳಿ ಗ್ರಾಮ, ಕಸಬಾ–2 ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದ ಸರ್ವೆ ನಂ. 99/13 (ಹಳೆಯ ಸರ್ವೆ ನಂ. 99/3) ರಲ್ಲಿ ಸ್ಥಿತಗೊಂಡಿರುವ, 01 ಎಕರೆ ವಿಸ್ತೀರ್ಣವುಳ್ಳ ಕೃಷಿ ಜಮೀನಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ: ಪೂರ್ವಕ್ಕೆ: ಶ್ರೀನಿವಾಸರವರ ಜಮೀನು ಮತ್ತು ಸರ್ವೆ ನಂ. 100ರ ಭಾಗ, ಪಶ್ಚಿಮಕ್ಕೆ: ಸರ್ವೆ ನಂ. 99/23 ರಲ್ಲಿರುವ ಜಮೀನು, ಉತ್ತರಕ್ಕೆ: ಸರ್ವೆ ನಂ. 99/19 ರಲ್ಲಿರುವ ಜಮೀನು, ದಕ್ಷಿಣಕ್ಕೆ: ಕೆ.ಬಿ.ಜಗದೀಶ್‌ರವರ ಜಮೀನು.

ರವಿ ಎ ಬೆಳಗಟ್ಟಿ, ವಕೀಲರು
ನಂ.24, 4ನೇ ಮಾಡೆಲ್ ಹೌಸ್ ಸ್ಟ್ರೀಟ್, ಬಸವನಗುಡಿ,
ಬೆಂಗಳೂರು–560004. ಫೋನ್: 9901578210.

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರು, ಶ್ರೀಮತಿ. ಸುಶೀಲಮ್ಮ ಕೋಂ. ಲೇಟ್ ಕೆ.ಆರ್.ರಾಜಣ್ಣ, ಶ್ರೀಮತಿ. ಕೆ.ಆರ್.ಸುಮಾ ಬಿನ್ ಲೇಟ್ ಕೆ.ಆರ್.ರಾಜಣ್ಣ, ಶ್ರೀ. ಕೆ.ಆರ್.ರಘು ಬಿನ್ ಲೇಟ್ ಕೆ.ಆರ್.ರಾಜಣ್ಣ, ಶ್ರೀ. ಕೆ ಆರ್ ರಾಜೇಶ್ ಬಿನ್ ಲೇಟ್ ಕೆ.ಆರ್.ರಾಜಣ್ಣ, ಶ್ರೀ. ಕೆ ಆರ್ ಅಜಯ್ ಬಿನ್ ಲೇಟ್ ಕೆ.ಆರ್.ರಾಜಣ್ಣ ಇವರುಗಳಿಂದ ಕೆಳಗಿನ ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಉದ್ದೇಶಿಸಿರುತ್ತಾರೆ. ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ/ಗಳಿಗೆ ಯಾವುದೇ ರೀತಿಯ ಹಕ್ಕು, ಕ್ಲೇಮು ಅಥವಾ ಹಿತಾಸಕ್ತಿ ಇದ್ದಲ್ಲಿ, ಅಂತಹವರು ಈ ಪ್ರಕಟಣೆಯ ದಿನಾಂಕದಿಂದ ಹದಿನೈದು ದಿನಗಳೊಳಗೆ, ಈ ಕೆಳಗಿನ ಸಹಿದಾರರಿಗೆ, ಪೂರಕ ದಾಖಲಾತಿಗಳ ಸಮೇತ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬೇಕು. ಕೆಳಗಿನ ಸಹಿದಾರರಿಗೆ ನಿಗದಿತ ಅವಧಿಯೊಳಗೆ ಯಾವುದೇ ಕ್ಲೇಮುಗಳು ಸಲ್ಲಿಕೆಯಾಗದಿದ್ದಲ್ಲಿ, ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಇನ್ನಿತರ ಯಾವುದೇ ವ್ಯಕ್ತಿಗಳ ಕ್ಲೇಮುಗಳಿರುವುದಿಲ್ಲ ಎಂದು ಪರಿಗಣಿಸುತ್ತ, ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಮುಂದಾಗುತ್ತಾರೆ.

ಷೆಡ್ಯೂಲ್ ಪ್ರಾಪರ್ಟಿ

ಬೈರನಹಳ್ಳಿ ಗ್ರಾಮ, ಕಸಬಾ–2 ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದ ಸರ್ವೆ ನಂ. 99/20 ರಲ್ಲಿ ಸ್ಥಿತಗೊಂಡಿರುವ, 02 ಎಕರೆ 05 ಗುಂಟಾ ವಿಸ್ತೀರ್ಣವುಳ್ಳ ಕೃಷಿ ಜಮೀನಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 99/4 ರಲ್ಲಿನ ಜಮೀನು, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಕೆ.ಬಿ.ಜಗದೀಶ್‌ರವರ ಜಮೀನು, ದಕ್ಷಿಣಕ್ಕೆ: ಸರ್ವೆ ನಂ. 99/23 ಮತ್ತು 99/19 ಗಳಲ್ಲಿರುವ ಜಮೀನು.

ರವಿ ಎ ಬೆಳಗಟ್ಟಿ, ವಕೀಲರು
ನಂ.24, 4ನೇ ಮಾಡೆಲ್ ಹೌಸ್ ಸ್ಟ್ರೀಟ್, ಬಸವನಗುಡಿ,
ಬೆಂಗಳೂರು–560004. ಫೋನ್: 9901578210.

ಪೌರತ್ವ ತಿದ್ದುಪಡಿ ಕಾಯ್ದೆ: ಪ್ರತಿಕ್ರಿಯಿಸಲು ಕೇಂದ್ರ ಸರ್ಕಾರಕ್ಕೆ ಮೂರು ವಾರಗಳ ಗಡುವು

ಸಿಎಎ ಜಾರಿ ತಡೆಗೆ 'ಸುಪ್ರೀಂ' ನಕಾರ

ನವದೆಹಲಿ (ಪಿಟಿಐ): ಪೌರತ್ವ ತಿದ್ದುಪಡಿ ಕಾಯ್ದೆಗೆ ಸಂಬಂಧಿಸಿದ ನಿಯಮಗಳ ಜಾರಿಗೆ ತಡೆ ನೀಡುವಂತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳಿಗೆ ಮೂರು ವಾರಗಳಲ್ಲಿ ಪ್ರತಿಕ್ರಿಯೆ ಸಲ್ಲಿಸುವಂತೆ ಸುಪ್ರೀಂ ಕೋರ್ಟ್, ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಪೌರತ್ವ ತಿದ್ದುಪಡಿ ಕಾಯ್ದೆಯ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಇತ್ಯರ್ಥಪಡಿಸುವವರೆಗೆ ನಿಯಮಗಳ ಜಾರಿಗೆ ತಡೆ ನೀಡಬೇಕು ಎಂದು ಕೋರಿ ಅರ್ಜಿಗಳನ್ನು ಸಲ್ಲಿಸಲಾಗಿದೆ.

ಆದರೆ, ಕಾಯ್ದೆಯ ಜಾರಿಗೆ ಅನುವು ಮಾಡಿಕೊಡುವ ನಿಯಮಗಳಿಗೆ ತಡೆ ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಕಾಯ್ದೆಯು ಯಾವುದೇ ವ್ಯಕ್ತಿಯ ಪೌರತ್ವವನ್ನು ಕಿತ್ತುಕೊಳ್ಳುವುದಿಲ್ಲ ಎಂದು ಕೇಂದ್ರವು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠಕ್ಕೆ ತಿಳಿಸಿದೆ.

ನಿಯಮಗಳ ಜಾರಿಗೆ ತಡೆ ಕೋರಿ 20 ಅರ್ಜಿಗಳು ಸಲ್ಲಿಕೆಯಾಗಿವೆ. ಇವುಗಳ ವಿಚಾರಣೆ ನಡೆಸುತ್ತಿರುವ ಪೀಠದಲ್ಲಿ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರೂ ಇದ್ದಾರೆ.


'ನಾವು ಯಾವುದೇ ಮೇಲ್ನೋಟದ ಅಭಿಪ್ರಾಯ ವ್ಯಕ್ತಪಡಿಸುವುದಿಲ್ಲ... ನಾವು ಅರ್ಜಿದಾರರ ವಾದವನ್ನು ಹಾಗೂ ಇನ್ನೊಂದು ಕಡೆಯವರ ವಾದವನ್ನು ಆಲಿಸಬೇಕಿದೆ' ಎಂದು ಪೀಠವು ಹೇಳಿದೆ. ವಿಚಾರಣೆಯನ್ನು ಏಪ್ರಿಲ್ 9ಕ್ಕೆ ನಿಗದಿ ಮಾಡಲಾಗಿದೆ. ಕೇಂದ್ರ ಸರ್ಕಾರವು ಸಿಎಎ ಜಾರಿಗೆ ಅಗತ್ಯವಿರುವ ನಿಯಮಗಳನ್ನು ಮಾರ್ಚ್ 11ರಂದು ಅಧಿಸೂಚನೆಯಲ್ಲಿ ಪ್ರಕಟಿಸಿದೆ.

ವಿಚಾರಣೆ ಪೂರ್ಣಗೊಳ್ಳುವವರೆಗೆ ಕಾಯ್ದೆಯ ಅಡಿಯಲ್ಲಿ ಯಾರಿಗೂ ಪೌರತ್ವ ನೀಡುವುದಿಲ್ಲ ಎಂದು ಕೇಂದ್ರವು ಹೇಳಿಕೆ ನೀಡಬೇಕು ಎಂದು ಅರ್ಜಿದಾರರ ಪರವಾಗಿ ವಾದಿಸಿದ ಹಿರಿಯ ವಕೀಲೆ ಇಂದಿರಾ ಜೈಸಿಂಗ್ ಕೋರಿದರು. ಕೇಂದ್ರದ ಪರವಾಗಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹಾಜರಿದ್ದರು.

ಬಲೂಚಿಸ್ತಾನದಲ್ಲಿ ದೌರ್ಜನ್ಯಕ್ಕೆ ಗುರಿಯಾದ ಹಿಂದೂ ಒಬ್ಬರು 2014ರ ಡಿಸೆಂಬರ್‌ಗೆ ಮೊದಲು ಭಾರತಕ್ಕೆ ಬಂದಿದ್ದು, ಅವರಿಗೆ ಇಲ್ಲಿನ ಪೌರತ್ವ ನೀಡಿದಲ್ಲಿ ಇತರರ ಹಕ್ಕುಗಳಿಗೆ ಹೇಗೆ ತೊಂದರೆ ಆಗುತ್ತದೆ ಎಂದು ವಕೀಲರೊಬ್ಬರು ಪ್ರಶ್ನಿಸಿದರು. 'ಏಕೆಂದರೆ, ಅವರಿಗೆ ಮತದಾನದ ಹಕ್ಕು ಸಿಗುತ್ತದೆ' ಎಂದು ಇಂದಿರಾ ಅವರು ಪ್ರತ್ಯುತ್ತರ ನೀಡಿದರು.

ಮಂಗಳವಾರದ ವಿಚಾರಣೆ ಕೊನೆಯಲ್ಲಿ ಇಂದಿರಾ ಅವರು, ಈ ಕಾಯ್ದೆಯ ಅಡಿಯಲ್ಲಿ ನೀಡಲಾಗುವ ಪೌರತ್ವವು ಸುಪ್ರೀಂ ಕೋರ್ಟ್ ನೀಡುವ ತೀರ್ಪಿಗೆ ಬದ್ಧವಾಗಿ ಇರಬೇಕು ಎಂದು ಕೋರ್ಟ್ ಹೇಳಬಹುದು ಎಂದರು. ಹೊಸ ನಿಯಮಗಳ ಅಡಿಯಲ್ಲಿ ಪೌರತ್ವ ನೀಡಲು ಅಗತ್ಯವಿರುವ 'ಮೂಲಸೌಕರ್ಯವನ್ನು ಅವರು ಹೊಂದಿಲ್ಲ' ಎಂದು ಪೀಠವು ಮೌಖಿಕವಾಗಿ ಹೇಳಿತು.

ರಾಮದೇವ, ಬಾಲಕೃಷ್ಣ ಖುದ್ದು ಹಾಜರಿಗೆ ಸೂಚನೆ


ಬಾಬಾ ರಾಮದೇವ

ನವದೆಹಲಿ (ಪಿಟಿಐ): ನ್ಯಾಯಾಂಗ ನಿಂದನೆ ಪ್ರಕರಣಕ್ಕೆ ಸಂಬಂಧಿಸಿದ ನೋಟಿಸ್‌ಗೆ ಉತ್ತರಿಸಲು ವಿಫಲರಾದ ಯೋಗ ಗುರು ಬಾಬಾ ರಾಮದೇವ ಮತ್ತು ಪತಂಜಲಿ ಆಯುರ್ವೇದ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಆಚಾರ್ಯ ಬಾಲಕೃಷ್ಣ ಅವರ ನಡೆಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ಇವರಿಬ್ಬರಿಗೂ ವಿಚಾರಣೆಗೆ ಖುದ್ದಾಗಿ ಹಾಜರಾಗುವಂತೆ ಸೂಚಿಸಿದೆ.

ಕಂಪನಿಯ ಉತ್ಪನ್ನಗಳು ಹಾಗೂ ಅವುಗಳ ಫಲದಾಯಕತೆಗೆ ಸಂಬಂಧಿಸಿದ ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ಕೋರ್ಟ್ ಇವರಿಗೆ ನೋಟಿಸ್ ಜಾರಿಗೊಳಿಸಿತ್ತು.

ಕೋರ್ಟ್‌ಗೆ ಕೊಟ್ಟ ಮಾತನ್ನು ಮೇಲ್ನೋಟಕ್ಕೆ ಉಲ್ಲಂಘಿಸಿರುವ ಕಾರಣಕ್ಕೆ ತಮ್ಮ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕ್ರಿಯೆ ಏಕೆ ಆರಂಭಿಸಬಾರದು ಎಂದು ಪ್ರಶ್ನಿಸಿ ನೀಡಿರುವ ನೋಟಿಸ್‌ಗೆ ಪತಂಜಲಿ ಆಯುರ್ವೇದ ಕಂಪನಿಯ ಸಹಸಂಸ್ಥಾಪಕ ರಾಮದೇವ ಮತ್ತು ಬಾಲಕೃಷ್ಣ ಅವರು ಉತ್ತರಿಸಿಲ್ಲ ಎಂದು ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಮತ್ತು ಅಹ್ಸಾನುದ್ದೀನ್ ಅಮಾನುಲ್ಲಾ ಅವರು ಇದ್ದ ವಿಭಾಗೀಯ ಪೀಠವು ಹೇಳಿತು.

ಮುಂದಿನ ವಿಚಾರಣೆ ಸಂದರ್ಭದಲ್ಲಿ ಇವರಿಬ್ಬರೂ ಖುದ್ದಾಗಿ ಹಾಜರಿರಬೇಕು ಎಂದು ಕೋರ್ಟ್ ಸೂಚಿಸಿದೆ. ಕಂಪನಿಯ ವಕೀಲರು ಕಳೆದ ವರ್ಷದ ನವೆಂಬರ್ 21ರಂದು ಕೋರ್ಟ್‌ಗೆ 'ಇನ್ನು ಮುಂದೆ ಕಾನೂನಿನ ಉಲ್ಲಂಘನೆ ಮಾಡುವುದಿಲ್ಲ. ಅದರಲ್ಲೂ ಮುಖ್ಯವಾಗಿ ಕಂಪನಿ ತಯಾರಿಸಿದ ಉತ್ಪನ್ನಗಳ ಜಾಹೀರಾತು ಮತ್ತು ಬ್ರ್ಯಾಂಡಿಂಗ್ ವಿಚಾರವಾಗಿ ಕಾನೂನು ಉಲ್ಲಂಘಿಸುವುದಿಲ್ಲ. ಔಷಧೀಯ ಫಲದಾಯಕತೆ ಬಗ್ಗೆ ಅಥವಾ ಯಾವುದೇ ವೈದ್ಯ ಪದ್ಧತಿಗಳ ವಿರುದ್ಧವಾಗಿ ಬೀಸು ಹೇಳಿಕೆಗಳನ್ನು ಇನ್ನು ಮುಂದೆ ಮಾಧ್ಯಮಗಳಿಗೆ ಬಿಡುಗಡೆ ಮಾಡುವುದಿಲ್ಲ' ಎಂದು ಭರವಸೆ ನೀಡಿದ್ದರು.

ರಾಮದೇವ ಅವರು ಕೋವಿಡ್ ಲಸಿಕೆ ಅಭಿಯಾನದ ವಿರುದ್ಧ ಹಾಗೂ ಆಧುನಿಕ ವೈದ್ಯಪದ್ಧತಿಯ ವಿರುದ್ಧ ಅಪಮಾನಕಾರಿ ಪ್ರಚಾರಾಂದೋಲನವನ್ನು ನಡೆಸುತ್ತಿದ್ದಾರೆ ಎಂದು ದೂರಿ ಭಾರತೀಯ ವೈದ್ಯಕೀಯ ಸಂಘ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಕೋರ್ಟ್ ನಡೆಸುತ್ತಿದೆ.

'ಪತಂಜಲಿ' ಮತ್ತು ಬಾಲಕೃಷ್ಣ ಅವರು ನೋಟಿಸ್‌ಗೆ ಉತ್ತರ ನೀಡದಿದ್ದುದು ಏಕೆ ಎಂದು ಕೋರ್ಟ್ ಮೊದಲು ಪ್ರಶ್ನಿಸಿತು. ಪತಂಜಲಿ ಹಾಗೂ ಬಾಲಕೃಷ್ಣ ಅವರ ಪರವಾಗಿ ಹಾಜರಿದ್ದ ಹಿರಿಯ ವಕೀಲ ಮುಕುಲ್ ರೋಹಟಗಿ ಅವರು ತಮ್ಮ ಕಕ್ಷಿದಾರರ ಜೊತೆ ಈ ಬಗ್ಗೆ ಮಾತುಕತೆ ನಡೆಸಿರುವುದಾಗಿ ತಿಳಿಸಿದರು.

'ಅದು ನಮಗೆ ಸಾಕಾಗುವುದಿಲ್ಲ. ಇದನ್ನು ನಾವು ಗಂಭೀರವಾಗಿ ಪರಿಗಣಿಸಿದ್ದೆವು. ಉತ್ತರ ಕೊಟ್ಟಿಲ್ಲ ಎಂದಾದರೆ ಪರಿಣಾಮಗಳು ಇರುತ್ತವೆ' ಎಂದು ಪೀಠವು ರೋಹಟಗಿ ಅವರಿಗೆ ಹೇಳಿತು.

ಮಹಾರಾಷ್ಟ್ರ: ನಾಲ್ವರು ನಕ್ಸಲರ ಹತ್ಯೆ

ಪೊಲೀಸರು, ಭದ್ರತಾ ಪಡೆಗಳ ಜಂಟಿ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: ಗುಪ್ತಚರ ಮಾಹಿತಿ ಆಧರಿಸಿ ಮಹಾರಾಷ್ಟ್ರದ ಗಡ್‌ಚಿರೋಲಿ ಜಿಲ್ಲೆಯಲ್ಲಿ ಮಂಗಳವಾರ ನಡೆದ ಪೊಲೀಸ್ ಮತ್ತು ಭದ್ರತಾ ಪಡೆಗಳ ಕಾರ್ಯಾಚರಣೆಯಲ್ಲಿ ನಾಲ್ವರು ನಕ್ಸಲರು ಹತರಾಗಿದ್ದಾರೆ.

ಮಹಾರಾಷ್ಟ್ರ, ಛತ್ತೀಸಗಢ ಮತ್ತು ತೆಲಂಗಾಣದ ನಕ್ಸಲ್ ಬಾಧಿತ ಪ್ರದೇಶಗಳಲ್ಲಿ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ವಿಧ್ವಂಸಕ ಕೃತ್ಯಗಳನ್ನು ನಡೆಸಲು ನಕ್ಸಲರು ಯೋಜಿಸಿದ್ದರು ಎಂದು ಗೊತ್ತಾಗಿದೆ. ಈ ನಾಲ್ವರ ಬಗ್ಗೆ ಮಾಹಿತಿ ನೀಡಿದವರಿಗೆ ಒಟ್ಟು ₹36 ಲಕ್ಷ ಬಹುಮಾನ ಘೋಷಣೆಯಾಗಿತ್ತು.

ಮೃತರನ್ನು ಮಂಗಿ ಇಂದ್ರವೆಲ್ಲಿ ಪ್ರದೇಶದ ಕಾರ್ಯದರ್ಶಿ ವರ್ಗೀಸ್, ಸಿರ್ಪುರ ಚೆನ್ನೂರು ಪ್ರದೇಶ ಸಮಿತಿಯ ಕಾರ್ಯದರ್ಶಿ ಡಿ.ವಿ.ಸಿ.ಎಂ. ಮಾಗ್ತು, ಪ್ಲಟೂನ್ ಸದಸ್ಯರಾದ ಕುರ್ಸಂಗ್ ರಾಜು ಮತ್ತು ಕುಟುಮೆಟ್ಟ ವೆಂಕಟೇಶ್ ಎಂದು ಗುರುತಿಸಲಾಗಿದೆ. ಈ ನಾಲ್ವರು ತೆಲಂಗಾಣ ಕಡೆಯಿಂದ ನುಸುಳಿದ್ದರು ಎಂಬ ಮಾಹಿತಿ ದೊರೆತ ಕೂಡಲೇ ಕಾರ್ಯಾಚರಣೆ ನಡೆಸಲಾಯಿತು ಎಂದು ಪೊಲೀಸ್ ವರಿಷ್ಠಾಧಿಕಾರಿ ನೀಲೋತ್ಪಾಲ್ ತಿಳಿಸಿದ್ದಾರೆ.

ಖಚಿತ ಮಾಹಿತಿ ಮೇರೆಗೆ ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್), ನಕ್ಸಲ್ ವಿರೋಧಿ ಕಾರ್ಯಾಚರಣೆಯ (ಎಎನ್‌ಒ) 'ಸಿ–60' ಕಮಾಂಡೊ ತಂಡ ಅಹೇರಿಯಾ ರೆಪನ್‌ಪಾಲ್ ಬಳಿ ಕೋಲಮಾರ್ಕ್ ಪರ್ವತ ಶ್ರೇಣಿಗಳಲ್ಲಿ ಶೋಧ ಕಾರ್ಯಾಚರಣೆ ಕೈಗೊಂಡಿತು.

ಮೃತ ನಕ್ಸಲರಿಂದ ಒಂದು ಎಕೆ–47 ರೈಫಲ್, ಒಂದು ಕಾರ್ಬೈನ್ ಮತ್ತು ದೇಶಿ ನಿರ್ಮಿತ ಎರಡು ಪಿಸ್ತೂಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಮೃತರು ತೆಲಂಗಾಣ ಸಮಿತಿಯ ಸದಸ್ಯರಾಗಿದ್ದು, ತೆಲಂಗಾಣದಿಂದ ವಿದರ್ಭ ಪ್ರದೇಶದ ಗಡ್ಚಿರೋಲಿಗೆ ಪ್ರಾಣಹಿತ ನದಿ ದಾಟಿ ಬಂದಿದ್ದರು ಎಂದು ಹಿರಿಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.



ಮತ ಜಾಗೃತಿ ಲೋಕಸಭಾ ಚುನಾವಣೆ ಘೋಷಣೆ ಆಗಿರುವ ಈ ಸಂದರ್ಭದಲ್ಲಿ ಚೆನ್ನೈನಲ್ಲಿ ಕಾಲೇಜು ವಿದ್ಯಾರ್ಥಿಗಳು ಮತದಾನದ ಕುರಿತು ಜಾಗೃತಿ ಅಭಿಯಾನದಲ್ಲಿ ಪಾಲ್ಗೊಂಡರು –ಪಿಟಿಐ ಚಿತ್ರ

ಅರುಣಾಚಲ ಎಂದೆಂದಿಗೂ ನಮ್ಮದು: ಚೀನಾಗೆ ತಿರುಗೇಟು

ನವದೆಹಲಿ (ಪಿಟಿಐ): 'ಅರುಣಾಚಲ ಪ್ರದೇಶವು ಭಾರತದ ಅವಿಭಾಜ್ಯ ಅಂಗವಾಗಿತ್ತು, ಅಂಗವಾಗಿದೆ ಮತ್ತು ಭವಿಷ್ಯದಲ್ಲೂ ಅವಿಭಾಜ್ಯ ಅಂಗವಾಗಿಯೇ ಇರುತ್ತದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಸ್ಪಷ್ಟಪಡಿಸಿದೆ.

ಅರುಣಾಚಲ ಪ್ರದೇಶದ ಕುರಿತು ಇತ್ತೀಚೆಗೆ ಚೀನಾ ನೀಡಿದ್ದ ಹೇಳಿಕೆಗೆ ಪ್ರತಿಯಾಗಿ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಈ ಹೇಳಿಕೆ ನೀಡಿದೆ.

'ಭಾರತದ ರಾಜ್ಯವಾಗಿರುವ ಅರುಣಾಚಲ ಪ್ರದೇಶದ ಭೌಗೋಳಿಕ ಪ್ರದೇಶದ ಕುರಿತು ಚೀನಾದ ರಕ್ಷಣಾ ಸಚಿವಾಲಯದ ವಕ್ತಾರರು ನೀಡಿರುವ ಹಕ್ಕುಗಳನ್ನು ಮಂಡಿಸುವ ಅಸಂಬದ್ಧ ಹೇಳಿಕೆಯನ್ನು ನಾವು ಗಮನಿಸಿದ್ದೇವೆ' ಎಂದು ಹೇಳಿಕೆಯಲ್ಲಿ ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ.

'ಆಧಾರರಹಿತವಾದ ವಾದಗಳನ್ನು ಪುನರಾವರ್ತನೆ ಮಾಡುವುದಕ್ಕೆ ಯಾವುದೇ ಮೌಲ್ಯವಿರುವುದಿಲ್ಲ. ಅರುಣಾಚಲ ಪ್ರದೇಶ ಭಾರತದ ಒಕ್ಕೂಟದ ಭಾಗವಾಗಿದೆ. ಅರುಣಾಚಲ ಪ್ರದೇಶದ ಜನರು ನಮ್ಮ ಅಭಿವೃದ್ಧಿ ಕಾರ್ಯಗಳನ್ನು ಮತ್ತು ಮೂಲಸೌಕರ್ಯ ಯೋಜನೆಗಳ ಪ್ರಯೋಜನ ಪಡೆಯುವುದನ್ನು ಮುಂದುವರಿಸುತ್ತಾರೆ' ಎಂದು ತಿಳಿಸಿದ್ದಾರೆ.

ಚೀನಾದ ದಕ್ಷಿಣ ಭಾಗವು (ಅರುಣಾಚಲ) ತನ್ನ ಅವಿಭಾಜ್ಯ ಅಂಗವಾಗಿದೆ. ಅರುಣಾಚಲ ಪ್ರದೇಶವನ್ನು ಭಾರತ ಅಕ್ರಮವಾಗಿ ಅತಿಕ್ರಮಿಸಿಕೊಂಡಿದೆ. ಇದನ್ನು ಚೀನಾ ವಿರೋಧಿಸುತ್ತದೆ ಮತ್ತು ಎಂದಿಗೂ ಒಪ್ಪುವುದಿಲ್ಲ ಎಂದು ಚೀನಾದ ರಕ್ಷಣಾ ಸಚಿವಾಲಯದ ವಕ್ತಾರರಾದ ಝುಂಗ್ ಕ್ಷಿಯಾಜಂಗ್ ಹೇಳಿಕೆ ನೀಡಿದ್ದರು.

ಚೀನಾದ ಈ ವಾದವನ್ನು ತಿರಸ್ಕರಿಸುತ್ತಲೇ ಇರುವ ಭಾರತವು, ವಾಸ್ತವವನ್ನು ಬದಲಿಸಲಾಗದು ಎಂದಿದೆ.

ಸಂಕ್ಷಿಪ್ತ ಸುದ್ದಿ

ಜೈಲಿನಿಂದ ಬಂದು ಪದಗ್ರಹಣ ಮಾಡಿದ ಸಂಜಯ್ ಸಿಂಗ್

ನವದೆಹಲಿ (ಪಿಟಿಐ): ರಾಜ್ಯಸಭೆಗೆ ಮರು ಆಯ್ಕೆಯಾಗಿರುವ ಎಎಪಿ ಮುಖಂಡ ಸಂಜಯ್ ಸಿಂಗ್ ಅವರು ರಾಜ್ಯಸಭೆ ಸಭಾಪತಿ ಜಗದೀಪ್ ಧನಕರ್ ಅವರಿಂದ ಮಂಗಳವಾರ ಪ್ರಮಾಣವಚನ ಸ್ವೀಕರಿಸಿದರು.

ಸಂಸತ್ತಿನಲ್ಲಿರುವ ಧನಕರ್ ಅವರ ಕಚೇರಿಯಲ್ಲಿ ತಮ್ಮ ತಂದೆ, ತಾಯಿ, ಹೆಂಡತಿ, ಮಗ ಮತ್ತು ಮಗಳ ಸಮ್ಮುಖದಲ್ಲಿ ಸಂಜಯ್ ಸಿಂಗ್ ಅವರು ಪ್ರಮಾಣವಚನ ಪಡೆದುಕೊಂಡರು.

ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದ ಹಗರಣದಲ್ಲಿನ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದಿಂದ (ಇ.ಡಿ) ಸಂಜಯ್ ಸಿಂಗ್ ಬಂಧನಕ್ಕೆ ಒಳಗಾಗಿದ್ದರು. ಈಗ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ. ಹೀಗಾಗಿ, ತಿಹಾರ್ ಕಾರಾಗೃಹದಲ್ಲಿದ್ದ ಸಿಂಗ್ ಅವರನ್ನು ಸ್ಥಳೀಯ ನ್ಯಾಯಾಲಯದ ಆದೇಶದ ಮೇರೆಗೆ ಬಿಗಿ ಬಂದೋಬಸ್ತ್‌ನಲ್ಲಿ ಸಂಸತ್ತಿಗೆ ಕರೆತರಲಾಯಿತು.

ಆರ್‌ಎಸ್‌ಎಸ್ ನಾಯಕ ಹತ್ಯೆ: ಆರೋಪಿ ಸೆರೆ

ನವದೆಹಲಿ (ಪಿಟಿಐ): ಕೇರಳದ ಆರ್‌ಎಸ್‌ಎಸ್ ನಾಯಕ ಶ್ರೀನಿವಾಸನ್ ಹತ್ಯೆ ಪ್ರಕರಣದ (2022) ಪ್ರಮುಖ ಆರೋಪಿ ಶಫೀಖ್ ಅನ್ನು ರಾಷ್ಟ್ರೀಯ ತನಿಖಾ ಏಜೆನ್ಸಿ (ಎನ್‌ಐಎ) ಬಂಧಿಸಿರುವುದಾಗಿ ಮಂಗಳವಾರ ಪ್ರಕಟಣೆಯಲ್ಲಿ ತಿಳಿಸಿದೆ.

ಪಾಲಕ್ಕಾಡ್‌ನಲ್ಲಿ 2022ರ ಏಪ್ರಿಲ್ 16ರಲ್ಲಿ ಶ್ರೀನಿವಾಸನ್ ಅವರ ಹತ್ಯೆಯಾದ ಬಳಿಕ, ತಲೆಮರೆಸಿಕೊಂಡಿದ್ದ ಶಫೀಖ್‌ನನ್ನು ಕೇರಳದ ಕೊಲ್ಲಂ ಜಿಲ್ಲೆಯಲ್ಲಿ ಸೋಮವಾರ ಬಂಧಿಸಲಾಯಿತು. ಬಂಧಿತ ಆರೋಪಿಯು ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯ (ಪಿಎಫ್‌ಐ) ಸದಸ್ಯ ಎಂದು ಅದು ಹೇಳಿದೆ.

ಈ ಕೊಲೆಗೆ ಸಂಬಂಧಿಸಿದ ಪಿತೂರಿಯಲ್ಲಿ ಒಟ್ಟು 71 ಜನರು ಭಾಗಿಯಾಗಿದ್ದಾರೆ ಎಂದಿರುವ ಎನ್‌ಐಎ, ಈಗಾಗಲೇ ಕಳೆದ ವರ್ಷದ ಮಾರ್ಚ್ 17 ಮತ್ತು ನವೆಂಬರ್ 6ರಂದು ಒಟ್ಟು ಎರಡು ದೋಷಾರೋಪ ಪಟ್ಟಿಯನ್ನು ಸಲ್ಲಿಸಿದೆ.

ವೀಸಾ ಹಗರಣ: ಕಾರ್ತಿ ಚಿದಂಬರಂಗೆ ಕೋರ್ಟ್ ಸಮನ್ಸ್



ನವದೆಹಲಿ (ಪಿಟಿಐ): ಚೀನಿ ಪ್ರಜೆಗಳಿಗೆ ವೀಸಾ ಕೊಡಿಸಿದ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಕಾಂಗ್ರೆಸ್ ಸಂಸದ ಕಾರ್ತಿ ಚಿದಂಬರಂ ಮತ್ತು ಇತರರಿಗೆ ದೆಹಲಿಯ ನ್ಯಾಯಾಲಯ ಮಂಗಳವಾರ ಸಮನ್ಸ್ ಜಾರಿ ಮಾಡಿದೆ. ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿದ್ದ ದೋಷಾರೋಪ ಪಟ್ಟಿಯನ್ನು ಪರಿಗಣನೆಗೆ ತೆಗೆದುಕೊಂಡ ವಿಶೇಷ ನ್ಯಾಯಾಧೀಶ ಎಂ.ಕೆ. ನಾಗ್ಪಾಲ್ ಅವರು ಈ ಸಮನ್ಸ್ ನೀಡಿದ್ದಾರೆ.

'ಕಾರ್ತಿ ಚಿದಂಬರಂ ಮತ್ತು ಅವರ ಮಾಜಿ ಲೆಕ್ಕ ಪರಿಶೋಧಕರಾದ ಎಸ್. ಭಾಸ್ಕರರಾಮನ್ ಹಾಗೂ ಕೆಲವು ಕಂಪನಿಗಳ ಪ್ರತಿನಿಧಿಗಳು ಸೇರಿ ಇತರ ಆರು ಆರೋಪಿಗಳು ಏ.5ರೊಳಗಾಗಿ ನ್ಯಾಯಾಲಯದ ಮುಂದೆ ಹಾಜರಾಗಬೇಕು' ಎಂದು ಸೂಚಿಸಲಾಗಿದೆ.

ಇ.ಡಿ ಸಲ್ಲಿಸಿರುವ ದೋಷಾರೋಪ ಪಟ್ಟಿಯಲ್ಲಿ ಆರೋಪಿಗಳಾದ ಪದಮ್ ದುಗಾರ್, ವಿಕಾಸ್ ಮಖಾರಿಯಾ, ಮನ್ಸೂರ್ ಸಿದ್ದಿಕಿ, ದುಗಾರ್ ಹೌಸಿಂಗ್ ಲಿಮಿಟೆಡ್, ಅಡ್ವಾಂಟೇಜ್ ಸ್ಟ್ರಾಟಜಿಕ್ ಕನ್ಸಲ್ಟಿಂಗ್ ಪ್ರೈವೆಟ್ ಲಿಮಿಟೆಡ್, ತಲ್ವಂಡಿ ಸಬೊ ಪವರ್ ಲಿಮಿಟೆಡ್ ಹೆಸರು ಸಹ ಇವೆ.

ಕಾರ್ತಿ ಅವರು ತಮ್ಮ ತಂದೆ ಪಿ.ಚಿದಂಬರಂ ಗೃಹ ಸಚಿವರಾಗಿದ್ದ ಅವಧಿಯಲ್ಲಿ (2011) ಚೀನಾದ 263 ಪ್ರಜೆಗಳಿಗೆ ವೀಸಾ ಕೊಡಿಸಲು ₹50 ಲಕ್ಷ ಲಂಚ ಪಡೆದಿದ್ದರು ಎಂಬ ಆರೋಪ ಸಂಬಂಧ ಕಾರ್ತಿ ಮತ್ತು ಇತರರ ವಿರುದ್ಧ ಇ.ಡಿಯು ಹಣ ಅಕ್ರಮ ವರ್ಗಾವಣೆ (ಪಿಎಂಎಲ್‌ಎ) ಪ್ರಕರಣ ದಾಖಲಿಸಿತ್ತು.

ತಾಪಮಾನ: ಗಂಭೀರ ಎಚ್ಚರಿಕೆ ನೀಡಿದ ವಿಶ್ವ ಹವಾಮಾನ ಸಂಸ್ಥೆ

ಜಿನೀವಾ (ಎಪಿ): ಕಳೆದ ವರ್ಷದಲ್ಲಿ ವಿಶ್ವದಲ್ಲಿ ಹಸಿರುಮನೆ ಅನಿಲಗಳ ಹೊರಸೂಸುವಿಕೆಯು ದಾಖಲೆಯ ಮಟ್ಟದಲ್ಲಿ ಹೆಚ್ಚಾಗಿರುವುದನ್ನು ಉಲ್ಲೇಖಿಸಿರುವ ವಿಶ್ವ ಹವಾಮಾನ ಸಂಸ್ಥೆಯು ಜಾಗತಿಕ ತಾಪಮಾನ ಹೆಚ್ಚಳದ ವಿಚಾರವಾಗಿ ಗಂಭೀರ ಎಚ್ಚರಿಕೆ ನೀಡಿದೆ.

ಭೂಮಿಯ ಮೇಲ್ಮೈ ಹಾಗೂ ಜಲರಾಶಿಯಲ್ಲಿನ ತಾಪಮಾನವು ಕೂಡ ದಾಖಲೆಯ ಮಟ್ಟದಲ್ಲಿ ಹೆಚ್ಚಳವಾಗಿದೆ, ನೀರ್ಗಲ್ಲುಗಳು ಕರಗುತ್ತಿವೆ ಎಂದು ಸಂಸ್ಥೆಯು ಉಲ್ಲೇಖಿಸಿದೆ. ತಾಪಮಾನ ಹೆಚ್ಚಳವನ್ನು ತಡೆಯಲು ವಿಶ್ವದ ರಾಷ್ಟ್ರಗಳು ನಡೆಸುತ್ತಿರುವ ಯತ್ನಗಳು ಸಾಕಾಗುತ್ತಿಲ್ಲ ಎಂದು ಎಚ್ಚರಿಸಿದೆ.

2024ನೇ ಇಸವಿಯು ತಾಪಮಾನದ ವಿಚಾರವಾಗಿ ಹೊಸದೊಂದು ದಾಖಲೆಯನ್ನು ಸೃಷ್ಟಿಸುವ ಸಾಧ್ಯತೆ ಹೆಚ್ಚಾಗಿದೆ ಎಂದು ಕೂಡ ಅದು ತಿಳಿಸಿದೆ.

ಭೂಮಂಡಲದ ತಾಪಮಾನದಲ್ಲಿನ ಏರಿಕೆಯು ಕೈಗಾರಿಕಾ ಕ್ರಾಂತಿಗೂ ಮೊದಲಿನ ಮಟ್ಟದ ತಾಪಮಾನಕ್ಕೆ ಹೋಲಿಸಿದರೆ 1.5 ಡಿಗ್ರಿ ಸೆಲ್ಸಿಯಸ್‌ಗಿಂತ ಕಡಿಮೆ ಇರಬೇಕು ಎಂಬ ಗುರಿಯನ್ನು ತಲುಪುವುದು ಕಷ್ಟಕರ ಅನ್ನಿಸುತ್ತಿದೆ ಎಂದು ಸಂಸ್ಥೆ ಬಿಡುಗಡೆ ಮಾಡಿರುವ ವರದಿಯು ಹೇಳಿದೆ.

2023ರ ಮಾರ್ಚ್‌ನಿಂದ ಈ ವರ್ಷದ ಫೆಬ್ರುವರಿವರೆಗಿನ ಅವಧಿಯಲ್ಲಿ ಜಾಗತಿಕ ತಾಪಮಾನದಲ್ಲಿನ ಹೆಚ್ಚಳವು 1.5 ಡಿಗ್ರಿ ಸೆಲ್ಸಿಯಸ್ ಮಿತಿಯನ್ನು ಮೀರಿದ್ದು, 1.56 ಡಿಗ್ರಿ ಸೆಲ್ಸಿಯಸ್‌ಗೆ ತಲುಪಿದೆ.

ಭೂಮಿಯು ತಾನು ಸಂಕಷ್ಟದಲ್ಲಿ ಇರುವುದಾಗಿ ಹೇಳುತ್ತಿದೆ ಎಂದು ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಹೇಳಿದ್ದಾರೆ.

ಪೊಲೀಸರು– ಪ್ರತಿಭಟನಕಾರರ ನಡುವೆ ವಾಗ್ವಾದ, ತಳ್ಳಾಟ • 'ಜೈ ಶ್ರೀರಾಮ್' ಘೋಷಣೆಯೊಂದಿಗೆ ರ‍್ಯಾಲಿ

ಬೃಹತ್ ಪ್ರತಿಭಟನೆ, ಬಿಗುವಿನ ವಾತಾವರಣ

ಪ್ರಜಾವಾಣಿ ವಾರ್ತೆ



ಆರೋಪಿಗಳ ಬಂಧನಕ್ಕೆ ಆಗ್ರಹಿಸಿ ಪೊಲೀಸ್ ಜೀಪಿಗೆ ಪ್ರತಿಭಟನಕಾರರು ಮುತ್ತಿಗೆ ಹಾಕಿದರು –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಬೆಂಗಳೂರು: 'ಹನುಮಾನ್ ಚಾಲೀಸಾ ಹಾಕಿದ್ದ ವಿಚಾರವಾಗಿ ಮೊಬೈಲ್ ಅಂಗಡಿ ಮಾಲೀಕನ ಮೇಲೆ ಹಲ್ಲೆ ನಡೆಸಿದ್ದ ಘಟನೆ ಖಂಡಿಸಿ' ನಗರ್ತಪೇಟೆಯಲ್ಲಿ ಮಂಗಳವಾರ ಬಿಜೆಪಿ, ಹಿಂದೂ ಜಾಗರಣಾ ವೇದಿಕೆ ಹಾಗೂ ಬಜರಂಗದಳದ ಕಾರ್ಯಕರ್ತರು ಬೃಹತ್ ಪ್ರತಿಭಟನೆ ನಡೆಸಿ, ಆಕ್ರೋಶ ಹೊರಹಾಕಿದರು.

ಅಪಾರ ಸಂಖ್ಯೆಯಲ್ಲಿ ಕಾರ್ಯಕರ್ತರು ಜಮಾಯಿಸಿದ್ದರಿಂದ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಪ್ರತಿಭಟನಕಾರರು ಹಾಗೂ ಪೊಲೀಸರು ನಡುವೆ ವಾಗ್ವಾದ ಹಾಗೂ ತಳ್ಳಾಟ ನಡೆಯಿತು. ಕೇಸರಿ ಶಾಲು ಹಾಗೂ ಭಗವಾಧ್ವಜ ಹಿಡಿದು ಬಂದಿದ್ದ ಕಾರ್ಯಕರ್ತರು, ಜೈಶ್ರೀರಾಮ್ ಘೋಷಣೆ ಕೂಗುತ್ತಾ ರ‍್ಯಾಲಿ ನಡೆಸಿದರು. ಇದರಿಂದ ಸ್ಥಳದಲ್ಲಿ ಕ್ಷಣಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

'ಭಾನುವಾರ ಸಂಜೆ 6.30ರ ಸುಮಾರಿಗೆ ಕಬ್ಬನ್‌ಪೇಟೆಯ ಸಿದ್ದಣ್ಣ-ಗಲ್ಲಿಯ ಕೃಷ್ಣ ಟೆಲಿಕಾಮ್‌ನ ಮಾಲೀಕ ಮುಖೇಶ್(26) ಎಂಬುವವರು ಸಂಜೆ ಹನುಮಾನ್ ಚಾಲೀಸಾ ಹಾಕಿಕೊಂಡಿದ್ದರು. ಅದೇ ಸಂದರ್ಭದಲ್ಲಿ ಅಂಗಡಿಗೆ ಬಂದಿದ್ದ ಆರೋಪಿಗಳು ಭಜನೆ ಹಾಕಿದ್ದಕ್ಕೆ ಕುಪಿತಗೊಂಡು ಮಾಲೀಕನ ಮೇಲೆ ಹಲ್ಲೆ ನಡೆಸಿದ್ದಾರೆ. ಆದರೆ, ಆರೋಪಿಗಳನ್ನು ರಕ್ಷಣೆ ಮಾಡಲಾಗುತ್ತಿದೆ' ಎಂದು ಪ್ರತಿಭಟನ-ಕಾರರು ಕಿಡಿಕಾರಿದರು.

ಕೇಂದ್ರ ಸಚಿವೆ ಶೋಬಾ ಕರಂದ್ಲಾಜೆ, ಶಾಸಕ ಎಸ್.ಸುರೇಶ್‌ಕುಮಾರ್, ಸಂಸದ ತೇಜಸ್ವಿ ಸೂರ್ಯ ಅವರು ಸ್ಥಳಕ್ಕೆ ಬಂದು ಪ್ರತಿಭಟನೆಗೆ ಬೆಂಬಲ ಸೂಚಿಸಿದರು. ಆಗ ಪ್ರತಿಭಟನಕಾರರು ರ‍್ಯಾಲಿ ನಡೆಸಲು ಮುಂದಾದರು. ಪೊಲೀಸರ ಮನವಿಗೂ ಜಗ್ಗದೇ ಮುನ್ನುಗ್ಗಲು ಪ್ರಯತ್ನಿಸಿದರು.

ಮುಖೇಶ್ ಅವರಿಂದ ಸುರೇಶ್‌ಕುಮಾರ್ ಅವರು ಮಾಹಿತಿ ಪಡೆದುಕೊಳ್ಳುತ್ತಿದ್ದ ವೇಳೆ ಜೋರಾಗಿ ತಳ್ಳಾಟ ನಡೆಯಿತು. ಕೆಲವರು ಕೆಳಕ್ಕೆ ಬಿದ್ದರು. ಪೊಲೀಸರ ವಿರುದ್ಧ ಆಕ್ರೋಶ ಹೆಚ್ಚುತ್ತಿದ್ದಂತೆಯೇ ಸ್ಥಳಕ್ಕೆ ವಿವಿಧ ವಿಭಾಗಗಳಿಂದ ಹೆಚ್ಚಿನ ಪೊಲೀಸ್ ಸಿಬ್ಬಂದಿ ಕರೆಸಿಕೊಂಡು ಪರಿಸ್ಥಿತಿ ತಿಳಿಗೊಳಿಸುವ ಪ್ರಯತ್ನ ನಡೆಸಲಾಯಿತು. ಅದೂ ವಿಫಲವಾಯಿತು.

ಉಳಿದ ಆರೋಪಿಗಳನ್ನು ತಕ್ಷಣವೇ ಬಂಧಿಸಿ ಎಲ್ಲರ ವಿರುದ್ಧವೂ ಕ್ರಮ ಕೈಗೊಳ್ಳುವುದಾಗಿ ಪೊಲೀಸರು ಭರವಸೆ ನೀಡಿದ ಮೇಲೆ ಪ್ರತಿಭಟನೆ ಕೈಬಿಡಲಾಯಿತು.

ಗೃಹ ಸಚಿವರ ರಾಜೀನಾಮೆಗೆ ಆಗ್ರಹ: 'ವಿಧಾನಸೌಧ ಆವರಣಕ್ಕೆ ಯಾರೋ ಬಂದು ಪಾಕಿಸ್ತಾನ ಜಿಂದಾಬಾದ್ ಘೋಷಣೆ ಕೂಗುತ್ತಾರೆ. ಮತ್ತೊಬ್ಬರು ಹೆಣ್ಣುಮಕ್ಕಳ ಮೇಲೆ ಆ್ಯಸಿಡ್ ದಾಳಿ ನಡೆಸುತ್ತಾರೆ. ಸ್ವಂತ ಅಂಗಡಿಯಲ್ಲಿ ಹನುಮಾನ್ ಚಾಲೀಸಾ ಸಿ.ಡಿ. ಹಾಕಿದ್ದಕ್ಕೆ ಯುವಕನ ಮೇಲೆ ಇನ್ನೊಂದು ಗುಂಪು ಹಲ್ಲೆ ನಡೆಸುತ್ತದೆ. ಹಿಂದೂಗಳ ಮೇಲೆ ದೌರ್ಜನ್ಯಗಳು ನಡೆಯುತ್ತಿದ್ದರೂ ರಾಜ್ಯ ಸರ್ಕಾರ ಏನು ಮಾಡುತ್ತಿದೆ? ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದು, ಗೃಹ ಸಚಿವ ಜಿ.ಪರಮೇಶ್ವರ ಅವರು ರಾಜೀನಾಮೆ ನೀಡಬೇಕು' ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆಗ್ರಹಿಸಿದರು.

'ನಗರದಲ್ಲಿ ಪದೇ ಪದೇ ಈ ರೀತಿಯ ಘಟನೆಗಳು ನಡೆಯುತ್ತಿವೆ. ಪೊಲೀಸರು ಯಾರ ಒತ್ತಡಕ್ಕೂ ಮಣಿಯದೇ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಶಾಸಕ ಎಸ್.ಸುರೇಶ್‌ಕುಮಾರ್ ಆಗ್ರಹಿಸಿದರು.

'ಪೊಲೀಸರು ಹೆಚ್ಚು ಕಾರ್ಯಪ್ರವೃತ್ತರಾಗಬೇಕು. ಸಮಾಜದ ಜೊತೆಗೆ ನಾವಿದ್ದೇವೆ ಎಂದು ಭರವಸೆ ತುಂಬಬೇಕು' ಎಂದು ಮನವಿ ಮಾಡಿದರು.

ತೇಜಸ್ವಿ ಸೂರ್ಯ ಮಾತನಾಡಿ, '5 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಜಮಾಯಿಸಿ ಹಲ್ಲೆಗೆ ಒಳಗಾದ ಯುವಕನಿಗೆ ನ್ಯಾಯ ಒದಗಿಸುವಂತೆ ಆಗ್ರಹಿಸಿದ್ದಾರೆ. ಪೊಲೀಸರು ಒತ್ತಡಕ್ಕೆ ಒಳಗಾಗಿ ಎಫ್‌ಐಆರ್‌ನಲ್ಲಿ ಸತ್ಯಾಂಶ ನಮೂದಿಸಿರಲಿಲ್ಲ. ಆಕ್ರೋಶ ಹೆಚ್ಚಾದ ಮೇಲೆ ಮುಖೇಶ್ ಅವರಿಂದ ಮರು ಹೇಳಿಕೆ ಪಡೆದುಕೊಂಡಿದ್ದಾರೆ' ಎಂದರು.

'ಬ್ರ್ಯಾಂಡ್ ಬೆಂಗಳೂರು ಮಾಡಲು ಕಾನೂನು ಸುವ್ಯವಸ್ಥೆ ಉತ್ತಮವಾಗಿರ-ಬೇಕು. ಆದರೆ, ಕಾನೂನು ಸುವ್ಯವಸ್ಥೆ ಪಾಲನೆ ಆಗುತ್ತಿಲ್ಲ' ಎಂದು ದೂರಿದರು.

'ಎಲ್ಲ ಆರೋಪಿಗಳನ್ನು ಬಂಧಿಸಿ ಕ್ರಮ ಕೈಗೊಳ್ಳದಿದ್ದರೆ ಮತ್ತೆ ಹೋರಾಟ ನಡೆಸಲಾಗುತ್ತದೆ' ಎಂದು ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಸಿ.ಕೆ.ರಾಮಮೂರ್ತಿ ಎಚ್ಚರಿಕೆ ನೀಡಿದರು.

> **ಯುವಕ ಅಂಗಡಿಯಲ್ಲಿ ಹನುಮಾನ್ ಚಾಲೀಸಾ ಹಾಕಿಕೊಂಡಿದ್ದರೆ ಹಲ್ಲೆ ನಡೆಸಲಾಗಿದೆ. ಅಸಹನೆ ಎಂಬುದು ಈ ಮಟ್ಟಕ್ಕೆ ಹೋಗಬಾರದು**
> **ಎಸ್. ಸುರೇಶ್‌ಕುಮಾರ್,** ಶಾಸಕ

> **ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿಂದೂ ಸಮಾಜದ ವಿರೋಧಿ ಧೋರಣೆ ಮುಂದುವರಿಸಿರುವುದಕ್ಕೆ ನಗರ್ತಪೇಟೆಯ ಘಟನೆ ಉದಾಹರಣೆ**
> **ಶೋಭಾ ಕರಂದ್ಲಾಜೆ,** ಕೇಂದ್ರ ಸಚಿವೆ

'ವೈಯಕ್ತಿಕ ಲಾಭಕ್ಕೆ ಘಟನೆ ಬಳಕೆ'

ಬೆಂಗಳೂರು: 'ಹನುಮಾನ್ ಚಾಲೀಸಾ ಹಾಕಿದ್ದರಿಂದಲೇ ಗಲಾಟೆ ನಡೆದಿದ್ದರೆ ಆರೋಪಿಗಳಿಗೆ ಕಾನೂನಿನ ಅಡಿಯಲ್ಲಿ ಶಿಕ್ಷೆ ಆಗಬೇಕು. ಸರ್ಕಾರ ಅವರಿಗೆ ಯಾವುದೇ ಕಾರಣಕ್ಕೂ ರಕ್ಷಣೆ ಸಹ ಕೊಡಬಾರದು' ಎಂದು ಕೆಪಿಸಿಸಿ ವಕ್ತಾರ ಶಂಕರ ಗುಹಾ ದ್ವಾರಕನಾಥ್ ಆಗ್ರಹಿಸಿದ್ದಾರೆ.

'ಪೊಲೀಸರು ಪಕ್ಷಾತೀತವಾಗಿ ಪ್ರಕರಣದ ತನಿಖೆ ನಡೆಸಿ ಶೀಘ್ರದಲ್ಲೇ ನ್ಯಾಯ ಒದಗಿಸಬೇಕು' ಎಂದೂ ಕೋರಿದ್ದಾರೆ.

'ಸಂಸದ ತೇಜಸ್ವಿ ಸೂರ್ಯ ಅವರು ಐದು ವರ್ಷ ಯುವ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷರಾಗಿ ಮಲಗಿದ್ದರು. ಈ ಕೋಮು ಗಲಭೆ ವಾಸನೆ ಬಂದಾಗ ಅವರು ಗಾಢ ನಿದ್ದೆಯಿಂದ ಎದ್ದಹಾಗೆ ಕಾಣಿಸುತ್ತಿದೆ. ಇಷ್ಟು ದಿನ ನಗರ್ತಪೇಟೆಯ ಜನರ ಯಾವುದೇ ಸಮಸ್ಯೆಗಳು ಅವರಿಗೆ ಕಂಡಿಲ್ಲ ಅನ್ನಿಸುತ್ತದೆ. ಪ್ರಚಾರಪ್ರಿಯ ಸಂಸದರು, ಈಗ ಗಲಾಟೆ ಎಂದ ತಕ್ಷಣ ತಮ್ಮ ಬೇಳೆ ಬೇಯಿಸುವುದಕ್ಕೆ ಸ್ಥಳಕ್ಕೆ ಬಂದಿದ್ದಾರೆ. ಅವರ ವೈಯಕ್ತಿಕ ಕಾರ್ಯಸೂಚಿಗಳಿಗೆ ಹಾಗೂ ವೈಯಕ್ತಿಕ ರಾಜಕೀಯಕ್ಕಾಗಿ ಈ ಘಟನೆ ಬಳಸುತ್ತಿದ್ದಾರೆ. ಇದು ಖಂಡನೀಯ. ಸಂಸದ ನಡೆದುಕೊಳ್ಳುವಂತಹ ರೀತಿ ಇದಲ್ಲ' ಎಂದು ಪ್ರಕಟಣೆ-ಯಲ್ಲಿ ದೂರಿದ್ದಾರೆ.

ಕೇಂದ್ರ ಸಚಿವೆ ವಶಕ್ಕೆ

ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹಾಗೂ ಇತರರು ರಸ್ತೆಯಲ್ಲಿ ಕುಳಿತು ಹನುಮಾನ್ ಚಾಲೀಸಾ ಪಠಣ ಮಾಡಲು ಮುಂದಾದರು. ಸ್ಥಳದಲ್ಲಿದ್ದ ಪೊಲೀಸರು, 'ನಗರದ ಸ್ವಾತಂತ್ರ್ಯ ಉದ್ಯಾನ ಹೊರತುಪಡಿಸಿ ಬೇರೆ ಯಾವುದೇ ಜಾಗದಲ್ಲಿ ಪ್ರತಿಭಟನೆಗೆ ಅವಕಾಶವಿಲ್ಲ. ಪ್ರತಿಭಟನೆ ಕೈಬಿಟ್ಟು ಸ್ಥಳದಿಂದ ಹೊರಟುಹೋಗಿ' ಎಂದು ಕೋರಿದರು. ಇದಕ್ಕೆ ಒಪ್ಪದ ಶೋಭಾ ಹಾಗೂ ಇತರರು ಪ್ರತಿಭಟನೆ ಮುಂದುವರಿಸಿದರು. ಅವರನ್ನು ಪೊಲೀಸರು ವಶಕ್ಕೆ ಪಡೆದರು.

ನಗರ್ತಪೇಟೆಯ ಮುಖ್ಯರಸ್ತೆಯಲ್ಲಿ ಬಹುತೇಕ ಅಂಗಡಿಗಳನ್ನು ಬಂದ್ ಮಾಡಲಾಗಿತ್ತು. ಅಕ್ಕಪಕ್ಕದ ರಸ್ತೆಗಳಲ್ಲೂ ಜನ ಹಾಗೂ ವಾಹನ ಸಂಚಾರ ವಿರಳವಾಗಿತ್ತು. ಘಟನೆ ನಡೆದ ಸುತ್ತಮುತ್ತಲ ಪ್ರದೇಶದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಜುಮ್ಮಾ ಮಸೀದಿ ರಸ್ತೆಯಲ್ಲಿ ಹೆಚ್ಚಿನ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ.

ಸುದ್ದಿ 2 ನಿಮಿಷ

ಶಸ್ತ್ರಚಿಕಿತ್ಸೆ ಅರ್ಧಕ್ಕೆ ನಿಲ್ಲಿಸಿದ ಸಾರ್ವಜನಿಕ ಆಸ್ಪತ್ರೆ ವೈದ್ಯರು!

ಗುಬ್ಬಿ (ತುಮಕೂರು): ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಮಂಗಳವಾರ ಮಹಿಳೆಯೊಬ್ಬರಿಗೆ ನಡೆಸುತ್ತಿದ್ದ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಯನ್ನು ವೈದ್ಯರು ಅರ್ಧದಲ್ಲೇ ನಿಲ್ಲಿಸಿ, ಹೊಲಿಗೆ ಹಾಕಿದ್ದಾರೆ.

ಇದರಿಂದ ತೊಂದರೆಗೀಡಾದ ತಾಲ್ಲೂಕಿನ ಬಿಳಿಕಲ್ಲುಪಾಳ್ಯ ಗ್ರಾಮದ ರೇಣುಕಾ (34) ಎಂಬ ಮಹಿಳೆಗೆ ಅದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ.

'ಆಸ್ಪತ್ರೆಯ ಶಸ್ತ್ರಚಿಕಿತ್ಸಾ ಕೊಠಡಿಯಿಂದ ನೋವಿನಿಂದ ಚೀರಾಡುವ ಶಬ್ದ ಕೇಳಿಬಂತು.



ಕೊಠಡಿ ಹೊರಗೆ ನಿಂತಿದ್ದ ನಾವು ಒಳ ಹೋಗಿ ನೋಡಿದಾಗ ರೇಣುಕಾ ಕೈ, ಕಾಲು ಗಟ್ಟಿಯಾಗಿ ಹಿಡಿದುಕೊಂಡು ಶಸ್ತ್ರಚಿಕಿತ್ಸೆ ಮಾಡುತ್ತಿದ್ದರು' ಎಂದು ಮಹಿಳೆಯ ಗಂಡ ತಿಮ್ಮರಾಜು ಆರೋಪಿಸಿದ್ದಾರೆ.

'ಅರವಳಿಕೆ ಮದ್ದು ನೀಡದೆ ಶಸ್ತ್ರಚಿಕಿತ್ಸೆ ಮಾಡುತ್ತಿದ್ದರು. ನಾವು ಒಳಗೆ ಹೋಗಿ ಗಲಾಟೆ ಮಾಡಿದ ನಂತರ ಶಸ್ತ್ರಚಿಕಿತ್ಸೆ ನಿಲ್ಲಿಸಿದರು' ಎಂದು ತಿಳಿಸಿದರು.

'ಮುಂಜಾಗ್ರತಾ ಕ್ರಮ ತೆಗೆದುಕೊಳ್ಳದೆ ವೈದ್ಯರು ನಿರ್ಲಕ್ಷ್ಯದಿಂದ ಶಸ್ತ್ರಚಿಕಿತ್ಸೆ ಮಾಡಲು ಹೊರಟಿದ್ದರು. ಬೆಳಿಗ್ಗೆ ಚಿಕಿತ್ಸೆಗೂ ಮುನ್ನ ₹5 ಸಾವಿರ ಹಣ ಕೇಳಿದರು. ಕೊಡಲು ಆಗುವುದಿಲ್ಲ ಎಂದು ಹೇಳಿದ್ದೆ. ಇದರಿಂದ ಕೋಪಗೊಂಡು ಈ ರೀತಿ ಮಾಡಿದ್ದಾರೆ' ಎಂದು ತಿಮ್ಮರಾಜು ಆರೋಪ ಮಾಡಿದರು.

'ಅರವಳಿಕೆ ಮದ್ದು ಕೊಟ್ಟ ನಂತರವೇ ಶಸ್ತ್ರಚಿಕಿತ್ಸೆ ಮಾಡುತ್ತಿದ್ದೆವು. ಆದರೆ, ಅರವಳಿಕೆ ಮದ್ದು ಸರಿಯಾಗಿ ಕೆಲಸ ಮಾಡಿಲ್ಲ' ಎಂದು ಆಸ್ಪತ್ರೆ ವೈದ್ಯಾಧಿಕಾರಿ ಡಾ.ದಿವಾಕರ್ ಸ್ಪಷ್ಟನೆ ನೀಡಿದರು.

ಅಲ್ಪಸಂಖ್ಯಾತರ ಶೈಕ್ಷಣಿಕ ಸಂಸ್ಥೆ ಸರ್ಕಾರದಿಂದ ನಿಯಮ ರದ್ದು

ಬೆಂಗಳೂರು: ಅಲ್ಪಸಂಖ್ಯಾತ ಸಮುದಾಯಗಳು ನಡೆಸುತ್ತಿರುವ ಶೈಕ್ಷಣಿಕ ಸಂಸ್ಥೆಗಳು ಆಯಾ ಶೈಕ್ಷಣಿಕ ವರ್ಷದಲ್ಲಿ ಕಡ್ಡಾಯವಾಗಿ ಕನಿಷ್ಠ ಶೇಕಡ ಇಂತಿಷ್ಟು ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳನ್ನು ಹೊಂದಿರಬೇಕು ಎಂಬ ಷರತ್ತು ರದ್ದುಪಡಿಸಿ ರಾಜ್ಯ ಸರ್ಕಾರ ಮಾರ್ಚ್ 16ರಂದು ಆದೇಶ ಹೊರಡಿಸಿದೆ.

ಅಲ್ಪಸಂಖ್ಯಾತ ಸಮುದಾಯಗಳು ನಡೆಸುತ್ತಿರುವ ಶೈಕ್ಷಣಿಕ ಸಂಸ್ಥೆಗಳನ್ನು ಅಲ್ಪಸಂಖ್ಯಾತರ ಸಂಸ್ಥೆಗಳೆಂದು ಘೋಷಿಸಲು ಇಂತಿಷ್ಟು ಪ್ರಮಾಣದಲ್ಲಿ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಇರಬೇಕು ಎಂಬ ನಿಯಮವನ್ನು ಶಾಲಾ ಶಿಕ್ಷಣ ಇಲಾಖೆ, ಉನ್ನತ ಶಿಕ್ಷಣ ಇಲಾಖೆ, ತಾಂತ್ರಿಕ ಇಲಾಖೆ, ಮತ್ತು ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ರೂಪಿಸಿದೆ.

ಆದರೆ, ನಿಗದಿಪಡಿಸಿದ ಪ್ರಮಾಣದಲ್ಲಿ ವಿದ್ಯಾರ್ಥಿಗಳು ಸಿಗದ ಕಾರಣ ಮುಸ್ಲಿಂ, ಕ್ರಿಶ್ಚಿಯನ್, ಸಿಖ್, ಜೈನ, ಬೌದ್ಧ ಮತ್ತು ಪಾರ್ಸಿ ಸಮುದಾಯವರು ನಡೆಸುವ ಶೈಕ್ಷಣಿಕ ಸಂಸ್ಥೆಗಳನ್ನು ಅಲ್ಪಸಂಖ್ಯಾತರ ಸಂಸ್ಥೆಗಳಾಗಿ ಘೋಷಿಸಲು ಸಮಸ್ಯೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಈ ನಿಯಮ ರದ್ದುಪಡಿಸುವಂತೆ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯು ಸಚಿವ ಸಂಪುಟ ಸಭೆಗೆ ಪ್ರಸ್ತಾವ ಸಲ್ಲಿಸಿತ್ತು. ಈ ಪ್ರಸ್ತಾವಕ್ಕೆ ಮಾರ್ಚ್ 12ರಂದು ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿತ್ತು.

ನಗರ್ತಪೇಟೆ ಮೊಬೈಲ್ ಮಳಿಗೆ ಮಾಲೀಕನಿಂದ ಮರು ಹೇಳಿಕೆ • ಬಂಧಿತರ ಸಂಖ್ಯೆ 5ಕ್ಕೆ ಏರಿಕೆ

'ಆಜಾನ್ ವೇಳೆ ಚಾಲೀಸಾ ಹಾಕಿದ್ದಕ್ಕೆ ಕೊಲೆಗೆ ಯತ್ನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧ್ವನಿವರ್ಧಕದ ಶಬ್ದ ಹೆಚ್ಚಿಸಿದರೆಂಬ ಕಾರಣಕ್ಕೆ ನಡೆದಿದ್ದ ಕೊಲೆ ಯತ್ನ ಸಂಬಂಧ ಪೊಲೀಸರಿಗೆ ಮರು ಹೇಳಿಕೆ ನೀಡಿರುವ ಮೊಬೈಲ್ ಮಳಿಗೆ ಮಾಲೀಕ ಮುಖೇಶ್ (26), 'ಆಜಾನ್ ವೇಳೆ ಹನುಮಾನ್ ಚಾಲೀಸಾ ಹಾಕಿದ್ದಕ್ಕೆ ಮಳಿಗೆಗೆ ಬಂದು ಗಲಾಟೆ ಮಾಡಿದ್ದ ಆರೋಪಿಗಳು, ನನ್ನ ಕೊಲೆಗೆ ಯತ್ನಿಸಿದರು' ಎಂದು ದೂರಿದ್ದಾರೆ.

ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಹಾಗೂ ವ್ಯಾಪಾರಿಗಳ ಜೊತೆಯಲ್ಲಿ ಹಲಸೂರು ಗೇಟ್ ಠಾಣೆಗೆ ಮಂಗಳವಾರ ಭೇಟಿ ನೀಡಿದ್ದ ಮುಖೇಶ್, ಇನ್‌ಸ್ಪೆಕ್ಟರ್ ಸಮ್ಮುಖದಲ್ಲಿ ಮರು ಹೇಳಿಕೆ ದಾಖಲಿಸಿದರು.

'ಕಬ್ಬನ್ ಪೇಟೆಯಲ್ಲಿ ವಾಸವಿರುವ ನಾನು, ಜುಮ್ಮಾ ಮಸೀದಿ ರಸ್ತೆಯಲ್ಲಿ ಕೃಷ್ಣ ಟೆಲಿಕಾಂ ಮಳಿಗೆ ಇಟ್ಟುಕೊಂಡಿದ್ದೇನೆ. ಮಾರ್ಚ್ 17ರಂದು ಸಂಜೆ ಮಳಿಗೆಯ ಧ್ವನಿವರ್ಧಕದಲ್ಲಿ ಹನುಮಾನ್ ಚಾಲೀಸಾ ಹಾಕಿದ್ದೆ. ಸಂಜೆ 6.25ರ ಸುಮಾರಿಗೆ ಮಳಿಗೆಗೆ ಬಂದಿದ್ದ ಆರೋಪಿಗಳು, 'ಹನುಮಾನ್ ಚಾಲೀಸಾ ಏಕೆ ಹಾಕಿದ್ದಿಯಾ? ನಮ್ಮ ಆಜಾನ್‌ಗೆ ತೊಂದರೆ ಆಗುತ್ತಿದೆ. ಧ್ವನಿವರ್ಧಕದ ಶಬ್ದ ಕಡಿಮೆ ಮಾಡು' ಎಂದು ಬೆದರಿಸಿದ್ದರು. 'ಇದು ನನ್ನ ಮಳಿಗೆ. ಧ್ವನಿವರ್ಧಕದಲ್ಲಿ ನನ್ನಿಷ್ಟದ ಹನುಮಾಸ್ ಚಾಲೀಸಾ ಹಾಕಿದ್ದೇನೆ. ಕೇಳಲು ನೀವು ಯಾರು ಎಂಬುದಾಗಿ ಪ್ರಶ್ನಿಸಿದೆ' ಎಂದು ಮುಖೇಶ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಹನುಮಾನ್ ಚಾಲೀಸಾ ಹಾಕಿದ್ದಕ್ಕೆ ಜಗಳ ತೆಗೆದಿದ್ದ ಆರೋಪಿಗಳು, ನನ್ನ ಮೇಲೆ ಹಲ್ಲೆ ಮಾಡಿದರು. ಮಳಿಗೆಯಿಂದ ಹೊರಗೆ ಎಳೆದು ತಂದು ಥಳಿಸಿ ಕೊಲೆಗೆ ಯತ್ನಿಸಿದರು. ರಕ್ಷಣೆಗೆ ಬಂದಿದ್ದ ಸ್ಥಳೀಯರನ್ನೂ ಬೆದರಿಸಿ ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದರು.'

'ಠಾಣೆಗೆ ಮೊದಲ ಬಾರಿಗೆ ದೂರು ನೀಡಲು ಬಂದಾಗ ಗೊಂದಲವಿತ್ತು. ಭಯವೂ ಹೆಚ್ಚಿತ್ತು. ಹೀಗಾಗಿ, ಹನುಮಾನ್ ಚಾಲೀಸಾ ಬಗ್ಗೆ ಪ್ರಸ್ತಾ-ಪಿಸಿರಲಿಲ್ಲ. ಈಗ, ಧೈರ್ಯವಾಗಿ ಠಾಣೆಗೆ ಬಂದು ದೂರು ನೀಡುತ್ತಿದ್ದೇನೆ. ಆಜಾನ್ ಸಂದರ್ಭದಲ್ಲಿ ಹನುಮಾನ್ ಚಾಲೀಸಾ ಹಾಕಿದ್ದಕ್ಕಾಗಿ ನನ್ನ ಕೊಲೆಗೆ ಯತ್ನಿಸಿದ್ದ ಆರೋಪಿಗಳನ್ನು ಬಂಧಿಸಿ ಕ್ರಮ ಕೈಗೊಳ್ಳಿ' ಎಂದೂ ಮುಖೇಶ್ ಹೇಳಿಕೆಯಲ್ಲಿ ಆಗ್ರಹಿಸಿದ್ದಾರೆ.

ಬಾಲಕ ಸೇರಿ ಐವರ ಬಂಧನ: 'ಪ್ರಕರಣ ದಾಖಲಾಗುತ್ತಿದ್ದಂತೆ ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿತ್ತು. ಸೋಮವಾರ (ಮಾರ್ಚ್ 18) ರಾತ್ರಿಯೇ ಆರೋಪಿ ಸುಲೇಮಾನ್, ಶಹನವಾಜ್ ಹಾಗೂ ರೋಹಿತ್‌ನನ್ನು ಬಂಧಿಸಲಾಗಿತ್ತು. ಕೃತ್ಯದಲ್ಲಿ ಭಾಗಿಯಾಗಿದ್ದ ತರುಣ್ ಹಾಗೂ ಇನ್ನೊಬ್ಬ ಬಾಲಕನನ್ನು ಮಂಗಳವಾರ ಬಂಧಿಸಲಾಗಿದೆ. ಮತ್ತೊಬ್ಬ ತಲೆಮರೆಸಿಕೊಂಡಿದ್ದಾನೆ. ಬಂಧಿತರು ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಕಾರು ಚಾಲಕ ಸುಲೇಮಾನ್ ಹಾಗೂ ಸಹಚರರು, ಸ್ಥಳೀಯ ವ್ಯಾಪಾರಿಗಳಿಗೆ ವಿನಾಕಾರಣ ಕಿರುಕುಳ ನೀಡುತ್ತಿದ್ದರು. ಮೊಬೈಲ್ ಚಾರ್ಜರ್ ಹಾಗೂ ಇತರೆ ವಸ್ತುಗಳನ್ನು ಬಳಕೆಗಾಗಿ ಉಚಿತವಾಗಿ ನೀಡುವಂತೆ ವ್ಯಾಪಾರಿಗಳನ್ನು ಕೇಳುತ್ತಿದ್ದರು. ಈ ಸಂಬಂಧ ಆಗಾಗ ಮಾತಿನ ಚಕಮಕಿಯೂ ನಡೆಯುತ್ತಿತ್ತು. ಧ್ವನಿವರ್ಧಕದ ಶಬ್ದ ಹೆಚ್ಚಿಸಿದ್ದನ್ನೇ ಕಾರಣವಾಗಿಟ್ಟುಕೊಂಡು ಮಳಿಗೆ ಮಾಲೀಕ ಮುಖೇಶ್ ಮೇಲೆ ಹಲ್ಲೆ ನಡೆಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಹನುಮಾನ್ ಚಾಲೀಸಾ ವಿಚಾರವಾಗಿ ಗಲಾಟೆ ನಡೆದಿದ್ದಕ್ಕೆ ಸೂಕ್ತ ಪುರಾವೆ ಸದ್ಯಕ್ಕೆ ಸಿಕ್ಕಿಲ್ಲ. ಹಿಂದಿ ಭಕ್ತಿಗೀತೆ ಹಾಕಿದ್ದರ ಕುರಿತು ಸ್ಥಳೀಯರು ಮಾಹಿತಿ ನೀಡಿದ್ದಾರೆ. ಎಲ್ಲ ಆಯಾಮಗಳಲ್ಲಿ ತನಿಖೆ ಮುಂ-ದುವರಿಸಲಾಗಿದೆ. ತನಿಖೆ ಮುಗಿದ ಬಳಿಕವೇ ನಿಜಾಂಶ ತಿಳಿಯಲಿದೆ' ಎಂದು ಅವರು ಮಾಹಿತಿ ನೀಡಿದರು.

'ಭಕ್ತಿಗೀತೆ ಸಂಬಂಧ ಗಲಾಟೆ'

'ಧಾರ್ಮಿಕ ಕೇಂದ್ರದ ಬಳಿಯ ಮಳಿಗೆಯಲ್ಲಿ ಭಕ್ತಿಗೀತೆ ಸಂಬಂಧ ಗಲಾಟೆ ಆಗಿದೆ. ಕೊಲೆ ಯತ್ನ ಪ್ರಕರಣ ದಾಖಲಿಸಿಕೊಂಡು ಐವರನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಕಮಿಷನರ್ ಬಿ. ದಯಾನಂದ್ ಹೇಳಿದರು.

ನಗರದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಘಟನೆ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಡಿಸಿಪಿ ಅವರು ಸ್ಥಳಕ್ಕೆ ಹೋಗಿದ್ದರು. ದೂರುದಾರರ ಹೇಳಿಕೆ ಹಾಗೂ ವಿಡಿಯೊಗಳನ್ನು ಪರಿಶೀಲಿಸಿ, ಕೊಲೆ ಯತ್ನ ಪ್ರಕರಣ ದಾಖಲಿಸಿಕೊಂಡಿದ್ದರು' ಎಂದರು.

'ಪ್ರಕರಣದ ತನಿಖೆ ನಡೆಯುತ್ತಿದ್ದು, ಸದ್ಯಕ್ಕೆ ಯಾವುದೇ ಮಾಹಿತಿ ನೀಡಲಾಗದು. ಘಟನೆ ವಿಚಾರ ಮುಂದಿಟ್ಟುಕೊಂಡು ಯಾರಾದರೂ ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟು ಮಾಡಿದರೆ, ಅಂಥವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಅವರು ಎಚ್ಚರಿಸಿದರು.

ಸ್ಫೋಟಕ ಪತ್ತೆ : ಪ್ರಕರಣ ದಾಖಲು– ಚಾಲಕ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟ್ರ್ಯಾಕ್ಟರ್‌ನಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ ಸ್ಫೋಟಕಗಳನ್ನು ಬೆಳ್ಳಂದೂರು ಠಾಣೆ ಪೊಲೀಸರು ಜಪ್ತಿ ಮಾಡಿದ್ದು, ಚಾಲಕನನ್ನು ವಶಕ್ಕೆ ಪಡೆದು ತನಿಖೆ ಮುಂದುವರಿಸಿದ್ದಾರೆ.

'ಶಾಲೆಯೊಂದರ ಬಳಿ ಹೊರಟಿದ್ದ ಟ್ರ್ಯಾಕ್ಟರ್‌ನಲ್ಲಿ ಜಿಲೆಟಿನ್ ಕಡ್ಡಿ, ಡಿಟೋನೇಟರ್ ಹಾಗೂ ಕೆಲ ಸ್ಫೋಟಕ ಸಾಮಗ್ರಿಗಳು ಇದ್ದವು. ಅವುಗಳನ್ನು ಜಪ್ತಿ ಮಾಡಲಾಗಿದೆ. ಸ್ಫೋಟಕ ಅಕ್ರಮ ಸಾಗಣೆ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಖಾಲಿ ಜಮೀನಿನಲ್ಲಿ ಕಟ್ಟಡ ನಿರ್ಮಾಣಕ್ಕೆ ಕಾಮಗಾರಿ ಆರಂಭವಾಗಿದೆ. ಈ ಜಾಗದಲ್ಲಿದ್ದ ಬಂಡೆಗಳನ್ನು ಒಡೆಯಲು ಸ್ಫೋಟಕ ಸಂಗ್ರಹಿಸಿದ್ದ ಬಗ್ಗೆ ಮಾಹಿತಿ ಲಭ್ಯವಾಗಿದೆ. ಈ ಬಗ್ಗೆ ದಾಖಲೆಗಳ ಪರಿಶೀಲನೆ ನಡೆಸಲಾಗುತ್ತಿದೆ' ಎಂದು ತಿಳಿಸಿದರು.



ಬೆಳ್ಳಂದೂರು ಠಾಣೆ ಪೊಲೀಸರು ಜಪ್ತಿ ಮಾಡಿರುವ ಸ್ಫೋಟಕಗಳು

ಪೊಲೀಸರಿಗೆ ಹೆಲ್ಮೆಟ್ ಕಡ್ಡಾಯ: ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಎಲ್ಲ ಪೊಲೀಸರು ದ್ವಿಚಕ್ರ ವಾಹನ ಚಾಲನೆ ವೇಳೆ ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು' ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕರ (ಡಿಜಿ-ಐಜಿಪಿ) ಪರವಾಗಿ ಎಡಿಜಿಪಿ ಅಲೋಕ್‌ಕುಮಾರ್ ಅವರು ಆದೇಶ ಹೊರಡಿಸಿದ್ದಾರೆ.

'ರಾಜ್ಯದ ವಿವಿಧ ಘಟಕಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹಲವು ಪೊಲೀಸರು ಹೆಲ್ಮೆಟ್ ಧರಿಸದೇ ದ್ವಿಚಕ್ರ ವಾಹನ ಚಲಾಯಿಸುತ್ತಿದ್ದಾರೆ. ಅಪಘಾತಗಳು ಸಂಭವಿಸಿ, ಹಲವು ಪೊಲೀಸರು ಗಾಯಗೊಳ್ಳುತ್ತಿದ್ದಾರೆ. ಕೆಲ ಪೊಲೀಸರು ಪ್ರಾಣವನ್ನೂ ಕಳೆದುಕೊಂಡಿರುವುದು ಕಂಡುಬಂದಿದೆ' ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

'ಅಪಘಾತದಿಂದ ಆಗುವ ಸಾವು–ನೋವುಗಳನ್ನು ತಪ್ಪಿಸಲು, ಪೊಲೀಸರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ಮೋಟರು ವಾಹನ ಕಾಯ್ದೆ ನಿಯಮಗಳನ್ನು ಪಾಲಿಸಬೇಕು. ತಮ್ಮ ವ್ಯಾಪ್ತಿಯ ಪೊಲೀಸರು ಕಡ್ಡಾಯವಾಗಿ ಹೆಲ್ಮೆಟ್ ಧರಿಸುವಂತೆ ನೋಡಿಕೊಳ್ಳುವ ಬಗ್ಗೆ ಹಿರಿಯ ಅಧಿಕಾರಿಗಳು ನಿರ್ದೇಶನ ನೀಡಬೇಕು' ಎಂದು ಆದೇಶದಲ್ಲಿ ತಿಳಿಸಲಾಗಿದೆ.



ಹುಂಡೈ ಕ್ರೆಟಾ ಎನ್ ಲೈನ್ ಕಾರು

ಹುಂಡೈ ಕ್ರೆಟಾ ಎನ್ ಲೈನ್ ಕಾರು ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಪ್ರಮುಖ ಕಾರು ತಯಾರಿಕಾ ಕಂಪನಿ ಹುಂಡೈ ಮೋಟರ್ಸ್ ತನ್ನ ಜನಪ್ರಿಯ ಎಸ್‌ಯುವಿ ಕ್ರೆಟಾದ ಎನ್ ಲೈನ್ ಕಾರನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಎನ್8 ಆವೃತ್ತಿಯ ಕಾರಿನ ಎಕ್ಸ್ ಷೋರೂಂ ಬೆಲೆ ₹16,82,300 ಹಾಗೂ ಎನ್10 ಆವೃತ್ತಿಯ ಕಾರಿನ ಎಕ್ಸ್ ಷೋರೂಂ ಬೆಲೆ ₹19,34,300 ಆಗಿದೆ ಎಂದು ಕಂಪನಿ ತಿಳಿಸಿದೆ.

'ಭಾರತದ ಹೊಸ ಖರೀದಿದಾರರ ಬೇಡಿಕೆಗೆ ಅನುಗುಣವಾಗಿ ಈ ಕಾರನ್ನು ತಯಾರಿಸಲಾಗಿದೆ. ಒಳ ವಿನ್ಯಾಸವು ಆಕರ್ಷಕವಾಗಿದೆ. ಈ ಶ್ರೇಣಿಯ ಕಾರುಗಳು ಸುಧಾರಿತ ತಂತ್ರಜ್ಞಾನ ಹೊಂದಿದ್ದು, ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಲಾಗಿದೆ' ಎಂದು ಹುಂಡೈ ಮೋಟರ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಅನ್ ಸೂ ಕಿಮ್ ತಿಳಿಸಿದ್ದಾರೆ.

ನೆಟ್ಟಾರು ಹತ್ಯೆ ಪ್ರಕರಣ: ಆರೋಪಿ ಜಾಮೀನು ಅರ್ಜಿ ತಿರಸ್ಕೃತ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬಿಜೆಪಿಯ ಯುವ ಮೋರ್ಚಾ ಮುಖಂಡರಾಗಿದ್ದ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದ 21ನೇ ಆರೋಪಿ ಮೊಹಮದ್ ಜಬೀರ್‌ಗೆ ಜಾಮೀನು ಮಂಜೂರು ಮಾಡಲು ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ ಎನ್‌ಐಎ ವಿಶೇಷ ನ್ಯಾಯಾಲಯದ ಆದೇಶ ಪ್ರಶ್ನಿಸಿ ಪುತ್ತೂರು ತಾಲ್ಲೂಕು ಒಳಮೊಗ್ರು ಗ್ರಾಮದ ಮೊಹಮದ್ ಜಬೀರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್ ಕುಮಾರ್ ಮತ್ತು ವಿಜಯಕುಮಾರ್ ಎ. ಪಾಟೀಲ್ ಅವರಿದ್ದ ವಿಭಾಗೀಯ ನ್ಯಾಯಪೀಠ ವಜಾಗೊಳಿಸಿದೆ.

ಎನ್‌ಐಎ ಪರ ಪಿ.ಪ್ರಸನ್ನ ಕುಮಾರ್ ಮಂಡಿಸಿದ್ದ ವಾದ ಮನ್ನಿಸಿರುವ ನ್ಯಾಯಪೀಠ, 'ಡೀಫಾಲ್ಟ್ ಜಾಮೀನು ಕೋರಿರುವ ಅರ್ಜಿದಾರರ ಕೋರಿಕೆಯನ್ನು ಎನ್‌ಐಎ ವಿಶೇಷ ನ್ಯಾಯಾಲಯ ತಿರಸ್ಕರಿಸಿದೆ. ಈ ವೇಳೆ ಅರ್ಜಿದಾರರನ್ನು ಕಸ್ಟಡಿಗೆ ಪಡೆಯಲು ಸೂಕ್ತ ಮತ್ತು ನಿರ್ದಿಷ್ಟ ಕಾರಣ ನೀಡಲಾಗಿಲ್ಲ ಎಂದು ಅರ್ಜಿದಾರರು ಕೋರದೇ ಇರುವುದರಿಂದ ಅದನ್ನು ಪರಿಶೀಲನೆ ಮಾಡುವ ಅಗತ್ಯವಿಲ್ಲ ಎಂದು ನ್ಯಾಯಾಲಯ ತನ್ನ ಆದೇಶದಲ್ಲಿ ವಿವರಿಸಿರುವುದು ಸರಿಯಾಗಿಯೇ ಇದೆ. ಹೀಗಾಗಿ ಮೊಹಮದ್ ಜಬೀರ್ ಸಲ್ಲಿಸಿರುವ ಈ ರಿಟ್ ಅರ್ಜಿ ತಿರಸ್ಕರಿಸಲಾಗುತ್ತಿದೆ' ಎಂದು ನ್ಯಾಯಪೀಠ ಹೇಳಿದೆ.

'ಆರೋಪಿಯ ಕಸ್ಟಡಿ ಅವಧಿ ವಿಸ್ತರಿಸಬೇಕು ಎಂದು ಕೋರಿ ಒಂದೆಡೆ ಎನ್‌ಐಎ ಅರ್ಜಿ ಸಲ್ಲಿಸಿದ್ದರೆ ಮತ್ತೊಂದೆಡೆ, ಡೀಫಾಲ್ಟ್ ಜಾಮೀನು ಕೋರಿ ಅರ್ಜಿದಾರರೂ ಅದೇ ದಿನ ಇನ್ನೊಂದು ಅರ್ಜಿ ಸಲ್ಲಿಸಿದ್ದಾರೆ. ಎರಡೂ ಅರ್ಜಿಗಳನ್ನು ಎನ್‌ಐಎ ವಿಶೇಷ ನ್ಯಾಯಾಲಯ ಒಂದೇ ದಿನ ವಿಚಾರಣೆ ನಡೆಸಿದೆ. ಅಂತೆಯೇ, ಅರ್ಜಿದಾರರ ಕಸ್ಟಡಿ ವಿಸ್ತರಣೆ ಕೋರಿ ನಿರ್ದಿಷ್ಟ ಕಾರಣಗಳನ್ನು ಒಳಗೊಂಡ ಮನವಿಯನ್ನು ಎನ್‌ಐಎ ಸಲ್ಲಿಸಿದ ಕಾರಣ ವಿಶೇಷ ನ್ಯಾಯಾಲಯ ಎನ್‌ಐಎ ಅರ್ಜಿಯನ್ನು ಪುರಸ್ಕರಿಸಿ-ರುವುದು ಕೂಡಾ ಸಮರ್ಪಕವಾಗಿದೆ' ಎಂದು ನ್ಯಾಯಪೀಠ ಅಭಿಪ್ರಾಯ ಪಟ್ಟಿದೆ.

ಮೊಹಮದ್ ಜಬೀರ್ ವಿರುದ್ಧ ಭಾರತೀಯ ದಂಡ ಸಂಹಿತೆ–1860ರ ಕಲಂ 302, ಶಸ್ತ್ರಾಸ್ತ್ರ ಕಾಯ್ದೆ ಹಾಗೂ ಕಾನೂನುಬಾಹಿರ ಚಟುವಟಿಕೆಗಳ ನಿಯಂತ್ರಣ ಕಾಯ್ದೆಯ ವಿವಿಧ ಕಲಂಗಳಡಿ ಪ್ರಕರಣ ದಾಖಲಿಸಲಾಗಿದೆ. ಅವರನ್ನು 2022ರ ನವೆಂಬರ್ 7ರಂದು ಬಂಧಿಸಲಾಗಿತ್ತು.

ಭೂಸ್ವಾಧೀನ ಪರಿಹಾರ ವಿಳಂಬ; ನ್ಯಾಯಾಲಯದ ಆದೇಶದಂತೆ ಕ್ರಮ

ಹಾವೇರಿ ಎಸಿ ಕಚೇರಿ ಪೀಠೋಪಕರಣ ಜಪ್ತಿ

ಪ್ರಜಾವಾಣಿ ವಾರ್ತೆ

ಹಾವೇರಿ: ನಗರದ ಗಿರಿಜವ್ವ ಹೊಸಮನಿ ಕುಟುಂಬಕ್ಕೆ ₹5.05 ಕೋಟಿ ಭೂಸ್ವಾಧೀನ ಪರಿಹಾರ ನೀಡಲು ರಾಜ್ಯ ಸರ್ಕಾರ ವಿಳಂಬ ಮಾಡಿದ ಕಾರಣ, ನ್ಯಾಯಾಲಯದ ಆದೇಶದಂತೆ ಮಂಗಳವಾರ ಹಾವೇರಿಯ ಉಪ ವಿಭಾಗಾಧಿಕಾರಿ ಕಚೇರಿಯ ಪೀಠೋಪಕರಣ ಜಪ್ತಿ ಮಾಡಲಾಯಿತು.

ಮಾರ್ಚ್ 2ರಂದು ಹಾವೇರಿಯ ಹೆಚ್ಚುವರಿ ಸಿವಿಲ್ ನ್ಯಾಯಾಲಯವು ಉಪವಿಭಾಗಾಧಿಕಾರಿ ಕಚೇರಿಯ ಚರಾಸ್ತಿಗಳನ್ನು ಜಪ್ತಿ ಮಾಡಲು ಆದೇಶ ನೀಡಿದ ಮೇರೆಗೆ ನ್ಯಾಯಾಂಗ ಇಲಾಖೆಯ ಸಿಬ್ಬಂದಿ ಕಚೇರಿಯ ಕಂಪ್ಯೂಟರ್, ಪೀಠೋಪಕರಣ ವಶಕ್ಕೆ ಪಡೆದರು. ಕಚೇರಿ ಸಿಬ್ಬಂದಿಯು ಜಪ್ತಿ ವಿಷಯ ತಿಳಿದು, ಕಚೇರಿಯ ಹೊರಗಡೆ ಕೂತರು.

ಗಿರಿಜವ್ವ ಹೊಸಮನಿ ಕುಟುಂಬಸ್ಥರು ಸ್ವಾತಂತ್ರ್ಯ ಹೋರಾಟಗಾರ ಹೊಸಮನಿ ಸಿದ್ದಪ್ಪ ಅವರ ಸಂಬಂಧಿಕರು.

ಏನಿದು ಪ್ರಕರಣ: 1967ರಲ್ಲಿ ಎಪಿಎಂಸಿ ಮತ್ತು ಗಣಜೂರು ರಸ್ತೆ ನಿರ್ಮಾಣಕ್ಕೆ 7 ಗುಂಟೆ ಜಾಗ ಭೂಸ್ವಾಧೀನ ಮಾಡಿಕೊಳ್ಳಲಾಗಿತ್ತು. ಈ ಸಂಬಂಧ 2006ರಲ್ಲಿ ಸರ್ಕಾರ ನೋಟಿಫಿಕೇಷನ್ ಹೊರಡಿಸಿತು. ಆಗ ಪರಿಹಾರ ಕೊಡಿಸುವಂತೆ ಗಿರಿಜವ್ವ ಹೊಸಮನಿ ಕುಟುಂಬದವರು 2006ರಲ್ಲಿ ನ್ಯಾಯಾಲಯದ ಮೆಟ್ಟಿಲೇರಿದ್ದರು. 2010ರಲ್ಲಿ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಗುಂಟೆಗೆ ₹ 50 ಸಾವಿರದ ಜತೆಗೆ ನಷ್ಟ ಪರಿಹಾರ, ಹೆಚ್ಚುವರಿ ಮಾರುಕಟ್ಟೆ ಮೌಲ್ಯ ನೀಡಲು ಆದೇಶಿಸಿದ್ದರು.

ನಂತರ, ಸರ್ಕಾರ 2014ರಲ್ಲಿ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತು. ಪ್ರಕರಣದ ವಿಚಾರಣೆ ನಡೆದು, 2020ರಲ್ಲಿ ಧಾರಾವಾಡದ ಕರ್ನಾಟಕ ಹೈಕೋರ್ಟ್ ಪೀಠವು 1967ರಿಂದ 2004ರವರೆಗೆ ಶೇ 15ರ ಹೆಚ್ಚುವರಿ ಬಡ್ಡಿ ಮತ್ತು ನಷ್ಟ ಪರಿಹಾರದ ಹಣ ತುಂಬಿಕೊಡುವಂತೆ ಆದೇಶಿಸುವ ಮೂಲಕ ಕೆಳಗಿನ ನ್ಯಾಯಾಲಯದ ಆದೇಶವನ್ನು ಎತ್ತಿಹಿಡಿಯಿತು.

ಸರ್ಕಾರ ಪರಿಹಾರ ಕೊಡಲು ವಿಳಂಬವಾದ ಹಿನ್ನೆಲೆಯಲ್ಲಿ 2024ರ ಫೆಬ್ರುವರಿ 7ರಂದು ಹೈಕೋರ್ಟ್ ಪೀಠ ಒಟ್ಟು ₹5.05 ಕೋಟಿ ಪರಿಹಾರ ನೀಡಬೇಕು ಎಂದು ತೀರ್ಪು ನೀಡಿತು. ಹೈಕೋರ್ಟ್ ಆದೇಶವಿದ್ದರೂ, ಪರಿಹಾರ ನೀಡಲು ವಿಳಂಬವಾದ ಹಿನ್ನೆಲೆಯಲ್ಲಿ ಭೂಸ್ವಾಧೀನ ಅಧಿಕಾರಿಯೂ ಆದ ಉಪವಿಭಾಗಾಧಿಕಾರಿ ಕಚೇರಿಯ ಚರಾಸ್ತಿ ಜಪ್ತಿಗೆ ಹಾವೇರಿಯ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಆದೇಶ ಹೊರಡಿಸಿತು.

'ನ್ಯಾಯಾಲಯದ ಆದೇಶದ ಪ್ರಕಾರ ಪರಿಹಾರದ ಪೂರ್ಣ ಹಣ ಭೂಮಿ ಕಳೆದುಕೊಂಡ ಗಿರಿಜವ್ವ ಹೊಸಮನಿ ಕುಟುಂಬಕ್ಕೆ ಸಿಗದ ಕಾರಣ, ಜಪ್ತಿ ಪ್ರಕ್ರಿಯೆ ಕೈಗೊಂಡಿದ್ದೇವೆ' ಎಂದು ವಕೀಲ ಅಶೋಕ ನೀರಲಗಿ ತಿಳಿಸಿದ್ದಾರೆ.



ಹಾವೇರಿಯ ಉಪವಿಭಾಗಾಧಿಕಾರಿ ಕಚೇರಿಯ ಕಂಪ್ಯೂಟರ್, ಪೀಠೋಪಕರಣಗಳನ್ನು ನ್ಯಾಯಾಂಗ ಇಲಾಖೆಯ ಸಿಬ್ಬಂದಿ ಮಂಗಳವಾರ ಜಪ್ತಿ ಮಾಡಿದರು

> **ಪರಿಹಾರದ ಹಣ ಬಿಡುಗಡೆಗೆ ಲೋಕೋಪಯೋಗಿ ಇಲಾಖೆಗೆ ಈಗಾಗಲೇ ಪತ್ರ ಬರೆಯಲಾಗಿದೆ. ಹೆಚ್ಚುವರಿ ಕಾಲಾವಕಾಶ ನೀಡುವಂತೆ ನ್ಯಾಯಾಲಯಕ್ಕೆ ಮನವಿ ಸಲ್ಲಿಸಲಿದ್ದೇವೆ**
> **ರಘುನಂದನ ಮೂರ್ತಿ,** ಜಿಲ್ಲಾಧಿಕಾರಿ

ನಕಲಿ ಎನ್‌ಕೌಂಟರ್ ಪ್ರಕರಣ: ಬಾಂಬೆ ಹೈಕೋರ್ಟ್ ಆದೇಶ

ಪ್ರದೀಪ್ ಶರ್ಮಾಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಮುಂಬೈ: ಎನ್‌ಕೌಂಟರ್ ಪರಿಣತ ಎಂದೇ ಹೆಸರಾಗಿದ್ದ ಮಾಜಿ ಪೊಲೀಸ್ ಅಧಿಕಾರಿ ಪ್ರದೀಪ್ ಶರ್ಮಾಗೆ ಬಾಂಬೆ ಹೈಕೋರ್ಟ್ 18 ವರ್ಷದ ಹಿಂದಿನ 'ನಕಲಿ ಎನ್‌ಕೌಂಟರ್' ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ವಿಧಿಸಿ ಆದೇಶಿಸಿದೆ.

ನಕಲಿ ಎನ್‌ಕೌಂಟರ್ ಪ್ರಕರಣದಲ್ಲಿ ಶರ್ಮಾ ಅವರನ್ನು ಖುಲಾಸೆಗೊಳಿಸಿ 2013ರಲ್ಲಿ ಮುಂಬೈನ ಸೆಷನ್ಸ್ ಕೋರ್ಟ್ ನೀಡಿದ್ದ ಆದೇಶವನ್ನು ಇದೇ ವೇಳೆ ಹೈಕೋರ್ಟ್ ರದ್ದುಪಡಿಸಿತು.

ನ್ಯಾಯಮೂರ್ತಿಗಳಾದ ರೇವತಿ ಮೋಹಿತೆ ಡೇರೆ ಮತ್ತು ಗೌರಿ ಗೋಡ್ಸೆ ಅವರಿದ್ದ ವಿಭಾಗೀಯ ಪೀಠವು ಈ ಶಿಕ್ಷೆ ವಿಧಿಸಿ ಅದೇಶ ನೀಡಿತು. ಅಲ್ಲದೆ, ಮೂರು ವಾರಗಳಲ್ಲಿ ಶರಣಾಗಬೇಕು ಎಂದು ಅಪರಾಧಿ ಪ್ರದೀಪ್ ಶರ್ಮಾಗೆ ಆದೇಶಿಸಿತು.

ಮುಖ್ಯಾಂಶಗಳು

- 18 ವರ್ಷದ ಹಿಂದಿನ ಪ್ರಕರಣದಲ್ಲಿ ಶಿಕ್ಷೆ
- ಸೆಷನ್ಸ್ ಕೋರ್ಟ್ ನೀಡಿದ್ದ ಆದೇಶವನ್ನು ರದ್ದುಗೊಳಿಸಿದ ಹೈಕೋರ್ಟ್
- 3 ವಾರಗಳಲ್ಲಿ ಶರಣಾಗಲು ಪ್ರದೀಪ್‌ಗೆ ಸೂಚನೆ

ಭೂಗತ ಪಾತಕಿ ಛೋಟಾ ರಾಜನ್‌ನ ಆಪ್ತ ಎಂದು ಹೇಳಲಾಗಿದ್ದ ರಾಮ ನಾರಾಯಣ ಗುಪ್ತ ಅಲಿಯಾಸ್ ಲಖ್ಖನ್ ಭಯ್ಯಾ ಎಂಬಾತನ 'ನಕಲಿ ಎನ್‌ಕೌಂಟರ್' ಪ್ರಕರಣಕ್ಕೆ ಸಂಬಂಧಿಸಿದಂತೆ ಕೋರ್ಟ್ ಈಗ ಜೀವಾವಧಿ ಶಿಕ್ಷೆ ವಿಧಿಸಿದೆ.

ನಕಲಿ ಎನ್‌ಕೌಂಟರ್ ಸಂಬಂಧ ಪೊಲೀಸ್ ಅಧಿಕಾರಿ ಶಿಕ್ಷೆಗೆ ಗುರಿಯಾದ ಮಹಾರಾಷ್ಟ್ರದ ಮೊದಲ ಪ್ರಕರಣ ಇದಾಗಿದೆ. ಪ್ರದೀಪ್ ಶರ್ಮಾ (63) ಸ್ವಯಂ ನಿವೃತ್ತಿ ಪಡೆದ ಬಳಿಕ ಶಿವಸೇನೆಗೆ ಸೇರಿದ್ದರು. 2019ರಲ್ಲಿ ವಿಧಾನಸಭೆಗೆ ಸ್ಪರ್ಧಿಸಿ, ಸೋತಿದ್ದರು. ಮೂರು ದಶಕಗಳ ಸೇವೆಯಲ್ಲಿ ಭೂಗತ ಪಾತಕಿಗಳು, ಉಗ್ರರು, ಶಾರ್ಪ್ ಶೂಟರ್ ಸೇರಿ 113 ಕ್ರಿಮಿನಲ್‌ಗಳಿಗೆ ಅಂತ್ಯ ಹಾಡಿದ್ದರು.

'ಶರ್ಮಾರನ್ನು ಖುಲಾಸೆಗೊಳಿ-ಸಿದ್ದ ಸೆಷನ್ಸ್ ಕೋರ್ಟ್‌ನ ಆದೇಶವು ಅಸಮರ್ಥನೀಯ. ವಿಚಾರಣಾಧೀನ ನ್ಯಾಯಾಲಯವು ಶರ್ಮಾ ವಿರುದ್ಧದ ಸಾಕ್ಷ್ಯಗಳನ್ನು ಸರಿಯಾಗಿ ಪರಿಗಣಿಸಿಲ್ಲ' ಎಂದು ಹೈಕೋರ್ಟ್‌ನ ವಿಭಾಗೀಯ ಪೀಠ ಅಭಿಪ್ರಾಯಪಟ್ಟಿತು.



ಇದೇ ಪ್ರಕರಣದ ಸಂಬಂಧ ಪೊಲೀಸರು ಸೇರಿ 13 ಜನರಿಗೆ ಜೀವಾವಧಿ ಶಿಕ್ಷೆ ವಿಧಿಸಿ ಕೆಳಹಂತದ ಕೋರ್ಟ್ ನೀಡಿದ್ದ ಆದೇಶವನ್ನು ಪೀಠವು ಎತ್ತಿಹಿಡಿಯಿತು. 13 ಪೊಲೀಸರು ಸೇರಿ 22 ಮಂದಿ ವಿರುದ್ಧ ಪ್ರಕರಣ ದಾಖಲಾಗಿತ್ತು.

ಘಟನೆಯು 2006ರ ನವೆಂಬರ್ 11ರಲ್ಲಿ ನಡೆದಿತ್ತು. ನವೀ ಮುಂಬೈನ ವಶಿಯಿಂದ ಲಖ್ಖನ್ ಭಯ್ಯಾನನ್ನು ಪೊಲೀಸರು ವಶಕ್ಕೆ ಪಡೆದಿದ್ದರು. ಅದೇ ದಿನ ನಾನಾ ನಾನಿ ಪಾರ್ಕ್ ಬಳಿ ಎನ್‌ಕೌಂಟರ್ ನಡೆದಿತ್ತು.

ಅದೇ ವರ್ಷದ ನವೆಂಬರ್ 15ರಂದು ಲಖ್ಖನ್ ಭಯ್ಯಾ ಸಹೋದರ, ವಕೀಲ ರಾಮಪ್ರಸಾದ್ ಗುಪ್ತಾ ಇದು 'ನಕಲಿ ಎನ್‌ಕೌಂಟರ್' ಎಂದು ದೂರಿ ಬಾಂಬೆ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಕೃತ್ಯದ ತನಿಖೆಗೆ ವಿಶೇಷ ತಂಡ ರಚಿಸಲಾಗಿತ್ತು.



ಎಲ್ಲವೂ ನೀರಿಗಾಗಿ...

ಮೂಕಾಂಬಿಕಾ ನಗರಕ್ಕೆ ಟ್ಯಾಂಕರ್ ಮೂಲಕ ಉಚಿತವಾಗಿ ಕುಡಿಯುವ ನೀರು ಪೂರೈಸಲಾಗುತ್ತಿದ್ದು, ಜನರು ಕೊಡ ಹಾಗೂ ಬ್ಯಾರಲ್‌ಗಳಲ್ಲಿ ನೀರು ಸಂಗ್ರಹಿಸಿಕೊಳ್ಳುವ ಧಾವಂತದಲ್ಲಿ ಇದ್ದುದು ಹೀಗೆ.

– ಪ್ರಜಾವಾಣಿ ಚಿತ್ರ/ರಂಜು ಪಿ.



ವೃಷಭಾವತಿ ವ್ಯಾಲಿಯಲ್ಲಿ ಹರಿಯುತ್ತಿರುವ ಸಂಸ್ಕರಿತ ನೀರನ್ನು ಜಲಮಂಡಳಿ ಅಧ್ಯಕ್ಷ ಡಾ. ರಾಮ್‌ಪ್ರಸಾತ್ ಮನೋಹರ್ ಹಾಗೂ ಅಧಿಕಾರಿಗಳು ಮಂಗಳವಾರ ಪರಿಶೀಲಿಸಿದರು

‘ಕೆರೆ ಮರುಪೂರಣ ಚುರುಕುಗೊಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಅಂತರ್ಜಲ ಕುಸಿತದಿಂದ ನೀರಿನ ಕೊರತೆ ಉಂಟಾಗಿದ್ದು, ಮರುಪೂರಣಕ್ಕೆ ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಹೇಳಿದರು.

ವೃಷಭಾವತಿ ವ್ಯಾಲಿಯಲ್ಲಿರುವ ತ್ಯಾಜ್ಯ ನೀರು ಸಂಸ್ಕರಣಾ ಘಟಕ, ನಾಯಂಡಹಳ್ಳಿ ಕೆರೆಗೆ ಸಂಸ್ಕರಿಸಿರುವ ನೀರು ತುಂಬಿಸುವ ವ್ಯವಸ್ಥೆಯನ್ನು ಮಂಗಳವಾರ ಪರಿಶೀಲಿಸಿ ಅವರು ಮಾತನಾಡಿದರು.

‘ಎರಡನೇ ಹಂತದಲ್ಲಿ ಸಂಸ್ಕರಿಸಿದ ನೀರನ್ನು ಕೆರೆಗಳಿಗೆ ತುಂಬಿಸುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಈಗಾಗಲೇ ನಾಯಂಡಹಳ್ಳಿ ಕೆರೆ ಸೇರಿದಂತೆ 14 ಕೆರೆಗಳಿಗೆ ನೀರು ತುಂಬಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಕೆರೆಗಳಿಗೆ ನೀರನ್ನು ತುಂಬಿಸುವುದು ನಮ್ಮ ಗುರಿಯಾಗಿದೆ. ಕೆಂಗೇರಿ ಕೆರೆ, ದುಬಾಸಿ ಪಾಳ್ಯ, ಹೊಸಹಳ್ಳಿ ಕೆರೆ ಹಾಗೂ ಹಲಗೆವಡೆರಹಳ್ಳಿ ಕೆರೆಗೆ ನೀರು ತುಂಬಿಸುವಂತಹ ಕಾಮಗಾರಿಗಳನ್ನು ಚುರುಕುಗೊಳಿಸಲಾಗುವುದು’ ಎಂದು ತಿಳಿಸಿದರು.

‘ನಗರದಲ್ಲಿ ಅವ್ಯಾಹತವಾಗಿ ಅಂತರ್ಜಲದ ಬಳಕೆ ಆಗುತ್ತಿದೆ. ಮಳೆ ನೀರು ಮರುಪೂರಣ ವ್ಯವಸ್ಥೆ ಇಲ್ಲದಿರುವುದರಿಂದ ಹೆಚ್ಚಿನ ಪ್ರಮಾಣದ ಮಳೆನೀರು ಒಳಚರಂಡಿಗೆ ಹರಿಯುತ್ತಿದೆ. ಇದು ಒಳಚರಂಡಿಯ ವ್ಯವಸ್ಥೆಯ ಮೇಲೆ ಒತ್ತಡವನ್ನು ಹೆಚ್ಚಿಸುತ್ತಿದೆ. ಭವಿಷ್ಯದ ನೀರಿನ ಅವಶ್ಯಕತೆಯನ್ನು ಪೂರೈಸಲು ಅಂತರ್ಜಲ ಮರುಪೂರಣಕ್ಕೆ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ’ ಎಂದು ಹೇಳಿದರು.

ಯಾರ ಬದುಕಿಗೂ ವಿಷ ಹಾಕಿಲ್ಲ: ಡಿ.ಕೆ. ಸುರೇಶ್



ಡಿ.ಕೆ. ಸುರೇಶ್

ಹಾರೋಹಳ್ಳಿ: ‘ನಾನು ಯಾರ ಬದುಕಿಗೂ ವಿಷ ಹಾಕುವವನಲ್ಲ. ಎಲ್ಲರಿಗೂ ಒಳ್ಳೆಯದನ್ನೇ ಬಯಸುತ್ತೇನೆ. ಆರೋಗ್ಯ ಚಿಕಿತ್ಸೆಗಾಗಿ ಹೋಗುತ್ತಿರುವ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆದಷ್ಟು ಬೇಗ ಗುಣಮುಖರಾಗಿ ಬರಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ’ ಎಂದು ಸಂಸದ ಡಿ.ಕೆ. ಸುರೇಶ್ ಹೇಳಿದ್ದಾರೆ.

ಡಿ.ಕೆ. ಸುರೇಶ್ ತನ್ನ ಬದುಕಿಗೆ ವಿಷ ಹಾಕಿದ್ದಾರೆ ಎಂಬ ಕುಮಾರಸ್ವಾಮಿ ಹೇಳಿಕೆ ಕುರಿತು ಮಂಗಳವಾರ ಪ್ರತಿಕ್ರಿಯಿಸಿದ ಅವರು, ‘ನಾನು ಕ್ಷೇತ್ರದಲ್ಲಿ ಮಾಡಿರುವ ಕೆಲಸಗಳಿಗೆ ಮತದಾರರಿಂದ ಕೂಲಿ ಕೇಳುತ್ತಿದ್ದೇನೆ. ನಾನು ಯಾರ ಮೇಲೂ ಆರೋಪ ಮಾಡುತ್ತಿಲ್ಲ’ ಎಂದರು.

‘ನಾನು ಬಲವಂತವಾಗಿ ಬಿಜೆಪಿ, ಜೆಡಿಎಸ್ ನಾಯಕರಿಗೆ ಕಾಂಗ್ರೆಸ್ ಶಾಲು ಹಾಕುತ್ತಿದ್ದೇನೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ ಹೇಳಿದ್ದಾರೆ. ಯಾರಿಗೂ ಬಲವಂತ ಮಾಡುವ ಅಭ್ಯಾಸ ನನಗಿಲ್ಲ’ ಎಂದಿದ್ದಾರೆ.

ನಲ್ಲಿಗಳಿಗೆ ಅಳವಡಿಸುವುದರಿಂದ ಶೇ 60ರಿಂದ 85ರಷ್ಟು ನೀರಿನ ಉಳಿತಾಯ

ಏರಿಯೇಟರ್ ನಾಳೆಯಿಂದ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿಜ್ಯ ಮಳಿಗೆಗಳು, ಕೈಗಾರಿಕೆಗಳು, ಅಪಾರ್ಟ್‌ಮೆಂಟ್, ಐಷಾರಾಮಿ ಹೋಟೆಲ್ ಮತ್ತು ರೆಸ್ಟೋರೆಂಟ್, ಸಾರ್ವಜನಿಕ ಸ್ಥಳಗಳಲ್ಲಿನ ನಲ್ಲಿಗಳಿಗೆ ಏರಿಯೇಟರ್ ಅಳವಡಿಕೆ ಕಡ್ಡಾಯಗೊಳಿಸಲಾಗಿದೆ ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಹೇಳಿದರು.

ಬೆಂಗಳೂರು ನಗರ ಪ್ಲಂಬರ್ ಅಸೋಸಿಯೇಷನ್ ಪದಾಧಿಕಾರಿಗಳೊಂದಿಗೆ ಮಂಗಳವಾರ ಸಭೆಯಲ್ಲಿ ಮಾತನಾಡಿ ಈ ವಿಷಯ ತಿಳಿಸಿದರು.

‘ನಲ್ಲಿಗಳಲ್ಲಿ ಏರಿಯೇಟರ್ ಅಳವಡಿಸುವುದರಿಂದ ಶೇ 60ರಿಂದ 85ರಷ್ಟು ನೀರಿನ ಉಳಿತಾಯ ಸಾಧ್ಯ. ಕೋವಿಡ್ ಸಂದರ್ಭದಲ್ಲಿ ಮುನ್ನೆಚ್ಚರಿಕೆಯ ಕ್ರಮವಾಗಿ ಮಾಸ್ಕ್ ಹಾಗೂ ಸ್ಯಾನಿಟೈಸರ್ ಬಳಸಿದಂತೆ ‘ವಾಟರ್ ಟ್ಯಾಪ್ ಮಾಸ್ಕ್’ಗಳನ್ನು ಬಳಸುವುದು ಅಗತ್ಯವಾಗಿದೆ. ಮಾರ್ಚ್ 21ರಿಂದ ಮಾರ್ಚ್ 31ರವರೆಗೆ ಸ್ವಯಂ ಪ್ರೇರಿತರಾಗಿ ನಲ್ಲಿಗಳಿಗೆ ಏರಿಯೇಟರ್ ಅಳವಡಿಸಿಕೊಳ್ಳಬೇಕು. ನಂತರದ ದಿನಗಳಲ್ಲಿ ದಂಡ ವಿಧಿಸಲಾಗುವುದು’ ಎಂದು ಹೇಳಿದರು.

ಮನೆಯಲ್ಲಿ ಕೈತೊಳೆಯುವ, ಪಾತ್ರೆ ತೊಳೆಯುವ, ಶವರ್, ವಾಷ್ ಬೇಸಿನ್ ನಲ್ಲಿಗಳು ಸೇರಿದಂತೆ ಅನಗತ್ಯವಾಗಿ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಯುವ ಕಡೆಗಳಲ್ಲಿ ಸಾರ್ವಜನಿಕರು ಏರಿಯೇಟರ್‌ಗಳನ್ನು ಅಳವಡಿಸಿಕೊಳ್ಳಬೇಕು. ಈ ಉಪಕರಣ ಮಾರುಕಟ್ಟೆಯಲ್ಲಿ ₹60ನಿಂದ ಲಭ್ಯವಿದೆ. ಇದರಿಂದ ಜನರ ಮನೆಯಲ್ಲಿ ನೀರಿನ ಬಳಕೆ ಗಣನೀಯವಾಗಿ ಕಡಿಮೆ ಯಾಗುತ್ತದೆ. ಹಾಗೆಯೇ, ನೀರಿನ ಬಿಲ್ ಕೂಡ ಕಡಿಮೆ ಆಗುತ್ತದೆ ಎಂದರು.

ಪ್ಲಂಬರ್‌ಗಳಿಗೆ ಪ್ರಶಂಸಾ ಪತ್ರ: ‘ಜಲಮಂಡಳಿಯಿಂದ ಪರವಾನಗಿ ಹೊಂದಿರುವಂತಹ 1,500 ಪ್ಲಂಬರ್‌ಗಳಿದ್ದಾರೆ. ಇವರೆಲ್ಲ, ನಲ್ಲಿಗಳಿಗೆ ಏರಿಯೇಟರ್ ಅಳವಡಿಸುವುದರ ಬಗ್ಗೆ ಮಾಲೀಕರಲ್ಲಿ ಜಾಗೃತಿ ಮೂಡಿಸಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಏರಿಯೇಟರ್‌ಗಳನ್ನು ಅಳವಡಿಸುವ ಪ್ಲಂಬರ್‌ಗಳನ್ನು ಪ್ರೋತ್ಸಾಹಿಸಿ, ಪ್ರಶಂಸಾಪತ್ರ ನೀಡಲಾಗುತ್ತದೆ’ ಎಂದು ಸಭೆಯಲ್ಲಿ ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

‘ಜಲಮಂಡಳಿ ಕೇಂದ್ರ ಕಚೇರಿಯಲ್ಲಿ ಏರಿಯೇಟರ್ ಅಳವಡಿಸುವ ಕಾರ್ಯವನ್ನು ಪ್ರಾರಂಭಿಸಲಾಗಿದೆ. ಜಲಮಂಡಳಿಯ ಇತರೆ ಕಚೇರಿಗಳಲ್ಲಿ 2 ದಿನದಲ್ಲಿ ಏರಿಯೇಟರ್ ಅಳವಡಿಸಲು ಸೂಚಿಸಲಾಗಿದೆ’ ಎಂದರು.

ಮುಖ್ಯಾಂಶಗಳು

- ಸಾರ್ವಜನಿಕ ಸ್ಥಳದ ನಳಗಳಿಗೂ ಅನ್ವಯ
- ವಾಟರ್ ಟ್ಯಾಪ್ ಮಾಸ್ಕ್ ಬಳಕೆಯೂ ಕಡ್ಡಾಯ
- ಏರಿಯೇಟರ್ ದರ ₹ 60ರಿಂದ ಆರಂಭ

ಟ್ಯಾಂಕರ್ ಮಾಫಿಯಾ ಜತೆ ಕೈ ಜೋಡಿಸಿದ ಸರ್ಕಾರ –ಆರ್.ಅಶೋಕ ಟೀಕೆ

ಬೆಂಗಳೂರು: ‘ಬೆಂಗಳೂರು ನಗರದ ನೀರಿನ ಸಮಸ್ಯೆ ಬಗೆಹರಿಸಲು ಸಂಪೂರ್ಣ ವಿಫಲವಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಟ್ಯಾಂಕರ್ ಮಾಫಿಯಾಗೆ ಸಂಪೂರ್ಣ ಶರಣಾಗಿ, ಜನರ ಸುಲಿಗೆಯಲ್ಲಿ ಅವರೂ ಕೈ ಜೋಡಿಸಿದ್ದಾರೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.

‘ಪ್ರಜಾವಾಣಿ’ಯಲ್ಲಿ ಪ್ರಕಟವಾದ ‘ಸರ್ಕಾರಿ ದರಕ್ಕೆ ಸಿಗದ ಟ್ಯಾಂಕರ್ ನೀರು’ ವರದಿಯನ್ನು ಅಶೋಕ ಅವರು ‘ಎಕ್ಸ್’ ಮೂಲಕ ಹಂಚಿಕೊಂಡು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

‘ಗಡುವು ಮುಗಿದಿದ್ದರೂ ಸರ್ಕಾರದ ಆದೇಶಕ್ಕೆ ಕ್ಯಾರೇ ಅನ್ನದೆ ಅರ್ಧಕ್ಕರ್ಧದಷ್ಟು ಖಾಸಗಿ ಟ್ಯಾಂಕರ್‌ಗಳು ಇನ್ನೂ ನೋಂದಣಿಯೇ ಮಾಡಿಕೊಂಡಿಲ್ಲ. ಕಾಟಾಚಾರಕ್ಕೆ ನೋಂದಣಿ ಮಾಡಿಕೊಂಡಿರುವ ಟ್ಯಾಂಕರ್‌ಗಳು ಸರ್ಕಾರ ನಿಗದಿ ಮಾಡಿರುವ ದರಕ್ಕೆ ನೀರು ಕೊಡುತ್ತಿಲ್ಲ’ ಎಂದಿದ್ದಾರೆ.

‘ಇಷ್ಟೆಲ್ಲಾ ಗೊಂದಲಗಳಿಂದ ನೀರಿಲ್ಲದೆ ಬೆಂಗಳೂರಿನ ಜನತೆ ಪರದಾಡುತ್ತಿದ್ದರೆ, ಕಾಂಗ್ರೆಸ್ ಸರ್ಕಾರ ಮಾತ್ರ ಏನೂ ಆಗಿಲ್ಲ ಎಂಬಂತೆ ಜಾಣ ಕುರುಡು ಪ್ರದರ್ಶಿಸುತ್ತಿದೆ. ನೀರಿನ ಸಮಸ್ಯೆ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲ’ ಎಂದು ಹೇಳಿದ್ದಾರೆ.

‘ಸರ್ಕಾರಕ್ಕೆ ನಿಜವಾಗಲೂ ನೀರಿನ ಸಮಸ್ಯೆ ಬಗೆಹರಿಸುವ ಬದ್ಧತೆ ಇದ್ದರೆ ನೋಂದಣಿ ಮಾಡಿಕೊಳ್ಳದ, ಸರ್ಕಾರದ ನಿಯಮ ಪಾಲಿಸದ ಟ್ಯಾಂಕರ್‌ಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು. ಪ್ರತಿಯೊಂದು ವಾರ್ಡ್‌ನಲ್ಲೂ ಮಾರ್ಷಲ್‌ಗಳನ್ನು ನೇಮಿಸಿ ಟ್ಯಾಂಕರ್‌ಗಳ ಮೇಲೆ ನಿಗಾ ಇಡಬೇಕು’ ಎಂದೂ ತಿಳಿಸಿದ್ದಾರೆ.

‘ಈಗಿರುವ ಸಹಾಯವಾಣಿ ಜನರಿಗೆ ಸ್ಪಂದಿಸಲು ವಿಫಲವಾಗಿದ್ದು, ಸರ್ಕಾರ ಖಾಸಗಿ ಸಂಸ್ಥೆಗಳ ಸಹಾಯದಿಂದ ಒಂದು ವಾರ್ಡ್‌ಗೆ ಒಂದರಂತೆ ಕನಿಷ್ಠ 200 ದೂರವಾಣಿ ಲೈನ್‌ಗಳ ಸಂಪರ್ಕ ಹೊಂದಿರುವ ಕಾಲ್‌ಸೆಂಟರ್ ತೆರೆದು ಜನರ ಬೇಡಿಕೆಗೆ ಸ್ಪಂದಿಸುವ ಕೆಲಸ ಮಾಡಬೇಕು’ ಎಂದೂ ಸಲಹೆ ನೀಡಿದ್ದಾರೆ.

ಬೆಂ.ಗ್ರಾ: 2 ಕ್ಷೇತ್ರ ನಿರ್ಣಾಯಕ

ಬೆಂಗಳೂರು ದಕ್ಷಿಣ, ಆರ್‌.ಆರ್‌. ನಗರದ ಮೇಲೆ ಕಣ್ಣು

ಪ್ರಜಾವಾಣಿ ವಾರ್ತೆ

ಪ್ರಜಾ ಮತ ಜನತಂತ್ರದ ಹಬ್ಬ
ಲೋಕಸಭಾ ಚುನಾವಣೆ - 2024

ಬೆಂಗಳೂರು: ಚುನಾವಣಾ ಪ್ರಚಾರದ ಆರಂಭದಲ್ಲೇ ಜಿದ್ದಾಜಿದ್ದಿನ ಅಖಾಡಗಳಲ್ಲಿ ಪ್ರಮುಖವೆಂದು ಗುರುತಿಸಿಕೊಂಡಿರುವ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ‘ಫಲಿತಾಂಶ’ವನ್ನು ಬೆಂಗಳೂರು ದಕ್ಷಿಣ ಮತ್ತು ಆರ್‌ಆರ್ ನಗರ ವಿಧಾನಸಭಾ ಕ್ಷೇತ್ರಗಳು ನಿರ್ಣಯಿಸಲಿವೆ. ಏಕೆಂದರೆ, ಈ ಲೋಕಸಭಾ ಕ್ಷೇತ್ರದ ಒಟ್ಟು ಮತದಾರರಲ್ಲಿ ಶೇ 45ರಷ್ಟು ಈ ಎರಡೂ ಕ್ಷೇತ್ರಗಳಲ್ಲಿ ಇದ್ದಾರೆ.

ಹಾಲಿ ಸಂಸದ ಕಾಂಗ್ರೆಸ್‌ನ ಡಿ.ಕೆ. ಸುರೇಶ್ ಮತ್ತು ಬಿಜೆಪಿಯ ಡಾ.ಸಿ.ಎನ್. ಮಂಜುನಾಥ್ ಇಲ್ಲಿ ಮುಖಾಮುಖಿ ಆಗಿದ್ದಾರೆ. ಬೆಂಗಳೂರು ದಕ್ಷಿಣ ಮತ್ತು ಆರ್‌ಆರ್ ನಗರ ವಿಧಾನಸಭೆ ಕ್ಷೇತ್ರಗಳಲ್ಲಿ ಗಳಿಸುವ ಮತಗಳು ಅಭ್ಯರ್ಥಿಯ ಗೆಲುವಿಗೆ ನಿರ್ಣಾಯಕವಾಗಲಿದೆ ಎನ್ನುವುದು ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರ ಲೆಕ್ಕಾಚಾರ. ಹೀಗಾಗಿ, ಎರಡೂ ಪಕ್ಷಗಳು ಈ ಕ್ಷೇತ್ರಗಳಲ್ಲಿ ಮತದಾರರ ಓಲೈಕೆಗೆ ಈಗಲೇ ಪೈಪೋಟಿಗೆ ಬಿದ್ದಿವೆ.

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿರುವ ಒಟ್ಟು ಮತದಾರ ಸಂಖ್ಯೆ 27 ಲಕ್ಷ. ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರವೊಂದರಲ್ಲೇ ಸುಮಾರು ಏಳೂವರೆ ಲಕ್ಷ ಮತದಾರರು ಇದ್ದಾರೆ. ಆರ್‌ಆರ್ ನಗರ ಕ್ಷೇತ್ರದಲ್ಲಿ ನಾಲ್ಕೂವರೆ ಲಕ್ಷಕ್ಕೂ ಅಧಿಕ ಮತದಾರರಿದ್ದಾರೆ. ಎರಡೂ ಕ್ಷೇತ್ರಗಳ ಮತಗಳು ಸೇರಿದರೆ 12 ಲಕ್ಷ ಆಗಲಿದೆ. ಈ ಕಾರಣಕ್ಕೆ ಕಾಂಗ್ರೆಸ್ ಹಾಗೂ ಬಿಜೆಪಿ-ಜೆಡಿಎಸ್ ಮೈತ್ರಿ ಪಕ್ಷಗಳ ಕಣ್ಣು ಇತ್ತ ಬಿದ್ದಿದೆ.

ಲೋಕಸಭಾ ಕ್ಷೇತ್ರದಲ್ಲಿ ಎಂಟು (ಕನಕಪುರ, ಆರ್‌ಆರ್ ನಗರ, ಆನೇಕಲ್, ಕುಣಿಗಲ್, ರಾಮನಗರ, ಚನ್ನಪಟ್ಟಣ, ಮಾಗಡಿ, ಬೆಂಗಳೂರು ದಕ್ಷಿಣ) ವಿಧಾನಸಭಾ ಕ್ಷೇತ್ರಗಳಿವೆ. ಈ ಪೈಕಿ, ಈ ಎರಡೂ ವಿಧಾನಸಭಾ ಕ್ಷೇತ್ರಗಳು (ಆರ್‌ಆರ್ ನಗರ ಮತ್ತು ಬೆಂಗಳೂರು ದಕ್ಷಿಣ) ಬಿಜೆಪಿ ಹಿಡಿತದಲ್ಲಿವೆ. ವಿಧಾನಸಭೆ ಚುನಾವಣೆಯಲ್ಲಿ ಇಲ್ಲಿ ಎರಡೂ ಪಕ್ಷಗಳ ನಡುವೆ ತೀವ್ರ ಪೈಪೋಟಿ ನಡೆದಿತ್ತು. ಚನ್ನಪಟ್ಟಣ ಜೆಡಿಎಸ್ (ಎಚ್.ಡಿ. ಕುಮಾರಸ್ವಾಮಿ) ಕೈಯಲ್ಲಿದೆ. ತಮ್ಮದೇ ಕ್ಷೇತ್ರಗಳಲ್ಲಿ ಮತಗಳು ಬಂದೇ ಬರಲಿದೆ ಎಂಬ ಲೆಕ್ಕಾಚಾರ ಬಿಜೆಪಿ- ಜೆಡಿಎಸ್ ಮೈತ್ರಿ ಪಕ್ಷಗಳದ್ದು. ಆದರೆ, ಗ್ರಾಮಾಂತರದಲ್ಲಿ ಇತರ ಐದು ಕ್ಷೇತ್ರಗಳಲ್ಲಿ ತಮ್ಮದೇ ಪಕ್ಷಗಳ ಶಾಸಕರಿದ್ದರೂ ಬೆಂಗಳೂರು ದಕ್ಷಿಣ ಹಾಗೂ ಆರ್.ಆರ್. ನಗರ ಕ್ಷೇತ್ರದ ಮೇಲೆ ‘ಕೈ’ ಕಣ್ಣು.

ಆರ್‌ಆರ್ ನಗರ ಮತ್ತು ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರಗಳಲ್ಲಿ ಯಾರು ಹೆಚ್ಚು ಮತಗಳನ್ನು ಸೆಳೆಯುತ್ತಾರೋ ಅವರಿಗೆ ಗೆಲುವು ಎಂಬ ಮಾತು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಈಗಾಗಲೇ ಹರಡಿದೆ. ಈ ಕಾರಣಕ್ಕೆ ಈ ಕ್ಷೇತ್ರಗಳ ಮೇಲೆ ಇನ್ನಿಲ್ಲದ ಗಮನ ಕೇಂದ್ರೀಕರಿಸಿರುವ ಡಿ.ಕೆ. ಸಹೋದರರು, ತಮ್ಮದೇ ತಂತ್ರಗಾರಿಕೆ ರೂಪಿಸುತ್ತಿದ್ದಾರೆ ಎನ್ನುತ್ತವೆ ಕಾಂಗ್ರೆಸ್ ಮೂಲಗಳು.

ಮುಖ್ಯಾಂಶಗಳು

- ಈ ಎರಡೂ ಕ್ಷೇತ್ರಗಳಲ್ಲಿ ಲೋಕಸಭೆ ಕ್ಷೇತ್ರದ ಶೇ 45ರಷ್ಟು ಮತದಾರರು
- ಕಾಂಗ್ರೆಸ್‌ನ ಡಿ.ಕೆ.ಸುರೇಶ್, ಮೈತ್ರಿಪಕ್ಷದ ಡಾ.ಸಿ.ಎನ್. ಮಂಜುನಾಥ್ ಸ್ಪರ್ಧಿಗಳು
- ಮತದಾರರ ಓಲೈಕೆಗೆ ಪಕ್ಷಗಳಿಂದ ಭಿನ್ನ ತಂತ್ರಗಾರಿಕೆ

ಸಿಪಿಐ ವಿರುದ್ಧ ತರೂರ್ ವಾಗ್ದಾಳಿ

ನವದೆಹಲಿ (ಪಿಟಿಐ): ವಯನಾಡಿನಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಅಭ್ಯರ್ಥಿತನವನ್ನು ಪ್ರಶ್ನಿಸಿ ಮೈತ್ರಿ ಧರ್ಮದ ಬಗ್ಗೆ ಬೋಧನೆ ಮಾಡುವ ಎಡಪಕ್ಷಗಳು ತಿರುವನಂತಪುರದಲ್ಲಿ ‘ಬಿಜೆಪಿಯ ಆಟವಾಡುತ್ತಿರುವುದು’ ವಿಪರ್ಯಾಸ ಎಂದು ಕಾಂಗ್ರೆಸ್‌ನ ನಾಯಕ ಶಶಿ ತರೂರ್ ಮಂಗಳವಾರ ಸಿಪಿಐ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

‘ನನ್ನ ವಿರುದ್ಧ ಕ್ಷೇತ್ರದಲ್ಲಿ ಸಿಪಿಐ ನಡೆಸಿದ ಪ್ರಚಾರದ ಏಕೈಕ ಪರಿಣಾಮ ಎಂದರೆ, ಬಿಜೆಪಿ ವಿರೋಧಿ ಮತಗಳನ್ನು ವಿಭಜಿಸುವುದಾಗಿದೆ’ ಎಂದು ತಿರುವನಂತಪುರದ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಶಶಿ ತರೂರ್ ದೂರಿದ್ದು, ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ತಿರುವನಂತಪುರದಲ್ಲಿ ತರೂರ್, ಅವರ ಎದುರು ಬಿಜೆಪಿಯ, ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಸ್ಪರ್ಧಿಸಲಿದ್ದಾರೆ. ಅಲ್ಲದೆ ಸಿಪಿಐ ಪಕ್ಷವು ಪನ್ನಿಯನ್ ರವೀಂದ್ರನ್ ಅವರನ್ನು ಅಭ್ಯರ್ಥಿಯಾಗಿ ಘೋಷಿಸಿದೆ.

ಶಸ್ತ್ರಾಸ್ತ್ರ ಠೇವಣಿಗೆ ಗಡುವು: ಕೆಲವರಿಗೆ ವಿನಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಪರವಾನಗಿ ಶಸ್ತ್ರಾಸ್ತ್ರಗಳನ್ನು ಠಾಣೆಗಳಲ್ಲಿ ಠೇವಣಿ ಇರಿಸಲು ಮಾರ್ಚ್ 25ರವರೆಗೆ ಅವಕಾಶವಿದೆ’ ಎಂದು ಪೊಲೀಸ್ ಕಮಿಷನರ್ ಬಿ. ದಯಾನಂದ್ ತಿಳಿಸಿದರು.

ನಗರದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನೀತಿ ಸಂಹಿತೆ ಜಾರಿಯಲ್ಲಿರುವ ಸಂದರ್ಭದಲ್ಲಿ ಶಸ್ತ್ರಾಸ್ತ್ರ ಇಟ್ಟುಕೊಳ್ಳಲು ಅವಕಾಶವಿಲ್ಲ. ಶಸ್ತ್ರಾಸ್ತ್ರಗಳನ್ನು ಠೇವಣಿ ಇರಿಸದಿದ್ದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ಎಚ್ಚರಿಸಿದ್ದಾರೆ.

‘ಕೇಂದ್ರ ಮತ್ತು ರಾಜ್ಯ ಸರ್ಕಾರದ ಇಲಾಖೆಗಳು, ಅಧಿಕಾರಿಗಳು, ಬ್ಯಾಂಕ್ ಹಾಗೂ ಭದ್ರತಾ ಏಜೆನ್ಸಿಗಳು, ಶೂಟಿಂಗ್ ಕ್ರೀಡಾಪಟುಗಳು, ನ್ಯಾಷನಲ್ ರೈಫಲ್ ಅಸೋಸಿಯೇಷನ್ ಸದಸ್ಯರು ಹಾಗೂ ಕೊಡವ ಸಮಾಜದವರಿಗೆ ಶಸ್ತ್ರಾಸ್ತ್ರ ಠೇವಣಿಯಿಂದ ವಿನಾಯಿತಿ ಇದೆ’ ಎಂದರು.

‘ಯಾರಿಗಾದರೂ ವಿನಾಯಿತಿ ಬೇಕಾದರೆ, ಪರಿಶೀಲನಾ ಸಮಿತಿಗೆ ಮನವಿ ಸಲ್ಲಿಸಬಹುದು. ಅವರು ಮನವಿ ಪರಿಶೀಲಿಸಿ ಕ್ರಮ ಕೈಗೊಳ್ಳಲಿದ್ದಾರೆ’ ಎಂದು ದಯಾನಂದ್ ಹೇಳಿದರು.

102 ಚೆಕ್‌ಪೋಸ್ಟ್: ‘ಚುನಾವಣೆ ಅಕ್ರಮಗಳನ್ನು ತಡೆಯಲು ಹಾಗೂ ವಾಹನಗಳ ತಪಾಸಣೆಗೆಂದು ನಗರದ 102 ಕಡೆಗಳಲ್ಲಿ ಚೆಕ್‌ಪೋಸ್ಟ್ ನಿರ್ಮಿಸಲಾಗಿದೆ’ ಎಂದು ದಯಾನಂದ್ ತಿಳಿಸಿದರು.

‘ನಾನು ಸ್ಟ್ರಾಂಗ್ ಸಿ.ಎಂ, ನಿಮ್ಮಂತೆ ವೀಕ್ ಪಿ.ಎಂ ಅಲ್ಲ’

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಬೆಂಗಳೂರು: ‘ಕಾಂಗ್ರೆಸ್‌ನಲ್ಲಿ ಸೂಪರ್ ಸಿಎಂ, ಶ್ಯಾಡೋ ಸಿಎಂ ಇದ್ದಾರೆಂದು ಶಿವಮೊಗ್ಗದಲ್ಲಿ ನಡೆದ ನಿಮ್ಮ ಪಕ್ಷದ ಸಭೆಯಲ್ಲಿ ಗೇಲಿ ಮಾಡಿದ್ದೀರಿ. ನಮ್ಮಲ್ಲಿ ಸೂಪರ್ರೂ ಇಲ್ಲ, ಶ್ಯಾಡೋನೂ ಇಲ್ಲ; ಇರುವುದು ಒಬ್ಬರೇ ಸಿಎಂ. ಅದು ‘ಸ್ಟ್ರಾಂಗ್ ಸಿಎಂ’. ನಿಮ್ಮ ಹಾಗೆ ‘ವೀಕ್ ಪಿಎಂ’ ಅಲ್ಲ’ ಎಂದು ಪ್ರಧಾನಿ ನರೇಂದ್ರ ಮೋದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಕೆಣಕಿದ್ದಾರೆ.

‘ನಿಮ್ಮನ್ನು ನೀವು 56 ಇಂಚಿನ ಎದೆಯುಳ್ಳವನು ಎಂದು ಬಣ್ಣಿಸಿಕೊಳ್ಳುತ್ತೀರಿ. ನಿಮ್ಮ ಅಭಿಮಾನಿಗಳು ನಿಮ್ಮನ್ನು ವಿಶ್ವಗುರು ಎಂದು ಕೊಂಡಾಡುತ್ತಾರೆ. ಆದರೆ ನೀವೊಬ್ಬ ‘ವೀಕ್ ಪಿಎಂ’ ಎಂದು ಮತ್ತೆ ತೋರಿಸಿಕೊಡುತ್ತಿದ್ದೀರಿ. ಯಡಿಯೂರಪ್ಪನವರು ನಿಮ್ಮ ನಾಯಕತ್ವದ ವಿರುದ್ಧವೇ ಹಿಂದೊಮ್ಮೆ ಬಂಡಾಯ ಎದ್ದವರು. ಅಂಥವರ ಕಾಲಿಗೆ ಬಿದ್ದು ಮತ್ತೆ ಪಕ್ಷಕ್ಕೆ ಕರೆತಂದು ಮೆರವಣಿಗೆ ಮಾಡುವ ಮೂಲಕ ನೀವೊಬ್ಬ ‘ವೀಕ್ ಪಿಎಂ’ ಎಂದು ತೋರಿಸಿಕೊಟ್ಟಂತಾಗಲಿಲ್ಲವೇ’ ಎಂದು ವ್ಯಂಗ್ಯವಾಡಿದ್ದಾರೆ.

‘ಕರ್ನಾಟಕದಲ್ಲಿ ನಿಮ್ಮ ನಾಯಕತ್ವದ ವಿರುದ್ಧ ಅರ್ಧ ಡಜನ್ ನಾಯಕರು ಬಂಡೆದ್ದಿದ್ದಾರೆ. ಟಿಕೆಟ್ ಪಡೆಯಲು ಅಸಮರ್ಥರಾದ ನಿಮ್ಮ ಪಕ್ಷದ ನಾಯಕರು ಹಾದಿ ಬೀದಿಯಲ್ಲಿ ಹೊಡೆದಾಡಿಕೊಳ್ಳುತ್ತಿದ್ದಾರೆ. ಅವರಲ್ಲಿ ಕೆಲವರು ನಮ್ಮನ್ನೂ ಸಂಪರ್ಕಿಸುತ್ತಿದ್ದಾರೆ. ಶಿಸ್ತಿನ ಪಕ್ಷದಲ್ಲಿ ಇದೆಂಥ ಅಶಿಸ್ತಿನ ತಾಂಡವ. ಇದಕ್ಕೆಲ್ಲ ಕಾರಣ ನೀವೊಬ್ಬ ‘ವೀಕ್ ಪಿಎಂ’ ಆಗಿರುವುದಲ್ಲವೇ’ ಎಂದು ಪ್ರಶ್ನಿಸಿದ್ದಾರೆ.

‘ನೀವು ಸಭೆ ನಡೆಸುತ್ತಿದ್ದಾಗ ಬಂಡುಕೋರ ನಾಯಕ ಈಶ್ವರಪ್ಪನವರು ಕೂಗಳತೆ ದೂರದ ತಮ್ಮ ಮನೆಯಲ್ಲಿದ್ದರೂ ಗೈರಾಗಿದ್ದರು. ನಮ್ಮದು ಆಂತರಿಕ ಪ್ರಜಾಪ್ರಭುತ್ವ ಇರುವ ಪಕ್ಷ, ಮುಖ್ಯಮಂತ್ರಿ ಸ್ಥಾನಕ್ಕೆ ಅರ್ಹರಾದವರು ಹಲವು ಮಂದಿ ಇದ್ದಾರೆ. ನಿಮ್ಮ ಪಕ್ಷದ ಕತೆ ಏನು? ವಿಶ್ವದಲ್ಲಿಯೇ ಅತ್ಯಂತ ಹೆಚ್ಚು ಸದಸ್ಯರನ್ನು ಹೊಂದಿದ್ದೇವೆ ಎಂದು ಕೊಚ್ಚಿಕೊಳ್ಳುತ್ತಿರುವ ನಿಮ್ಮ ಪಕ್ಷದಲ್ಲಿ ಪಿಎಂ ಆಗುವ ಅರ್ಹತೆ ಇರುವ ಒಬ್ಬ ನಾಯಕನೂ ಇಲ್ಲವಲ್ಲ. ಕುರ್ಚಿ ಕಳೆದುಕೊಳ್ಳುವ ಭಯದಿಂದ ಅಂತಹ ನಾಯಕರನ್ನು ಬೆಳೆಯಲು ನೀವೇ ಬಿಡುತ್ತಿಲ್ಲವೇ’ ಎಂದೂ ಕೇಳಿದ್ದಾರೆ.

11 ಮಹಿಳೆಯರ ಸರಗಳವು: ಇಬ್ಬರು ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 11 ಕಡೆಗಳಲ್ಲಿ ಮಹಿಳೆಯರ ಸರಗಳವು ಮಾಡಿದ್ದ ಇಬ್ಬರು ಆರೋಪಿಗಳನ್ನು ಸುಬ್ರಹ್ಮಣ್ಯಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಲಗ್ಗೆರೆಯ ಎಂ.ಶಶಿಧರ್ (37) ಹಾಗೂ ನೆಲಗೆದರನಹಳ್ಳಿಯ ಕೆ.ಅಭಿಷೇಕ್ (22) ಬಂಧಿತರು. ಇವರಿಂದ ₹ 22.50 ಲಕ್ಷ ಮೌಲ್ಯದ 365 ಗ್ರಾಂ ಚಿನ್ನಾಭರಣ ಹಾಗೂ ಬೈಕ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಫೆ.15ರಂದು ರಾತ್ರಿ ಅಂಗಡಿಯಿಂದ ಮನೆಗೆ ಹೊರಟಿದ್ದ ಮಹಿಳೆಯನ್ನು ಹಿಂಬಾಲಿಸಿದ್ದ ಆರೋಪಿಗಳು, ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದರು. ಈ ಸಂಬಂಧ ಪ್ರಕರಣ ದಾಖಲಾಗಿತ್ತು’ ಎಂದರು.

ನಕಲಿ ನೋಂದಣಿ ಸಂಖ್ಯೆ ಫಲಕ: ‘ಕೆಂಗೇರಿ ಬಳಿ ಬೈಕ್ ಕಳ್ಳತನ ಮಾಡಿದ್ದ ಆರೋಪಿಗಳು, ಅದಕ್ಕೆ ನಕಲಿ ನೋಂದಣಿ ಸಂಖ್ಯೆ ಫಲಕ ಅಳವಡಿಸಿದ್ದರು. ಅದೇ ಬೈಕ್‌ನಲ್ಲಿ ಸುತ್ತಾಡಿ ಕಳ್ಳತನ ಮಾಡುತ್ತಿದ್ದರು. ಇತ್ತೀಚೆಗೆ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ತಪ್ಪೊಪ್ಪಿಕೊಂಡರು’ ಎಂದು ಪೊಲೀಸರು ತಿಳಿಸಿದರು.

‘ರಾತ್ರಿ ಸಮಯದಲ್ಲಿ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಮಹಿಳೆಯರನ್ನು ಹಿಂಬಾಲಿಸುತ್ತಿದ್ದ ಆರೋಪಿಗಳು, ಚಿನ್ನದ ಸರ ಕಿತ್ತುಕೊಂಡು ಬೈಕ್‌ನಲ್ಲಿ ಪರಾರಿಯಾಗುತ್ತಿದ್ದರು. ಬೆಂಗಳೂರು ನಗರ ಹಾಗೂ ಗ್ರಾಮಾಂತರ ವ್ಯಾಪ್ತಿಯಲ್ಲಿ ಆರೋಪಿಗಳು ಚಿನ್ನದ ಸರ ಕಳ್ಳತನ ಮಾಡಿದ್ದರು. ಜೊತೆಗೆ, ಮನೆಯೊಂದರಲ್ಲಿ ನಡೆದಿದ್ದ ಕಳ್ಳತನ ಪ್ರಕರಣದಲ್ಲೂ ಭಾಗಿಯಾಗಿದ್ದರು’ ಎಂದು ಹೇಳಿದರು.

ಗುಂಡೇಟು ಬಿದ್ದಿದ್ದ ಆರೋಪಿ ಸಾವು

ಕೊಡಿಗೇಹಳ್ಳಿಯಲ್ಲಿ ಆಭರಣ ಮಳಿಗೆ ದರೋಡೆಗೆ ಯತ್ನ • ಗ್ವಾಲಿಯರ್‌ನಲ್ಲಿ ಆರೋಪಿಗಳ ಸೆರೆ

ಪ್ರಜಾವಾಣಿ ವಾರ್ತೆ



ಆರೋಪಿಗಳಿಂದ ಜಪ್ತಿ ಮಾಡಿರುವ ನಾಡ ಪಿಸ್ತೂಲ್ ಹಾಗೂ ಗುಂಡುಗಳು



ಸೂರಜ್ ಪ್ರದೀಪ್ ಶರ್ಮಾ ಆಶು ಶರ್ಮಾ ಖಾನಾ ಶರ್ಮಾ

ಅಪರಾಧ ಸುದ್ದಿ

ಬೆಂಗಳೂರು: ಕೊಡಿಗೇಹಳ್ಳಿಯ ದೇವಿನಗರದಲ್ಲಿರುವ ಲಕ್ಷ್ಮಿ ಬ್ಯಾಂಕರ್ಸ್ ಆ್ಯಂಡ್ ಜ್ಯುವೆಲರ್ಸ್ ಮಳಿಗೆಗೆ ದರೋಡೆಗೆಂದು ನುಗ್ಗಿದ್ದ ಸಂದರ್ಭದಲ್ಲಿ ಕುತ್ತಿಗೆಗೆ ಗುಂಡೇಟು ತಗುಲಿ ಗಾಯಗೊಂಡಿದ್ದ ಆರೋಪಿ ಸೂರಜ್ (30) ಮಧ್ಯಪ್ರದೇಶದ ಗ್ವಾಲಿಯರ್‌ನ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

‘ಮಾರ್ಚ್ 14ರಂದು ಬೆಳಿಗ್ಗೆ ನಡೆದಿದ್ದ ದರೋಡೆ ಯತ್ನ ಪ್ರಕರಣದ ತನಿಖೆ ನಡೆಸಿದ್ದ ಈಶಾನ್ಯ ವಿಭಾಗದ ಪೊಲೀಸರು, ಮಧ್ಯಪ್ರದೇಶದಲ್ಲಿ ನಾಲ್ವರು ಆರೋಪಿಗಳನ್ನು ಇತ್ತೀಚೆಗೆ ಬಂಧಿಸಿದ್ದರು. ಆರೋಪಿಗಳ ಪೈಕಿ ಒಬ್ಬನಾದ ಸೂರಜ್, ಆಸ್ಪತ್ರೆಯಲ್ಲಿ ಅಸುನೀಗಿದ್ದಾನೆ. ಉಳಿದ ಮೂವರು ಆರೋಪಿಗಳನ್ನು ವಿಚಾರಣೆಗಾಗಿ ಪೊಲೀಸ್ ಕಸ್ಟಡಿಗೆ ಪಡೆಯಲಾಗಿದೆ’ ಎಂದು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸಂಚು ರೂಪಿಸಿ, ಬೈಕ್ ಕದ್ದು ಕೃತ್ಯ: ‘ಮಧ್ಯಪ್ರದೇಶದ ಪ್ರದೀಪ್ ಶರ್ಮಾ (37), ಅಶು ಶರ್ಮಾ (27) ಹಾಗೂ ಖಾನಾ ಶರ್ಮಾನನ್ನು (23) ಬಂಧಿಸಲಾಗಿದೆ. ಇನ್ನೊಬ್ಬ ಆರೋಪಿ ವಿಕಾಸ್ ಪಂಡಿತ್ (32) ತಲೆಮರೆಸಿಕೊಂಡಿದ್ದಾನೆ’ ಎಂದು ಈಶಾನ್ಯ ವಿಭಾಗದ ಡಿಸಿಪಿ ಬಿ.ಎಂ. ಲಕ್ಷ್ಮಿಪ್ರಸಾದ್ ತಿಳಿಸಿದರು.

‘ಆರೋಪಿ ಪ್ರದೀಪ್ ಶರ್ಮಾ, ಹಲವು ತಿಂಗಳ ಹಿಂದೆಯೇ ನಗರಕ್ಕೆ ಬಂದಿದ್ದ. ಟೈಲ್ಸ್ ಜೋಡಣೆ ಕೆಲಸ ಮಾಡಿಕೊಂಡಿದ್ದ. ಲಕ್ಷ್ಮಿ ಬ್ಯಾಂಕರ್ಸ್ ಆ್ಯಂಡ್ ಜ್ಯುವೆಲರ್ಸ್ ಮಳಿಗೆ ಬಗ್ಗೆ ಈತನೇ ಮಾಹಿತಿ ಕಲೆಹಾಕಿದ್ದ. 12ಕ್ಕೂ ಹೆಚ್ಚು ದರೋಡೆ ಪ್ರಕರಣದಲ್ಲಿ ಭಾಗಿಯಾಗಿದ್ದ ಆರೋಪಿ ಖಾನಾ ಶರ್ಮಾಗೆ ವಿಷಯ ತಿಳಿಸಿ, ದರೋಡೆಗೆ ಸಂಚು ರೂಪಿಸಿದ್ದ’ ಎಂದು ಹೇಳಿದರು.

‘ಕೃತ್ಯಕ್ಕೂ ಎರಡು ದಿನ ಮುನ್ನ ನಗರಕ್ಕೆ ಬಂದಿದ್ದ ಖಾನಾ ಹಾಗೂ ಇತರರು, ಪ್ರದೀಪ್ ಮನೆಯಲ್ಲಿ ಉಳಿದುಕೊಂಡಿದ್ದರು. ವಿದ್ಯಾರಣ್ಯಪುರ ಹಾಗೂ ಎಚ್‌ಎಸ್‌ಆರ್ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಎರಡು ಬೈಕ್ ಕದ್ದಿದ್ದರು’ ಎಂದು ತಿಳಿಸಿದರು.

ಜಟಾಪಟಿಯಲ್ಲಿ ಕುತ್ತಿಗೆಗೆ ಗುಂಡೇಟು: ‘ಕದ್ದ ಬೈಕ್‌ಗಳಲ್ಲಿ ಮಳಿಗೆ ಬಳಿ ಬಂದಿದ್ದ ನಾಲ್ವರು ಆರೋಪಿಗಳು ಒಳಗೆ ನುಗ್ಗಿದ್ದರು. ಮಳಿಗೆ ಮಾಲೀಕ, ಅವರ ಅಕ್ಕನ ಮಗ ಹಾಗೂ ಕೆಲಸಗಾರ ಮಳಿಗೆಯಲ್ಲಿದ್ದರು. ಆರೋಪಿಗಳು ಹಾಗೂ ಮಳಿಗೆಯಲ್ಲಿದ್ದವರ ನಡುವೆ ಜಟಾಪಟಿ ನಡೆದಿತ್ತು. ಎಲ್ಲರೂ ಪರಸ್ಪರ ಕೈ ಕೈ ಮಿಲಾಯಿಸಿದ್ದರು’ ಎಂದು ಡಿಸಿಪಿ ತಿಳಿಸಿದರು.

‘ಆರೋಪಿಗಳು ಪಿಸ್ತೂಲ್ ತೋರಿಸಿ ಬೆದರಿಸಿದ್ದರು. ಜಟಾಪಟಿ ಸಂದರ್ಭದಲ್ಲಿ ಮೂರು ಸುತ್ತು ಗುಂಡು ಹಾರಿದ್ದವು. ಅದರಲ್ಲಿ ಒಂದು ಗುಂಡು ಆರೋಪಿ ಸೂರಜ್‌ನ ಕುತ್ತಿಗೆಗೆ ಬಿದ್ದಿತ್ತು. ಉಳಿದ ಎರಡು ಗುಂಡುಗಳು ಮಾಲೀಕ ಹಾಗೂ ಅವರ ಅಕ್ಕನ ಮಗನಿಗೆ ತಗುಲಿತ್ತು’ ಎಂದು ಹೇಳಿದರು.

‘ಯಾರಿಗೆ ಯಾರು ಗುಂಡು ಹೊಡೆದರು ಎಂಬ ಮಾಹಿತಿ ಸದ್ಯಕ್ಕೆ ಗೊತ್ತಾಗಿಲ್ಲ. ಮಳಿಗೆ ಮಾಲೀಕ ಹಾಗೂ ಅಕ್ಕನ ಮಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದು ತಿಳಿಸಿದರು.

ಸೈರನ್ ಹಾಕಿದ್ದ ಮಾಲೀಕ: ‘ಸೂರಜ್‌ಗೆ ಗುಂಡು ತಗುಲುತ್ತಿದ್ದಂತೆ ಆರೋಪಿಗಳು ಹೆದರಿದ್ದರು. ಮಳಿಗೆ ಮಾಲೀಕ ಸಹ ಸೈರನ್ ಹಾಕಿದ್ದರು. ಸಿಕ್ಕಿಬೀಳುವ ಭಯದಲ್ಲಿ ಆರೋಪಿಗಳು ಯಾವುದೇ ಚಿನ್ನಾಭರಣ ದೋಚದೇ ಸ್ಥಳದಿಂದ ಪರಾರಿಯಾಗಿದ್ದರು. ಬೈಕ್‌ನಲ್ಲಿ ಗೊರಗುಂಟೆಪಾಳ್ಯದ ಕಡೆಗೆ ಹೋಗಿದ್ದರು. ಸ್ಥಳೀಯ ವ್ಯಕ್ತಿಯೊಬ್ಬರು ಬೈಕ್‌ನಲ್ಲಿ ಅವರನ್ನು ಹಿಂಬಾಲಿಸಿದ್ದರು. ಆದರೆ, ಆರೋಪಿಗಳ ಸುಳಿವು ಸಿಕ್ಕಿರಲಿಲ್ಲ’ ಎಂದು ಹೇಳಿದರು.

ಬೆರಳಚ್ಚು ಸುಳಿವು, ನಿಲ್ದಾಣದಲ್ಲಿ ಸೆರೆ: ‘ಕುತ್ತಿಗೆಗೆ ಗುಂಡು ತಗುಲಿ ಗಾಯಗೊಂಡಿದ್ದ ಸೂರಜ್, ಯಾವುದೇ ಚಿಕಿತ್ಸೆ ಪಡೆದಿರಲಿಲ್ಲ. ಕುತ್ತಿಗೆಯಿಂದ ರಕ್ತ ಸೋರುತ್ತಿತ್ತು. ಕುತ್ತಿಗೆಗೆ ಬಟ್ಟೆ ಕಟ್ಟಿಕೊಂಡು, ಇತರೆ ಆರೋಪಿಗಳ ಜೊತೆ ಬಸ್‌ನಲ್ಲಿ ಅನಂತಪುರಕ್ಕೆ ಹೋಗಿದ್ದ. ಅಲ್ಲಿಂದ, ಎಲ್ಲರೂ ಕರ್ನಾಟಕ ಎಕ್ಸ್‌ಪ್ರೆಸ್ ರೈಲು ಹತ್ತಿ ಗ್ವಾಲಿಯರ್ ಕಡೆಗೆ ಹೊರಟಿದ್ದರು’ ಎಂದು ಲಕ್ಷ್ಮಿ ಪ್ರಸಾದ್ ಮಾಹಿತಿ ನೀಡಿದರು.

‘ಘಟನಾ ಸ್ಥಳದಲ್ಲಿ ಆರೋಪಿಗಳ ಬೆರಳಚ್ಚು ಸಂಗ್ರಹಿಸಲಾಗಿತ್ತು. ರಾಷ್ಟ್ರಮಟ್ಟದ ಹಳೇ ಪ್ರಕರಣಗಳ ಆರೋಪಿಗಳ ಬೆರಳಚ್ಚಿನ ಜೊತೆ ಹೋಲಿಕೆ ಮಾಡಿದಾಗ, ಪ್ರಮುಖ ಆರೋಪಿ ಖಾನಾ ಶರ್ಮಾ ಮಾಹಿತಿ ಲಭ್ಯವಾಗಿತ್ತು. ನಂತರ, ಈತನ ಸಹಚರರ ಪಟ್ಟಿ ಸಿದ್ಧಪಡಿಸಿ ಮಾಹಿತಿ ಕಲೆಹಾಕಲಾಗಿತ್ತು. ಆರೋಪಿಗಳು ರೈಲಿನಲ್ಲಿ ಹೊರಟಿದ್ದ ಸಂಗತಿ ಗೊತ್ತಾಗಿತ್ತು.’

‘ಆರೋಪಿಗಳು ಹೋಗುವುದಕ್ಕೂ ಮುನ್ನವೇ ವಿಶೇಷ ತಂಡದ ಪೊಲೀಸರು, ಗ್ವಾಲಿಯರ್ ರೈಲು ನಿಲ್ದಾಣ ತಲುಪಿದ್ದರು. ಸ್ಥಳೀಯ ಪೊಲೀಸರ ನೆರವಿನಿಂದ, ನಿಲ್ದಾಣದಲ್ಲಿಯೇ ನಾಲ್ವರು ಆರೋಪಿಗಳನ್ನು ವಶಕ್ಕೆ ಪಡೆದಿದ್ದರು. ಗಾಯಗೊಂಡಿದ್ದ ಸೂರಜ್, ಸ್ಪಷ್ಟವಾಗಿ ಮಾತನಾಡುತ್ತಿದ್ದ. ಆತನ ಕುತ್ತಿಗೆಯಿಂದ ರಕ್ತ ಸೋರುತ್ತಿದ್ದುದನ್ನು ನೋಡಿದ್ದ ಪೊಲೀಸರು, ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದರು’ ಎಂದರು.

‘ಮಧ್ಯಪ್ರದೇಶದಲ್ಲಿ ತಯಾರಿಸಿದ್ದ ನಾಡ ಪಿಸ್ತೂಲ್‌ಗಳನ್ನು ₹2 ಸಾವಿರದಿಂದ ₹5 ಸಾವಿರಕ್ಕೆ ಆರೋಪಿಗಳು ಖರೀದಿಸಿದ್ದರು. ಅವುಗಳನ್ನೇ ಕೃತ್ಯಕ್ಕೆ ಬಳಕೆ ಮಾಡಿದ್ದರು. ಆರೋಪಿಗಳಿಂದ 3 ಪಿಸ್ತೂಲ್‌ಗಳು, 12 ಗುಂಡುಗಳು ಹಾಗೂ 2 ಮೊಬೈಲ್ ಜಪ್ತಿ ಮಾಡಲಾಗಿದೆ’ ಎಂದರು.

‘₹ 2 ಲಕ್ಷ ನಗದು ಬಹುಮಾನ’

‘ದರೋಡೆ ಯತ್ನ ಪ್ರಕರಣ ಭೇದಿಸುವಲ್ಲಿ ಯಶಸ್ವಿಯಾಗಿರುವ ಈಶಾನ್ಯ ವಿಭಾಗದ ಪೊಲೀಸರ ತಂಡಕ್ಕೆ ₹1 ಲಕ್ಷ ಹಾಗೂ ತನಿಖೆಗೆ ಸಹಕರಿಸಿದ್ದ ಮಧ್ಯಪ್ರದೇಶದ ಪೊಲೀಸರ ತಂಡಕ್ಕೆ ₹ 1 ಲಕ್ಷ ನಗದು ಬಹುಮಾನ ಘೋಷಿಸಲಾಗಿದೆ’ ಎಂದು ಬಿ. ದಯಾನಂದ್ ಹೇಳಿದರು.

‘ಎರಡೂ ರಾಜ್ಯಗಳ ಪೊಲೀಸರ ಕಾರ್ಯಾಚರಣೆಯಿಂದ ಆರೋಪಿಗಳು ಸಿಕ್ಕಿಬಿದ್ದಿದ್ದಾರೆ. ಹೀಗಾಗಿ, ಎರಡೂ ರಾಜ್ಯಗಳಿಗೂ ಬಹುಮಾನ ನೀಡಲಾಗುತ್ತಿದೆ. ಮುಂಬರುವ ಪಥಸಂಚಲನದಲ್ಲಿ ಮಧ್ಯಪ್ರದೇಶ ಪೊಲೀಸರನ್ನ ಆಹ್ವಾನಿಸಿ ಬಹುಮಾನ ವಿತರಿಸಲಾಗುವುದು’ ಎಂದು ತಿಳಿಸಿದರು.

ಅಂಚೆ ಮತದಾನಕ್ಕೆ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ 12 ವಿವಿಧ ಇಲಾಖೆಗಳ ಅಗತ್ಯ ಸೇವೆಗಳ ಗೈರು ಮತದಾರರಿಗೆ (ಎವಿಇಎಸ್) ಅಂಚೆ ಮತದಾನದ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಬಿಬಿಎಂಪಿ ಚುನಾವಣಾ ವಿಭಾಗದ ವಿಶೇಷ ಆಯುಕ್ತ ಸೆಲ್ವಮಣಿ ಹೇಳಿದರು.

ಚುನಾವಣಾ ಆಯೋಗ 12 ವಿವಿಧ ಇಲಾಖೆಗಳನ್ನು ಅಗತ್ಯ ಸೇವೆಗಳೆಂದು ಪರಿಗಣಿಸಿದ್ದು, ಇಲಾಖಾವಾರು ನೀಡುವ ಪಟ್ಟಿಯನುಸಾರ ಅಂಚೆ ಮೂಲಕ ಮತ ಚಲಾಯಿಸಲು ಅವಕಾಶ ಕಲ್ಪಿಸಲಾಗುವುದು ಎಂದು ತಿಳಿಸಿದರು.

ಮತದಾರರ ಅರ್ಹ ಮತದಾರರ ಪಟ್ಟಿ ನೀಡಿದ ನಂತರ 12ಡಿ ನಮೂನೆಗಳಲ್ಲಿ ಭರ್ತಿ ಮಾಡಿ, ಮಾರ್ಚ್ 22ರೊಳಗೆ ಸಲ್ಲಿಸಬೇಕು. ಅರ್ಹ ಮತದಾರರು ನೋಂದಣಿಯಾಗಿರುವ ಲೋಕಸಭಾ ಕ್ಷೇತ್ರದಲ್ಲಿ ಸ್ಥಾಪಿಸಲಾದ ಪೋಸ್ಟಲ್ ವೋಟಿಂಗ್ ಸೆಂಟರ್(ಪಿವಿಸಿ)ನಲ್ಲಿ ಮಾತ್ರ ಈ ಬಾರಿ ಅಂಚೆ ಮತದಾನ ಮಾಡಲು ಅವಕಾಶವಿದೆ. ಅಂಚೆ ಮೂಲಕ ಅಂಚೆ ಮತದಾನ ಪತ್ರ ನೀಡುವ/ ತಲುಪಿಸುವ ವ್ಯವಸ್ಥೆ ಈ ಬಾರಿ ಇರುವುದಿಲ್ಲ ಎಂದು ಹೇಳಿದರು.

ಅಗತ್ಯ ಸೇವೆಗಳ 12 ಇಲಾಖೆಗಳು: ವಿದ್ಯುತ್, ಬಿಎಸ್‌ಎನ್‌ಎಲ್, ರೈಲ್ವೆ, ದೂರದರ್ಶನ, ಆಲ್ ಇಂಡಿಯಾ ರೇಡಿಯೊ, ಆರೋಗ್ಯ ಇಲಾಖೆ, ವಾಯುಪಡೆ, ಬಸ್ ಸೇವೆಗಳು (ಕೆಎಸ್‌ಆರ್‌ಟಿಸಿ/ಬಿಎಂಟಿಸಿ), ಅಗ್ನಿಶಾಮಕ ಸೇವೆ, ಭಾರತ ಚುನಾವಣಾ ಆಯೋಗದಿಂದ ಮತದಾನದ ದಿನದಂದು ಚುನಾವಣಾ ವರದಿಗಾಗಿ ಅಧಿಕೃತಗೊಂಡ ಮಾಧ್ಯಮ ವ್ಯಕ್ತಿಗಳು, ಸಂಚಾರ ಪೊಲೀಸರು, ಆಂಬ್ಯುಲೆನ್ಸ್ ಸೇವೆ.

ತಂತ್ರಜ್ಞಾನ



ಬೆನ್ನುನೋವಿನ ಅಳತೆಗೊಂದು ಮಾಪಕ

ಅಮೃತೇಶ್ವರಿ ಬಿ.

ದೂರದರ್ಶನಗಳಲ್ಲಿ ಬೆನ್ನುನೋವಿನ ಉಪಶಮನಕ್ಕಾಗಿ ಹಲವಾರು ಮುಲಾಮು, ಸ್ಪ್ರೇ, ಅಥವಾ ಪುಡಿಗಳ ಜಾಹೀರಾತನ್ನು ನೀವೆಲ್ಲಾ ನೋಡಿರುತ್ತೀರಿ. ಮೂವತ್ತರ ದಶಕವನ್ನು ತಲುಪುತ್ತಿದ್ದಂತೆಯೇ ಅಥವಾ ಹೆಂಗಸರಾದರೆ ಮಕ್ಕಳಾಗುತ್ತಿದ್ದಂತೆಯೇ ಬೆನ್ನುನೋವು, ಸೊಂಟನೋವು ಸರ್ವೇಸಾಮಾನ್ಯ ಈಗ. ಈ ನೋವಿನ ಉಪಶಮನಕ್ಕೆಂದೇ ಜಾಹೀರಾತುಗಳಲ್ಲಿ ಪ್ರದರ್ಶಿಸುವ ಎಲ್ಲ ಉತ್ಪನ್ನಗಳನ್ನೂ ಪ್ರಯೋಗ ಮಾಡಿರುತ್ತೇವೆನ್ನಿ. ಕೊನೆಯಲ್ಲಿ ನೋವು ವಾಸಿಯಾಗದೆ ವೈದ್ಯರ ಬಳಿಗೆ ಹೋಗಿ ಹೊಸ ಪರಿಹಾರವನ್ನು ಹುಡುಕಿಕೊಳ್ಳಲೆತ್ನಿಸುತ್ತೇವೆ. ಆದರೆ ಅಷ್ಟರಲ್ಲಾಗಲೇ ಅದು ದೀರ್ಘಕಾಲದ (ಕ್ರೋನಿಕ್) ನೋವಾಗಿ ಪರಿಣಮಿಸಿಬಿಟ್ಟಿದ್ದರೆ ಅಥವಾ ಬೆನ್ನುಮೂಳೆಯು ದುರ್ಬಲವಾಗಿ ಏನಾದರೂ ತೊಂದರೆಯಾಗಿದ್ದರಂತೂ ವೈದ್ಯರು ಶಸ್ತ್ರಚಿಕಿತ್ಸೆಯನ್ನೇ ಮಾಡಬೇಕಾಗುತ್ತದೆ. ಇಲ್ಲಿ ಇತರೆ ಔಷಧಗಳನ್ನು ಬಳಸಿದಾಗ ನೋವು ಹೇಗೆ ಗುಣಮುಖವಾಗುತ್ತಿದೆ ಎನ್ನುವುದನ್ನು ರೋಗಿಯು ಸ್ವತಃ ತಾನೇ ವಿವರಿಸುತ್ತಾನೆ. ಆಗ ವೈದ್ಯರಿಗೆ ತಾವು ನೀಡಿರುವ ಔಷಧಗಳು ಹೇಗೆ ಕೆಲಸ ಮಾಡುತ್ತಿವೆ ಎಂದು ಸುಲಭವಾಗಿ ತಿಳಿಯುತ್ತದೆ. ಆದರೆ ಶಸ್ತ್ರಚಿಕಿತ್ಸೆ ನಡೆಯುತ್ತಿರುವಾಗ ರೋಗಿಯು ಪ್ರಜ್ಞಾಹೀನ ಸ್ಥಿತಿಯಲ್ಲಿರುವುದರಿಂದ ಇದನ್ನು ತಿಳಿಯುವುದು ಕಷ್ಟವಾಗಿತ್ತು. ಆದರೆ ಈಗ ನೋವು ಗುಣಮುಖವಾಗುತ್ತಿರುವುದನ್ನು ಶಸ್ತ್ರಚಿಕಿತ್ಸೆ ನಡೆಯುತ್ತಿರುವಾಗ ವೈದ್ಯರೇ ನೋಡಬಹುದಂತೆ! ಹೀಗೆಂದು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಯದ ಪ್ರೊಫೆಸರ್ ಆದ ವೆಸಿಲಿಯೋಸ್ ಕ್ರಿಸ್ಟೋಪೌಲೊಸ್ ನ್ಯೂರಾನ್ ಪತ್ರಿಕೆಯಲ್ಲಿ ವರದಿ ಮಾಡಿದ್ದಾರೆ.

ಕ್ರಿಸ್ಟೋಪೌಲೊಸ್ ಅಭಿವೃದ್ಧಿಪಡಿಸಿರುವ ಈ ತಂತ್ರಜ್ಞಾನವೇ 'ಫಂಕ್ಷನಲ್ ಅಲ್ಟ್ರಾ ಸೌಂಡ್ ಇಮೇಜಿಂಗ್' (ಎಫ್. ಯು. ಎಸ್. ಐ.) ಅಥವಾ ಕಾರ್ಯರೂಪಿ ಶ್ರವಣಾತೀತಧ್ವನಿ ಚಿತ್ರಣ. ಅರ್ಥಾತ್, ಶ್ರವಣಾತೀತ ಧ್ವನಿಯನ್ನು ಬಳಸಿಕೊಂಡು ದೇಹದೊಳಗಿನ ಅಂಗಗಳ ಚಿತ್ರಣವನ್ನು ಕ್ಲಿಕ್ಕಿಸುವುದು. ಈ ತಂತ್ರಜ್ಞಾನದಿಂದ ಮನುಷ್ಯನ ಬೆನ್ನುಹುರಿಯ ಶಸ್ತ್ರಚಿಕಿತ್ಸೆ ನಡೆಯುತ್ತಿರುವಾಗಲೇ ಸ್ಪಷ್ಟವಾಗಿ ಬೆನ್ನುಹುರಿಯನ್ನು ನೋಡಬಹುದು ಹಾಗೂ ಅದರ ಉತ್ತಮ ಗುಣಮಟ್ಟದ (ಹೈ ರೆಸೊಲ್ಯೂಶನ್) ಚಿತ್ರಗಳನ್ನು ತೆಗೆಯಬಹುದಂತೆ. ಅಷ್ಟೇ ಅಲ್ಲದೆ, ವೈದ್ಯರು ನೀಡುವ ವಿವಿಧ ಚಿಕಿತ್ಸೆಗಳಿಗೆ ಬೆನ್ನುಹುರಿಯು ಹೇಗೆ ಸ್ಪಂದಿಸುತ್ತದೆ ಎಂಬುದರ ನಕ್ಷೆಯನ್ನೂ ದಾಖಲಿಸಬಹುದಂತೆ.

ಇದನ್ನು ಪರೀಕ್ಷಿಸಲು ಇವರು ಒಂದು ಆಸ್ಪತ್ರೆಯಲ್ಲಿ ದೀರ್ಘಕಾಲದ ಬೆನ್ನುನೋವಿನಿಂದ ಬಳಲುತ್ತಿದ್ದ ಆರು ರೋಗಿಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಈಗಾಗಲೇ ಸಾಕಷ್ಟು ಔಷಧಗಳನ್ನು ಸೇವಿಸಿಯೂ ಗುಣಮುಖರಾಗದೇ ಕೊನೆಯಲ್ಲಿ ಶಸ್ತ್ರಚಿಕಿತ್ಸೆಗೆ ಸಿದ್ದರಾಗಿದ್ದರಿವರು. ಈ ರೀತಿಯ ಶಸ್ತ್ರಚಿಕಿತ್ಸೆಯಲ್ಲಿ ಮೊದಲಿಗೆ ವೈದ್ಯರು ರೋಗಿಯ ಬೆನ್ನುಹುರಿಗೆ ಎಲೆಕ್ಟ್ರೋಡುಗಳಿಂದ ಪ್ರಚೋದನೆ ನೀಡುತ್ತಾರೆ. ವಿದ್ಯುತ್ ವೋಲ್ಟೇಜ್ ರೋಗಿಯ ನೋವನ್ನು ತಗ್ಗಿಸಬಲ್ಲುದು ಎಂಬುದು ಇವರ ಅಂದಾಜು. ಆಕಸ್ಮಿಕವಾಗಿ ನಮ್ಮ ತಲೆಗೆ ಜೋರಾಗಿ ಗೋಡೆ ಅಥವಾ ಇನ್ನಾವುದರಿಂದಲೋ ಪೆಟ್ಟು ಬಿದ್ದಾಗ ನಾವು ಕೈನಿಂದ ಚೆನ್ನಾಗಿ ಉಜ್ಜಿಕೊಳ್ಳುತ್ತೇವೆ. ಆಗ ನರಗಳು ಮಿದುಳಿಗೆ ನೋವು ಕಡಿಮೆಗೊಳಿಸಲು ಸಂದೇಶ ನೀಡುತ್ತದೆಯಲ್ಲವೇ? ಅಂತೆಯೇ ಈ ಶಸ್ತ್ರಚಿಕಿತ್ಸೆಯು ಕೆಲಸ ಮಾಡುತ್ತದೆ ಎನ್ನುವುದು ವಿಜ್ಞಾನಿಗಳ ಅಂದಾಜು. ಹೀಗೆ ಬೆನ್ನುಹುರಿಯ ಚಟುವಟಿಕೆಗಳನ್ನು ಸ್ಪಷ್ಟವಾಗಿ ನೋಡುವ ತಂತ್ರವೊಂದು ಬೇಕಿತ್ತು. ಅದುವೇ ಎಫ್. ಯು. ಎಸ್. ಐ.

ಎಫ್. ಯು. ಎಸ್. ಐ. ಸ್ಕ್ಯಾನರ್ ಯಾವುದೇ ವ್ಯವಸ್ಥೆಯೊಳಗೂ ಸುಲಭವಾಗಿ ಚಲಿಸಬಲ್ಲುದು ಹಾಗೂ ಇದಕ್ಕೆ 'ಫಂಕ್ಷನಲ್ ಮ್ಯಾಗ್ನೆಟಿಕ್ ರೆಸೊನೆನ್ಸ್ ಇಮೇಜಿಂಗ್' (ಎಫ್. ಎಂ. ಆರ್. ಐ.) ತಂತ್ರಜ್ಞಾನಗಳಿಗೆ ಬೇಕಾದಂತಹ ಪ್ರತ್ಯೇಕವಾದ ಮೂಲಸೌಕರ್ಯಗಳ ಅವಶ್ಯಕತೆಗಳೂ ಇಲ್ಲವಂತೆ. ನರಗಳ ಚಟುವಟಿಕೆಗಳನ್ನು ದಾಖಲಿಸುವಲ್ಲಿ ಇದು ಎಫ್. ಎಂ. ಆರ್. ಐ.ಗಿಂತಲೂ ಹೆಚ್ಚಿನ ಸೂಕ್ಷ್ಮತೆಯುಳ್ಳ ತಂತ್ರವಂತೆ.

ಚಿಕಿತ್ಸೆ ನಡೆಯುತ್ತಿರುವಾಗ ರೋಗಿಗಳಿಗೆ ಅರೆವಳಿಕೆಗಳನ್ನು ನೀಡಿ ನಿದ್ರಾವಸ್ಥೆಯಲ್ಲಿರಿಸುವುದರಿಂದ ಅವರು ನೋವಿನ ಮಟ್ಟ ಎಷ್ಟಿದೆ? ಅಥವಾ ಕಡಿಮೆಯಾಗುತ್ತಿದೆಯೇ? – ಹೀಗೆಂದು ಹೇಳುವ ಸ್ಥಿತಿಯಲ್ಲಿರುವುದಿಲ್ಲ. ಹಾಗಾಗಿ ಚಿಕಿತ್ಸೆ ಕೆಲಸ ಮಾಡುತ್ತಿದೆಯೋ ಇಲ್ಲವೋ ಎಂದು ಪತ್ತೆ ಮಾಡುವುದು ಕಷ್ಟವಾಗಿತ್ತಂತೆ. ಆದರೆ ಎಫ್. ಯು. ಎಸ್. ಐ. ತಂತ್ರಜ್ಞಾನದಲ್ಲಿ ವಿದ್ಯುತ್ತಿನಿಂದ ಪ್ರಚೋದಿಸುತ್ತಾ ಬೆನ್ನುಹುರಿಯಲ್ಲಿ ರಕ್ತಪರಿಚಲನೆ ಹಾಗೂ ಅದರಲ್ಲಾಗುವ ಬದಲಾವಣೆಯನ್ನು ಗಮನಿಸಬಹುದಂತೆ. ಇದು ಚಿಕಿತ್ಸೆಯು ಕೆಲಸ ಮಾಡುತ್ತಿದೆ ಎಂದು ಸೂಚಿಸುತ್ತದೆ ಎನ್ನುತ್ತಾರೆ, ಕ್ರಿಸ್ಟೋಪೌಲೊಸ್.

ಬೆನ್ನುಹುರಿಯು ನಮ್ಮ ದೇಹದ ಸೂಕ್ಷ್ಮ ಭಾಗ. ಅದು ಉಸಿರಾಟ ಮತ್ತು ಹೃದಯ ಬಡಿತದಂತಹ ಸೂಕ್ಷ್ಮಕಾರ್ಯಗಳೊಂದಿಗೆ ಬೆಸೆದುಕೊಂಡಿರುವುದರಿಂದ ಅದರ ಚಿತ್ರಣವನ್ನು ತೆಗೆಯಲು ಎಫ್. ಎಂ. ಆರ್. ಐ.ನಂತಹ ಹಳೆಯ ಮಾದರಿ ತಂತ್ರಜ್ಞಾನಗಳು ಸೂಕ್ತವಲ್ಲ. ಏಕೆಂದರೆ, ಉಸಿರಾಟ ಮತ್ತು ಹೃದಯ ಬಡಿತದಂತಹ ಸಣ್ಣ ಚಲನೆ ಹಾಗೂ ಶಬ್ದಗಳು ಈ ಚಿತ್ರಣವನ್ನು ದಾಖಲಿಸುವಾಗ ಅನವಶ್ಯಕ ಅಡಚಣೆಯನ್ನುಂಟು ಮಾಡುತ್ತವಂತೆ. ಆದರೆ ಎಫ್. ಯು. ಎಸ್. ಐ. ಇಂತಹ ಅಡಚಣೆಗಳನ್ನು ಗುರುತಿಸುವುದೇ ಇಲ್ಲವಂತೆ. ಈ ತಂತ್ರಜ್ಞಾನವು ಕೇವಲ ನಮ್ಮ ಉದ್ದೇಶಿತ ಭಾಗದ ಮೇಲೆ ಶಬ್ದದ ಅಲೆಗಳನ್ನು ಹೊರಡಿಸುತ್ತವಷ್ಟೇ. ಆಗ ಅಲ್ಲಿರುವ ಕೆಂಪುರಕ್ತಕಣಗಳು ಆ ಶಬ್ದವನ್ನು ಪ್ರತಿಧ್ವನಿಸುತ್ತವೆ. ಸ್ಪಷ್ಟವಾದ ಚಿತ್ರವನ್ನೂ ನೀಡುತ್ತವೆ. ಜಲಾಂತರ್ಗಾಮಿ ಸೋನಾರಿನ ಹಾಗೆ! ಅದು ನೀರಿನಾಳದಲ್ಲಿರುವ ವಸ್ತುಗಳನ್ನು ಶಬ್ದವನ್ನು ಬಳಸಿಕೊಂಡೇ ಹುಡುಕಿ ಪತ್ತೆ ಹಚ್ಚುತ್ತದೆಯಲ್ಲಾ ಹಾಗೆ.

ನಮ್ಮ ಅಪಧಮನಿಗಳು ದೊಡ್ಡದಾಗಿವೆ. ಆದರೆ ಲೋಮನಾಳಗಳು ಸಣ್ಣವು. ಇವು ನಮ್ಮ ಮಿದುಳು ಹಾಗೂ ಬೆನ್ನುಹುರಿಯಲ್ಲಿ ಹರಡಿಕೊಂಡಿವೆ. ಇಂತಹ ಸೂಕ್ಷ್ಮ ಅಂಗಗಳಲ್ಲಿ ಇತರೆ ತಂತ್ರಜ್ಞಾನಗಳಿಂದ ರಕ್ತಪರಿಚಲನೆಯಲ್ಲಾಗುವ ಬದಲಾವಣೆಯನ್ನು ನೋಡುವುದು ಸಾಧ್ಯವಿರಲಿಲ್ಲ. ಮಾತ್ರವಲ್ಲದೆ, ವಿದ್ಯುತ್ತಿನಿಂದ ಬೆನ್ನುಹುರಿಗೆ ಹೊಡೆಸಿದಾಗ ಎಷ್ಟು ವೇಗವಾಗಿ ರಕ್ತ ಹರಿಯುತ್ತಿದೆ? ಎಷ್ಟು ಬಲವಾಗಿ ಹರಿಯುತ್ತಿದೆ? ಮರಳಿ ಅದೇ ಸ್ಥಿತಿಗೆ ಬರಲು ಎಷ್ಟು ಸಮಯ ಬೇಕಾಗುತ್ತದೆ? ಎಂಬೆಲ್ಲಾ ಪ್ರಶ್ನೆಗಳು ಉದ್ಭವವಾಗಿದ್ದವು. ಆದರೆ ಎಫ್. ಯು. ಎಸ್. ಐ. ತಂತ್ರಜ್ಞಾನದಿಂದ ಇವೆಲ್ಲಾ ಪ್ರಶ್ನೆಗಳಿಗೆ ಉತ್ತರ ಸಿಕ್ಕಿದೆಯಂತೆ.

ಈ ಸಂಶೋಧನೆಯನ್ನು ಇನ್ನಷ್ಟು ಮುಂದುವರಿಸಿ, ಈ ತಂತ್ರಜ್ಞಾನದ ಸಫಲತೆಯನ್ನು ಪ್ರತಿಶತ ನೂರರಷ್ಟು ಸಾಧ್ಯ ಮಾಡುವುದು ವಿಜ್ಞಾನಿಗಳ ಉದ್ದೇಶ. ಮತ್ತು ಬೆನ್ನುಹುರಿಯ ದೌರ್ಬಲ್ಯದಿಂದಾಗಿ ಮೂತ್ರಕೋಶದ ಮೇಲೆ ನಿಯಂತ್ರಣ ತಪ್ಪಿಹೋಗಿರುವ ರೋಗಿಗಳ ಚಿಕಿತ್ಸೆಯನ್ನು ಇನ್ನಷ್ಟು ಸುಧಾರಿಸಲೂ ಎಫ್. ಯು. ಎಸ್. ಐ. ತಂತ್ರಜ್ಞಾನವು ಅನುಕೂಲಿಯಾಗಬಲ್ಲದು ಎನ್ನುತ್ತಾರೆ, ಕ್ರಿಸ್ಟೋಪೌಲೊಸ್. ಹೀಗೆ ನರವಿಜ್ಞಾನ ಹಾಗೂ ತಂತ್ರಜ್ಞಾನದ ಈ ಬೆಳವಣಿಗೆಗಳು ದೀರ್ಘಕಾಲದ ಬೆನ್ನುನೋವಿನಿಂದ ಬಳಲುತ್ತಿರುವ ಲಕ್ಷಾಂತರ ಜನರಿಗೆ ಪರಿಹಾರವಾಗುವುದನ್ನು ಎದುರು ನೋಡೋಣ! ❖

'ಅಜ್ಜಿತಲೆ'ಯೂ ಡ್ರೋನಿನ ಅಲೆಯೂ


ನಿಸರ್ಗದಲ್ಲಿರುವ ವಿನ್ಯಾಸಗಳನ್ನು ಇನ್ನಷ್ಟು ಉಪಯುಕ್ತವಾಗಿ ಬಳಸುವ ಡ್ರೋನು ತಯಾರಾಗಲಿದೆಯೇ?



ಕೊಳ್ಳೇಗಾಲ ಶರ್ಮ

ಚಿಕ್ಕಂದಿನಲ್ಲಿ 'ಹೆಲಿಕಾಪ್ಟರ್ ಬೀಜ'ಗಳನ್ನು ಅವು ಕೆಳಗೆ ಬೀಳುತ್ತಿದ್ದಂತೆಯೇ ಹಿಡಿಯುವ ಆಟ ಆಡಿರಬೇಕು. ಇಲ್ಲವೇ ಕೆಳಗೆ ಬಿದ್ದ ಈ ಬೀಜಗಳನ್ನು ಬೊಗಸೆಯಲ್ಲಿ ಎತ್ತಿ ಮೇಲೆ ಬಿಸಾಡಿ, ಯಾರ ಬೀಜ ನಿಧಾನವಾಗಿ ನೆಲಕ್ಕೆ ಬೀಳುತ್ತದೆ ಎಂದು ಸ್ಪರ್ಧೆಯನ್ನೂ ಮಾಡಿರಬಹುದು. ಅಥವಾ ಎಕ್ಕದ ಗಿಡದ ಗಿಣಿಮೂತಿ ಕಾಯಿ ಒಡೆದಾಗ ಅದರಿಂದ ಹೊಮ್ಮಿದ 'ಅಜ್ಜಿತಲೆ' ಬೀಜಗಳನ್ನು ಅಟ್ಟಿಸಿಕೊಂಡು ಓಡಿದ್ದೂ ನೆನಪಿರಬೇಕು. ಕನ್ನಡದಲ್ಲಿ ಹೆಲಿಕಾಪ್ಟರು ಬೀಜದ ಮರವನ್ನು 'ಕಾಡುಬೆಂಡೆ' ಎನ್ನುತ್ತಾರೆ. ಇದರಂತೆಯೇ ಗಿರಗಿರನೆ ತಿರುಗುತ್ತಾ ನೆಲಕ್ಕೆ ಬೀಳುವ ಹಲವಾರು ಬೀಜಗಳಿವೆ. ಜಕರಾಂಡಾ ಹೆಲಿಕಾಪ್ಟರು ಬೀಜವನ್ನಾದರೂ 'ಕ್ಯಾಚ್' ಹಿಡಿಯಬಹುದು. ಆದರೆ ಹತ್ತಿಯ ಎಳೆಗಳಂತಹ ರೋಮಗಳನ್ನು ಅಂಟಿಸಿಕೊಂಡ ಅಜ್ಜಿಯತಲೆಯ ಮಾತ್ರ ಕೈಗೆ ಸಿಕ್ಕದೆ, ಎಲ್ಲೆಂದರಲ್ಲಿ, ಹೇಗೆಂದರೆ ಹಾಗೆ ಗಾಳಿಯಲ್ಲಿ ಓಡಿ ತಪ್ಪಿಸಿಕೊಂಡು ಬಿಡುತ್ತಿತ್ತು. ಇದೀಗ ಇವೆರಡೂ ಬೀಜಗಳ ವಿಭಿನ್ನ ಹಾರಾಟದ ವಿಧಾನವನ್ನು ಅನುಸರಿಸಿ ಡ್ರೋನುಗಳನ್ನು ಸೃಷ್ಟಿಸಬಹುದಂತೆ. ಕೊರಿಯದ ಕ್ಯುಂಗ್ ಹೀ ವಿವಿಯ ಯೂನಿಸಿಯೂ ಪಾರ್ಕ್, ಅಮೆರಿಕದ ನಾರ್ಥ್ ವೆಸ್ಟರ್ನ್ ವಿವಿಯ ಜಾನ್ ರೋಜರ್ಸ್ ಮತ್ತು ಕಾರ್ನೆಲ್ ವಿವಿಯ ಸಂಗ್ವಾನ್ ಜೆ ಮೊದಲಾದವರ ಜೊತೆಗೂಡಿ ಹಾಗೆಂದು ಪತ್ತೆ ಮಾಡಿದ್ದಾರಂತೆ.

'ಅಜ್ಜಿತಲೆ' ಹಾಗೂ ಹೆಲಿಕಾಪ್ಟರು ಬೀಜಗಳ ಹಾರಾಟದ ವಿಧಾನಗಳಲ್ಲಿ ಅಜಗಜಾಂತರ ವ್ಯತ್ಯಾಸಗಳಿವೆ. ಎರಡೂ ಗಾಳಿಯಲ್ಲೇ ತೇಲುತ್ತವಾದರೂ, ಅವುಗಳು ತೇಲಲು ಕಾರಣವಾಗುವ ಬಲಗಳು ಬೇರೆ, ಬೇರೆ. ಉದಾಹರಣೆಗೆ, ಅಜ್ಜಿತಲೆಯ ಹಾರಾಟವನ್ನು ಪ್ಯಾರಾಶೂಟಿಗೆ ಹೋಲಿಸಬಹುದು. ಬೀಜ ತಟಕ್ಕನೆ ನೆಲಕ್ಕೆ ಬೀಳದಂತೆ ಕೂದಲುಗಳು ತಡೆಯುತ್ತವೆ. ಆದರೆ ಅದೇ ಸಮಯದಲ್ಲಿ ಅವು ಗಾಳಿ ಬೀಸಿದ ಕಡೆ, ಅಡ್ಡಾದಿಡ್ಡಿ, ದಿಕ್ಕುದೆಸೆಯಿಲ್ಲದೆ ಹಾರುತ್ತವೆ.



ಹೆಲಿಕಾಪ್ಟರು ಬೀಜ ಹಾಗಲ್ಲ. ಬೀಜಕ್ಕೆ ಅಂಟಿಕೊಂಡಂತೆ ಇರುವ ಎರಡು ರೆಕ್ಕೆಗಳು ಅದನ್ನು ತೇಲಿಸುತ್ತವೆ. ಮರದಿಂದ ಉದುರಿದ ಕೂಡಲೇ ನಿಧಾನವಾಗಿ, ಗಿರ್ರನೆ ತಿರುಗುತ್ತಾ, ಯಾವುದೋ ಗಾಳಿಯ ಸುಳಿಯಲ್ಲಿ ಮುಳುಗುತ್ತಿರುವ ಹಾಗೆ ನೇರವಾಗಿ ಕೆಳಗೆ ಬೀಳುತ್ತದೆ. ಸ್ವಲ್ಪ ಗಾಳಿ ಬೀಸಿದರೆ ಅಡ್ಡಡ್ಡಲಾಗಿ ಹಾಗೆಯೇ ತೇಲುತ್ತಾ ಸಾಗುತ್ತದೆ. ನೋಡಲು ರೋಚಕವಾಗಿರುವ ಈ ಬೀಜಗಳ ಹಾರಾಟವನ್ನು ಅಣಕಿಸುವ ಸಾಧನಗಳನ್ನು ತಯಾರಿಸಿದರೆ, ಕಡಿಮೆ ಶಕ್ತಿಯನ್ನು ವ್ಯಯಿಸಿ ಹೆಚ್ಚು ದೂರ ಹಾರಬಹುದು ಎನ್ನುವುದು ವಿಜ್ಞಾನಿ, ಇಂಜಿನಿಯರುಗಳ ಆಸೆ.

ಅದಕ್ಕಾಗಿ ಈ ಹಿಂದೆಯೂ 'ಅಜ್ಜಿತಲೆ', ಹೆಲಿಕಾಪ್ಟರು ಬೀಜಗಳಂತಹ ಬೀಜಗಳ ಹಾರಾಟದ ವಿಧಾನ, ಅವುಗಳಲ್ಲಿ ಒಳಗೊಳ್ಳುವ ಬಲ ಮೊದಲಾದವನ್ನು ಅಧ್ಯಯನ ಮಾಡಲಾಗಿತ್ತು. ಕೆಲವು ಸಾಧನಗಳನ್ನು ತಯಾರಿಸಲೂ ಪ್ರಯತ್ನಗಳು ನಡೆದಿದ್ದುವು. ಆದರೆ ಅವೆಲ್ಲವೂ ಒಂದೋ ಹೆಲಿಕಾಪ್ಟರಿನ ಬೀಜ, ಇಲ್ಲವೇ ಅಜ್ಜಿತಲೆಯ ಬೀಜದ ವಿನ್ಯಾಸವನ್ನು ಅನುಸರಿಸುತ್ತಿದ್ದುವು. ಎರಡೂ ಬೀಜಗಳ ಚಲನೆಯ ವಿಧಾನವನ್ನು ಒಳಗೊಂಡ ಒಂದೇ ಸಾಧನ ಇರಲಿಲ್ಲ. ಇದೀಗ ಅದುವೂ ಸಾಧ್ಯ ಎಂದು ಪಾರ್ಕ್ ಮತ್ತು ಸಂಗಡಿಗರ ತರ್ಕ.

ಅಂದ ಹಾಗೆ, ಇದಕ್ಕಾಗಿ ಇವರು ಮಾದರಿಯಾಗಿ ಇಟ್ಟುಕೊಂಡಿದ್ದು ನಮ್ಮೂರ ಹೆಲಿಕಾಪ್ಟರು ಬೀಜಗಳನ್ನಲ್ಲ. ಕೆನಡಾದ ರಾಷ್ಟ್ರ ಮರ ಎನ್ನಿಸಿದ ಮೇಪಲ್ ಮರದ ಬೀಜಗಳನ್ನು ಹಾಗೂ ಅಜ್ಜಿತಲೆಯ ಬದಲಿಗೆ ಅಮೆರಿಕ ಹಾಗೂ ಇತರೆ ಶೀತಪ್ರದೇಶಗಳಲ್ಲಿ ಬೆಳೆಯುವ ಡಾಂಡೆಲಿಯಾನ್ ಗಿಡದ ಬೀಜಗಳನ್ನು ಮಾದರಿಯನ್ನಾಗಿ ಇಟ್ಟುಕೊಂಡಿದ್ದಾರೆ. ಮೇಪಲ್ ಬೀಜಗಳು ಚಲಿಸುವಾಗ, ಅವುಗಳ ರೆಕ್ಕೆಯ ತುದಿಯಲ್ಲಿ ಇಬ್ಬದಿಯಲ್ಲಿಯೂ ಗಾಳಿಯ ಸುಳಿಗಳುಂಟಾಗುತ್ತವೆ. ಇವು ಅದರ ಹೆಚ್ಚು ಭಾರದ ಬೀಜವನ್ನು ಎತ್ತಬಲ್ಲವು. ಆದರೆ ಡಾಂಡೆಲಿಯಾನಿನ ಬೀಜಗಳು ಬಲು ಹಗುರ. ಏಕೆಂದರೆ 'ಅಜ್ಜಿತಲೆ'ಯಂತಹ ನವಿರಾದ ಕೂದಲುಗಳು ಬೀಜದ ಮುಂಭಾಗದಲ್ಲಿ ಗಾಳಿಯ ಸುಳಿಯನ್ನು ಉಂಟು ಮಾಡುತ್ತವೆ. ಹೀಗಾಗಿ ಇವು ತಮ್ಮಂತಾವೇ ಚಲಿಸುವುದಕ್ಕಿಂತಲೂ ಹೆಚ್ಚಾಗಿ ಗಾಳಿ ಬೀಸಿದ ಕಡೆಗೆ ಹಾರುತ್ತವೆ.

ಪಾರ್ಕ್ ತಂಡ ಪ್ರಯೋಗಕ್ಕೆಂದು ಇಲೆಕ್ಟ್ರಾನಿಕ್ ಚಿಪ್‌ಗಳನ್ನು ತಯಾರಿಸಲು ಬಳಸುವ ಪಾಲಿಮರು 'ಪಾಲಿಲ್ಯಾಕ್ಟಿಕ್ ಕೋಗ್ಲೈಕೋಲಿಕ್' ಆಮ್ಲ ಎನ್ನುವ ರಾಸಾಯನಿಕದಿಂದ ಹೆಲಿಕಾಪ್ಟರು ಬೀಜದ ರೆಕ್ಕೆಯಂತಹ ವಿವಿಧ ವಿನ್ಯಾಸಗಳನ್ನು ರೂಪಿಸಿದ್ದಾರೆ. ಮಕ್ಕಳಾಟಿಕೆಯ ಚಕ್ರದಂತೆ ಇವುಗಳ ನಡುವ ಒಂದು ರಂಧ್ರವಿರುತ್ತದೆ. ಈ ವಿನ್ಯಾಸಗಳಲ್ಲಿ ಎರಡು ಬಗೆಯಿವೆ. ಮೊದಲನೆಯದು ರಂಧ್ರದಿಂದ ಎಲ್ಲ ಕಡೆಗೂ ಸೈಕಲ್ ಚಕ್ರದ ಸ್ಪೋಕ್ಸುಗಳಂತೆ ಚಾಚಿಕೊಂಡಿರುವ ರೆಕ್ಕೆಗಳು. ಇನ್ನೊಂದು ಟೇಬಲ್ ಫ್ಯಾನಿನ ರೆಕ್ಕೆಗಳಂತೆ ಅಥವಾ ಸ್ವಾಸ್ತಿಕದ ಭುಜಗಳಂತೆ ವಕ್ರವಾಗಿರುವ ರೆಕ್ಕೆಗಳಿರುವ ವಿನ್ಯಾಸ.

ಇವನ್ನು ಒಂದಿನ್ನೊಂದರ ಮೇಲೆ ಜೋಡಿಸಿಟ್ಟು ಬಂಧಿಸಿದ್ದಾರೆ. ಅನಂತರ ವಿವಿಧ ಪ್ರಯೋಗಗಳನ್ನು ಕೈಗೊಂಡಿದ್ದಾರೆ. ಮೇಲಿನಿಂದ ಇವನ್ನು ಜಾರಬಿಟ್ಟು ಅವುಗಳ ಹಾರಾಟ ಹೇಗಿರುತ್ತದೆ ಎಂದು ಗಮನಿಸಿದ್ದಾರೆ. ಈ ಹಾರಾಟವನ್ನು ನಿಯಂತ್ರಿಸಬಹುದೋ ಎಂದು ರೆಕ್ಕೆಗಳ ವಿನ್ಯಾಸವನ್ನು, ಅಂದರೆ ಸ್ಪೋಕ್ಸುಗಳ ಸಂಖ್ಯೆಯನ್ನು ಇಲ್ಲವೇ ಫ್ಯಾನಿನ ರೆಕ್ಕೆಗಳ ಬಾಗುವಿಕೆಯನ್ನು ಬದಲಿಸಿ ಪ್ರಯೋಗಗಳನ್ನು ನಡೆಸಿದ್ದಾರೆ. ಲೆಕ್ಕ ಹಾಕಿದ್ದಾರೆ. ಎಷ್ಟು ಬೈಸಿಕಲ್ ಚಕ್ರಗಳ ಜೊತೆಗೆ ಎಷ್ಟು ಫ್ಯಾನಿನ ರೆಕ್ಕೆಗಳನ್ನು ಜೋಡಿಸಬಹುದೆಂದೂ ಗಣಿಸಿದ್ದಾರೆ.

ಇವೆಲ್ಲ ಲೆಕ್ಕಾಚಾರದ ಪ್ರಕಾರ ಹಗುರವಾದ ಕೆಲವೇ ನ್ಯಾನೋಮೀಟರುಗಳಿಂದ, ಹಲವಾರು ಸೆಂಟಿಮೀಟರುಗಳಷ್ಟು ಅಗಲವಿರುವ ಹಾರುವ ಚಕ್ರಗಳನ್ನು ತಯಾರಿಸಬಹುದಂತೆ. ಇವಕ್ಕೆ ಬೀಜದಂತೆ ಭಾರವಾದ ಸೆನ್ಸಾರುಗಳನ್ನು ಅಥವಾ ಇತರೆ ಇಲೆಕ್ಟ್ರಾನಿಕ್ಕುಗಳನ್ನು ಜೋಡಿಸಬಹುದು. ಈ ಸೂಕ್ಷ್ಮ ರೆಕ್ಕೆಗಳಿಗೆ ಅತಿ ಹೊರೆಯಾಗದಷ್ಟು ಹಗುರವಾದ ಸೆನ್ಸಾರುಗಳು ಈಗಾಗಲೇ ಸಿದ್ಧವಿವೆ. ಹೀಗೆ ಇವನ್ನು ಪುಟ್ಟ ಗುಪ್ತಚರ ಡ್ರೋನುಗಳನ್ನಾಗಿ ಬಳಸಬಹುದು. ಇಲ್ಲವೇ ಗಾಳಿಯ ಚಲನೆಯನ್ನು ಅಧ್ಯಯನ ಮಾಡುವ ಸಾಧನಗಳಾದರೂ ಆಗುತ್ತವೆ ಎನ್ನುವುದು ಇವರ ತರ್ಕ.

ಈ ಬಗ್ಗೆ ಇವರು ನಡೆಸಿರುವ ಪ್ರಯೋಗಗಳ ವಿವರಗಳನ್ನು ಪಿಎನ್‌ಎಎಸ್ ಪತ್ರಿಕೆ ಈ ವಾರ ಆನ್‌ಲೈನ್‌ನಲ್ಲಿ ಮುಂದಾಗಿ ಪ್ರಕಟಿಸಿದೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ

63) ಆಹಾರದ ಜೀರ್ಣಕ್ರಿಯೆಯಲ್ಲಿ ಲಾಲಾರಸದ ಪಾತ್ರವೇನು?

ಉತ್ತರ:– ಲಾಲಾರಸ ಗ್ರಂಥಿಗಳು ಸ್ರವಿಸುವ ಲಾಲಾರಸದಿಂದ ಆಹಾರವು ತೇವಗೊಳ್ಳುವುದು. ಲಾಲಾರಸದಲ್ಲಿರುವ ಸಲಿವರಿ ಅಮಲೈಸ್ ಎಂಬ ಕಿಣ್ವವು ಪಿಷ್ಟವನ್ನು ಸಕ್ಕರೆಯಾಗಿ ಪರಿವರ್ತಿಸುವುದು.

64) ಪೋಷಣಾ ಸ್ತರಗಳು ಎಂದರೇನು? ಆಹಾರ ಸರಪಳಿಗೆ ಒಂದು ಉದಾಹಣೆ ಕೊಡಿ ಮತ್ತು ಅದರಲ್ಲಿನ ವಿವಿಧ ಪೋಷಣಾ ಸ್ತರಗಳನ್ನು ಹೆಸರಿಸಿ.

ಉತ್ತರ:– ಆಹಾರ ಶಕ್ತಿಯು ವರ್ಗಾವಣೆಯಾಗುವ ಆಹಾರ ಸರಪಳಿಯ ಹಂತಗಳನ್ನು ಪೋಷಣಾ ಸ್ತರಗಳು ಎನ್ನುತ್ತಾರೆ ಉದಾ ಹುಲ್ಲುಗಾವಲಿನಲ್ಲಿ ಕಂಡುಬರುವ ಆಹಾರ ಸರಪಳಿ

ಹುಲ್ಲು ⇨ ಕೀಟಗಳು ⇨ ಕಪ್ಪೆಗಳು ⇨ ಹಾವುಗಳು

ಹುಲ್ಲು……………….ಪೋಷಣಾ ಸ್ತರ–1
ಕೀಟಗಳು ………….ಪೋಷಣಾ ಸ್ತರ–2
ಕಪ್ಪೆಗಳು ……………ಪೋಷಣಾ ಸ್ತರ–3
ಹಾವುಗಳು ………. ಪೋಷಣಾ ಸ್ತರ–4

65) ಮಿದುಳಿನ ಯಾವ ಭಾಗವು ದೇಹದ ಭಂಗಿ ಮತ್ತು ಸಮತೋಲನವನ್ನು ನಿರ್ವಹಿಸುತ್ತದೆ?

ಉತ್ತರ:– ಹಿಮ್ಮೆದುಳಿನ ಅನುಮಸ್ತಿಷ್ಕ ಭಾಗವು ದೇಹದ ಭಂಗಿ ಮತ್ತು ಸಮತೋಲನ ಕಾಪಾಡುವುದು.

66) ಮೆಂಡಲೀವ್ ಅವರು ತಮ್ಮ ಆವರ್ತಕ ಕೋಷ್ಟಕದ ರಚನೆಗೆ ಉಪಯೋಗಿಸಿರುವ ಮಾನದಂಡಗಳು ಯಾವುವು?

ಉತ್ತರ :– ಧಾತುಗಳನ್ನು ಅವುಗಳ ಪರಮಾಣುರಾಶಿ, ಮೂಲಭೂತ ಗುಣಗಳು ಮತ್ತು ಒಂದೇ ರೀತಿಯ ರಾಸಾಯನಿಕ ಲಕ್ಷಣಗಳ ಆಧಾರದ ಮೇಲೆ ಧಾತುಗಳನ್ನು ಜೋಡಣೆ ಮಾಡಿದರು

* ಧಾತುಗಳ ಪರಮಾಣು ರಾಶಿಗಳು ಮತ್ತು ಅವುಗಳ ಭೌತ ಮತ್ತು ರಾಸಾಯನಿಕ ಗುಣಗಳ ನಡುವಣ ಸಂಬಂಧವನ್ನು ಪರಿಶೀಲಿಸಿದರು
* ರಾಸಾಯನಿಕ ಗುಣಗಳಲ್ಲಿ ಮೆಂಡಲೀವ್ ಅವರು ಹೈಡ್ರೋಜನ್ ಮತ್ತು ಆಕ್ಸಿಜನ್ ಧಾತುಗಳು ಉಂಟು ಮಾಡುವ ಸಂಯುಕ್ತಗಳ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಿದರು.
* ಹೈಡ್ರೋಜನ್ ಮತ್ತು ಆಕ್ಸಿಜನ್‌ಗಳು ಅತಿಹೆಚ್ಚು ಕ್ರಿಯಾಪಟುತ್ವವುಳ್ಳ ಮತ್ತು ಬಹುತೇಕ ಧಾತುಗಳೊಂದಿಗೆ ಸಂಯುಕ್ತಗಳೊಂದಿಗೆ ಸಂಯುಕ್ತಗಳನ್ನು ಉಂಟು ಮಾಡುತ್ತಿರುವುದರಿಂದ ಅವರು ಅವುಗಳನ್ನು ಆಯ್ಕೆ ಮಾಡಿಕೊಂಡು
* ಧಾತುವೊಂದು ಉಂಟು ಮಾಡುವ ಹೈಡ್ರೇಡ್‌ಗಳು ಮತ್ತು ಆಕ್ಸೈಡ್‌ಗಳ 'ಸೂತ್ರಗಳನ್ನು ಆಧರಿಸಿ ಧಾತುವಿನ ವರ್ಗೀಕರಣದಲ್ಲಿ ಇದನ್ನು ಒಂದು ಮೂಲಭೂತ ಗುಣವೆಂದು ಪರಿಗಣಿಸಿದರು.

67) ಕ್ರಿಯಾಶೀಲತೆಯ ಸರಣಿಯಲ್ಲಿ ಮಧ್ಯದ ಲೋಹಗಳನ್ನು ಉದ್ಧರಿಸುವುದರ ಕುರಿತು ಬರೆಯಿರಿ

ಉತ್ತರ:– ಕ್ರಿಯಾಶೀಲತೆಯ ಸರಣಿಯಲ್ಲಿ ಮಧ್ಯದ ಲೋಹಗಳಾದ ಕಬ್ಬಿಣ, ಸತು, ಸೀಸ, ತಾಮ್ರಗಳು ಮಧ್ಯಮ ಕ್ರಿಯಾಪಟುತ್ವ ಹೊಂದಿವೆ. ನಿಸರ್ಗದಲ್ಲಿ ಸಾಮಾನ್ಯವಾಗಿ ಇವು ಸಲ್ಫೈಡ್ ಅಥವಾ ಕಾರ್ಬೋನೇಟ್‌ಗಳ ರೂಪದಲ್ಲಿರುತ್ತವೆ. ಸಲ್ಫೈಡ್ ಮತ್ತು ಕಾರ್ಬೋನೇಟ್‌ಗಳಿಂದ ಲೋಹಗಳನ್ನು ಉದ್ಧರಿಸುವುದಕ್ಕಿಂತ ಆಕ್ಸೈಡ್‌ಗಳಿಂದ ಉದ್ಧರಿಸುವುದು ಸುಲಭ. ಆದ್ದರಿಂದ ಅಪಕರ್ಷಿಸುವ ಮೊದಲು ಲೋಹದ ಸಲ್ಫೈಡ್ ಮತ್ತು ಕಾರ್ಬೋನೇಟ್‌ಗಳನ್ನು ಲೋಹೀಯ ಆಕ್ಸೈಡ್‌ಗಳನ್ನಾಗಿ ಪರಿವರ್ತಿಸಬೇಕು.

ಸಲ್ಫೈಡ್ ಅದುರನ್ನು ಆಕ್ಸೈಡನ್ನಾಗಿ ಪರಿವರ್ತಿಸಲು ಅಧಿಕ ಪ್ರಮಾಣದ ಗಾಳಿಯಲ್ಲಿ ಹೆಚ್ಚಿನ ಉಷ್ಣತೆಯಲ್ಲಿ ಕಾಸಬೇಕು. ಈ ವಿಧಾನವನ್ನು ಹುರಿಯುವಿಕೆ ಎನ್ನುವರು.

ಕಾರ್ಬೋನೇಟ್ ಅದುರನ್ನು ಆಕ್ಸೈಡ್ ಆಗಿ ಪರಿವರ್ತಿಸ ಬೇಕಾದರೆ ಕಡಿಮೆ ಗಾಳಿಯಲ್ಲಿ ಹೆಚ್ಚಿನ ಉಷ್ಣತೆಯಲ್ಲಿ ಕಾಯಿಸ ಬೇಕು. ಈ ವಿಧಾನವನ್ನು ಕಾಯಿಸುವಿಕೆ ಎನ್ನುವರು.

ಕಾರ್ಬನ್‌ನಂಥ ಸೂಕ್ತ ಅಪಕರ್ಷಣಕಾರಿಯನ್ನು ಬಳಸಿ ಲೋಹದ ಆಕ್ಸೈಡ್‌ಗಳನ್ನು ಆಯಾ ಲೋಹಗಳನ್ನಾಗಿ ಅಪಕರ್ಷಿಸಲಾಗುವುದು. ಉದಾಹರಣೆಗೆ ಸತುವಿನ ಆಕ್ಸೈಡ್‌ಅನ್ನು ಕಾರ್ಬನ್‌ನೊಂದಿಗೆ ಕಾಸಿದಾಗ ಅದು ಅಪಕರ್ಷಿಸಲ್ಪಟ್ಟು ಸತುವಾಗುತ್ತದೆ.

ಲೋಹೀಯ ಆಕ್ಸೈಡ್‌ಗಳಿಂದ ಲೋಹಗಳನ್ನು ಅಪಕರ್ಷಿಸಲು ಕಾರ್ಬನ್ (ಕೋಕ್) ಬಳಸುವುದರ ಜೊತೆಗೆ ಕೆಲವೊಮ್ಮೆ ಇದನ್ನು ಸ್ಥಾನಪಲ್ಲಟ ಕ್ರಿಯೆಗೂ ಬಳಸುವರು. ಹೆಚ್ಚು ಕ್ರಿಯಾಪಟುತ್ವ ಹೊಂದಿದ ಲೋಹಗಳಾದ ಸೋಡಿಯಂ, ಕ್ಯಾಲ್ಸಿಯಂ, ಅಲ್ಯುಮಿನಿಯಂ ಇತ್ಯಾದಿಗಳನ್ನು ಅಪಕರ್ಷಣಕಾರಿಯಾಗಿ ಬಳಸುವರು ಏಕೆಂದರೆ ಇವು ಕಡಿಮೆ ಕ್ರಿಯಾಪಟುತ್ವ ಹೊಂದಿದ ಲೋಹಗಳನ್ನು ಅವುಗಳ ಸಂಯುಕ್ತಗಳಿಂದ ಪಲ್ಲಟಗೊಳಿಸುತ್ತವೆ. ಉದಾಹರಣೆಗೆ ಮ್ಯಾಂಗನೀಸ್ ಡೈಆಕ್ಸೈಡ್‌ಅನ್ನು ಅಲ್ಯುಮಿನಿಯಂ ಪುಡಿಯೊಂದಿಗೆ ಕಾಸಿದಾಗ ರಾಸಾಯನಿಕ ಕ್ರಿಯೆ ನಡೆಯುತ್ತದೆ.

68) ಒಂದೊಂದು ಉದಾಹರಣೆಯೊಂದಿಗೆ ಇವುಗಳನ್ನು ವಿವರಿಸಿ

ಅ) ನಶಿಸುವಿಕೆ ಬ) ಕಮಟುವಿಕೆ

ಉತ್ತರ:–

ನಶಿಸುವಿಕೆ:– ಲೋಹಗಳು ತಮ್ಮ ಸುತ್ತಲಿನ ತೇವಾಂಶ, ಆಮ್ಲಗಳ ಪರಿಣಾಮ ತಮ್ಮ ಹೊಳಪನ್ನು ಕಳೆದುಕೊಂಡು ಕ್ರಮೇಣ ನಾಶವಾಗಲು ಆರಂಭಿಸುತ್ತವೆ ಈ ಪ್ರಕ್ರಿಯೆಗೆ ನಶಿಸುವಿಕೆ ಎನ್ನುವರು. ಉದಾ:– ಕಬ್ಬಿಣ ತುಕ್ಕು ಹಿಡಿಯುವುದು

ಕಮಟುವಿಕೆ:– ಕೊಬ್ಬು ಮತ್ತು ಎಣ್ಣೆ ಪದಾರ್ಥಗಳು ಉತ್ಕರ್ಷಣೆಗೆ ಒಳಗಾಗಿ ವಾಸನೆ ಮತ್ತು ರುಚಿಯಲ್ಲಿ ಬದಲಾವಣೆ ಹೊಂದುವುದನ್ನು ಕಮಟುವಿಕೆ ಎನ್ನುವರು. ಉದಾ:– ಹಲವು ದಿನಗಳಿಂದ ಸಂಗ್ರಹಿಸಿಟ್ಟ ಎಣ್ಣೆಯಿಂದ ತಯಾರಿಸಿದ ಪದಾರ್ಥಗಳು ಕಮಟುವಿಕೆಗೆ ಒಳಗಾಗಿ ತನ್ನ ಮೂಲ ರುಚಿ ಹಾಗೂ ವಾಸನೆಯನ್ನು ಕಳೆದುಕೊಂಡು ತಿನ್ನಲು ಯೋಗ್ಯವಲ್ಲದವುಗಳಾಗಿ ಬದಲಾಗುತ್ತದೆ

69) ಕ್ರಿಯಾಶೀಲತೆಯ ಆಧಾರದ ಮೇಲೆ ಲೋಹಗಳನ್ನು ಎಷ್ಟು ಗುಂಪುಗಳನ್ನಾಗಿ ವಿಂಗಡಿಸಬಹುದು? ಯಾವುವು?

ಉತ್ತರ:– ಕ್ರಿಯಾಶೀಲತೆಯ ಆಧಾರದ ಮೇಲೆ ಲೋಹಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಬಹುದು. (i) ಕಡಿಮೆ ಕ್ರಿಯಾಪಟುತ್ವ ಹೊಂದಿರುವ ಲೋಹಗಳು (ii) ಮಧ್ಯಮ ಕ್ರಿಯಾಪಟುತ್ವ ಹೊಂದಿರುವ ಲೋಹಗಳು ಮತ್ತು (iii) ಹೆಚ್ಚಿನ ಕ್ರಿಯಾಪಟುತ್ವ ಹೊಂದಿರುವ ಲೋಹಗಳು.

ಪ್ರತಿಯೊಂದು ಗುಂಪಿನ ಲೋಹಗಳನ್ನು ವಿಭಿನ್ನ ತಂತ್ರಗಳನ್ನು ಬಳಸಿ ಪಡೆಯಲಾಗುತ್ತದೆ.

70) ಸ್ವಪೋಷಕ ಪೋಷಣೆಗೆ ಅಗತ್ಯವಾದ ಪರಿಸ್ಥಿತಿಗಳು ಯಾವುವು?

ಉತ್ತರ:– ಸ್ವಪೋಷಕ ಪೋಷಣೆಗೆ ಅಗತ್ಯವಾದ ಪರಿಸ್ಥಿತಿಗಳು ಎಂದರೆ

* ದ್ಯುತಿಸಂಶ್ಲೇಷಣೆ ಕ್ರಿಯೆಗೆ ಬೇಕಾದ ಕಚ್ಚವಸ್ತುಗಳಾದ ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರು ಲಭ್ಯವಿರಬೇಕು
* ದ್ಯುತಿಸಂಶ್ಲೇಷಣೆ ಕ್ರಿಯೆಗೆ ಬೇಕಾದ ಸೂರ್ಯನ ಬೆಳಕು ಮತ್ತು ಕ್ಲೋರೋಫಿಲ್ ಇರಬೇಕು

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CET PHYSICS

17) The electric field intensity produced by the radiations coming from 100 W bulb at a 3 m distance is E. The electric field intensity produced by the radiations coming from 50 W bulb at the same distance is…………….(Contd)

a) $\frac{E}{2}$ b) 2E
c) $\frac{E}{\sqrt{2}}$ d) $\sqrt{2}$ E

Ans: d

18) If E and B represent electric and magnetic field vectors of the electromagnetic wave, the direction of propagation of electromagnetic wave is along………………

a) **E** b) **B**
c) **B x E** d) **E x B**

Ans:-d

19) The ratio of contributions made by the electric field and magnetic field components to the intensity of an EM wave is………………

a) c : 1 b) c^2 : 1
c) 1 : 1 d) $\sqrt{c}$: 1

20) 12. Two poles are by a distance of 3.14 m. The resolving power of human eye is minute of an arc. The maximum distance from which he can identify the two poles distinctly is

a) 376 m b) 10.8 km
c) 5.4 km d) 188 m

Ans: b **(KCET 2020)**

Expln:-

Given the lateral separation of the poles d=3.14 m

The resolving power of the eye is

$\theta = 1 min = \pi/(60\times180)$ rad

The maximum distance from which poles are distinctly visible is $D = d/\theta$

$\Rightarrow D = (3.14\times60\times180)/\pi = 10800 m = 10.8$ km

21) A stone is thrown vertically at a speed of 30 m s^{-1} making an angle of 45^0 with the horizontal. What is the maximum height reached by the stone? Take g = 10 m s^{-2}.

a) 15m b) 30 m
c) 10 m d) 22.5 m

Soln: (d): Maximum height reached by the stone is

$$H_{max} = \frac{u^2 \sin^2\theta}{2g}$$

Here, $u = 30 \text{ m s}^{-1}, \theta = 45^0, g = 10 \text{ m s}^{-2}$

$$\therefore H_{max} = \frac{(30)^2 \sin^2 45^0}{2\times10} = \frac{30\times30\times\left(\frac{1}{\sqrt{2}}\right)^2}{2\times10}$$

$$= \frac{45}{2} = 22.5 \text{ m}$$

22) A ray light incident at an angle θ on a refracting face of a prism emerges from the other face normally. If the angle of the prism is 5^0 and the prism is made of a material of refractive index 1.5, the angle of incidence is

a) 7.5^0 b) 5^0
c) 15^0 d) 2.5^0

Ans:- a

23) A short pulse of white light is incident from air to a glass slab at normal incidence. After travelling through the slab, the first colour to emerge is

a) blue b) green
c) violet d) red **Ans:-d**

53) A force $\vec{F} = 5\hat{i}+2\hat{j}-5\hat{k}$ acts on a particle whose position vector is $\vec{r} = \hat{i}+2\hat{j}+\hat{k}$ what is the torque about the origin?

(a) $8\hat{i}-10\hat{j}-8\hat{k}$ (b) $8\hat{i}+10\hat{j}+12\hat{k}$
(c) $10\hat{i}-10\hat{j}-\hat{k}$ (d) $8\hat{i}+10\hat{j}-12\hat{k}$

Soln :(b): Here, $\vec{r} = \hat{i}-2\hat{j}+\hat{k}$

$$\vec{F} = 5\hat{i}+2\hat{j}+\hat{k}$$

$$= \begin{bmatrix} \hat{i} & \hat{j} & \hat{k} \\ 1 & -2 & 1 \\ 5 & 2 & -5 \end{bmatrix}$$

$$= \hat{i}(10-2)-\hat{j}(-5-5)+\hat{k}(-2(-10))$$

$$= 8\hat{i}+10\hat{j}+12\hat{k}$$

24) An object approaches a convergent lens from the left of the lens with a uniform speed 5 m/s and stops at the focus. The image

a) moves away from the lens with an uniform speed 5 m/s.
b) moves away from the lens with an uniform acceleration.
c) moves away from the lens with a nonuniform acceleration.
d) moves towards from the lens with a non-uniform acceleration.

Ans:- c

25) A passenger in an aeroplane shall

a) never see a rainbow.
b) may see a primary and a secondary rainbow as concentric circles.
c) may see a primary and a secondary rainbow as concentric arcs.
d) shall never see a secondary rainbow.

Ans:-b

26) A focal length of a lens is 10 cm. What is power of a lens in dioptre?

a) 15 D b) 0.1 D
c) 20 D d) 10 D

Soln: (d): Power of a lens,

$$P \text{ (in dioptre)} = \frac{1}{\text{Focal length } f \text{ (in cm)}}$$

$$= \frac{100}{f \text{ (in cm)}}$$

$$\therefore P = \frac{100}{10} = 10 \text{ D}$$

16 'ಕೈ' ಅಭ್ಯರ್ಥಿಗಳು ಅಖೈರು

ಒಂದನೇ ಪುಟದಿಂದ...

ಕಾಂಗ್ರೆಸ್ ಏಳು ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಈಗಾಗಲೇ ಪ್ರಕಟಿಸಿದೆ. 21 ಕ್ಷೇತ್ರಗಳ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯಿತು. ಕೆಲವು ಕ್ಷೇತ್ರಗಳಲ್ಲಿ ಆಕಾಂಕ್ಷಿಗಳ ತೀವ್ರ ಪೈಪೋಟಿ ಇರುವುದರಿಂದ ಸಭೆ ಅಪೂರ್ಣವಾಯಿತು. ಕಾಂಗ್ರೆಸ್ ನಾಯಕರು ಬುಧವಾರ ಮತ್ತೆ ಸಭೆ ಸೇರಲಿದ್ದಾರೆ. ಕಾಂಗ್ರೆಸ್‌ನ ಎರಡನೇ ಪಟ್ಟಿ ಗುರುವಾರ ಪ್ರಕಟವಾಗುವ ಸಾಧ್ಯತೆ ಇದೆ.

ಕೋಲಾರ ಕ್ಷೇತ್ರದಲ್ಲಿ ತಮ್ಮ ಕುಟುಂಬ ಸದಸ್ಯರಿಗೆ ಟಿಕೆಟ್ ನೀಡಬೇಕು ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಪಟ್ಟು ಹಿಡಿದಿದ್ದಾರೆ. ಕಳೆದ ಎರಡು ದಿನಗಳಿಂದ ದೆಹಲಿಯಲ್ಲಿ ವಾಸ್ತವ್ಯ ಹೂಡಿರುವ ಅವರು ಹೈಕಮಾಂಡ್‌ನ ನಾಯಕರನ್ನು ಭೇಟಿ ಮಾಡಿ ಲಾಬಿ ನಡೆಸಿದ್ದಾರೆ. ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ ಈ ಸಲ ಕುಟುಂಬ ಸದಸ್ಯರಿಗೆ ಅವಕಾಶ ನೀಡಬೇಕು ಎಂದು ಹಕ್ಕೊತ್ತಾಯ ಮಂಡಿಸಿದ್ದಾರೆ. ಸಭೆಗೆ ಮುನ್ನ ಎಐಸಿಸಿ ಕಚೇರಿಗೆ ದೌಡಾಯಿಸಿದ ಮುನಿಯಪ್ಪ ಅವರು ಹೈಕಮಾಂಡ್‌ನ ನಾಯಕರನ್ನು ಭೇಟಿ ಮಾಡಿ ಕೊನೆ ಕ್ಷಣದ ಪ್ರಯತ್ನ ನಡೆಸಿದರು. ಮುನಿಯಪ್ಪ ಕುಟುಂಬ ಸದಸ್ಯರಿಗೆ ಟಿಕೆಟ್ ನೀಡುವುದಕ್ಕೆ ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್, ಶಾಸಕ ಕೊತ್ತೂರು ಮಂಜುನಾಥ್ ಹಾಗೂ ಮಾಜಿ ಸಚಿವ ಕೆ.ಆರ್.ರಮೇಶ್ ಕುಮಾರ್ ಬಣದ ತೀವ್ರ ವಿರೋಧ ಇದೆ. ಮಾದಿಗ ಸಮುದಾಯಕ್ಕೆ ಸೇರಿದ ರಾಜ್ಯಸಭೆಯ ಮಾಜಿ ಸದಸ್ಯ ಡಾ.ಎಲ್. ಹನುಮಂತಯ್ಯ ಅವರನ್ನು ಕಣಕ್ಕೆ ಇಳಿಸಬೇಕು ಎಂದು ಈ ಬಣದವರು ಒತ್ತಡ ಹೇರಿದ್ದಾರೆ. ಅವರನ್ನು ಗೆಲ್ಲಿಸಿಕೊಂಡು ಬರುವ ಹೊಣೆ ತಮ್ಮದು ಎಂದು ಕೇಂದ್ರ ನಾಯಕರಿಗೆ ಭರವಸೆ ನೀಡಿದ್ದಾರೆ. ಈ ಕ್ಷೇತ್ರದ ಕಗ್ಗಂಟನ್ನು ಬಗೆಹರಿಸಲು ಸಾಧ್ಯವಾಗಿಲ್ಲ.

ಚಿತ್ರದುರ್ಗ ಕ್ಷೇತ್ರದಲ್ಲಿ ಬಿ.ಎನ್. ಚಂದ್ರಪ್ಪ ಅವರಿಗೆ ಟಿಕೆಟ್ ನೀಡುವುದಕ್ಕೆ ಹೈಕಮಾಂಡ್‌ಗೆ ಒಲವಿದೆ. 'ಚಂದ್ರಪ್ಪ ಅವರು ಮೂಲತಃ ಕ್ಷೇತ್ರದವರು ಅಲ್ಲ. ಕ್ಷೇತ್ರದ ಹೊರಗಿನವರಿಗೆ ಟಿಕೆಟ್ ನೀಡುವುದು ಸರಿಯಲ್ಲ. ಕಳೆದ ಕೆಲವು ಅವಧಿಗಳಿಂದ ಕ್ಷೇತ್ರದ ಹೊರಗಿನವರೇ ಸಂಸದರಾಗಿ ಆಯ್ಕೆಯಾಗುತ್ತಿದ್ದಾರೆ. ಅದರ ಬದಲು 2009ರ ಸ್ಪರ್ಧಿಸಿದ ತಿಪ್ಪೇಸ್ವಾಮಿ ಅವರಿಗೆ ಅವಕಾಶ ನೀಡಬೇಕು' ಎಂದು ಜಿಲ್ಲೆಯ ಕಾಂಗ್ರೆಸ್ ಶಾಸಕರು ಒತ್ತಾಯಿಸಿದ್ದಾರೆ. ಯುವ ಕೋಟಾದಡಿ ಪುತ್ರ ವಿನಯ್ ತಿಮ್ಮಾಪುರ ಅವರನ್ನು ಹುರಿಯಾಳುವನ್ನಾಗಿ ಮಾಡಬೇಕು ಎಂದು ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಪಟ್ಟು ಹಿಡಿದಿದ್ದಾರೆ. ಸ್ಥಳೀಯರು–ಹೊರಗಿನವರ ಪೈಪೋಟಿಯಿಂದಾಗಿ ಟಿಕೆಟ್ ವಿವಾದ ಇತ್ಯರ್ಥವಾಗಿಲ್ಲ.

ಚಿಕ್ಕಬಳ್ಳಾಪುರದಲ್ಲಿ ರಕ್ಷಾ ರಾಮಯ್ಯ ಹಾಗೂ ಎಚ್.ಎನ್.ಶಿವಶಂಕರ ರೆಡ್ಡಿ ಅವರ ನಡುವೆ ಪೈಪೋಟಿ ತೀವ್ರವಾಗಿದೆ. ಶಿವಶಂಕರ ರೆಡ್ಡಿ ಅವರಿಗೆ ಟಿಕೆಟ್ ನಿರಾಕರಿಸಿದರೆ ಪಕ್ಷಾಂತರ ಮಾಡಬಹುದು ಎಂಬ ಭಯವೂ ಕಾಂಗ್ರೆಸ್ ನಾಯಕರಿಗೆ ಕಾಡುತ್ತಿದೆ. ಜಿಲ್ಲೆಯ ಕೆಲವು ಶಾಸಕರು ರೆಡ್ಡಿ ಅವರ ಬೆನ್ನಿಗೆ ನಿಂತಿದ್ದಾರೆ.

> **21 ಕ್ಷೇತ್ರಗಳ ಬಗ್ಗೆಯೂ ಸಭೆಯಲ್ಲಿ ಚರ್ಚಿಸಲಾಗಿದೆ. 2–3 ಕ್ಷೇತ್ರಗಳನ್ನು ಹೊರತುಪಡಿಸಿ ಉಳಿದ ಕ್ಷೇತ್ರಗಳ ಚರ್ಚೆ ಪೂರ್ಣಗೊಂಡಿದೆ.**
> **ಡಿ.ಕೆ. ಶಿವಕುಮಾರ್**
> ಕೆಪಿಸಿಸಿ ಅಧ್ಯಕ್ಷ

ಚಾಮರಾಜನಗರದಲ್ಲಿ ಪುತ್ರ ಸುನೀಲ್ ಬೋಸ್ ಅವರಿಗೆ ಟಿಕೆಟ್ ಕೊಡಿಸಲು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಇನ್ನಿಲ್ಲದ ಪ್ರಯತ್ನ ಮಾಡುತ್ತಿದ್ದಾರೆ. 'ಪುತ್ರನಿಗೆ ಎರಡು–ಮೂರು ಸಲ ಅವಕಾಶ ನಿರಾಕರಿಸಲಾಗಿದೆ. ಪಕ್ಷಕ್ಕಾಗಿ ದುಡಿದಿರುವ ಪುತ್ರನಿಗೆ ಅವಕಾಶ ನೀಡಲೇಬೇಕು' ಎಂದು ಮಹದೇವಪ್ಪ ಹಟ ಹಿಡಿದಿದ್ದಾರೆ. ಬೋಸ್ ಅಭ್ಯರ್ಥಿತನಕ್ಕೆ ಜಿಲ್ಲೆಯ ಕಾಂಗ್ರೆಸ್ ಶಾಸಕರ ವಿರೋಧವಿದೆ. ಮಾಜಿ ಶಾಸಕ ನಂಜುಂಡಸ್ವಾಮಿ ಅವರ ಹೆಸರು ಮುನ್ನೆಲೆಗೆ ಬಂದಿದೆ. ಕಳೆದ ಎರಡು ದಿನಗಳಿಂದ ರಾಷ್ಟ್ರ ರಾಜಧಾನಿಯಲ್ಲಿ ಬೀಡು ಬಿಟ್ಟಿರುವ ನಂಜುಂಡಸ್ವಾಮಿ ಅವರು ಹೈಕಮಾಂಡ್‌ನ ನಾಯಕರನ್ನು ಭೇಟಿ ಮಾಡಿ ಅವಕಾಶ ನೀಡುವಂತೆ ಕೋರಿಕೊಂಡಿದ್ದಾರೆ.

ಸಚಿವರ ಮಕ್ಕಳು ಕಣಕ್ಕೆ: ಬಾಗಲಕೋಟೆಯಿಂದ ಸಕ್ಕರೆ ಸಚಿವ ಶಿವಾನಂದ ಪಾಟೀಲ ಪುತ್ರಿ ಸಂಯುಕ್ತ ಪಾಟೀಲ, ಚಿಕ್ಕೋಡಿಯಲ್ಲಿ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಪುತ್ರಿ ಪ್ರಿಯಾಂಕಾ ಜಾರಕಿಹೊಳಿ ಹಾಗೂ ಬೆಳಗಾವಿಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಪುತ್ರ ಮೃಣಾಲ್ ಹೆಬ್ಬಾಳಕರ ಹೆಸರನ್ನು ಅಂತಿಮಗೊಳಿಸಲಾಗಿದೆ. ಈ ಮೂಲಕ ಮೂರು ಕ್ಷೇತ್ರಗಳಲ್ಲಿ ಸಚಿವರ ಮಕ್ಕಳಿಗೆ ಮಣೆ ಹಾಕಲಾಗಿದೆ. ದಾವಣಗೆರೆಯಲ್ಲಿ ಗಣಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ ಪತ್ನಿ ಪ್ರಭಾ ಅವರನ್ನು ಕಣಕ್ಕಿಳಿಸಲಾಗುತ್ತಿದೆ. ಕಲಬುರಗಿ ಕ್ಷೇತದಲ್ಲಿ ಮಲ್ಲಿಕಾರ್ಜುನ ಖರ್ಗೆ ಅಳಿಯ ರಾಧಾಕೃಷ್ಣ ದೊಡ್ಡಮನಿ ಅವರ ಹೆಸರನ್ನು ಬಹುತೇಕ ಅಂತಿಮಗೊಳಿಸಲಾಗಿದೆ. ಬುಧವಾರದ ಸಭೆಯಲ್ಲಿ ಮತ್ತೊಂದು ಸುತ್ತು ಚರ್ಚೆ ಮಾಡಲು ತೀರ್ಮಾನಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಕಮಲ ಪಾಳಯ–ತಡರಾತ್ರಿ ಕಸರತ್ತು

ಕರ್ನಾಟಕದ 20 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಘೋಷಣೆ ನಂತರ ಭುಗಿಲೆದ್ದಿರುವ ಭಿನ್ನಮತ ಹಾಗೂ ಉಳಿದ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಅಂತಿಮಗೊಳಿಸುವ ಸಂಬಂಧ ಬಿಜೆಪಿ ವರಿಷ್ಠರು ರಾಜ್ಯ ನಾಯಕರೊಂದಿಗೆ ತಡರಾತ್ರಿ ಯವರೆಗೆ ಸಮಾಲೋಚನೆ ನಡೆಸಿದರು.

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ರಾಜ್ಯ ಸಂಘಟನಾ ಕಾರ್ಯದರ್ಶಿ ರಾಜೇಶ್ ಮತ್ತಿತರ ನಾಯಕರು ಭಾಗಿಯಾದರು. ಮೂರು ಕ್ಷೇತ್ರಗಳನ್ನು ಬಿಟ್ಟುಕೊಡುವಂತೆ ಜೆಡಿಎಸ್ ಪಟ್ಟು ಹಿಡಿದಿದೆ. ಎರಡು ಕ್ಷೇತ್ರಗಳನ್ನು ಮಾತ್ರ ನೀಡಲು ಬಿಜೆಪಿ ಒಲವು ತೋರಿದೆ. ಜೆಡಿಎಸ್ ನಾಯಕರೊಂದಿಗೆ ಇನ್ನೊಂದು ಸುತ್ತು ಮಾತುಕತೆ ನಡೆಸಿ ಸೀಟು ಹಂಚಿಕೆ ಅಂತಿಮಗೊಳಿಸಲು ನಿರ್ಧರಿಸಲಾಯಿತು. ಐದು ಕ್ಷೇತ್ರಗಳಿಗೆ ಸಂಭಾವ್ಯರ ಹೆಸರನ್ನು ಅಂತಿಮಗೊಳಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ಇತ್ಯರ್ಥಕ್ಕೆ ಬಾಕಿ ಇರುವ ಕ್ಷೇತ್ರಗಳು	
ಚಿತ್ರದುರ್ಗ	ಬಿ.ಎನ್.ಚಂದ್ರಪ್ಪ/ ಜೆ.ಜೆ.ಹಟ್ಟಿ ತಿಪ್ಪೇಸ್ವಾಮಿ
ಚಾಮರಾಜನಗರ	ಸುನೀಲ್ ಬೋಸ್/ನಂಜುಂಡಸ್ವಾಮಿ
ಕೋಲಾರ	ಡಾ.ಎಲ್.ಹನುಮಂತಯ್ಯ/ ಕೆ.ಎಚ್.ಮುನಿಯಪ್ಪ ಕುಟುಂಬ
ಚಿಕ್ಕಬಳ್ಳಾಪುರ	ರಕ್ಷಾ ರಾಮಯ್ಯ/ಎಚ್.ಎನ್.ಶಿವಶಂಕರ ರೆಡ್ಡಿ
ಬಳ್ಳಾರಿ	ಸೌಪರ್ಣಿಕಾ (ಚೈತನ್ಯಾ) ತುಕಾರಾಮ್/ ವಿ.ಎಸ್.ಉಗ್ರಪ್ಪ

'ಮೈತ್ರಿಯಲ್ಲಿ ಸಮಸ್ಯೆ ಇಲ್ಲ'

ಒಂದನೇ ಪುಟದಿಂದ...

ಮಂಡ್ಯ, ಹಾಸನ ಮತ್ತು ಕೋಲಾರದಲ್ಲಿ ಜೆಡಿಎಸ್ ಅಭ್ಯರ್ಥಿಗಳು ಕಣಕ್ಕಿಳಿಯಲಿದ್ದಾರೆ. ಕೋಲಾರ ಅಭ್ಯರ್ಥಿಗೆ ಸಂಬಂಧಿಸಿದ ವಿಷಯ ಶೀಘ್ರ ಇತ್ಯರ್ಥವಾಗಲಿದೆ. ಚಿಕಿತ್ಸೆ ಮುಗಿಸಿ ಬಂದ ಬಳಿಕ ಅಭ್ಯರ್ಥಿಗಳ ಹೆಸರು ಪ್ರಕಟಿಸಲಾಗುವುದು ಎಂದು ಹೇಳಿದರು.

'ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಕಾಂಗ್ರೆಸ್‌ನ ನಾಯಕರು ನಮ್ಮ ಪಕ್ಷದ ಬಗ್ಗೆ ಈಗ ಅನುಕಂಪದ ಮಾತನಾಡುತ್ತಿದ್ದಾರೆ. ಬಿಜೆಪಿ ಜತೆ ಮೈತ್ರಿ ಮಾಡಿಕೊಂಡ ಕಾರಣಕ್ಕೆ ಜೆಡಿಎಸ್ ಮುಗಿದು ಹೋಯಿತು ಎಂದು ಹೇಳುತ್ತಿದ್ದಾರೆ. ಇವರ ಒಣ ಅನುಕಂಪ ನನಗೆ ಬೇಕಿಲ್ಲ. ರಾಜ್ಯದಲ್ಲಿರುವ ಪಾಪದ ಸರ್ಕಾರದ ವಿರುದ್ಧ ನಾವು ಒಟ್ಟಾಗಿದ್ದೇವೆ' ಎಂದು ಹೇಳಿದರು.

'2018ರಲ್ಲಿ ನಮ್ಮ ಮನೆ ಬಾಗಿಲಿಗೆ ಬಂದು ಮೈತ್ರಿ ಸರ್ಕಾರ ರಚಿಸಿದ ಕಾಂಗ್ರೆಸ್, ಅದೇ ಅವಕಾಶ ಬಳಸಿಕೊಂಡು ಜೆಡಿಎಸ್ ಪಕ್ಷವನ್ನು ದುರ್ಬಲಗೊಳಿಸುವ ಪ್ರಯತ್ನ ಆರಂಭಿಸಿತ್ತು. ನಮ್ಮ ಮುಖಂಡರು, ಕಾರ್ಯಕರ್ತರಿಗೆ ಆಮಿಷ ಒಡ್ಡಿ ತನ್ನತ್ತ ಸೆಳೆಯುವ ಕೆಲಸ ಮಾಡಿತ್ತು. ಜೆಡಿಎಸ್ ಅನ್ನು ದುರ್ಬಲಗೊಳಿಸುವ ಕಾಂಗ್ರೆಸ್‌ನ ಪ್ರಯತ್ನವನ್ನು ತಡೆಯುವುದಕ್ಕಾಗಿಯೇ ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿದ್ದೇವೆ' ಎಂದು ಕುಮಾರಸ್ವಾಮಿ ಹೇಳಿದರು.

'ನನ್ನನ್ನು ಕಾಂಗ್ರೆಸ್ ನಾಯಕರು ಹೇಗೆ ನಡೆಸಿಕೊಂಡಿದ್ದರು ಎಂಬುದು ಗೊತ್ತಿದೆ. ಬಿಜೆಪಿಯವರು ಯಾವತ್ತೂ ಅಗೌರವದಿಂದ ನಡೆಸಿಕೊಂಡಿಲ್ಲ. ಮೈತ್ರಿ ಸರ್ಕಾರ ಪತನಗೊಳಿಸುವುದಲ್ಲಿ ನಿಮ್ಮ ಪಾತ್ರ ಏನು ಎಂಬುದು ಗೊತ್ತಿದೆ. ನಿಮ್ಮಂತೆ ಬಿಜೆಪಿಯವರು ನಮ್ಮ ಕತ್ತು ಕೊಯ್ದಿಲ್ಲ' ಎಂದು ಶಿವಕುಮಾರ್ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಉದ್ದೇಶಿಸಿ ವಾಗ್ದಾಳಿ ನಡೆಸಿದರು.

ನಿಧಿ ಬಳಕೆ: ಮಸೂದೆ ವಾಪಸ್

ಒಂದನೇ ಪುಟದಿಂದ...

ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ನಾಲ್ವರು ಸಾಮಾನ್ಯ ಸದಸ್ಯರಲ್ಲಿ ವಿಶ್ವಕರ್ಮ ಸಮುದಾಯದ ಒಬ್ಬರಿಗೆ ಅವಕಾಶ. ಮುಜರಾಯಿ ದೇವಸ್ಥಾನಗಳ ಜಮೀನುಗಳ ಒತ್ತುವರಿ ತೆರವಿಗೆ ಕಾರ್ಯಪಡೆ ರಚಿಸುವ ಪ್ರಸ್ತಾವವೂ ಇದೆ.

ಈ ಮಸೂದೆಯನ್ನು ರದ್ದುಗೊಳಿಸಬೇಕು ಎಂದು ಕರ್ನಾಟಕ ದೇವಸ್ಥಾನಗಳ ಮಹಾಸಂಘ ರಾಜ್ಯಪಾಲರಿಗೆ ಮನವಿ ಸಲ್ಲಿಸಿತ್ತು. ಮಸೂದೆಯನ್ನು ವಾಪಸ್ ಪಡೆಯುವಂತೆ ವಿರೋಧ ಪಕ್ಷಗಳು ಸದನದಲ್ಲಿ ಪಟ್ಟು ಹಿಡಿದಾಗ, 'ಈ ನಿಧಿಯನ್ನು ಬಳಸಿಕೊಂಡು 34 ಸಾವಿರ ಮುಜರಾಯಿ ದೇವಸ್ಥಾನಗಳ ಅರ್ಚಕರಿಗೆ ವಿಮಾ ಸೌಲಭ್ಯ ಒದಗಿಸುವ ಪ್ರಸ್ತಾವ ಇಲಾಖೆಯ ಮುಂದಿದೆ' ಎಂದು ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ಸಮರ್ಥಿಸಿದರು.

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ,
(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)

ಪೋಡಿಯಂ ಬ್ಲಾಕ್, 3ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು–560001

ಸ್ಥಿರಾಸ್ತಿಯ ಇ–ಹರಾಜಿಗೆ ಆಹ್ವಾನ / ಸೂಚನೆ

Pursuant to attachment of Immovable properties by the Government under the provisions of the Karnataka Protection of Interest of Depositors in Financial Establishments Act, 2004 (KPIDFE Act) and pursuant to the absolute attachment order by the Hon'ble Special Court the Special Officer & Competent Authority (under KPIDFE-IMA and other Scam), is issuing notice for e-auction of the immovable property through e-auction on 'as is where is and whatever there is basis'.

The intending bidders will be required to furnish Earnest Money Deposit (EMD) (as mentioned against each auction in the e-portal provided by the Service Provider/Karnataka Public Procurement Portal only).

Short description of the Immovable Property

Sl. No.	DETAILS OF THE PROPERTY (Clear Title by Court in order No. MISC No. 598/2022)						RESERVE PRICE (Rs)	EMD (Rs)	Bid Increase Value (Rs)	Clear Title
	Village	Hobli	Taluk	District	Sy No	Area				
1.	Muduguru	Therakanabi	Gundlapete	Chamarajanagara	62/2	0 Acre 32 Guntas	7,20,000/-	72,000/-	7,200/-	RTC /Khata stands in the name of Competent Authority appointed by Government under KPIDFE Act
	Google Map: https://maps.app.goo.gl/kdMVXehaJTo8Ka1Z8 Latitude and Longitude : 11°51'44.4"N 76°46'30.3"E									
2.	Muduguru	Therakanabi	Gundlapete	Chamarajanagara	63/1	2 Acre 12.08 Guntas	20,81,250/-	2,08,125/-	20,813/-	
	Google Map: https://maps.app.goo.gl/WrubJyMYscYEH7bBA Latitude and Longitude : 11°51'44.5"N 76°46'26.9"E									
3.	Muduguru	Therakanabi	Gundlapete	Chamarajanagara	63/3	2 Acre 12.08 Guntas	20,81,250/-	2,08,125/-	20,813/-	
	Google Map: https://maps.app.goo.gl/WrubJyMYscYEH7bBA Latitude and Longitude : 11°51'44.5"N 76°46'26.9"E									
4.	Muduguru	Therakanabi	Gundlapete	Chamarajanagara	62/4	2 Acre 08 Guntas	19,80,000/-	1,98,000/-	19,800/-	
	Google Map: https://maps.app.goo.gl/kdMVXehaJTo8Ka1Z8 Latitude and Longitude : 11°51'44.4"N 76°46'30.3"E									
5.	Muduguru	Therakanabi	Gundlapete	Chamarajanagara	63/4	0 Acre 005 Guntas	1,12,500/-	11,250/-	1,125/-	
	Google Map: https://maps.app.goo.gl/WrubJyMYscYEH7bBA Latitude and Longitude : 11°51'44.5"N 76°46'26.9"E									
6.	Muduguru	Therakanabi	Gundlapete	Chamarajanagara	62/1	0 Acre 20 Guntas	4,50,000/-	45,000/-	4,500/-	
	Google Map: https://maps.app.goo.gl/kdMVXehaJTo8Ka1Z8 Latitude and Longitude : 11°51'44.4"N 76°46'30.3"E									
7.	Muduguru	Therakanabi	Gundlapete	Chamarajanagara	62/3	1 Acre 25 Guntas	14,62,500/-	1,46,250/-	14,625/-	
	Google Map: https://maps.app.goo.gl/kdMVXehaJTo8Ka1Z8 Latitude and Longitude : 11°51'44.5"N 76°46'26.9"E									
8.	Bogganapura	Beguru	Gundlapete	Chamarajanagara	79/2	0 Acre 27.08 Guntas	8,25,000/-	82,500/-	8,250/-	
	Google Map: https://maps.app.goo.gl/MrsTZ4Lz677yLg3N7 Latitude and Longitude : 11°57'29.5"N 76°43'05.2"E									
9.	Bogganapura	Beguru	Gundlapete	Chamarajanagara	80/2	1 Acre 12 Guntas	15,60,000/-	1,56,000/-	15,600/-	
	Google Map: https://maps.app.goo.gl/J98zJcfMKsybBF2K8 Latitude and Longitude : 11°57'33.1"N 76°43'04.9"E									
10.	Bogganapura	Beguru	Gundlapete	Chamarajanagara	80/3	1 Acre 06 Guntas	13,80,000/-	1,38,000/-	1,380/-	
	Google Map: https://maps.app.goo.gl/J98zJcfMKsybBF2K8 Latitude and Longitude : 11°57'33.1"N 76°43'04.9"E									
11.	Bogganapura	Beguru	Gundlapete	Chamarajanagara	63/2	1 Acre 17 Guntas	17,10,000/-	1,71,000/-	17,100/-	
	Google Map: https://maps.app.goo.gl/Ygn8WbqZ1YiYwcf46 Latitude and Longitude : 11°57'30.1"N 76°42'54.1"E									
12.	Bogganapura	Beguru	Gundlapete	Chamarajanagara	79/1	1 Acre 20 Guntas	18,00,000/-	1,80,000/-	18,000/-	
	Google Map: https://maps.app.goo.gl/J98zJcfMKsybBF2K8 Latitude and Longitude : 11°57'33.1"N 76°43'04.9"E									
13.	Bogganapura	Beguru	Gundlapete	Chamarajanagara	60/2	1 Acre 02 Guntas	12,60,000/-	1,26,000/-	12,600/-	
	Google Map: https://maps.app.goo.gl/YR7p3NSG7xEttGGx5 Latitude and Longitude : 11°57'35.3"N 76°42'58.4"E									
14.	Bogganapura	Beguru	Gundlapete	Chamarajanagara	60/3	1 Acre 01 Guntas	12,30,000/-	1,23,000/-	12,300/-	
	Google Map: https://maps.app.goo.gl/YR7p3NSG7xEttGGx5 Latitude and Longitude : 11°57'35.3"N 76°42'58.4"E									
15.	Bogganapura	Beguru	Gundlapete	Chamarajanagara	61/3	2 Acre 10 Guntas	27,00,000/-	2,70,000/-	27,000/-	
	Google Map: https://maps.app.goo.gl/iuPUtx6HvP86Pnms9 Latitude and Longitude : 11°57'35.5"N 76°43'01.1"E									
16.	Bogganapura	Beguru	Gundlapete	Chamarajanagara	62/1	1 Acre 25 Guntas	19,50,000/-	1,95,000/-	19,500/-	
	Google Map: https://maps.app.goo.gl/nsXniFTSqs5yfCV57 Latitude and Longitude : 11°57'30.3"N 76°43'00.6"E									
17.	Bogganapura	Beguru	Gundlapete	Chamarajanagara	62/2	2 Acre 23 Guntas	30,90,000/-	3,09,000/-	30,900/-	
	Google Map: https://maps.app.goo.gl/nsXniFTSqs5yfCV57 Latitude and Longitude : 11°57'30.3"N 76°43'00.6"E									
18.	Bogganapura	Beguru	Gundlapete	Chamarajanagara	63/3	1 Acre 00 Guntas	12,00,000/-	1,20,000/-	12,000/-	
	Google Map: https://maps.app.goo.gl/Ygn8WbqZ1YiYwcf46 Latitude and Longitude : 11°57'30.1"N 76°42'54.1"E									
19.	Bogganapura	Beguru	Gundlapete	Chamarajanagara	63/4	1 Acre 01 Guntas	12,30,000/-	1,23,000/-	12,300/-	
	Google Map: https://maps.app.goo.gl/Ygn8WbqZ1YiYwcf46 Latitude and Longitude : 11°57'30.1"N 76°42'54.1"E									
20.	Bogganapura	Beguru	Gundlapete	Chamarajanagara	76/3	1 Acre 22 Guntas	18,60,000/-	1,86,000/-	18,600/-	
	Google Map: https://maps.app.goo.gl/phAsDhdwrHT8utFj9 Latitude and Longitude : 11°57'26.8"N 76°42'57.8"E									
21.	Bogganapura	Beguru	Gundlapete	Chamarajanagara	77	1 Acre 18 Guntas	17,40,000/-	1,74,000/-	17,400/-	
	Google Map: https://maps.app.goo.gl/phAsDhdwrHT8utFj9 Latitude and Longitude : 11°57'26.8"N 76°42'57.8"E									
22.	Yalachigere	Haradanahalli	Chamarajanagara	Chamarajanagara	37	4 Acre 00 Guntas	20,00,000/-	2,00,000/-	20,000/-	
	Google Map: https://maps.app.goo.gl/TmJbySoP2hZ96cqx7 Latitude and Longitude : 11°49'39.2"N 76°55'12.8"E									
23.	Yalachigere	Haradanahalli	Chamarajanagara	Chamarajanagara	37	4 Acre 22 Guntas	22,75,000/-	2,27,500/-	22,750/-	
	Google Map: https://maps.app.goo.gl/TmJbySoP2hZ96cqx7 Latitude and Longitude : 11°49'39.2"N 76°55'12.8"E									
24.	Yalachigere	Haradanahalli	Chamarajanagara	Chamarajanagara	84	6 Acre 12 Guntas	31,50,000/-	3,15,000/-	31,500/-	
	Google Map: https://maps.app.goo.gl/J8dsPtxozZhU19Fm9 Latitude and Longitude : 11°48'52.5"N 76°55'59.9"E									
25.	Muduguru	Therakanambi	Gundlapete	Chamarajanagara	63/2	1 Acre 16 Guntas	12,60,000/-	1,26,000/-	12,600/-	
	Google Map: https://maps.app.goo.gl/WrubJyMYscYEH7bBA Latitude and Longitude : 11°51'44.5"N 76°46'26.9"E									
	DETAILS OF THE PROPERTY (Clear Title by Court in order No. MISC No. 868/2022)									
26.	Vijayapura	Thalakadu	T Narasipura	Mysore	131/2	0 Acre 39 Guntas	5,85,000/-	58,500/-	5,850/-	
	Google Map: https://maps.app.goo.gl/PJ5QP9DqSgUKxRF7A Latitude and Longitude : 12°12'41.3"N 77°03'27.0"E									
27.	Innam Uttanahalli	Varuna	Mysore	Mysore	27/6	0 Acre 01 Guntas	1,00,000/-	10,000/-	1,000/-	
	Google Map: https://maps.app.goo.gl/9iCe6HUV9ZH8RJwf7 Latitude and Longitude : 12°15'15.1"N 76°49'30.9"E									
28.	Innam Uttanahalli	Varuna	Mysore	Mysore	27/7	0 Acre 39 Guntas	39,00,000/-	3,90,000/-	39,000/-	
	Google Map: https://maps.app.goo.gl/9iCe6HUV9ZH8RJwf7 Latitude and Longitude : 12°15'15.1"N 76°49'30.9"E									
	DETAILS OF THE PROPERTY (Clear Title by Court in order No. Criminal MISC No. 919/2017)									
29.	Khata No.2687/A, Assesment No.2737/A, Site No.69/A measuring 22*45 located at Vidyanagar, Jagaluru Town, Davanagere District.						14,85,000/-	1,48,500/-	14,850/-	
	Google Map: https://maps.app.goo.gl/s9UuCagLHiBcJStd6 Latitude and Longitude : 14°31'01.0"N 76°20'24.1"E									

ಪ್ರಿ–ಬಿಡ್ ಮೀಟಿಂಗ್ ದಿನಾಂಕ ಸಮಯ ಮತ್ತು ಸ್ಥಳ	ಪರಿಶೀಲನೆಯ ದಿನಾಂಕ ಮತ್ತು ಸಮಯ	ಬಿಡ್ ದಾಖಲೆಗಳು ಮತ್ತು ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ	ಇ–ಹರಾಜಿನ ದಿನಾಂಕ ಮತ್ತು ಸಮಯ
18ನೇ ಏಪ್ರಿಲ್ 2024, ಮಧ್ಯಾಹ್ನ 3.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ಸ್ಥಳ: ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಛೇರಿ,3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು–01,	19ನೇ ಏಪ್ರಿಲ್ 2024, ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ	20ನೇ ಏಪ್ರಿಲ್ 2024, ಸಂಜೆ 5.00 ಗಂಟೆಯೊಳಗೆ	23ನೇ ಏಪ್ರಿಲ್ 2024, ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 1.00 ಗಂಟೆಯವರೆಗೆ

For Registration & Online Auction, you can login to: https://kppp.karnataka.gov.in (Helpdesk No: 080-46010000, 080-68948777) The interested bidders who require auction related information can contact Joint Secretary, Office of the Special Officer & Competent Authority, 3rd Floor, Podium Block, Visveswariah Towers, Dr.Ambedkar Veedi, Bengaluru-560001, e-mail ID: splocaeauction@gmail.com or Contact Mob. No 8217203930.

ಸ್ಥಳ: ಬೆಂಗಳೂರು
ದಿನಾಂಕ: 18–03–2024

ಸಹಿ/–
DIPR/CP/4395/ZEN/2023-24 ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು, (ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು), ಬೆಂಗಳೂರು

ಪ್ರಜಾ ಮತ

‘ಪರ್ಯಾಯ ನಾಯಕ ಆಗುತ್ತಾನೆ ಎಂದು ನನ್ನನ್ನು ತುಳಿಯುತ್ತಲೇ ಬಂದರು’

‘ಯಡಿಯೂರಪ್ಪ ಹೈಕಮಾಂಡ್‌ಗೆ ಮಂಕುಬೂದಿ ಎರಚಿದ್ದಾರೆ...’



●ಯಡಿಯೂರಪ್ಪ ವಿರುದ್ಧ ಸೇಡು ತೀರಿಸಿಕೊಳ್ಳಲು ಅವರ ಪುತ್ರನ ವಿರುದ್ಧ ಸ್ಪರ್ಧಿಸುತ್ತಿದ್ದೀರಾ?

ಇಲ್ಲ. ಪಕ್ಷದ ಸಿದ್ಧಾಂತಕ್ಕೆ ವಿರುದ್ಧವಾದ ರಾಜಕಾರಣ ಕರ್ನಾಟಕದಲ್ಲಿ ನಡೆಯುತ್ತಿದೆ. ಬಿಜೆಪಿ ಇಲ್ಲಿ ಒಂದೇ ಕುಟುಂಬದ ಕಪಿಮುಷ್ಟಿಯಲ್ಲಿದೆ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸ್ಥಾನವನ್ನು 6 ತಿಂಗಳು ಖಾಲಿ ಇಟ್ಟು ಪುತ್ರ ವಿಜಯೇಂದ್ರನನ್ನು ಪ್ರತಿಷ್ಠಾಪಿಸಿದರು. ಇನ್ನೊಬ್ಬ ಪುತ್ರ ಸಂಸದ. ಪಕ್ಷ ಸಂಘಟನೆ ಮಾಡಿದವರಿಗೆ ಇಲ್ಲಿ ಬೆಲೆಯೇ ಇಲ್ಲ. ಎಲ್ಲ ಜಿಲ್ಲೆಗಳಲ್ಲೂ ಯಡಿಯೂರಪ್ಪ ನಿಷ್ಠರದ್ದೊಂದು ಗುಂಪು ಮಾಡಿಟ್ಟಿದ್ದಾರೆ. ಹಿಂದುತ್ವದ ಪರ ಇರುವ ಎಲ್ಲರನ್ನೂ ಬದಿಗೆ ಸರಿಸುತ್ತಿದ್ದಾರೆ. ಯಡಿಯೂರಪ್ಪ ಪಕ್ಷಕ್ಕೆ ಏನೇನು ಅನ್ಯಾಯ ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಚರ್ಚೆ ಆಗಬೇಕಿದೆ. ಈ ಕಾರಣಕ್ಕೆ ಸ್ಪರ್ಧಿಸುತ್ತಿರುವೆ.

ಪ್ರಜಾವಾಣಿ ಸಂದರ್ಶನ

ಕೆ.ಎಸ್.ಈಶ್ವರಪ್ಪ



● ವೆಂಕಟೇಶ ಜಿ.ಎಚ್.

ಲೋಕಸಭಾ ಚುನಾವಣೆಗೆ ಪುತ್ರ ಕೆ.ಈ.ಕಾಂತೇಶ್‌ಗೆ ಹಾವೇರಿ–ಗದಗ ಕ್ಷೇತ್ರದ ಟಿಕೆಟ್ ಕೈತಪ್ಪಿದ್ದಕ್ಕೆ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ವಿರುದ್ಧ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಮುನಿಸಿಕೊಂಡಿದ್ದಾರೆ. ಬಂಡಾಯದ ಕಹಳೆ ಊದಿ ಶಿವಮೊಗ್ಗ ಕ್ಷೇತ್ರದಿಂದ ಸ್ವತಂತ್ರ ಸ್ಪರ್ಧೆ ಎಂದು ಘೋಷಿಸಿದ್ದಾರೆ. ಚುನಾವಣೆ ತಯಾರಿ ಆರಂಭಿಸಿರುವ ಈಶ್ವರಪ್ಪ ಮಂಗಳವಾರ ಬೆಳಿಗ್ಗೆ ಸಿಗಂದೂರು ಕ್ಷೇತ್ರಕ್ಕೆ ತೆರಳುವ ವೇಳೆ ‘ಪ್ರಜಾವಾಣಿ’ಯೊಂದಿಗೆ ಮಾತಿಗೆ ಸಿಕ್ಕರು.

●ಕರ್ನಾಟಕದ ಬಿಜೆಪಿಯ ಮಟ್ಟಿಗೆ ನೀವಿಬ್ಬರೂ (ಯಡಿಯೂರಪ್ಪ–ಈಶ್ವರಪ್ಪ) ಜೋಡೆತ್ತುಗಳು. ಮುನಿಸು ಶುರುವಾಗಿದ್ದು ಏಕೆ? ಬಿರುಕು ಮೂಡಿಸಿದ್ದು ಯಾರು?

ಬಿರುಕು ಯಾರೂ ಮೂಡಿಸಿಲ್ಲ. ಬದಲಿಗೆ ಯಡಿಯೂರಪ್ಪ ಮುಂಚಿನಿಂದಲೂ ತಾವು ಮಾತ್ರ ಬೆಳೆಯಬೇಕು, ಬೇರೆ ಯಾರೂ ಬೆಳೆಯಬಾರದು ಎಂಬ ಲೆಕ್ಕದಲ್ಲಿ ಬಂದವರು. ಅವರೊಂದಿಗೆ ವೈಚಾರಿಕ ಭಿನ್ನಾಭಿಪ್ರಾಯ ಏನೂ ಇಲ್ಲ. ಆದರೆ, ಈಶ್ವರಪ್ಪ ಪಕ್ಷದಲ್ಲಿ ಬೆಳೆಯುತ್ತಿದ್ದಾನೆ. ನನಗೆ ಪರ್ಯಾಯ ನಾಯಕ ಆಗುತ್ತಾನೆ ಎಂಬುದು ತಲೆಯಲ್ಲಿ ಹೊಕ್ಕಿತು. ಅದರ ಭಾಗವಾಗಿ ಅಮಿತ್ ಶಾ ಮೇಲೆ ಒತ್ತಡ ಹಾಕಿ ಹಿಂದುಳಿದವರು, ಪರಿಶಿಷ್ಟರನ್ನು ಸಂಘಟಿಸಿ ಆಗ ನಾನು ಕಟ್ಟಿದ್ದ ಸಂಗೊಳ್ಳಿ ರಾಯಣ್ಣ ಬ್ರಿಗೇಡ್ ಬರ್ಖಾಸ್ತು ಮಾಡಿಸಿದರು. ಆಗಲೂ ಪಕ್ಷದ ಸೂಚನೆ ಪಾಲಿಸಿದ್ದೆ. ಅದು ಯಡಿಯೂರಪ್ಪ ಅವರಿಂದ ನನಗಾದ ಮೊದಲ ತುಳಿತದ ಅನುಭವ.

ಗೆಲ್ಲುವುದು ಕಷ್ಟ. ಬೇಡ ಎಂದು ಹೇಳಿದರೂ ಕೇಂದ್ರ ರೇಷ್ಮೆ ಮಂಡಳಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಡಿಸಿ ಕನಕಪುರದಲ್ಲಿ ದೇವೇಗೌಡರ ಎದುರು ಚುನಾವಣೆಗೆ ನಿಲ್ಲಿಸಿದ್ದರು. ಗುತ್ತಿಗೆದಾರ ಸಂತೋಷ ಪಾಟೀಲ ಪ್ರಕರಣದಲ್ಲಿ ನನಗೆ ಕ್ಲೀನ್‌ಚಿಟ್ ಸಿಕ್ಕರೂ ಸಂಪುಟಕ್ಕೆ ತೆಗೆದುಕೊಳ್ಳಲು ಬಿಡಲಿಲ್ಲ. ನನಗೆ ಮಂತ್ರಿ ಮಾಡಿದರೆ ಪುತ್ರ ವಿಜಯೇಂದ್ರ ಅವರನ್ನೂ ಮಾಡಬೇಕು ಎಂಬ ಷರತ್ತು ಮುಂದಿಟ್ಟಿದ್ದರು.

●ಪುತ್ರನಿಗೆ ಟಿಕೆಟ್ ನಿರಾಕರಿಸಿದ್ದು ಹೈಕಮಾಂಡ್ ತೀರ್ಮಾನ. ಅದಕ್ಕೆ ಯಡಿಯೂರಪ್ಪ ಹೇಗೆ ಹೊಣೆ?

ಟಿಕೆಟ್ ಕೊಡಿಸಿ ಓಡಾಡಿ ಗೆಲ್ಲಿಸುವುದಾಗಿ ಹೇಳಿ ಯಡಿಯೂರಪ್ಪ ವರ್ಷದ ಹಿಂದೆ ಕಾಂತೇಶನನ್ನು ಹಾವೇರಿಗೆ ಕಳಿಸಿದ್ದರು. ಈಗ ನಂಬಿಕೆ ದ್ರೋಹ ಮಾಡಿದ್ದಾರೆ. ಚುನಾವಣಾ ಸಮಿತಿ ತೀರ್ಮಾನಕ್ಕೆ ಮುನ್ನವೇ ಚಿಕ್ಕಮಗಳೂರು–ಉಡುಪಿ ಕ್ಷೇತ್ರಕ್ಕೆ ಶೋಭಾ ಕರಂದ್ಲಾಜೆ ಹೆಸರನ್ನು ಯಡಿಯೂರಪ್ಪ ಘೋಷಿಸಿದ್ದರು. ಕಾರ್ಯಕರ್ತರಿಂದ ಅಲ್ಲಿ ವಿರೋಧ ವ್ಯಕ್ತವಾಗಿದ್ದಕ್ಕೆ ಬೆಂಗಳೂರು ಉತ್ತರಕ್ಕೆ ಕೊಡಿಸಿದರು. ತಾವು ಇಷ್ಟಪಟ್ಟ ಅಭ್ಯರ್ಥಿಗೆ ಟಿಕೆಟ್ ಕೊಡಿಸಲು ಹೈಕಮಾಂಡ್ ಬೇಡ. ಆದರೆ, ಈಶ್ವರಪ್ಪನ ಮಗನ ವಿಚಾರದಲ್ಲಿ ಅತ್ತ ಕೈತೋರುವುದು ಏಕೆ? ಅನಾರೋಗ್ಯದ ಕಾರಣ ಇರಿಸಿದರೂ ಬಸವರಾಜ ಬೊಮ್ಮಾಯಿಗೆ ಬಲವಂತವಾಗಿ ಟಿಕೆಟ್ ಕೊಟ್ಟಿದ್ದಾರೆ. ಅದರ ಹಿಂದೆ ಕಾಂತೇಶನಿಗೆ ಟಿಕೆಟ್ ತಪ್ಪಿಸುವ ತಂತ್ರ ಅಡಗಿದೆ.

●ಮೋದಿ ಕರೆ ಮಾಡಿ ಹೇಳಿದರೆ ಕಣದಿಂದ ಹಿಂದಕ್ಕೆ ಸರಿಯುವಿರಾ?

ಕಣದಿಂದ ಹಿಂದೆ ಸರಿಯುವ ಮಾತೇ ಇಲ್ಲ. ನರೇಂದ್ರ ಮೋದಿ ಕರೆ ಮಾಡಿದರೂ ಅವರಿಗೆ ನನ್ನ ನಿಲುವು ಸ್ಪಷ್ಟಪಡಿಸಲಿದ್ದೇನೆ. ಯಾವ ಕಾರಣಕ್ಕೆ ಚುನಾವಣೆಗೆ ಸ್ಪರ್ಧಿಸುತ್ತಿದ್ದೇನೆ ಎಂಬುದನ್ನು ಮನದಟ್ಟು ಮಾಡುತ್ತೇನೆ. ಅವರು ಒಪ್ಪಿಕೊಳ್ಳಲಿದ್ದಾರೆ.

●ಹಿಂದುತ್ವದ ಪರ ಇರುವವರನ್ನು ಬದಿಗೆ ಸರಿಸುತ್ತಿದ್ದಾರೆ ಎಂದು ಆರೋಪಿಸುತ್ತಿದ್ದೀರಿ, ಪಕ್ಷದ ವರಿಷ್ಠರು ನಿಮ್ಮ ರಕ್ಷಣೆಗೆ ಬರಲಿಲ್ಲವೇಕೆ?

ಯಡಿಯೂರಪ್ಪ ಮೇಲಿನವರಿಗೆ (ಹೈಕಮಾಂಡ್) ಮಂಕುಬೂದಿ ಎರಚಿದ್ದಾರೆ. ಯಡಿಯೂರಪ್ಪ ತೀರ್ಮಾನ ಸರಿಯಾಗಿರುತ್ತೆ ಎಂಬ ಲೆಕ್ಕದಲ್ಲಿ ಹೈಕಮಾಂಡ್ ಇದೆ. ಇವರು ಹೇಳಿದ್ದನ್ನೇ ಕೇಳಬೇಕು ಅಂದುಕೊಂಡಿದ್ದಾರೆ. ಮಕ್ಕಳನ್ನು ಬೆಳೆಸಲು ಈ ಅವಕಾಶ ಬಳಸಿಕೊಳ್ಳುತ್ತಿದ್ದಾರೆ. ಟಿಕೆಟ್ ಹಂಚಿಕೆಯಲ್ಲಿ ಶೋಭಾ ಕರಂದ್ಲಾಜೆ ರೀತಿ ಪ್ರತಾಪ ಸಿಂಹನಿಗೆ, ಸಿ.ಟಿ.ರವಿಗೆ ಟಿಕೆಟ್ ಕೊಡಲಿಲ್ಲ. ರಾಜ್ಯದಲ್ಲಿ ಕುರುಬ ಸಮುದಾಯದವರಿಗೆ ಟಿಕೆಟ್ ಕೊಟ್ಟಿಲ್ಲ. ನಮ್ಮ ಓಟು ಬೇಡವೇ ಎಂದು ಹಲವರು ಫೋನ್ ಮಾಡಿ ಕೇಳುತ್ತಿದ್ದಾರೆ. ಚುನಾವಣೆ ಫಲಿತಾಂಶದ ನಂತರ ಯಡಿಯೂರಪ್ಪ ಏನೇನು ಅನ್ಯಾಯ ಮಾಡಿದ್ದಾರೆ ಎಂಬುದು ಮೇಲಿನವರಿಗೂ ಗೊತ್ತಾಗಲಿದೆ.

●ಎದೆಯೊಳಗೆ ನರೇಂದ್ರ ಮೋದಿ ಇದ್ದಾರೆ ಅನ್ನುತ್ತೀರಿ. ಶಿವಮೊಗ್ಗಕ್ಕೆ ಬಂದರೂ ಪ್ರಧಾನಿ ನಿಮ್ಮನ್ನು ಕರೆದು ಮಾತಾಡಲಿಲ್ಲವಲ್ಲ?

ಅವರ ಲೆಕ್ಕದಲ್ಲಿ ಈಗ ನಾನು ಪಕ್ಷೇತರ ಸ್ಪರ್ಧಿ. ಹೀಗಾಗಿ ಕರೆದು ಮಾತಾಡಿರಲಿಕ್ಕಿಲ್ಲ. ಶಿವಮೊಗ್ಗ ಏರ್‌ಪೋರ್ಟ್‌ನಲ್ಲಿ ಕಾರ್ಯಕರ್ತರು ನನ್ನ ವಿಚಾರ ಪ್ರಸ್ತಾಪಿಸಿದಾಗ ಈಶ್ವರಪ್ಪ ಅವರಿಗೆ ಕರೆ ಮಾಡಿ ಮಾತನಾಡುವೆ ಎಂದು ಹೇಳಿದ್ದಾರಂತೆ.

●ಪಕ್ಷದಲ್ಲಿ ಈ ಬೆಳವಣಿಗೆ ಕಂಡರೂ ಆರ್‌ಎಸ್‌ಎಸ್ ಮೌನ ವಹಿಸಿರುವುದೇಕೆ, ಹಿರಿಯರ ಹಿಡಿತ ತಪ್ಪಿದೆಯೇ?

ಬಿಜೆಪಿ ವಿಚಾರ ಬಂದಾಗ ಆರ್‌ಎಸ್‌ಎಸ್ ಅಭಿಪ್ರಾಯ ನೀಡಿ ಹಿಂದೆ ಸರಿಯುತ್ತದೆಯೇ ವಿನಾ ಡಿಕ್ಟೇಟ್ ಮಾಡುವುದಿಲ್ಲ. ಇಲ್ಲಿ ಹಿರಿಯರು ಅನ್ನಿಸಿಕೊಂಡವರೇ ದಾರಿ ತಪ್ಪಿದ್ದಾರೆ. ಕುಟುಂಬದ ಹಿರಿತನ ಕೊಟ್ಟಾಗ ಎಲ್ಲರನ್ನೂ ಸಮಾನವಾಗಿ ಕಾಣುವುದು ಬಿಟ್ಟು ತನಗೆ ಬೇಕಾದವರಿಗೆ, ಮಕ್ಕಳಿಗೆ ಪ್ರಾಮುಖ್ಯತೆ ಕೊಡುತ್ತಿರುವ ಕಾರಣ ಮನೆಗೆ ಈ ಸ್ಥಿತಿ ಬಂದಿದೆ. ನನ್ನ ಹೋರಾಟ ಸರಿ ಇದ್ದರೆ ಆರ್‌ಎಸ್‌ಎಸ್ ನನ್ನ ಬೆಂಬಲಕ್ಕೆ, ಯಡಿಯೂರಪ್ಪ ಕುಟುಂಬ ಸರಿ ಅನ್ನಿಸಿದರೆ ಅವರ ಜೊತೆ ನಿಲ್ಲುತ್ತದೆ.

●ಕಾಂತೇಶ ಅವರಿಗೆ ವಿಧಾನಪರಿಷತ್‌ಗೆ ಅವಕಾಶ ಕಲ್ಪಿಸುವ ಭರವಸೆ ಸಿಕ್ಕಿದೆಯಂತಲ್ಲ?

ನಾನು ಅಭ್ಯರ್ಥಿ ಆಗುವೆ ಎಂದು ಹೇಳುತ್ತಿದ್ದಂತೆಯೇ ಜೂನ್‌ನಲ್ಲಿ ಪರಿಷತ್‌ನ 3 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಒಂದು ಸ್ಥಾನ ಕಾಂತೇಶನಿಗೆ ಕೊಡಿಸುವೆ ಎಂದು ಯಡಿಯೂರಪ್ಪ ಹೇಳಿ ಕಳುಹಿಸಿದ್ದರು. ನಮಗೆ ಮೋಸ ಆದ ನಂತರ ಏನನ್ನೂ ಕೇಳಬಾರದೆಂದೇ ತೀರ್ಮಾನಿಸಿದ್ದೇನೆ. ಈ ಹಿಂದೆ ಚುನಾವಣಾ ರಾಜಕಾರಣಕ್ಕೆ ನಿವೃತ್ತಿ ಘೋಷಿಸಿದಾಗಲೂ ರಾಜ್ಯಪಾಲ ಆಗುವ ಅವಕಾಶ ತಿರಸ್ಕರಿಸಿದ್ದೆ.

●ಶಿವಮೊಗ್ಗ ಕ್ಷೇತ್ರದಲ್ಲಿ ನಿಮ್ಮ ಸ್ಪರ್ಧೆ ಕಾಂಗ್ರೆಸ್‌ಗೆ ಅನುಕೂಲವಾಗುವುದಲ್ಲವೇ?

ಈಡಿಗ ಸಮುದಾಯದವರು ನಮ್ಮ ಜೊತೆ ಇದ್ದಾರೆ ಎಂದು ಕಾಂಗ್ರೆಸ್‌ನವರು ಹೇಳುತ್ತಿದ್ದಾರೆ. ಲಿಂಗಾಯತರು ನಮ್ಮ ಜೊತೆ ಇದ್ದಾರೆ ಎಂಬುದು ಯಡಿಯೂರಪ್ಪ ಅಭಿಮತ. ಆದರೆ ನನ್ನ ಜೊತೆ ಎಲ್ಲ ಹಿಂದೂಗಳೂ ಇದ್ದಾರೆ. ಹೀಗಾಗಿ ಕಾಂಗ್ರೆಸ್‌ಗೆ ಅನುಕೂಲದ ಪ್ರಶ್ನೆ ಇಲ್ಲ. ಅದೃಶ್ಯ ಮತದಾರರು ನನ್ನ ಬೆಂಬಲಕ್ಕೆ ನಿಂತಿದ್ದಾರೆ. ಸಹಾಯ ಬೇಕಾ ಎಂದು ಕೇಳುತ್ತಿದ್ದಾರೆ. ಹೀಗಾಗಿ ನಿಶ್ಚಿತವಾಗಿಯೂ ಗೆಲುವು ಸಾಧಿಸುವೆ. ಎರಡು ತಿಂಗಳಲ್ಲಿ ಮತ್ತೆ ಬಿಜೆಪಿ ಸೇರುವೆ.

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಚುನಾವಣಾ ಅಕ್ರಮ ತಡೆಗೆ ಅರೆ ಸೇನಾಪಡೆ ನಿಯೋಜಿಸಿ: ಕುಮಾರಸ್ವಾಮಿ ಆಗ್ರಹ

ಡಿಕೆಶಿ ಸಹೋದರರಿಂದ ಕುಕ್ಕರ್ ಹಂಚಿಕೆ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಸಂಸದ ಡಿ.ಕೆ. ಸುರೇಶ್ ಮತದಾರರಿಗೆ ಕುಕ್ಕರ್ ಹಂಚುತ್ತಿದ್ದಾರೆ. ಅಕ್ರಮ ತಡೆಯಲು ಅಧಿಕಾರಿಗಳು ವಿಫಲರಾಗಿದ್ದಾರೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರನ್ನು ಮಂಗಳವಾರ ಭೇಟಿಮಾಡಿ ಚರ್ಚಿಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಭಾರಿ ಪ್ರಮಾಣದ ಚುನಾವಣಾ ಅಕ್ರಮಗಳು ನಡೆಯುತ್ತಿವೆ. ಬಿಜೆಪಿಯ ಅಭ್ಯರ್ಥಿಯಾಗಿ ಹೃದ್ರೋಗ ತಜ್ಞ ಡಾ.ಸಿ.ಎನ್. ಮಂಜುನಾಥ್ ಆಯ್ಕೆಯಾದ ಬಳಿಕ ಕಂಗೆಟ್ಟಿರುವ ಶಿವಕುಮಾರ್ ಸಹೋದರರು ಹಣಬಲ, ತೋಳ್ಬಲ ಮತ್ತು ಅಧಿಕಾರ ದುರ್ಬಳಕೆ ಮೂಲಕ ಚುನಾವಣೆ ಗೆಲ್ಲಲು ಹೊರಟಿದ್ದಾರೆ’ ಎಂದು ಆರೋಪಿಸಿದರು.

‘ಚುನಾವಣೆ ಘೋಷಣೆಗೂ ಮೊದಲೇ ಅಣ್ಣ, ತಮ್ಮನ ಭಾವಚಿತ್ರ ಅಂಟಿಸಿ ಭಾರಿ ಪ್ರಮಾಣದಲ್ಲಿ ಕುಕ್ಕರ್ ಹಂಚಲಾಗಿತ್ತು. ಚುನಾವಣಾ ಅಧಿಸೂಚನೆ ಪ್ರಕಟವಾದ ಬಳಿಕವೂ ಕುಕ್ಕರ್ ಹಂಚಿಕೆ ಮುಂದುವರಿದಿದೆ. ಕೇಂದ್ರ ಚುನಾವಣಾ ಆಯೋಗ ಏನು ಮಾಡುತ್ತಿದೆ’ ಎಂದು ಪ್ರಶ್ನಿಸಿದರು.

‘ಹಾರೋಹಳ್ಳಿಯ ಸ್ಟೌ ಕ್ರಾಫ್ಟ್ ಲಿಮಿಟೆಡ್ ಎಂಬ ಕಂಪನಿಯಲ್ಲಿ ನಿರಂತರವಾಗಿ ಕುಕ್ಕರ್ ತಯಾರಿಕೆ ನಡೆದಿದೆ. ಈ ಕುರಿತು ನಾನು ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ದೂರು ನೀಡಿದ್ದೆ. ಪರಿಶೀಲನೆ ನಡೆಸುವಂತೆ ಅವರು ರಾಮನಗರ ಜಿಲ್ಲಾಧಿಕಾರಿಗೆ ಸೂಚಿಸಿದ್ದರು. ಅವರು ವಾಣಿಜ್ಯ ತೆರಿಗೆ ಅಧಿಕಾರಿಗಳನ್ನು ಕಳುಹಿಸಿದ್ದರು. ಏನೂ ನಡೆದಿಲ್ಲ ಎಂಬ ವರದಿ ನೀಡಿ, ಮುಚ್ಚಿ ಹಾಕಿದ್ದಾರೆ. ಈಗಲೂ ಕುಕ್ಕರ್ ತಯಾರಿಕೆ ಮತ್ತು ಸಾಗಾಣಿಕೆ’ ನಡೆದಿದೆ ಎಂದು ಫೋಟೊಗಳನ್ನು ಪ್ರದರ್ಶಿಸಿದರು.

ದೂರು ಬಂದರೆ 100 ನಿಮಿಷಗಳೊಳಗೆ ಕ್ರಮ ಜರುಗಿಸುವುದಾಗಿ ಕೇಂದ್ರ ಚುನಾವಣಾ ಆಯೋಗ ಹೇಳಿತ್ತು. ಇಲ್ಲಿ 48 ಗಂಟೆಗಳಾದರೂ ಯಾವುದೇ ಕ್ರಮ ಆಗಿಲ್ಲ. ಆಯೋಗ ಏನು ಮಾಡುತ್ತಿದೆ? ರಾಜ್ಯದಲ್ಲಿ ಆಯೋಗದ ಅಧಿಕಾರಿಗಳು ಇದ್ದಾರೆಯೆ ಎಂದು ಕೇಳಿದರು.

‘ನಾನು ಈ ಬಗ್ಗೆ ಕೇಂದ್ರ ಚುನಾವಣಾ ಆಯೋಗಕ್ಕೆ ಪತ್ರ ಬರೆಯುತ್ತೇನೆ. ಕೇಂದ್ರ ಚುನಾವಣಾ ಆಯೋಗ ಮತ್ತು ಬಿಜೆಪಿಯ ಕೇಂದ್ರ ವರಿಷ್ಠರ ಗಮನಕ್ಕೆ ಈ ವಿಷಯವನ್ನು ತಲುಪಿಸುವಂತೆ ಬಿಜೆಪಿಯ ಸ್ನೇಹಿತರಿಗೂ ಮನವಿ ಮಾಡುತ್ತೇನೆ’ ಎಂದರು.



ಅಧಿಕಾರಿಗಳ ವರ್ಗಾವಣೆಗೆ ಆಗ್ರಹ

ರಾಮನಗರ ಜಿಲ್ಲಾಧಿಕಾರಿ, ಎಸ್‌ಪಿ ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣಾ ಪ್ರಕ್ರಿಯೆ ನಡೆಸುವಲ್ಲಿ ವಿಫಲವಾಗಿದ್ದಾರೆ. ಶಿವಕುಮಾರ್ ಮತ್ತು ಸುರೇಶ್ ಸಹೋದರರ ಚುನಾವಣಾ ಅಕ್ರಮಗಳನ್ನು ನಿಯಂತ್ರಿಸುವ ಶಕ್ತಿ ಅವರಿಗೆ ಇಲ್ಲ. ಕೇಂದ್ರ ಚುನಾವಣಾ ಆಯೋಗವು ತಕ್ಷಣವೇ ಈ ಮೂರೂ ಅಧಿಕಾರಿಗಳನ್ನು ವರ್ಗಾವಣೆ ಮಾಡಬೇಕು. ದಕ್ಷ ಅಧಿಕಾರಿಗಳನ್ನು ಅಲ್ಲಿಗೆ ನಿಯೋಜಿಸಬೇಕು ಎಂದು ಕುಮಾರಸ್ವಾಮಿ ಆಗ್ರಹಿಸಿದರು.

ಶಿವಕುಮಾರ್ ಅವರು ಬಿಬಿಎಂಪಿ ಅಧಿಕಾರಿಗಳನ್ನು ಚುನಾವಣೆಗೆ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ವಾರ್ಡ್‌ವಾರು ಕಾಂಗ್ರೆಸ್‌ಗೆ ಮತ ಹಾಕಿಸುವ ಗುರಿಯನ್ನು ನೀಡಿದ್ದಾರೆ. ಗುತ್ತಿಗೆದಾರರ ಮೂಲಕ ಹಣ ಸಾಗಿಸಿ, ಎಲ್ಲೆಲ್ಲಿ ದಾಸ್ತಾನು ಮಾಡಿದ್ದಾರೆ ಎಂಬ ಮಾಹಿತಿಯೂ ಬರುತ್ತಿದೆ. ಈ ಕುರಿತು ಕೇಂದ್ರ ಚುನಾವಣಾ ಆಯೋಗವು ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

‘ಸೀರೆ, ಕುಕ್ಕರ್‌ಗೆ ಬೆಂಕಿ ಹಚ್ಚಲು ಕರೆ’

‘ಚುನಾವಣಾ ಆಯೋಗ ಬಿಗಿಯಾದ ಕ್ರಮ ಕೈಗೊಳ್ಳದೇ ಇದ್ದರೆ ಜೆಡಿಎಸ್‌ವ ಕಾರ್ಯಕರ್ತರೇ ಕಾರ್ಯಾಚರಣೆಗೆ ಇಳಿಯುತ್ತಾರೆ. ಕುಕ್ಕರ್, ಸೀರೆ ದಾಸ್ತಾನು ಪತ್ತೆಮಾಡಿ ಬೆಂಕಿ ಹಚ್ಚುವಂತೆ ನಾನೇ ಕರೆ ನೀಡುತ್ತೇನೆ. ಯಾರ ಮೇಲೆ ಪ್ರಕರಣ ದಾಖಲಿಸುತ್ತಾರೆ ನೋಡುತ್ತೇನೆ’ ಎಂದು ಕುಮಾರಸ್ವಾಮಿ ಹೇಳಿದರು.

‘ಮಿಸ್ಟರ್ ಶಿವಕುಮಾರ್, 2002ರ ಉಪ ಚುನಾವಣೆಯಲ್ಲಿ ಏನಾಯಿತು ಎಂಬುದನ್ನು ನೆನಪು ಮಾಡಿಕೊಳ್ಳಿ. ಶಿಡ್ಲಘಟ್ಟ, ದೇವನಹಳ್ಳಿ, ಮೈಸೂರಿನಿಂದ ಕಳ್ಳ ಮತದಾನಕ್ಕೆ ನೀವು ಕರೆತಂದಿದ್ದ ಜನರನ್ನು ಬಟ್ಟೆ ಬಿಚ್ಚಿಸಿ ಚಡ್ಡಿಯಲ್ಲಿ ಕೂರಿಸಿದ್ದೆವು. ಈಗಲೂ ಅಕ್ರಮ ಮುಂದುವರಿದರೆ ಅದೇ ಆಗುತ್ತದೆ. ಶೀಘ್ರದಲ್ಲಿ ನಾನು ಪೂರ್ಣ ಪ್ರಮಾಣದಲ್ಲಿ ಅಖಾಡಕ್ಕೆ ಇಳಿಯುತ್ತೇನೆ’ ಎಂದರು.

ಜೆಡಿಎಸ್‌ನ ಮೊದಲ ಆತ್ಮಹತ್ಯೆ ಪ್ರಯತ್ನ– ಡಿಕೆಶಿ

ಬೆಂಗಳೂರು: ‘ದೇವೇಗೌಡರ ಅಳಿಯ (ಡಾ.ಸಿ.ಎನ್. ಮಂಜುನಾಥ್) ಬಿಜೆಪಿ ಚಿಹ್ನೆಯಿಂದ ಸ್ಪರ್ಧೆ ಮಾಡಲು ಅವಕಾಶ ನೀಡಿರುವುದು ಜೆಡಿಎಸ್‌ನ ಮೊದಲ ಆತ್ಮಹತ್ಯೆ ಪ್ರಯತ್ನ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಣ್ಣಿಸಿದರು.

‘ಎರಡು ಸ್ಥಾನಕ್ಕಾಗಿ ಮೈತ್ರಿ ಮಾಡಿಕೊಳ್ಳಬೇಕಿತ್ತೇ ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅಸಮಾಧಾನಗೊಂಡಿದ್ದಾರೆಂಬ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಬಿಜೆಪಿ ಮೈತ್ರಿಯಿಂದ ಜೆಡಿಎಸ್ ಪಕ್ಷಕ್ಕೆ ಬಹಳ ಮುಜುಗರವಾಗಿದೆ. ಜೆಡಿಎಸ್‌ಗೆ ಶಾಸಕರಿದ್ದಾರೆ, ಸಂಸದರಿದ್ದಾರೆ. ಅವರ ಶಕ್ತಿ ಆ ಪಕ್ಷಕ್ಕೆ ಬೇಕಾಗಿದೆ. ಆದರೆ, ಕರ್ನಾಟಕ ಮಾತ್ರವಲ್ಲ; ಬೇರೆ ರಾಜ್ಯಗಳಲ್ಲೂ ಸೀಟು ಹಂಚಿಕೆ ವಿಷಯದಲ್ಲಿ ಬಿಜೆಪಿ ಇದೇ ರೀತಿ ಮಾಡಿಕೊಂಡು ಬಂದಿದೆ. ಇದು ಅವರ ಪಕ್ಷಗಳ ಆಂತರಿಕ ವಿಚಾರ. ಆ ಬಗ್ಗೆ ಅವರೇ ತೀರ್ಮಾನ ಮಾಡಿಕೊಳ್ಳಲಿ. ನನಗೂ ಅದಕ್ಕೂ ಸಂಬಂಧವಿಲ್ಲ’ ಎಂದರು.

‘ಸದಾನಂದ ಗೌಡರ ಸೇರ್ಪಡೆ ಸಾಧ್ಯತೆ ಇದೆಯೇ’ ಎಂದು ಕೇಳಿದಾಗ, ‘ನಮ್ಮ ತಂತ್ರಗಾರಿಕೆಯ ಗುಟ್ಟನ್ನು ನಾವು ಬಿಟ್ಟು ಕೊಡುವುದಿಲ್ಲ’ ಎಂದರು.

ಮಂಡ್ಯದಿಂದ ಕಣಕ್ಕಿಳಿಯಲು ಒಪ್ಪಿಗೆ?

ಮಂಡ್ಯ: ‘ಜೆಡಿಎಸ್ ಮುಖಂಡರು, ಸ್ಥಳೀಯ ಕಾರ್ಯಕರ್ತರು ಹಾಗೂ ಬಿಜೆಪಿ ಹೈಕಮಾಂಡ್ ಒತ್ತಡಕ್ಕೆ ಮಣಿದಿರುವ ಎಚ್.ಡಿ.ಕುಮಾರಸ್ವಾಮಿ ಮಂಡ್ಯ ಕ್ಷೇತ್ರದಿಂದ ಕಣಕ್ಕಿಳಿಯಲು ಒಪ್ಪಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಶ್ವಾಸಕೋಶದ ಶಸ್ತ್ರಚಿಕಿತ್ಸೆಗಾಗಿ ಮಂಗಳವಾರ ಚೆನ್ನೈ ಆಸ್ಪತ್ರೆಗೆ ತೆರಳುವ ಮುನ್ನ ಅವರನ್ನು ಭೇಟಿಯಾದ ಸ್ಥಳೀಯ ಜೆಡಿಎಸ್ ಮುಖಂಡರ ಬಳಿ ಮಂಡ್ಯದಿಂದ ಸ್ಪರ್ಧಿಸುವ ನಿರ್ಧಾರ ತಿಳಿಸಿದ್ದಾರೆ. ‘ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಮಾರ್ಚ್ 25 ಅಥವಾ 26ರಂದು ನಗರದಲ್ಲಿ ಬೃಹತ್ ಸಮಾವೇಶ ನಡೆಸಿ ಜನರ ಬಳಿ ತಮ್ಮ ಇಂಗಿತ ವ್ಯಕ್ತಪಡಿಸಲಿದ್ದಾರೆ’ ಎಂದು ಜೆಡಿಎಸ್ ಮುಖಂಡರು ತಿಳಿಸಿದರು.

‘ಎಚ್.ಡಿ.ಕುಮಾರಸ್ವಾಮಿ ಅಥವಾ ನಿಖಿಲ್ ಸ್ಪರ್ಧಿಸಬೇಕು’ ಎಂದು ಸ್ಥಳೀಯ ಕಾರ್ಯಕರ್ತರು ಒತ್ತಾಯಿಸಿದ್ದರು. ‘ಮೈತ್ರಿ ಯಶಸ್ವಿಯಾಗಲು ಎಚ್‌ಡಿಕೆ ಸ್ಪರ್ಧಿಸಬೇಕು’ ಎಂದು ಬಿಜೆಪಿ ಹೈಕಮಾಂಡ್ ಕೂಡ ತಿಳಿಸಿತ್ತು.

ಮಂಡ್ಯದ ನನ್ನ ಜೆಡಿಎಸ್ ಕಾರ್ಯಕರ್ತರಿಗಾಗಿ ಯಾವುದೇ ರೀತಿಯ ನಿರ್ಧಾರ ಕೈಗೊಳ್ಳುವುದಕ್ಕೂ ನಾನು ಸಿದ್ಧ. ಅವರಿಗೆ ನಿರಾಸೆಯಾಗದಂತಹ ನಿರ್ಧಾರವನ್ನು ಕೈಗೊಳ್ಳುತ್ತೇನೆ

ಎಚ್.ಡಿ. ಕುಮಾರಸ್ವಾಮಿ

‘ಶಸ್ತ್ರಚಿಕಿತ್ಸೆಯ ನಂತರ ಕುಮಾರಸ್ವಾಮಿ ಅವರು ಕ್ಷೇಮವಾಗಿ ಬರಲಿ ಎಂದು ಜಿಲ್ಲೆಯಾದ್ಯಂತ ಪೂಜೆ, ನೆರವೇರಿಸುತ್ತೇವೆ. ಮಂಡ್ಯದಿಂದ ಗೆದ್ದು ಅವರು ಕೇಂದ್ರದಲ್ಲಿ ಕೃಷಿ ಸಚಿವರಾಗುತ್ತಾರೆ ಎಂಬ ವಿಶ್ವಾಸವಿದೆ’ ಎಂದು ಜೆಡಿಎಸ್ ಮುಖಂಡರೊಬ್ಬರು ತಿಳಿಸಿದರು.

ಗೆಲುವು: ಸ್ಟಾರ್ ಚಂದ್ರು ವಿಶ್ವಾಸ

‘ಎಚ್.ಡಿ.ಕುಮಾರಸ್ವಾಮಿ ದೊಡ್ಡವರು, ಅವರ ಮೇಲೆ ಗೌರವವಿದೆ. ಅವರೇ ಕಣಕ್ಕಿಳಿದರೂ ಅವರ ವಿರುದ್ಧ ನಾನು ಗೆಲುವು ಸಾಧಿಸುವ ವಿಶ್ವಾಸವಿದೆ’ ಎಂದು ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು ‘ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, ಕಾಂಗ್ರೆಸ್ ಶಾಸಕರ ಜೊತೆಗೂಡಿ ಕ್ಷೇತ್ರದಾದ್ಯಂತ ಈಗಾಗಲೇ 1 ಸುತ್ತಿನ ಪ್ರವಾಸ ಮುಗಿಸಿದ್ದೇನೆ. ಕಾಂಗ್ರೆಸ್ ಪರವಾದ ವಾತಾವರಣವಿದೆ’ ಎಂದರು.

ಡಿವಿಎಸ್ ಇಂದು ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಟಿಕೆಟ್ ಕೈತಪ್ಪಿರುವುದರಿಂದ ಮುನಿಸಿಕೊಂಡಿರುವ ಸಂಸದ ಡಿ.ವಿ.ಸದಾನಂದಗೌಡ ಅವರು ಮಂಗಳವಾರ ಒಕ್ಕಲಿಗರ ಸಂಘದ ಪದಾಧಿಕಾರಿಗಳ ಜತೆ ಸುದೀರ್ಘ ಚರ್ಚೆ ನಡೆಸಿ, ಬುಧವಾರ ತಮ್ಮ ತೀರ್ಮಾನ ಪ್ರಕಟಿಸುವುದಾಗಿ ಹೇಳಿದರು.

ಈ ಮಧ್ಯೆ ಬಿಜೆಪಿ ವರಿಷ್ಠರು ಸದಾನಂದಗೌಡರ ಜತೆ ಮಾತನಾಡಿ, ಸಮಾಧಾನಪಡಿಸುವ ಪ್ರಯತ್ನ ನಡೆಸಿದ್ದಾರೆ ಎಂದು ಮೂಲಗಳು ಹೇಳಿವೆ. ಅದರ ಭಾಗವಾಗಿ ಚಿಕ್ಕಬಳ್ಳಾಪುರ ಟಿಕೆಟ್ ನೀಡುವ ಪ್ರಸ್ತಾವವನ್ನೂ ಅವರ ಮುಂದಿಟ್ಟಿದ್ದಾರೆ ಎಂಬ ವದಂತಿಯೂ ದಟ್ಟವಾಗಿ ಹರಡಿದೆ.

ಒಕ್ಕಲಿಗರ ಸಂಘದ ಪದಾಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದ ಗೌಡರು, ‘ಬಿಜೆಪಿಯಲ್ಲಿ ಒಕ್ಕಲಿಗ ಸಮುದಾಯಕ್ಕೆ ಅನ್ಯಾಯವಾಗಿದೆ. ಲಿಂಗಾಯತ ಸಮುದಾಯಕ್ಕೆ ಎಂಟು ಟಿಕೆಟ್ ನೀಡಲಾಗಿದೆ. ಒಕ್ಕಲಿಗ ಸಮುದಾಯದ ಇಬ್ಬರಿಗೆ ಮಾತ್ರ ಟಿಕೆಟ್ ನೀಡಲಾಗಿದೆ. ನಮ್ಮ ಸಮುದಾಯಕ್ಕೂ ಎಂಟು ಕ್ಷೇತ್ರಗಳಲ್ಲಿ ಟಿಕೆಟ್ ನೀಡಬೇಕು. ಸಿ.ಟಿ.ರವಿ, ಪ್ರತಾಪ್ ಸಿಂಹ ಅವರಿಗೆ ಟಿಕೆಟ್ ಕೊಟ್ಟಿಲ್ಲ. ಒಕ್ಕಲಿಗ ಸಮುದಾಯಕ್ಕೆ ಅನ್ಯಾಯವಾದರೆ ಹೋರಾಟ ಮಾಡೋಣ’ ಎಂದು ಹೇಳಿದ್ದಾಗಿ, ಮೂಲಗಳು ತಿಳಿಸಿವೆ.

ಸಭೆಯ ಬಳಿಕ ಸುದ್ದಿಗಾರರ ಜತೆ ಸದಾನಂದಗೌಡ, ‘ಸಂಘದ ಅಧ್ಯಕ್ಷ ಮತ್ತು ನಿರ್ದೇಶಕರ ಜತೆ ಸಭೆ ನಡೆಸಿದ್ದೇನೆ. ಒಂದಷ್ಟು ವಿಚಾರವನ್ನು ಸಭೆಯಲ್ಲಿ ಪ್ರಸ್ತಾಪಿಸಿದ್ದೇನೆ. ಈ ಎಲ್ಲ ವಿಚಾರಗಳನ್ನು ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸುತ್ತೇನೆ’ ಎಂದರು.

ಒಕ್ಕಲಿಗರ ಸಂಘದ ಅಧ್ಯಕ್ಷ ಹನುಮಂತಯ್ಯ, ‘ಸದಾನಂದಗೌಡರು ತೆಗೆದುಕೊಳ್ಳುವ ಯಾವುದೇ ನಿರ್ಧಾರಕ್ಕೆ ಸಂಪೂರ್ಣ ಬೆಂಬಲವಿದೆ’ ಎಂದರು.

ತಮ್ಮ ಕುಟುಂಬದ ಸದಸ್ಯರ ಜತೆ ಚರ್ಚೆ ನಡೆಸಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮುಂದಿನ ರಾಜಕೀಯ ನಡೆಯನ್ನು ಪ್ರಕಟಿಸುವುದಾಗಿ ಗೌಡರು ಸೋಮವಾರ ಹೇಳಿದ್ದರು. ಆದರೆ, ಬೆಳಿಗ್ಗೆ ಸುದ್ದಿಗೋಷ್ಠಿ ನಡೆಸಲು ಹಿಂದೇಟು ಹಾಕಿದರು.

‘ಈ ಹಿಂದೆ ಕರೆತಂದಿದ್ದ ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅವರು ಈಗಾಗಲೇ ವಾಪಸ್ ಹೋಗಿದ್ದಾರೆ. ಈಗ ಮತ್ತೊಬ್ಬ ಮಾಜಿ ಮುಖ್ಯಮಂತ್ರಿ ಕರೆತಂದರೂ ಅದೇ ರೀತಿ ಆಗಬಹುದು. ಪಕ್ಷಕ್ಕೆ ಮುಜುಗರವಾಗುವ ರೀತಿಯಲ್ಲಿ ಯಾರನ್ನೂ ಸೇರಿಸಿಕೊಳ್ಳುವುದು ಬೇಡ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಆಕ್ಷೇಪ ವ್ಯಕ್ತಪಡಿಸಿದ್ದಾರೆ ಎಂದೂ ಹೇಳಲಾಗುತ್ತಿದೆ.

ಕರಡಿ ಸಂಗಣ್ಣ ನಿರ್ಧಾರ ನಾಳೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಸತತ ಎರಡು ಬಾರಿ ಸಂಸದರಾಗಿರುವ ಬಿಜೆಪಿಯ ಸಂಗಣ್ಣ ಕರಡಿ ಅವರಿಗೆ ಈ ಬಾರಿ ಕೊಪ್ಪಳ ಲೋಕಸಭಾ ಕ್ಷೇತ್ರದಿಂದ ಟಿಕೆಟ್ ತಪ್ಪಿದ್ದರಿಂದ ಮುನಿಸಿಕೊಂಡಿದ್ದು, ಅವರು ಬಂಡಾಯ ಏಳುವ ಸಾಧ್ಯತೆ ದಟ್ಟವಾಗಿದೆ. ತಮ್ಮ ಶಕ್ತಿ ಪ್ರದರ್ಶನಕ್ಕೆ ಮಾ. 21ರಂದು ನಗರದಲ್ಲಿ ಬೆಂಬಲಿಗರ ಸಭೆ ಕರೆದಿದ್ದಾರೆ.

ವೈದ್ಯ ಕೆ. ಬಸವರಾಜ ಕ್ಯಾವಟರ್ ಅವರಿಗೆ ಪಕ್ಷ ಟಿಕೆಟ್ ಘೋಷಿಸಿದ್ದು, ಅಂದಿನಿಂದಲೇ ಸಂಗಣ್ಣ ತಮ್ಮ ಪಕ್ಷದ ನಾಯಕರ ವಿರುದ್ಧ ಆಕ್ರೋಶಗೊಂಡಿದ್ದಾರೆ. ಅವರ ಮುನಿಸು ಕಡಿಮೆ ಮಾಡಲು ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಹಲವು ರಾಜ್ಯ ನಾಯಕರು ಕರೆ ಮಾಡಿ ಮನವೊಲಿಸಲು ಮಾಡಿದ ಪ್ರಯತ್ನ ಫಲ ಕಂಡಿಲ್ಲ.

ಮಾಧುಸ್ವಾಮಿ ತುಮಕೂರಿನಲ್ಲಿ ಕಾಂಗ್ರೆಸ್ ಪಕ್ಷದಿಂದ ಕಣಕ್ಕೆ?

ಪ್ರಜಾವಾಣಿ ವಾರ್ತೆ

ತುಮಕೂರು: ಲೋಕಸಭೆಗೆ ಸ್ಪರ್ಧಿಸಲು ಟಿಕೆಟ್ ಸಿಗದೆ ಅಸಮಾಧಾನಗೊಂಡಿರುವ ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಅವರು ಬಿಜೆಪಿ ತೊರೆಯಲು ಮುಂದಾಗಿದ್ದು, ಕಾಂಗ್ರೆಸ್‌ನತ್ತ ಮುಖ ಮಾಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಸಹ ದೂರವಾಣಿಯಲ್ಲಿ ಸಂಪರ್ಕಿಸಿ ಕಾಂಗ್ರೆಸ್‌ಗೆ ಆಹ್ವಾನಿಸಿದ್ದಾರೆ. ಕುಣಿಗಲ್ ಶಾಸಕ ಡಾ.ಎಚ್.ಡಿ.ರಂಗನಾಥ್ ಅವರು ಮಾಧುಸ್ವಾಮಿ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಜೆ.ಸಿ. ಪುರದಲ್ಲಿರುವ ಮಾಧುಸ್ವಾಮಿ ಮನೆಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಮತ್ತು ಇತರ ನಾಯಕರು ಸೋಮವಾರ ರಾತ್ರಿ ಭೇಟಿ ನೀಡಿ ಮನವೊಲಿಸುವ ಪ್ರಯತ್ನ ಮಾಡಿದರು. ಈ ಸಂದರ್ಭದಲ್ಲಿ ಪಕ್ಷದ ವರಿಷ್ಠರ ವಿರುದ್ಧ ಅಸಮಾಧಾನ ಹೊರಹಾಕಿದ್ದಾರೆ. ‘ಇಷ್ಟೆಲ್ಲ ಆದಮೇಲೆ ನಿಮ್ಮ ಪಕ್ಷದಲ್ಲಿ ಯಾವುದೇ ಕಾರಣಕ್ಕೂ ಇರುವುದಿಲ್ಲ’ ಎಂದು ನೇರವಾಗಿಯೇ ಹೇಳಿ ಕಳುಹಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.



‘ಒಂದೆರಡು ದಿನ ಕಾದು ನೋಡಿ. ಎಲ್ಲವೂ ಒಳ್ಳೆಯದೇ ಆಗಲಿದೆ’ ಎಂದು ತಮ್ಮ ಬೆಂಬಲಿಗರು, ಆಪ್ತರ ಬಳಿ ಹೇಳಿಕೊಂಡಿದ್ದಾರೆ ಎನ್ನಲಾಗಿದೆ. ‘ಇನ್ನೂ ಅಂತಹ ಪ್ರಯತ್ನ ನಡೆದಿಲ್ಲ. ಮುಂದೆ ನೋಡೋಣ’ ಎಂದು ಮಾಧುಸ್ವಾಮಿ ಚುಟುಕಾಗಿ ಪ್ರತಿಕ್ರಿಯಿಸಿದರು.

ಲೋಕಸಭೆಗೆ ಟಿಕೆಟ್ ಕೊಡುವುದಾದರೆ ಕಾಂಗ್ರೆಸ್ ಸೇರುವುದಾಗಿ ಮಾಧುಸ್ವಾಮಿ ಷರತ್ತು ಹಾಕಿದ್ದಾರೆ ಎಂದು ಅವರ ಆಪ್ತವಲಯ ಖಚಿತಪಡಿಸಿದೆ. ಅವರು ಪಕ್ಷ ಸೇರಿದರೆ, ನಿಯೋಜಿತ ಅಭ್ಯರ್ಥಿ ಎಸ್.ಪಿ.ಮುದ್ದಹನುಮೇಗೌಡ ಬದಲು ಅವರನ್ನೇ ಕಣಕ್ಕೆ ಇಳಿಸುವ ಬಗ್ಗೆ ಕಾಂಗ್ರೆಸ್ ಪಾಳಯದಲ್ಲಿ ಚಿಂತನೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಗುಸುಗುಸು

‘ಎಡಗೈ’ ಆಧಿಪತ್ಯಕ್ಕೆ ಮುನಿಯಪ್ಪ ಸೆಣಸು



ಪರಿಶಿಷ್ಟ ಜಾತಿಯ ಎಡಗೈ ಸಮುದಾಯದವರ ಆಧಿಪತ್ಯವನ್ನು ತಮ್ಮ ಬಳಿಯೇ ಇಟ್ಟುಕೊಳ್ಳಬೇಕೆಂಬ ಹಪಹಪಿಗೆ ಬಿದ್ದಿರುವ ಆಹಾರ ಸಚಿವ ಕೆ.ಎಚ್. ಮುನಿಯಪ್ಪ, ಹೊಸಪಟ್ಟು ಹಾಕಲಾರಂಭಿಸಿದ್ದಾರೆ.

ಈಗಿನ ಅಂತೆಕಂತೆ ಏನೆಂದರೆ, ಚಿತ್ರದುರ್ಗ, ಕೋಲಾರದ ಟಿಕೆಟ್‌ಅನ್ನು ತಮ್ಮವರಿಗೆ, ಅದರಲ್ಲೂ ತಾವು ಹೇಳಿದವರಿಗೇ ನೀಡಬೇಕು ಎಂದು ಮುನಿಯಪ್ಪ ಪಟ್ಟು ಹಿಡಿದಿದ್ದಾರಂತೆ. ತಾವು ಸೂಚಿಸಿದವರಿಗೆ ಕೊಡದೇ ಇದ್ದರೆ ಟಿಕೆಟ್ ಹಂಚಿಕೆಯ ಉಸ್ತುವಾರಿ ಹೊಂದಿರುವವರ ‘ವ್ಯವಹಾರ’ವನ್ನು ಬಟಾಬಯಲು ಮಾಡುತ್ತೇನೆ,ಪಕ್ಷದ ವರಿಷ್ಠರಾದ ಸೋನಿಯಾಜಿಗೂ ದೂರು ಸಲ್ಲಿಸುತ್ತೇನೆ ಎಂದು ಬೆದರಿಕೆಯನ್ನೂ ಹಾಕಿದ್ದಾರಂತೆ!!

28 ಲೋಕಸಭೆ ಕ್ಷೇತ್ರಗಳ ಪೈಕಿ ಪರಿಶಿಷ್ಟರಿಗೆ ಮೀಸಲಾದ ಕಲಬುರಗಿ, ವಿಜಯಪುರ, ಚಾಮರಾಜನಗರ ಕ್ಷೇತ್ರಗಳನ್ನು ಬಲಗೈ ಸಮುದಾಯಕ್ಕೆ ಕಾಂಗ್ರೆಸ್ ನೀಡಲಿದೆ. ಚಿತ್ರದುರ್ಗ ಮತ್ತು ಕೋಲಾರವನ್ನು ಎಡಗೈ ಸಮುದಾಯಕ್ಕೆ ನೀಡಬೇಕೆಂಬ ಬೇಡಿಕೆಯೂ ಇದೆ. ಈ ಮಧ್ಯೆ, ಚಿತ್ರದುರ್ಗದ ಮಾಜಿ ಸಂಸದ ಬಿ.ಎನ್. ಚಂದ್ರಪ್ಪ ಎಡಗೈ ಸಮುದಾಯಕ್ಕೆ ಸೇರಿದವರಲ್ಲ ಎಂದು ಕೆಲವರು ಮುಖ್ಯಮಂತ್ರಿಗೆ ದೂರಿತ್ತಿದ್ದಾರೆ. ಅಲ್ಲಿ, ಚಂದ್ರಪ್ಪ ಅವರಿಗೆ ಕೊಡಬೇಕು ಎಂದು ಮುನಿಯಪ್ಪ ಸೆಣಸುತ್ತಿದ್ದಾರಂತೆ. ಕೋಲಾರಕ್ಕೆ ರಾಜ್ಯಸಭೆಯ ಮಾಜಿ ಸದಸ್ಯ ಎಲ್. ಹನುಮಂತಯ್ಯ ಹೆಸರು ಮುಂಚೂಣಿಯಲ್ಲಿದೆ. ತಮ್ಮ ಹಿಡಿತದಲ್ಲಿರುವ ಕ್ಷೇತ್ರದಲ್ಲಿ ಹೊಸಬರನ್ನು ಬಿಟ್ಟುಕೊಳ್ಳಲು ಮುನಿಯಪ್ಪ ತಯಾರಿಲ್ಲವಂತೆ. ಅದಕ್ಕಾಗಿ, ತಮ್ಮ ಅಳಿಯ ಚಿಕ್ಕಪೆದ್ದಣ್ಣ, ಪುತ್ರ ನರಸಿಂಹರಾಜ್ ಅವರನ್ನು ಮುಂದೆ ತಂದಿದ್ದಾರಂತೆ.. ಹೀಗಿದೆ ನೋಡಿ ಮುನಿಯಪ್ಪನವರ ಮಹಾತ್ಮೆ ಎನ್ನುತ್ತಾರೆ ಸಂತ್ರಸ್ತರು.

ಎಂಥಾ ಮಾತು



ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಪಾರದರ್ಶಕ ಚುನಾವಣೆ ನಡೆಸಲು ಅರೆ ಸೇನಾಪಡೆ ನಿಯೋಜಿಸುವಂತೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಮನವಿ ಮಾಡಿದ್ದಾರೆ. ಕೇವಲ ಅರೆ ಸೇನಾಪಡೆಯಲ್ಲ, ಅದರ ಜೊತೆ ಪ್ರಧಾನಿ ನರೇಂದ್ರ ಮೋದಿ ಅವರನ್ನೂ ಕರೆಸಿಕೊಳ್ಳಲಿ. ಅದಕ್ಕೆ ನಮ್ಮದೇನೂ ತಕರಾರಿಲ್ಲ.

ಡಿ.ಕೆ. ಸುರೇಶ್, ಕಾಂಗ್ರೆಸ್ ಅಭ್ಯರ್ಥಿ, ಬೆಂಗಳೂರು ಗ್ರಾಮಾಂತರ ಕ್ಷೇತ್ರ

ದೇವೇಗೌಡರು ಅವರ ಅಳಿಯನನ್ನು ಬಿಜೆಪಿ ಅಭ್ಯರ್ಥಿ ಮಾಡಿದ್ದಾರೆ. ಏನೋ ಆಗಿದೆ ಎಂದು ಮಾತನಾಡುತ್ತಿದ್ದೀರಿ. ಇವತ್ತು ನೈತಿಕತೆ, ಜಾತ್ಯತೀತತೆ ಬಗ್ಗೆ ಮಾತನಾಡುತ್ತಿದ್ದೀರಿ. ರಾಜಕೀಯವಾಗಿ ವಿಷ ಹಾಕಿ ನಮ್ಮನ್ನು ಕೊಂದಿದ್ದೀರಿ. ಸೆಕ್ಯುಲರ್, ಜಾತ್ಯತೀತತೆ ಉಳಿಸಬೇಕು ಅಂತ 14 ತಿಂಗಳು ನಿಮ್ಮ ಜತೆ ಸೇರಿ ಸರ್ಕಾರ ಮಾಡಿದ್ದು ನನ್ನ ಕೆಟ್ಟ ನಿರ್ಧಾರ. ದೇವೇಗೌಡರ 60 ವರ್ಷದ ಸುದೀರ್ಘ ರಾಜಕಾರಣಕ್ಕೆ ಕೊಳ್ಳಿ ಇಟ್ಟವರು ನೀವು.

ಎಚ್.ಡಿ. ಕುಮಾರಸ್ವಾಮಿ,
(ಡಿ.ಕೆ. ಶಿವಕುಮಾರ್ ಅವರನ್ನುದ್ದೇಶಿಸಿ)

‘ಈಶ್ವರಪ್ಪಗೆ ರಾಜ್ಯಪಾಲ ಹುದ್ದೆ: ಬೇರೆ ಪ್ರಶ್ನೆ ಇದ್ರೆ ಕೇಳಣ್ಣ...!’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೇರೆ ಪ್ರಶ್ನೆ ಇದ್ರೆ ಕೇಳಣ್ಣ...!’

‘ಕೆ.ಎಸ್.ಈಶ್ವರಪ್ಪ ಅವರನ್ನು ರಾಜ್ಯಪಾಲ ಮಾಡುವ ಪ್ರಸ್ತಾಪ ಇದೆಯೇ’ ಎಂದು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮೇಲಿನಂತೆ ಪ್ರತಿಕ್ರಿಯಿಸಿದರು.


‘ಈಶ್ವರಪ್ಪ ಕಥೆ ಏನು’ ಎಂಬ ಮತ್ತೊಂದು ಪ್ರಶ್ನೆಗೆ, ‘ಅವರು ಹಿರಿಯ ನಾಯಕರು. ಕೆಲವು ತಪ್ಪು ಮಾಹಿತಿಗಳು ಅವರಿಗೆ ತಲುಪಿವೆ. ಹೀಗಾಗಿ ಈ ರೀತಿಯ ಚರ್ಚೆಗಳು ನಡೆಯುತ್ತಿವೆ. ಅವರಿಗೆ ಸತ್ಯ ಅರ್ಥ ಆದ ಮೇಲೆ ಸಮಸ್ಯೆ ಬಗೆಹರಿಯುವ ವಿಶ್ವಾಸ ಈಗಲೂ ಇದೆ’ ಎಂದು ಹೇಳಿದರು.


ಅಸಮಾಧಾನಗೊಂಡಿರುವ ಬಿಜೆಪಿ ನಾಯಕರನ್ನು ಕಾಂಗ್ರೆಸ್ ಸೆಳೆಯಲು ಮುಂದಾಗಿರುವ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ‘ಕಳೆದ ಒಂದು ವಾರದ ಘಟನೆಗಳನ್ನು ಅವಲೋಕನ ಮಾಡಿದರೆ, ಕಾಂಗ್ರೆಸ್ ಪಕ್ಷದ ಮುಖಂಡರಿಗೆ ಅವರ ನಾಯಕರಿಗಿಂತ ಬಿಜೆಪಿ ಮುಖಂಡರ ಬಗ್ಗೆಯೇ ಹೆಚ್ಚು ವಿಶ್ವಾಸ ಬಂದಿದೆ. ಎಂ.ಬಿ.ಪಾಟೀಲ ಮತ್ತು ಇತರರ ಹೇಳಿಕೆಗಳನ್ನು ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ. ಸದಾನಂದಗೌಡ ಬಿಜೆಪಿ ಬಿಟ್ಟು ಹೋಗುವುದಿಲ್ಲ’ ಎಂದು ಅವರು ಹೇಳಿದರು.

ಇನ್ಫೊ ಪಾಯಿಂಟ್

ಕರ್ನಾಟಕ: ಏರಿಳಿತದ ಹಾದಿಯಲ್ಲಿ ಮತಪ್ರಮಾಣ

ಕಳೆದ ಐದು ಲೋಕಸಭೆ ಚುನಾವಣೆಗಳಲ್ಲಿ ಚಲಾವಣೆಯಾದ ಮತಗಳ ಪ್ರಮಾಣಗಳನ್ನು ಗಮನಿಸಿದರೆ, 2019ರಲ್ಲಿಯೇ ಕರ್ನಾಟಕದಲ್ಲಿ ಅತಿ ಹೆಚ್ಚು, ಅಂದರೆ ಶೇ 68.81ರಷ್ಟು ಮತಗಳು ಚಲಾವಣೆಯಾಗಿವೆ. ಈ ವರ್ಷಗಳ ಹೋಲಿಕೆಯಲ್ಲಿ 2009ರಲ್ಲಿ ಅತಿ ಕಡಿಮೆ ಅಂದರೆ, ಶೇ 58.82ರಷ್ಟು ಮತಗಳು ಚಲಾವಣೆಯಾಗಿವೆ





ಲೋಕಸಭೆ ಚುನಾವಣೆ: ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಹಲವು ಹೊಸ ಘೋಷಣೆಗಳ ಸಾಧ್ಯತೆ

ಐದು ನ್ಯಾಯ, 25 ಗ್ಯಾರಂಟಿ ಪ್ರಸ್ತಾವ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಕೇಂದ್ರೀಯ ತನಿಖಾ ಸಂಸ್ಥೆಗಳ 'ದುರ್ಬಳಕೆ' ತಡೆಯಲು ಕಾನೂನು ರೂಪಿಸುವುದು, 'ಜನ ವಿರೋಧಿ' ಕಾನೂನುಗಳ ತಿದ್ದುಪಡಿ, ಹಳೆ ಪಿಂಚಣಿ ಯೋಜನೆ ಜಾರಿ ಸೇರಿದಂತೆ ಹಲವು ಪ್ರಸ್ತಾವಗಳು ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿ ಸ್ಥಾನ ಪಡೆಯುವ ಸಾಧ್ಯತೆಯಿದೆ.

ಮಂಗಳವಾರ ಇಲ್ಲಿ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ (ಸಿಡಬ್ಲ್ಯುಸಿ) ಕರಡು ಪ್ರಣಾಳಿಕೆ ಬಗ್ಗೆ ವಿಸ್ತೃತ ಚರ್ಚೆ ನಡೆಯಿತು. ಪ್ರಣಾಳಿಕೆಗೆ ಒಪ್ಪಿಗೆ ನೀಡುವ ಮತ್ತು ಅದರ ಬಿಡುಗಡೆಯ ದಿನಾಂಕವನ್ನು ನಿಗದಿಪಡಿಸುವ ಅಧಿಕಾರವನ್ನು ಸಿಡಬ್ಲ್ಯುಸಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ನೀಡಿದೆ.

ಪ್ರಣಾಳಿಕೆ ಸಮಿತಿ ಅಧ್ಯಕ್ಷರಾದ ಪಿ.ಚಿದಂಬರಂ ಅವರು ಕರಡು ಪ್ರಣಾಳಿಕೆಯಲ್ಲಿರುವ ವಿವರಗಳನ್ನು ಸಭೆಯ ಮುಂದಿಟ್ಟರಲ್ಲದೆ, ಇನ್ನಷ್ಟು ಸಲಹೆಗಳನ್ನು ನೀಡುವಂತೆ ತಿಳಿಸಿದರು ಎಂದು ಮೂಲಗಳು ಹೇಳಿವೆ.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮತಸೆಳೆಯಲು ಪಕ್ಷವು ಈಗಾಗಲೇ ಘೋಷಿಸಿರುವ ಐದು 'ನ್ಯಾಯ'ಗಳು ಪ್ರಣಾಳಿಕೆಯ 'ಹೈಲೈಟ್' ಆಗಿರಲಿದೆ. 'ರೈತ ನ್ಯಾಯ', 'ಯುವ ನ್ಯಾಯ', 'ನಾರಿ ನ್ಯಾಯ', 'ಶ್ರಮಿಕ ನ್ಯಾಯ' ಹಾಗೂ 'ಹಿಸ್ಸೇದಾರಿ (ಭಾಗಿದಾರರ) ನ್ಯಾಯ' ಎಂಬ ಗ್ಯಾರಂಟಿಗಳನ್ನು ಪಕ್ಷವು ಈಗಾಗಲೇ ಘೋಷಿಸಿದೆ.

ಕೇಂದ್ರೀಯ ತನಿಖಾ ಸಂಸ್ಥೆಗಳ ದುರ್ಬಳಕೆಯನ್ನು ತಡೆಯಲು ತೆಗೆದುಕೊಳ್ಳಬೇಕಾದ ಕ್ರಮಗಳು ಮತ್ತು ತಿದ್ದುಪಡಿ ಮಾಡಬೇಕಾದ ಕಾನೂನುಗಳ ಬಗ್ಗೆ ವಿವರವಾದ ಮಾಹಿತಿಯು ಕರಡು ಪ್ರಣಾಳಿಕೆಯಲ್ಲಿದೆ ಎಂದು ಮೂಲಗಳು ಹೇಳಿವೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಕ್ರಿಮಿನಲ್ ಅಪರಾಧಗಳಲ್ಲಿ ನ್ಯಾಯದಾನ, ಪರಿಸರ ಮತ್ತು ಅರಣ್ಯ ಹಕ್ಕುಗಳಿಗೆ ಸಂಬಂಧಿಸಿದ ಕಾನೂನುಗಳಲ್ಲಿ ತಿದ್ದುಪಡಿ ಆಗುವ ಸಾಧ್ಯತೆಗಳಿವೆ.

'ಸಿಡಬ್ಲ್ಯುಸಿ ಸಭೆಯಲ್ಲಿ ಐದು ನ್ಯಾಯಗಳು (ಪಾಂಚ್ ನ್ಯಾಯ್) ಮತ್ತು 25 ಗ್ಯಾರಂಟಿಗಳ ಬಗ್ಗೆ ಗಹನವಾದ ಚರ್ಚೆ ನಡೆಯಿತು' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು 'ಎಕ್ಸ್' ಖಾತೆಯಲ್ಲಿ ಬರೆದಿದ್ದಾರೆ.

ಪಕ್ಷದ 'ಗ್ಯಾರಂಟಿ'ಗಳನ್ನು ಜನರ ಬಳಿ ಕೊಂಡೊಯ್ಯಲು ಬೇಕಾದ ನೀಲನಕ್ಷೆಯನ್ನು ರೂಪಿಸಲಾಗಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ಮೂರೂವರೆ ಗಂಟೆ ನಡೆದ ಸಭೆಯ ಬಳಿಕ ತಿಳಿಸಿದರು.



ನವದೆಹಲಿಯಲ್ಲಿ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಜತೆ ಸಮಾಲೋಚನೆ ನಡೆಸಿದರು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪಾಲ್ಗೊಂಡಿದ್ದರು —ಪಿಟಿಐ ಚಿತ್ರ

> **ಕಾಂಗ್ರೆಸ್ ಪಕ್ಷವು 'ಪ್ರಣಾಳಿಕೆ'ಯನ್ನಷ್ಟೇ ಬಿಡುಗಡೆ ಮಾಡುವುದಿಲ್ಲ. ದೇಶದ ಜನರ ಭವಿಷ್ಯವನ್ನು ಉಜ್ವಲಗೊಳಿಸುವ 'ನ್ಯಾಯಪತ್ರ' ಬಿಡುಗಡೆ ಮಾಡಲಿದೆ**
> **ಜೈರಾಂ ರಮೇಶ್**
> ಎಐಸಿಸಿ ಪ್ರಧಾನ ಕಾರ್ಯದರ್ಶಿ

ದೇಶ ಬದಲಾವಣೆ ಬಯಸುತ್ತಿದೆ: ಮಲ್ಲಿಕಾರ್ಜುನ ಖರ್ಗೆ

ನವದೆಹಲಿ: ದೇಶವು ಬದಲಾವಣೆಯನ್ನು ಬಯಸುತ್ತಿದೆ ಎಂಬ ಮಾತು ಪುನರುಚ್ಚರಿಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೇಂದ್ರ ಸರ್ಕಾರ ಹೇಳುತ್ತಿರುವ 'ಗ್ಯಾರಂಟಿ' ಗಳಿಗೆ 2004ರ 'ಇಂಡಿಯಾ ಶೈನಿಂಗ್' ಘೋಷಣೆಗೆ ಒದಗಿದ್ದ ಪರಿಸ್ಥಿತಿಯೇ ಎದುರಾಗಲಿದೆ ಎಂದು ಹೇಳಿದರು.

ಸಿಡಬ್ಲ್ಯುಸಿ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ದೇಶದ ಜನರು ಬದಲಾವಣೆಯನ್ನು ಬಹಳ ಹುರುಪಿನಿಂದ ಎದುರು ನೋಡುತ್ತಿದ್ದಾರೆ' ಎಂದರು.

ಅಟಲ್ ಬಿಹಾರಿ ನೇತೃತ್ವದ ಬಿಜೆಪಿ ಸರ್ಕಾರವು 'ಇಂಡಿಯಾ ಶೈನಿಂಗ್' (ಭಾರತ ಪ್ರಕಾಶಿಸುತ್ತಿದೆ) ಎಂಬ ಘೋಷವಾಕ್ಯವನ್ನು ಮುಂದಿಟ್ಟುಕೊಂಡು 2004ರ ಲೋಕಸಭಾ ಚುನಾವಣೆಯನ್ನು ಎದುರಿಸಿತ್ತು. ಆದರೆ ಪಕ್ಷವು ಆ ಚುನಾವಣೆಯಲ್ಲಿ ಸೋತು ಅಧಿಕಾರ ಕಳೆದುಕೊಂಡಿತ್ತು.

'ಪ್ರಣಾಳಿಕೆಯಲ್ಲಿ ಏನೇ ಭರವಸೆ ನೀಡಿದರೂ, ಅವುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುವುದು. ನಾವು ನೀಡುತ್ತಿರುವ ಭರವಸೆಗಳನ್ನು ಕಾರ್ಯರೂಪಕ್ಕೆ ತರಲು ಸಾಧ್ಯವೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಸಮಾಲೋಚನೆ, ಚರ್ಚೆ ನಡೆಸಲಾಗಿದೆ. ಇದೇ ಕಾರಣದಿಂದ 1926 ರಿಂದಲೂ ಕಾಂಗ್ರೆಸ್‌ನ ಪ್ರಣಾಳಿಕೆಯನ್ನು 'ನಂಬಿಕೆ ಮತ್ತು ಬದ್ಧತೆಯ ದಾಖಲೆ' ಎಂದೇ ಪರಿಗಣಿಸಲಾಗಿದೆ' ಎಂದು ತಿಳಿಸಿದರು.

ಪ್ರಣಾಳಿಕೆಯಲ್ಲಿ ಏನೇನಿರಬಹುದು?

ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯು ಈ ಕೆಳಗಿನ ಭರವಸೆಗಳನ್ನು ಒಳಗೊಂಡಿರುವ ಸಾಧ್ಯತೆಗಳಿವೆ.

- ಮೀಸಲಾತಿ ಹೆಚ್ಚಳಕ್ಕೆ ಅಡ್ಡಿಯಾಗಿರುವ ಶೇ 50ರ ಮೀಸಲಾತಿ ಮಿತಿಯನ್ನು ತೆಗೆಯುವುದು
- ರಾಷ್ಟ್ರ ಮಟ್ಟದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಜಾತಿ ಗಣತಿ ನಡೆಸುವುದು
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗಾಗಿ ವಿಶೇಷ ಬಜೆಟ್
- ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳ ಭರ್ತಿಗೆ ಕ್ರಮ
- ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನ ಹಾಗೂ ಲಡಾಖ್‌ಗೆ ವಿಶೇಷ ಸ್ಥಾನಮಾನ

ತರಣ್‌ಜಿತ್ ಬಿಜೆಪಿ ಸೇರ್ಪಡೆ

ನವದೆಹಲಿ (ಪಿಟಿಐ): ಅಮೆರಿಕಕ್ಕೆ ಭಾರತದ ರಾಯಭಾರಿಯಾಗಿದ್ದ ತರಣ್‌ಜಿತ್ ಸಿಂಗ್ ಸಂಧು ಅವರು ಮಂಗಳವಾರ ಬಿಜೆಪಿ ಸೇರಿದ್ದಾರೆ.

ತರಣ್‌ಜಿತ್ ಸಿಂಗ್ ಅವರನ್ನು ಪಕ್ಷವು ಪಂಜಾಬ್‌ನ ಅಮೃತಸರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧೆಗಿಳಿಸುವ ಸಾಧ್ಯತೆಗಳಿವೆ.

ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ವಿನೋದ್ ತಾವ್ಡೆ ಮತ್ತು ತರುಣ್ ಚುಘ್ ಅವರ ಸಮ್ಮುಖದಲ್ಲಿ ಅವರು ಬಿಜೆಪಿಗೆ ಸೇರ್ಪಡೆಯಾದರು.

ಭಾರತೀಯ ವಿದೇಶಾಂಗ ಸೇವೆಯ (ಐಎಫ್‌ಎಸ್) ಮಾಜಿ ಅಧಿಕಾರಿಯಾಗಿರುವ ಸಂಧು ಪ್ರತಿಷ್ಠಿತ ಮನೆತನಕ್ಕೆ ಸೇರಿದ್ದು, ಅವರ ತಂದೆ ಬಿಷನ್ ಸಿಂಗ್ ಸಮುಂದ್ರಿ ಅವರು ಖ್ಯಾತ ಶಿಕ್ಷಣ ತಜ್ಞ ಮತ್ತು ಗುರು ನಾನಕ್ ದೇವ್ ವಿಶ್ವವಿದ್ಯಾಲಯದ ಸ್ಥಾಪಕ ಕುಲಪತಿ ಆಗಿದ್ದರು. ಸಂಧು ಅವರ ಮೂಲಕ ಜಾಟ್ ಸಿಖ್ ಸಮುದಾಯದ ಮತಗಳನ್ನು ಆಕರ್ಷಿಸಿ ಪಂಜಾಬ್‌ನಲ್ಲಿ ಪ್ರಾಬಲ್ಯ ವೃದ್ಧಿಸಿಕೊಂಡು, ಲೋಕಸಭಾ ಚುನಾವಣೆಯಲ್ಲಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲುವುದು ಬಿಜೆಪಿ ಗುರಿಯಾಗಿದೆ.

ಬಿಜೆಪಿ ಸೇರಿದ ಸೀತಾ ಸೊರೇನ್

ರಾಂಚಿ (ಪಿಟಿಐ): ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರ ಅತ್ತಿಗೆ, ಮೂರು ಬಾರಿಯ ಶಾಸಕಿ ಸೀತಾ ಸೊರೇನ್ ಅವರು ಮಂಗಳವಾರ ಬಿಜೆಪಿ ಸೇರಿದರು. ಇದರಿಂದ, ಲೋಕಸಭಾ ಚುನಾವಣೆಯ ಮತದಾನಕ್ಕೆ ಕೆಲವೇ ವಾರಗಳಿರುವಾಗ ಜಾರ್ಖಂಡ್ ಮುಕ್ತಿ ಮೋರ್ಚಾಗೆ (ಜೆಎಂಎಂ) ಹಿನ್ನಡೆ ಉಂಟಾಗಿದೆ.

ನವದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವಿನೋದ್ ತಾವ್ಡೆ ಮತ್ತು ಜಾರ್ಖಂಡ್‌ನ ಬಿಜೆಪಿ ಚುನಾವಣಾ ಉಸ್ತುವಾರಿ ಲಕ್ಷ್ಮೀಕಾಂತ್ ಬಾಜಪೇಯಿ ಅವರ ಸಮ್ಮುಖದಲ್ಲಿ ಸೀತಾ ಅವರು ಬಿಜೆಪಿಗೆ ಸೇರ್ಪಡೆಯಾದರು. ಜಾರ್ಖಂಡ್ ವಿಧಾನಸಭಾ ಸದಸ್ಯತ್ವಕ್ಕೂ ಅವರು ರಾಜೀನಾಮೆ ನೀಡಿದ್ದಾರೆ ಎಂದು ಕಚೇರಿಯ ಮೂಲಗಳು ಹೇಳಿವೆ.

'ನನ್ನ ಪತಿಯ ಮರಣದ ಬಳಿಕ ಪಕ್ಷವು ನನಗೆ ಹಾಗೂ ಕುಟುಂಬಕ್ಕೆ ಯಾವುದೇ ಬೆಂಬಲ ನೀಡಿಲ್ಲ. ಉದ್ದೇಶಪೂರ್ವಕವಾಗಿ ನಮ್ಮನ್ನು ಕಡೆಗಣಿಸಿದೆ' ಎಂದು ಜೆಎಂಎಂ ವರಿಷ್ಠ, ತಮ್ಮ ಮಾವ ಶಿಬು ಸೊರೇನ್‌ಗೆ ಸಲ್ಲಿಸಿರುವ ರಾಜೀನಾಮೆ ಪತ್ರದಲ್ಲಿ ತಿಳಿಸಿದ್ದಾರೆ.

'ಸೀತಾ ಅವರಿಗೆ ಈಗ ರಾವಣನ ಲಂಕಾದಿಂದ ಮುಕ್ತಿ ದೊರೆತಿದೆ' ಎಂದು ಬಿಜೆಪಿ ವಕ್ತಾರರೊಬ್ಬರು ಪ್ರತಿಕ್ರಿಯಿಸಿದ್ದಾರೆ.

ಡಿಎಂಕೆ, ಕಾಂಗ್ರೆಸ್‌ಗೆ ಹಿಂದುತ್ವವೇ ಗುರಿ: ಮೋದಿ

ಸೇಲಂನಲ್ಲಿ ಮತದಾರರ ಸೆಳೆಯಲು ಪ್ರಧಾನಿ ಯತ್ನ • ಮೈತ್ರಿಕೂಟದ ಪಾಲುದಾರ ನಾಯಕರೊಂದಿಗೆ ಒಗ್ಗಟ್ಟು ಪ್ರದರ್ಶನ

ಪ್ರಜಾವಾಣಿ ವಾರ್ತೆ

ಚೆನ್ನೈ: 'ಇಂಡಿಯಾ ಮೈತ್ರಿ ಪಾಲುದಾರರು, ವಿಶೇಷವಾಗಿ ಕಾಂಗ್ರೆಸ್ ಮತ್ತು ಡಿಎಂಕೆ, ಹಿಂದೂ ಧರ್ಮವನ್ನು ಪದೇ ಪದೇ ಮತ್ತು ಉದ್ದೇಶಪೂರ್ವಕವಾಗಿ ಅವಮಾನಿಸುತ್ತಿವೆ. ಈ ಪಕ್ಷಗಳು ಬೇರೆ ಯಾವುದೇ ಧರ್ಮಗಳ ವಿರುದ್ಧ ಒಂದು ಸೊಲ್ಲು ಕೂಡ ಎತ್ತುವುದಿಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಆರೋಪಿಸಿದರು.

ಪಶ್ಚಿಮ ತಮಿಳುನಾಡಿನ ಸೇಲಂನಲ್ಲಿ ಎಐಎಡಿಎಂಕೆ ಉಚ್ಚಾಟಿತ ನಾಯಕರಾದ ಒ. ಪನ್ನೀರಸೆಲ್ವಂ, ಟಿ.ಟಿ.ವಿ. ದಿನಕರನ್ ಮತ್ತು ಪಿಎಂಕೆ ಸಂಸ್ಥಾಪಕ ಎಸ್. ರಾಮದಾಸ್ ಸೇರಿದಂತೆ ಎನ್‌ಡಿಎ ಮೈತ್ರಿಕೂಟದ ಪಾಲುದಾರರೊಂದಿಗೆ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮೋದಿ ಮಾತನಾಡಿದರು.

'ಕಾಂಗ್ರೆಸ್ ಮತ್ತು ಡಿಎಂಕೆ ಮಹಿಳೆಯರನ್ನು ಕೀಳಾಗಿ ಕಾಣುತ್ತಿವೆ, ಮಹಿಳೆಯರನ್ನು ಕೇವಲ ವೋಟ್ ಬ್ಯಾಂಕ್ ಆಗಿ ಬಳಸಿಕೊಳ್ಳುತ್ತಿವೆ' ಎಂದೂ ಹರಿಹಾಯ್ದರು.

ಡಿಎಂಕೆ ಪಕ್ಷವು 'ಮಹಿಳಾ ವಿರೋಧಿ' ಎಂದು ಜರಿದ ಮೋದಿ, 'ಜೆ. ಜಯಲಲಿತಾ ಅವರು ಬದುಕಿದ್ದಾಗ ಈ ಪಕ್ಷವು ಅವರನ್ನು ಯಾವ ರೀತಿ ನಡೆಸಿಕೊಂಡಿತು ಎಂಬುದನ್ನು ತಮಿಳುನಾಡು ಜನರು ನೆನಪಿಟ್ಟುಕೊಳ್ಳಬೇಕು' ಎಂದು ಹೇಳಿ, ಎಐಎಡಿಎಂಕೆಯ ಮತದಾರರನ್ನು ಸೆಳೆಯುವ ಪ್ರಯತ್ನ ಮಾಡಿದರು.

2013ರಲ್ಲಿ ಮೂಲಭೂತವಾದಿಗಳಿಂದ ಹತ್ಯೆಗೀಡಾದ ಬಿಜೆಪಿ ನಾಯಕ ಆಡಿಟರ್ ವಿ. ರಮೇಶ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸುವ ಮೂಲಕ ಭಾಷಣ ಆರಂಭಿಸಿದ ಮೋದಿ, ಪಕ್ಷದ ಮತ್ತೊಬ್ಬ ನಾಯಕರಾಗಿದ್ದ ದಿವಂಗತ ಕೆ.ಎನ್. ಲಕ್ಷಣ್ ಅವರನ್ನೂ ಸ್ಮರಿಸಿಕೊಂಡರು.

'ಆಡಿಟರ್' ರಮೇಶ್ ಬಗ್ಗೆ ಮಾತನಾಡುವಾಗ ಮೋದಿ ಭಾವುಕ ರಾದರು. ಕೆಲ ಕ್ಷಣ ತಮ್ಮ ಭಾಷಣಕ್ಕೆ ವಿರಾಮ ನೀಡಿ, ಮತ್ತೆ ಮಾತು ಆರಂಭಿಸಿದರು.

ಬಿಜೆಪಿಯ ಮೈತ್ರಿಕೂಟಕ್ಕೆ ಸೇರಿದ್ದಕ್ಕಾಗಿ ರಾಜ್ಯದ ಉತ್ತರ ಭಾಗದ ಪ್ರಭಾವಿ ಪಕ್ಷ ಪಿಎಂಕೆ ನಾಯಕರಿಗೂ ಧನ್ಯವಾದ ಸಲ್ಲಿಸಿದರು.

ತಮ್ಮ ಭಾಷಣದುದ್ದಕ್ಕೂ ಮೋದಿ ಡಿಎಂಕೆ ಮತ್ತು ಕಾಂಗ್ರೆಸ್ ಗುರಿಯಾಗಿಸಿಕೊಂಡರು. ಆದರೆ, ಕಳೆದ ವರ್ಷ ಬಿಜೆಪಿ ಜತೆಗೆ ಮೈತ್ರಿ ಮುರಿದುಕೊಂಡ ಎಐಎಡಿಎಂಕೆ ಬಗ್ಗೆ ಏನನ್ನೂ ಮಾತನಾಡಲಿಲ್ಲ.



ತಮಿಳುನಾಡಿನ ಸೇಲಂನಲ್ಲಿ ಮಂಗಳವಾರ ಪ್ರಧಾನಿ ನರೇಂದ್ರ ಮೋದಿ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಅಭ್ಯರ್ಥಿಗಳ ಪರ ಮತಯಾಚಿಸಿ ತೆರೆದ ವಾಹನದಲ್ಲಿ ರೋಡ್ ಶೋ ನಡೆಸಿದರು. ರಾಜ್ಯದ ಬಿಜೆಪಿ ಅಧ್ಯಕ್ಷ ಕೆ.ಅಣ್ಣಾಮಲೈ ಜತೆಗಿದ್ದರು — ಪಿಟಿಐ ಚಿತ್ರ

ಶಕ್ತಿ ನಾಶಕ್ಕೆ ಯತ್ನಿಸುವವರು ನಾಶವಾಗುತ್ತಾರೆ'

'ಶಕ್ತಿ' ಕುರಿತ ರಾಹುಲ್ ಗಾಂಧಿಯವರ ಹೇಳಿಕೆ ವಿರುದ್ಧ ವಾಗ್ದಾಳಿ ಮುಂದುವರಿಸಿರುವ ಮೋದಿ, ಕಾಂಗ್ರೆಸ್ ಮತ್ತು ಡಿಎಂಕೆ ನಾಯಕರಿಗೆ ಹಿಂದೂ ಧರ್ಮವನ್ನು ಅವಮಾನಿಸುವುದು ಅಭ್ಯಾಸವಾಗಿದೆ ಎಂದು ಹರಿಹಾಯ್ದರು.

'ತಮಿಳುನಾಡಿನ ಜನರಿಂದ ಪೂಜಿಸಲ್ಪಡುವ ಸಮಯಪುರಂ ಮಾರಿಯಮ್ಮನ್, ಮದುರೈ ಮೀನಾಕ್ಷಿ ಮತ್ತು ಕಾಂಚೀಪುರಂ ಕಾಮಾಕ್ಷಿಯಂತಹ ಅನೇಕ ದೇವತೆಗಳಲ್ಲಿ 'ಶಕ್ತಿ' ಇದೆ. ಆದರೆ, ಕಾಂಗ್ರೆಸ್ ಮತ್ತು ಡಿಎಂಕೆಯ 'ಇಂಡಿಯಾ' ಮೈತ್ರಿಯು ಶಕ್ತಿ ನಾಶಪಡಿಸುವುದಾಗಿ ಹೇಳುತ್ತಿದೆ. ಈ ರೀತಿ ಹೇಳುವವರು ನಾಶವಾಗುತ್ತಾರೆ. ಶಕ್ತಿ ನಾಶಮಾಡಲು ಯೋಚಿಸುವವರಿಗೆ ವಿನಾಶ ಕಟ್ಟಿಟ್ಟಬುತ್ತಿ ಎಂಬುದಕ್ಕೆ ಧರ್ಮಗ್ರಂಥಗಳೇ ಸಾಕ್ಷಿಯಾಗಿವೆ' ಎಂದು ಎಚ್ಚರಿಸಿದರು.

ಕೇರಳದಲ್ಲೂ ಪ್ರಧಾನಿಯ ಬೃಹತ್ ರೋಡ್ ಶೋ

ಪಾಲಕ್ಕಾಡ್ (ಕೇರಳ): ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಅಭ್ಯರ್ಥಿಗಳಿಗೆ ರಾಜ್ಯದ ಮತದಾರರ ಬೆಂಬಲಗಿಟ್ಟಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಇಲ್ಲಿ ಬೃಹತ್ ರೋಡ್ ಶೋ ನಡೆಸಿದರು. ಬಿಜೆಪಿಯ ಸಾವಿರಾರು ಕಾರ್ಯಕರ್ತರು ಮತ್ತು ಬೆಂಬಲಿಗರು ಭಾಗವಹಿಸಿದ್ದರು.

ಸೇಲಂನಿಂದ ಹೆಲಿಕಾಪ್ಟರ್‌ನಲ್ಲಿ ಬೆಳಿಗ್ಗೆ 10.30ರ ಸುಮಾರಿಗೆ ಪಾಲಕ್ಕಾಡ್‌ಗೆ ಬಂದಿಳಿದ ಮೋದಿ, ನಗರದಲ್ಲಿ ಸುಮಾರು 30 ನಿಮಿಷ ತೆರೆದ ವಾಹನದಲ್ಲಿ ರೋಡ್ ಶೋ ಮೂಲಕ ಮತ ಯಾಚಿಸಿದರು. ಬಿಸಿಲ ಧಗೆಯನ್ನು ಲೆಕ್ಕಿಸದೆ ರಸ್ತೆಯ ಇಕ್ಕೆಲಗಳಲ್ಲಿ ನೆರೆದಿದ್ದ ಬೆಂಬಲಿಗರು ಪುಷ್ಪವೃಷ್ಟಿ ಮಾಡಿ ಮೋದಿ ಮತ್ತು ಬಿಜೆಪಿ ಪರ ಘೋಷಣೆ ಕೂಗಿದರು.

ಕೆ.ಸುರೇಂದ್ರನ್ ಮಾತನಾಡಿ, 'ಮೋದಿಯವರು ಕೇರಳಕ್ಕೆ ಜನವರಿಯಿಂದ ಈವರೆಗೆ ಐದನೇ ಬಾರಿಗೆ ಭೇಟಿ ನೀಡಿದಂತಾಗಿದೆ. ಮೋದಿಯವರ ಭೇಟಿ ಮತ್ತು ಜನರ ಬೆಂಬಲ ಕೇರಳದಲ್ಲಿ ಪಕ್ಷದ ವಿಶ್ವಾಸವನ್ನು ಹೆಚ್ಚಿಸಿದೆ. ಮುಸ್ಲಿಂ ಮಹಿಳೆಯರು ಕೂಡ ಮೋದಿಯವರಿಗೆ ಶುಭ ಕೋರಲು ಸೇರಿದ್ದರು. ಚುನಾವಣಾ ಪ್ರಚಾರಕ್ಕೆ ಮೋದಿ ಮತ್ತೊಮ್ಮೆ ಕೇರಳಕ್ಕೆ ಬರಲಿದ್ದಾರೆ. ಪಕ್ಷವು ಈ ಬಾರಿ ರಾಜ್ಯದಲ್ಲಿ ಎರಡಂಕಿ ಸ್ಥಾನಗಳನ್ನು ಗೆಲ್ಲಲಿದೆ' ಎಂದರು.

ಮೋದಿ ವಿರುದ್ಧ ಎಲ್‌ಡಿಎಫ್ ಕಿಡಿ

ತಿರುವನಂತಪುರ/ಮಲಪ್ಪುರಂ (ಪಿಟಿಐ): ಪ್ರಧಾನಿ ಮೋದಿ ಅವರು ಪಾಲಕ್ಕಾಡ್‌ನಲ್ಲಿ ಮಂಗಳವಾರ ನಡೆಸಿದ ರೋಡ್ ಶೋನಿಂದ ಎನ್‌ಡಿಎ ಅಭ್ಯರ್ಥಿ ಅಬ್ದುಲ್ ಸಲಾಂ ಅವರನ್ನು ದೂರವಿರಿಸಲಾಗಿತ್ತು ಎಂದು ಆರೋಪಿಸಿರುವ ಕೇರಳದ ಆಡಳಿತರೂಢ ಎಲ್‌ಡಿಎಫ್, ಈ ವಿಷಯ ಮುಂದಿಟ್ಟುಕೊಂಡುಮೋದಿ ಮತ್ತು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದೆ.

ಮೋದಿಯವರ ಬೃಹತ್ ರೋಡ್ ಶೋ ನಡೆದ ಕೆಲವೇ ಗಂಟೆಗಳ ನಂತರ, ಸಿಪಿಎಂ ನಾಯಕ ಎ.ಕೆ. ಬಾಲನ್ ಅವರು, ಮಲಪ್ಪುರಂ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಸಲಾಂ ರೋಡ್ ಶೋ ಭಾಗವಾಗಿರುತ್ತಾರೆಂದು ಮೊದಲೇ ಘೋಷಿಸಿದ್ದರು. ಆದರೆ, ಅವರನ್ನು ಕಾರ್ಯಕ್ರಮದಿಂದ ದೂರವಿಡಲಾಗಿದೆ. 'ಇದು ಮುಸ್ಲಿಮನು ಮೋದಿಯ ಹತ್ತಿರ ನಿಲ್ಲಲು ಸಾಧ್ಯವಿಲ್ಲ ಎಂಬ ತಪ್ಪು ಸಂದೇಶ ರವಾನಿಸಿದೆ' ಎಂದು ಟೀಕಿಸಿದರು.

ಎನ್‌ಡಿಎ ಮೈತ್ರಿಕೂಟದ, ಕೇರಳದ ಏಕೈಕ ಮುಸ್ಲಿಂ ಅಭ್ಯರ್ಥಿ ಅಬ್ದುಲ್ ಸಲಾಂ ತಾರತಮ್ಯ ಆಗಿರುವುದನ್ನು ನಿರಾಕರಿಸಿದ್ದಾರೆ. 'ರೋಡ್ ಶೋನಲ್ಲಿ ಪಾಲ್ಗೊಳ್ಳಲು ನನಗೆ ಆಹ್ವಾನ ಇರಲಿಲ್ಲ. ಮೋದಿ ಅವರ ಭೇಟಿಗೆ ಮತ್ತು ಅವರನ್ನು ಮಲಪ್ಪುರಂಗೆ ಆಹ್ವಾನಿಸಲು ಹೋಗಿದ್ದೆ' ಎಂದಿದ್ದಾರೆ.

'ಮೋದಿ ಕ್ಷಮೆ ಕೇಳಲಿ'

ನರೇಂದ್ರ ಮೋದಿ ಅವರು ಕೇರಳಕ್ಕೆ ಪದೇ ಪದೇ ಭೇಟಿ ನೀಡುತ್ತಿರುವುದಕ್ಕೆ ಟೀಕಿಸಿರುವ ಕಾಂಗ್ರೆಸ್, ಮೋದಿ ಅವರು ಈ ಹಿಂದೆ ಕೇರಳವನ್ನು ಸೊಮಾಲಿಯಾಕ್ಕೆ ಹೋಲಿಸಿದ್ದಕ್ಕಾಗಿ ರಾಜ್ಯದ ಜನರಲ್ಲಿ ಕ್ಷಮೆ ಕೇಳುತ್ತಾರೆಯೇ ಎಂದು ಪ್ರಶ್ನಿಸಿದೆ.

2016ರಲ್ಲಿ ಚುನಾವಣಾ ಪ್ರಚಾರದ ವೇಳೆ ಮೋದಿ ಅವರು ಕೇರಳದಲ್ಲಿ ಪರಿಶಿಷ್ಟ ಪಂಗಡದಲ್ಲಿ ಶಿಶು ಮರಣ ಪ್ರಮಾಣ ಸೊಮಾಲಿಯಾಕ್ಕಿಂತ ಹೀನಾಯವಾಗಿದೆ ಎಂದು ನೀಡಿದ್ದ ಹೇಳಿಕೆಯನ್ನು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಂ ರಮೇಶ್ ನೆನಪಿಸಿದ್ದಾರೆ.

'ಪ್ರಧಾನಿಯವರು ಕುಖ್ಯಾತ ಸೊಮಾಲಿಯಾಕ್ಕೆ ಕೇರಳವನ್ನು ಹೋಲಿಸಿದ್ದರು. ಆದರೆ, ಅಭಿವೃದ್ಧಿ ಸೂಚ್ಯಂಕಗಳಲ್ಲಿ ದೇಶದ ಎಲ್ಲ ರಾಜ್ಯಗಳಿಗಿಂತ ಕೇರಳದ ಸಾಧನೆ ಉತ್ತಮವಾಗಿದೆ. ರಾಜ್ಯದ ಬಗ್ಗೆ ಕೆಟ್ಟ ಅಭಿಪ್ರಾಯ ಮೂಡಿಸಲು ಟೀಕೆ ಮಾಡಿದ್ದಕ್ಕಾಗಿ ಮೋದಿಯವರು ಈಗ ರಾಜ್ಯದ ಜನರಲ್ಲಿ ಕ್ಷಮೆಯಾಚಿಸುತ್ತಾರೆಯೇ?' ಎಂದು ಜೈರಾಂ ರಮೇಶ್ ಸಾಮಾಜಿಕ ಜಾಲತಾಣದಲ್ಲಿ ಪ್ರಶ್ನಿಸಿದ್ದಾರೆ.

'ಮೋದಿ ನೇತೃತ್ವದ ಸರ್ಕಾರವು, ತಮಗೆ ಬೇಕಾದ ಕೆಲವು ಕಾರ್ಪೊರೇಟ್ ಕಂಪನಿಗಳಿಗೆ ಅನುಕೂಲ ಮಾಡಿಕೊಡಲು ಪರಿಸರ ಮತ್ತು ಅರಣ್ಯ ಕಾನೂನನ್ನು ದುರ್ಬಲಗೊಳಿಸಿದೆ. ಇದು, ಬಹುಶಃ ಬಿಜೆಪಿಯ ಚುನಾವಣಾ ಬಾಂಡ್‌ಗಳ ಖರೀದಿಯ ಋಣ ತೀರಿಸಲು ಮಾಡಿರುವ ಹುನ್ನಾರವೆನಿಸುತ್ತದೆ. ಈ ಮೂಲಕ ಪಶ್ಚಿಮ ಘಟ್ಟಗಳ ಪರಿಸರ ವ್ಯವಸ್ಥೆಯ ಮೇಲೆ ನಿರಂತರ ಆಕ್ರಮಣ ಮಾಡುತ್ತಿದೆ' ಎಂದು ಅವರು ಆರೋಪಿಸಿದ್ದಾರೆ.



ಅಮೆರಿಕದ ಸಿಲಿಕಾನ್ ವ್ಯಾಲಿಯಲ್ಲಿರುವ ಭಾರತೀಯ ಮೂಲದ ತಾಂತ್ರಿಕ ವೃತ್ತಿಪರರು ದೇಗುಲವೊಂದರಲ್ಲಿ ವಿಶೇಷ ಹವನ ಕೈಗೊಂಡು, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಜಯಭೇರಿ ಬಾರಿಸಲಿ ಎಂದು ಪ್ರಾರ್ಥಿಸಿದರು —ಪಿಟಿಐ ಚಿತ್ರ

ಅಮೆರಿಕ: ಮೋದಿ ಗೆಲುವಿಗೆ ಹವನ

ವಾಷಿಂಗ್ಟನ್ (ಪಿಟಿಐ): ಇಲ್ಲಿನ ಸಿಲಿಕಾನ್ ವ್ಯಾಲಿಯಲ್ಲಿರುವ ಭಾರತೀಯ ಮೂಲದ ತಾಂತ್ರಿಕ ವೃತ್ತಿಪರರು ದೇಗುಲವೊಂದರಲ್ಲಿ ವಿಶೇಷ ಹವನ ಕೈಗೊಂಡು, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಜಯಭೇರಿ ಭಾರಿಸಲಿ ಎಂದು ಪ್ರಾರ್ಥಿಸಿದರು.

ಓವರ್‌ಸೀಸ್ ಫ್ರೆಂಡ್ಸ್ ಆಫ್ ಬಿಜೆಪಿ (ಬಿಜೆಪಿ ಪರ ಸ್ನೇಹಿತರ ಸಂಘ) ಏರ್ಪಡಿಸಿದ್ದ 'ಹವನ'ದಲ್ಲಿ ಅಪಾರ ಸಂಖ್ಯೆಯ ಜನರು ಭಾಗವಹಿಸಿದ್ದರು.

'ಇದು ಕೇವಲ ಧಾರ್ಮಿಕ ಆಚರಣೆ ಅಲ್ಲ, ಬಹುಸಂಖ್ಯಾತ ಭಾರತೀಯರು ಮತ್ತು ಎನ್‌ಆರ್‌ಐಗಳ ಸಾಮೂಹಿಕ ಪ್ರಾರ್ಥನೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಚುನಾವಣೆಯಲ್ಲಿ ಅಭೂತಪೂರ್ವ ಜಯ ಸಾಧಿಸಲಿ ಎಂದು ಪ್ರಾರ್ಥಿಸಲು ಒಟ್ಟಾಗಿ ಸೇರಲಾಗಿತ್ತು' ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

₹2.93 ಕೋಟಿ ನಗದು ವಶ

ವಿಜಯಪುರ: ಹೈದರಾಬಾದ್‌ನಿಂದ ಹುಬ್ಬಳ್ಳಿಗೆ ಕಾರಿನಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ ₹2.93 ಕೋಟಿನಗದನ್ನು ವಿಜಯಪುರ ಸಿಇಎನ್ ಅಪರಾಧ ಠಾಣೆ ಪೊಲೀಸರು ಸೋಮವಾರ ರಾತ್ರಿ ವಶಪಡಿಸಿಕೊಂಡಿದ್ದಾರೆ.

ಖಚಿತ ಮಾಹಿತಿ ಮೇರೆಗೆ ಸಿಇಎನ್ ಪೊಲೀಸ್ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಸುನೀಲ್ ಕುಮಾರ್ ನಂದೇಶ್ವರ ಮತ್ತು ಸಿಬ್ಬಂದಿ ನಗರದ ಸಿಂದಗಿ ಬೈಪಾಸ್‌ನಲ್ಲಿ ಕಾರನ್ನು ಅಡ್ಡಗಟ್ಟಿ ತಪಾಸಣೆ ಮಾಡಿದಾಗ, ನಗದು ಪತ್ತೆಯಾಗಿದೆ.

'ಮಹಾರಾಷ್ಟ್ರದ ಸಾಂಗಲಿಯ ಬಾಲಾಜಿ ನಿಕ್ಕಂ ಮತ್ತು ಸಚಿನ್ ಮೋಹಿತೆ ಎಂಬುವರು ಹಣ ಸಾಗಿಸುತ್ತಿದ್ದರು. ಸೂಕ್ತ ದಾಖಲೆಯನ್ನು ಒದಗಿಸದ ಹಿನ್ನೆಲೆಯಲ್ಲಿ ಹಣವನ್ನು ವಶಕ್ಕೆ ಪಡೆದು, ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಲಾಗಿದೆ' ಎಂದು ವಿಜಯಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವಣೆ ತಿಳಿಸಿದ್ದಾರೆ.

ಅಮಿತ್ ಶಾ – ರಾಜ್ ಠಾಕ್ರೆ ಭೇಟಿ

ನವದೆಹಲಿ (ಪಿಟಿಐ): ಮಹಾರಾಷ್ಟ್ರ ನವನಿರ್ಮಾಣ ಸೇನಾ (ಎಂಎನ್‌ಎಸ್) ನಾಯಕ ರಾಜ್ ಠಾಕ್ರೆ ಅವರು ಮಂಗಳವಾರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

ಈ ಬೆಳವಣಿಗೆಯು, ಮಹಾರಾಷ್ಟ್ರದಲ್ಲಿ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು ಎಂಎನ್‌ಎಸ್ ಜತೆ ಮೈತ್ರಿ ಮಾಡಿಕೊಳ್ಳುವ ಸೂಚನೆಯನ್ನು ಬಿಂಬಿಸುತ್ತದೆ ಎಂದು ವಿಶ್ಲೇಷಿಸಲಾಗಿದೆ.

ಸೋಮವಾರವೇ ದೆಹಲಿಗೆ ಬಂದಿದ್ದ ಠಾಕ್ರೆ ಅವರು, ಬಿಜೆಪಿಯ ರಾಷ್ಟ್ರೀಯ ಕಾರ್ಯದರ್ಶಿ ವಿನೋದ್ ತಾವ್ಡೆ ಅವರ ಜತೆಗೆ ಅಮಿತ್ ಶಾ ಅವರನ್ನು ಭೇಟಿ ಮಾಡಿದ್ದಾರೆ.

ಎರಡೂ ಪಕ್ಷಗಳ ನಡುವೆ ಮೈತ್ರಿ ಸಾಧ್ಯವಾದರೆ, ಎಂಎನ್‌ಎಸ್ ಪಕ್ಷಕ್ಕೆ ಸ್ಪರ್ಧಿಸಲು ಮುಂಬೈನ ಒಂದು ಕ್ಷೇತ್ರ ದೊರೆಯಬಹುದು ಎನ್ನಲಾಗುತ್ತಿದೆ. ಅವರ ಸಹೋದರ ಸಂಬಂಧಿ ಉದ್ಧವ್ ಠಾಕ್ರೆ ಅವರ ನೇತೃತ್ವದ ಶಿವಸೇನಾ ಬಣವು ಮುಂಬೈನಲ್ಲಿ ಹೆಚ್ಚಿನ ಪ್ರಭಾವ ಹೊಂದಿದೆ.

ಕೇಂದ್ರ ಸಚಿವ ಪಶುಪತಿ ರಾಜೀನಾಮೆ



ನವದೆಹಲಿ: ಕೇಂದ್ರ ಸಚಿವ ಪಶುಪತಿ ಪಾರಸ್ ನೇತೃತ್ವದ ರಾಷ್ಟ್ರೀಯ ಲೋಕ ಜನಶಕ್ತಿ ಪಕ್ಷವು ಮಂಗಳವಾರ ಎನ್‌ಡಿಎ ಬಣವನ್ನು ತೊರೆದಿದೆ. ಪಾರಸ್ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಲೋಕಸಭೆ ಚುನಾವಣೆಗೆ ಬಿಹಾರದಲ್ಲಿ ಸೀಟು ಹಂಚಿಕೆ ವೇಳೆ ಬಿಜೆಪಿಯು ಪಶುಪತಿ ಅವರನ್ನು ಕಡೆಗಣಿಸಿ, ಅವರ ಅಣ್ಣನ ಮಗ ಚಿರಾಗ್ ಪಾಸ್ವಾನ್ ನೇತೃತ್ವದ ಪಕ್ಷಕ್ಕೆ ಮಣೆ ಹಾಕಿತ್ತು. ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿ, ರಾಜೀನಾಮೆ ನೀಡಿದ್ದಾರೆ.

'ಎನ್‌ಡಿಎಯು ಮಾರ್ಚ್ 18 ರಂದು ಬಿಹಾರದ 40 ಲೋಕಸಭಾ ಸ್ಥಾನಗಳಿಗೆ ಸೀಟು ಹಂಚಿಕೆ ಸೂತ್ರ ಅಂತಿಮಗೊಳಿಸಿತ್ತು. ನಮ್ಮ ಪಕ್ಷದ ಐವರು ಹಾಲಿ ಸಂಸದರು ಇದ್ದು, ನಾನು ಪಕ್ಷಕ್ಕಾಗಿ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇನೆ. ಆದರೂ ನನಗೆ ಹಾಗೂ ಪಕ್ಷಕ್ಕೆ ಅನ್ಯಾಯ ಮಾಡಲಾಗಿದೆ. ಈ ಕಾರಣದಿಂದ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ' ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬಿಹಾರದಲ್ಲಿ ಬಿಜೆಪಿ ಮತ್ತು ಆಡಳಿತಾರೂಢ ಜೆಡಿಯು ಕ್ರಮವಾಗಿ 17 ಹಾಗೂ 16 ಸ್ಥಾನಗಳಲ್ಲಿ ಸ್ಪರ್ಧಿಸಲಿವೆ. ಚಿರಾಗ್ ಪಾಸ್ವಾನ್ ಬಣಕ್ಕೆ ಐದು ಕ್ಷೇತ್ರಗಳನ್ನು ನೀಡಲಾಗಿದೆ.

ತಮಿಳುನಾಡು: ಪಿಎಂಕೆಗೆ 10 ಸ್ಥಾನ

ವಿಲ್ಲುಪುರಂ (ತಮಿಳುನಾಡು) (ಪಿಟಿಐ): ಸೋಮವಾರ ವಷ್ಟೇ ಬಿಜೆಪಿ ಜತೆ ಮೈತ್ರಿಮಾಡಿಕೊಂಡ ತಮಿಳುನಾಡಿನ ಉತ್ತರ ಭಾಗದ ಪ್ರಭಾವಿ ಪ್ರಾದೇಶಿಕ ಪಕ್ಷ ಪಟ್ಟಾಳಿ ಮಕ್ಕಳ್ ಕಚ್ಚಿ (ಪಿಎಂಕೆ) ಜತೆಗೆ ಬಿಜೆಪಿಯು ಲೋಕಸಭೆ ಚುನಾವಣೆಗೆ ಮಂಗಳವಾರ ಸೀಟು ಹಂಚಿಕೆ ಒಪ್ಪಂದ ಮಾಡಿಕೊಂಡಿದೆ. ಮಿತ್ರಪಕ್ಷ ಪಿಎಂಕೆಗೆ 10 ಸ್ಥಾನಗಳನ್ನು ಬಿಜೆಪಿ ಹಂಚಿದೆ.

ಬಿಜೆಪಿ ರಾಜ್ಯ ಅಧ್ಯಕ್ಷ ಕೆ. ಅಣ್ಣಾಮಲೈ ಮತ್ತು ಪಿಎಂಕೆ ಸಂಸ್ಥಾಪಕ ಎಸ್.ರಾಮದಾಸ್ ಅವರು ಇಲ್ಲಿನ ತೈಲಾಪುರಂ ನಿವಾಸದಲ್ಲಿ ಸೀಟು ಹಂಚಿಕೆ ಒಪ್ಪಂದಕ್ಕೆ ಸಹಿ ಹಾಕಿದರು. ಕೇಂದ್ರ ಸಚಿವ ಎಲ್. ಮುರುಗನ್ ಕೂಡ ಇದ್ದರು.

ಎನ್‌ಡಿಎ ಮಿತ್ರ ಪಕ್ಷ ಪಿಎಂಕೆ ತಮಿಳುನಾಡಿನ 10 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ ಎಂದು ಅಣ್ಣಾಮಲೈ ಮತ್ತು ಪಿಎಂಕೆ ಅಧ್ಯಕ್ಷರಾದ ರಾಜ್ಯಸಭಾ ಸದಸ್ಯ ಡಾ. ಅನ್ಬುಮಣಿ ರಾಮದಾಸ್ ಜಂಟಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಪಿಎಂಕೆ ಕಳೆದ 10 ವರ್ಷಗಳಿಂದ ಎನ್‌ಡಿಎಯಲ್ಲಿದೆ. 2014 ಮತ್ತು 2019ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಬಣದ ಒಂದು ಘಟಕವಾಗಿ ಹೋರಾ ಡಿತ್ತು' ಎಂದು ಇಬ್ಬರೂ ನಾಯಕರು ಒತ್ತಿ ಹೇಳಿದರು.

'ಕಹಳೆ ಊದುತ್ತಿರುವ ಮನುಷ್ಯ'ನ ಚಿಹ್ನೆ ಬಳಸಲು ಶರದ್ ಬಣಕ್ಕೆ ಸಮ್ಮತಿ



ನವದೆಹಲಿ (ಪಿಟಿಐ): ಮುಂಬರುವ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳಲ್ಲಿ 'ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿ–ಶರದ್‌ಚಂದ್ರ ಪವಾರ್' ಅನ್ನು ಹೆಸರಾಗಿ ಮತ್ತು 'ಕಹಳೆ ಊದುತ್ತಿರುವ ಮನುಷ್ಯ'ನ ಗುರುತನ್ನು ಚಿಹ್ನೆಯಾಗಿ ಬಳಸಲು ಶರದ್ ಪವಾರ್ ಬಣಕ್ಕೆ ಸುಪ್ರೀಂ ಕೋರ್ಟ್ ಮಂಗಳವಾರ ಅನುಮತಿ ನೀಡಿದೆ.

ಚುನಾವಣಾ ಆಯೋಗವು ಅಜಿತ್ ಪವಾರ್ ಬಣಕ್ಕೆ 'ಗಡಿಯಾರ' ಚಿಹ್ನೆಯನ್ನು ನಿಗದಿಪಡಿಸಿ ಫೆಬ್ರುವರಿ 6ರಂದು ಆದೇಶಿಸಿತ್ತು. ಆ ಚಿಹ್ನೆಯನ್ನು ಅಜಿತ್ ಬಣ ಚುನಾವಣೆಗೆ ಬಳಸದಂತೆ ತಡೆ ನೀಡಬೇಕು ಎಂದು ಕೋರಿ ಶರದ್ ಪವಾರ್ ಬಣ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನಡೆಸಿದ ನ್ಯಾಯಮೂರ್ತಿಗಳಾದ ಸೂರ್ಯಕಾಂತ ಮತ್ತು ಕೆ.ವಿ. ವಿಶ್ವನಾಥನ್ ಅವರ ಪೀಠವು ಈ ಕುರಿತು ಆದೇಶ ನೀಡಿತು.

ಶರದ್ ಪವಾರ್ ಅವರು ಸ್ಥಾಪಿಸಿದ್ದ ಎನ್‌ಸಿಪಿ ವಿಭಜನೆಗೂ ಮುನ್ನ 'ಗಡಿಯಾರ'ವನ್ನು ಚುನಾವಣಾ ಚಿಹ್ನೆಯಾಗಿ ಹೊಂದಿತ್ತು. ಈಗ ಆ ಚಿಹ್ನೆಯು ಅಜಿತ್ ಬಣದಲ್ಲಿದೆ.

'ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿ–ಶರದ್‌ಚಂದ್ರ ಪವಾರ್' ಮತ್ತು ಅದರ ಚಿಹ್ನೆ 'ಕಹಳೆ ಊದುತ್ತಿರುವ ಮನುಷ್ಯ'ನನ್ನು ಗುರುತಿಸುವಂತೆ ಪೀಠವು ಚುನಾವಣಾ ಆಯೋಗ (ಇಸಿ) ಮತ್ತು ರಾಜ್ಯ ಚುನಾವಣಾ ಆಯೋಗಕ್ಕೆ (ಎಸ್‌ಇಸಿ) ಸೂಚಿಸಿದೆ. 'ಕಹಳೆ ಊದುತ್ತಿರುವ ಮನುಷ್ಯ' ಚಿಹ್ನೆಯನ್ನು ಯಾವುದೇ ಪಕ್ಷ ಅಥವಾ ಪಕ್ಷೇತರ ಅಭ್ಯರ್ಥಿಗಳಿಗೆ ಹಂಚಬಾರದು ಎಂದೂ ಪೀಠ ಆಯೋಗಕ್ಕೆ ಸೂಚನೆ ನೀಡಿದೆ.

'ಗಡಿಯಾರ' ಚಿಹ್ನೆಯ ಕುರಿತು ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದ್ದು, ಅದರ ಬಳಕೆಯು ನ್ಯಾಯಾಲಯದ ತೀರ್ಪಿಗೆ ಒಳಪಟ್ಟಿರುತ್ತದೆ ಎಂದು ಇಂಗ್ಲಿಷ್, ಹಿಂದಿ ಮತ್ತು ಮರಾಠಿ ಪತ್ರಿಕೆಗಳಲ್ಲಿ ಸಾರ್ವಜನಿಕ ಪ್ರಕಟಣೆ ಹೊರಡಿಸುವಂತೆ ಮಹಾರಾಷ್ಟ್ರ ಉಪಮುಖ್ಯಮಂತ್ರಿ ಅಜಿತ್ ಪವಾರ್ ನೇತೃತ್ವದ ಬಣಕ್ಕೆ ಪೀಠ ತಿಳಿಸಿದೆ.

ಚುನಾವಣೆ ಕುರಿತು ಎಲ್ಲ ರೀತಿಯ ಜಾಹೀರಾತುಗಳು, ಬ್ಯಾನರ್‌ಗಳು, ಪೋಸ್ಟರ್‌ಗಳಂತಹ ಪ್ರಚಾರ ಸಾಮಗ್ರಿಗಳಲ್ಲಿ ಅಜಿತ್ ಬಣವು ಇದೇ ರೀತಿಯ ಘೋಷಣೆಗಳನ್ನು ಮಾಡಬೇಕು ಎಂದು ಪೀಠ ಹೇಳೀದೆ.

ಚುನಾವಣಾ ಆಯೋಗದ ಫೆಬ್ರುವರಿ 6ರ ಆದೇಶದ ವಿರುದ್ಧ ಶರದ್ ಪವಾರ್ ಬಣ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ನಾಲ್ಕು ವಾರಗಳಲ್ಲಿ ತನ್ನ ಪ್ರತಿಕ್ರಿಯೆ ಸಲ್ಲಿಸುವಂತೆ ಪೀಠವು ಅಜಿತ್ ಬಣಕ್ಕೆ ಸೂಚಿಸಿದೆ.

ಶರದ್ ಪವಾರ್ ನೇತೃತ್ವದ ಎನ್‌ಸಿಪಿ ಬಣಕ್ಕೆ ಚುನಾವಣಾ ಆಯೋಗವು ನೀಡಿರುವ 'ಎನ್‌ಸಿಪಿ – ಶರದ್‌ಚಂದ್ರ ಪವಾರ್' ಹೆಸರನ್ನು ಮುಂದಿನ ಆದೇಶದವರೆಗೆ ಬಳಸಬೇಕು ಎಂದು ಸುಪ್ರೀಂ ಕೋರ್ಟ್ ಫೆಬ್ರುವರಿ 18ರಂದು ನಿರ್ದೇಶಿಸಿತ್ತು.

1951-52ರ ಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಿ 28 ಲಕ್ಷ ಹೆಸರು ಕೈಬಿಟ್ಟಿದ್ದ ಆಯೋಗ

ಹೆಸರು ನೀಡಲೊಪ್ಪದ ಮಹಿಳಾ ಮತದಾರರು

ನವದೆಹಲಿ (ಪಿಟಿಐ): 1951–52ರಲ್ಲಿ ಲೋಕಸಭೆಗೆ ಪ್ರಥಮ ಬಾರಿಗೆ ಚುನಾವಣೆ ನಡೆಯಿತು. ಆಗ ಮತದಾರರ ಪಟ್ಟಿ ಸಿದ್ಧಪಡಿಸುವಾಗ ಚುನಾವಣಾ ಆಯೋಗಕ್ಕೆ ವಿಚಿತ್ರ ಸಮಸ್ಯೆ ಎದುರಾಗಿತ್ತು. ಹೆಚ್ಚಿನ ಮಹಿಳಾ ಮತದಾರರು ತಮ್ಮ ಹೆಸರು ಬರೆಸಲು ಸಿದ್ಧರಿರಲಿಲ್ಲ!

ಕೆಲವು ರಾಜ್ಯಗಳಲ್ಲಿ ಮಹಿಳೆಯರು ತಾವು ಇಂಥವರ ಪತ್ನಿ, ತಾಯಿ ಅಥವಾ ಅಥವಾ ಮಗಳು ಎಂದು ಕುಟುಂಬದ ಪುರುಷ ಸದಸ್ಯರ ಜೊತೆಗೆ ಗುರುತಿಸಿಕೊಳ್ಳಲು ಬಯಸಿದ್ದರು. ಈ ಕುರಿತು ಜಾಗೃತಿ ಮೂಡಿಸಿ ಹೆಸರು ಸೇರಿಸಲು ವಿಶೇಷ ಅಭಿಯಾನವನ್ನೇ ನಡೆಸಲಾಗಿತ್ತು.

ಆಗ ದೇಶದಲ್ಲಿದ್ದ ಮಹಿಳಾ ಮತದಾರರ ಸಂಖ್ಯೆ ಸುಮಾರು 8 ಕೋಟಿ. ಅವಧಿ ವಿಸ್ತರಣೆ, ಜಾಗೃತಿ ನಂತರವೂ ಸುಮಾರು 28 ಲಕ್ಷ ಮಹಿಳೆಯರು ಮತಪಟ್ಟಿಗೆಗೆ ತಮ್ಮ ನಿಜವಾದ ಹೆಸರು ನೀಡಿರಲೇ ಇಲ್ಲ. ಇದೇ ಕಾರಣಕ್ಕೇ ಅಷ್ಟು ಮತದಾರರ ಹೆಸರು ಕೈಬಿಡಲಾಗಿತ್ತು.

ಮತದಾನ: ಹೆಚ್ಚಿದ ನಾರಿ ಶಕ್ತಿ

- ಮೊದಲ ಚುನಾವಣೆ ನಡೆದ 1951–52ರಲ್ಲಿ ಮತದಾರರ ಒಟ್ಟು ಸಂಖ್ಯೆ (ಜಮ್ಮು ಮತ್ತು ಕಾಶ್ಮೀರ ಹೊರತುಪಡಿಸಿ) 17.3 ಕೋಟಿ. ಇವರಲ್ಲಿ ಶೇ 45ರಷ್ಟು ಮಹಿಳೆಯರು.
- 2019ರಲ್ಲಿ ನಡೆದ ಚುನಾವಣೆಯಲ್ಲಿ ದೇಶದ ಒಟ್ಟು ಮತದಾರರ ಸಂಖ್ಯೆ 91.19 ಕೋಟಿ. ಇವರಲ್ಲಿ ಮಹಿಳಾ ಮತದಾರರ ಸಂಖ್ಯೆಯ 43.85 ಕೋಟಿ ಇದ್ದು, ಲಿಂಗಾನುಪಾತ 926 ಆಗಿತ್ತು.
- ಈಗ ಆಯೋಗ ಪ್ರಕಟಿಸಿರುವಂತೆ, ಪ್ರತಿ ಸಾವಿರ ಪುರುಷ ಮತದಾರರಿಗೆ ಮಹಿಳಾ ಮತದಾರರ ಸಂಖ್ಯೆ 948 ಆಗಿದೆ.
- 12 ರಾಜ್ಯಗಳಲ್ಲಿ ಪುರುಷರಿಗಿಂತ ಮಹಿಳಾ ಮತದಾರರೇ ಅಧಿಕವಾಗಿದ್ದಾರೆ. ಈಗಿನ ಮಹಿಳಾ ಮತದಾರರ ಒಟ್ಟು ಸಂಖ್ಯೆ 47.1 ಕೋಟಿ.

ಲೋಕಸಭೆಯ ಪ್ರಥಮ ಸಾರ್ವತ್ರಿಕ ಚುನಾವಣೆ ಕುರಿತು 1955ರಲ್ಲಿ ಬಿಡುಗಡೆಯಾದ ಅಧಿಕೃತ ವರದಿಯಲ್ಲಿ ಈ ಉಲ್ಲೇಖವಿದೆ. ಇಂತಹ ಹೆಚ್ಚಿನ ಪ್ರಕರಣಗಳು ಬಿಹಾರ, ಉತ್ತರ ಪ್ರದೇಶ, ಮಧ್ಯಭಾರತ್, ರಾಜಸ್ಥಾನ, ವಿಂಧ್ಯ ಪ್ರದೇಶಗಳಲ್ಲಿ ವರದಿಯಾಗಿದ್ದವು.

ನಂತರದ ಚುನಾವಣೆಗಳಲ್ಲಿ ಪರಿಸ್ಥಿತಿಯಲ್ಲಿ ಸುಧಾರಣೆ ಕಂಡುಬಂದಿತು. ಲೋಕಸಭೆಗೆ 2019ರಲ್ಲಿ ನಡೆದಿದ್ದ ಸಾರ್ವತ್ರಿಕ ಚುನಾವಣೆಯಲ್ಲಿ ಗರಿಷ್ಠ ಪ್ರಮಾಣದಲ್ಲಿ ಮತ ಹಕ್ಕು ಚಲಾಯಿಸುವ ಮೂಲಕ ಮಹಿಳೆಯರು ದಾಖಲೆ ಬರೆದರು.

2019ರ ಚುನಾವಣೆಯಲ್ಲಿ ಮತದಾನ ಪ್ರಮಾಣ ಶೇ 67.4ರಷ್ಟಿತ್ತು. ಈ ಪೈಕಿ ಹಕ್ಕು ಚಲಾಯಿಸಿದ ಮಹಿಳಾ ಮತದಾರರ ಪ್ರಮಾಣ ಶೇ 67.18ರಷ್ಟಿದ್ದರೆ, ಪುರುಷ ಮತದಾರರ ಪ್ರಮಾಣ ಶೇ 67.01ರಷ್ಟಿತ್ತು.

ಹೆಸರು ಹೇಳಲೂ ನಿರಾಕರಿಸುತ್ತಿದ್ದ ಪರಿಸ್ಥಿತಿಗೆ ಹೋಲಿಸಿದರೆ, ಈ ಅಂಕಿ–ಅಂಶಗಳು ಭಾರತದ ಚುನಾವಣಾ ವ್ಯವಸ್ಥೆಯಲ್ಲಾದ ಗಣನೀಯ ಸುಧಾರಣೆಗೆ ಕನ್ನಡಿ. ಪುರುಷರ ನೆರಳಿನಿಂದ ಹೊರಬಂದಿದ್ದ ಮಹಿಳೆಯರು ತಮ್ಮದೇ ಛಾಪು ಮೂಡಿಸಲು ಆರಂಭಿಸಿದ್ದರು.

1950ರಲ್ಲಿ ಭಾರತ ಗಣರಾಜ್ಯವಾಗಿ ಘೋಷಣೆಯಾದ ದಿನದ ಮುನ್ನಾದಿನ ಭಾರತ ಚುನಾವಣಾ ಆಯೋಗ ಅಸ್ತಿತ್ವಕ್ಕೆ ಬಂದಿತ್ತು. ಈವರೆಗೂ 17 ಸಾರ್ವತ್ರಿಕ ಚುನಾವಣೆಗಳು ನಡೆದಿವೆ. ಆದರೆ, ಮೊದಲ ಚುನಾವಣೆಯಲ್ಲಿ ಸವಾಲು ಹೆಚ್ಚಿತ್ತು. ಆಗ ಹೆಚ್ಚಿನವರು ಅನಕ್ಷರಸ್ಥರಾಗಿದ್ದರು.

ಸ್ಥಳೀಯವಾಗಿ ಮಹಿಳೆಯರು ತಮ್ಮ ಹೆಸರು, ಗುರುತು ಹೇಳಿಕೊಳ್ಳಲಾಗದ ಸ್ಥಿತಿ ಇದ್ದುದ್ದೇ ಆಗಿನ ಭಿನ್ನ ಸಮಸ್ಯೆಗೆ ಕಾರಣವಾಗಿತ್ತು. ಸಮಸ್ಯೆ ಅರಿವಾಗುತ್ತಲೇ, ಮಹಿಳೆಯ ಹೆಸರು, ಕುಟುಂಬದ ಪುರುಷರ ಜೊತೆಗಿನ ಸಂಬಂಧ (ತಾಯಿ, ಸಹೋದರಿ, ಪತ್ನಿ) ಒಳಗೊಂಡು ಮತಪಟ್ಟಿಗೆ ಸೇರಿಸಲು ಕ್ರಮವಹಿಸಲಾಯಿತು. ಇದಕ್ಕಾಗಿ ಒಂದು ತಿಂಗಳು ಅವಧಿ ವಿಸ್ತರಿಸಲಾಗಿತ್ತು ಎಂದೂ ವರದಿ ಉಲ್ಲೇಖಿಸಿದೆ.

ಮತಪಟ್ಟಿಗೆ ಮಹಿಳೆಯರು ನಿಜ ಹೆಸರು ನಮೂದಿಸಬೇಕು ಎಂದು ತಿಳಿಸಿದ್ದು ಆಯೋಗದ ದೃಢವಾದ ಹೆಜ್ಜೆಯಾಗಿದ್ದು ಹಾಗೂ ಆಗಿನ ಕಠಿಣ ನಿರ್ಧಾರವು ಆಗಿತ್ತು ಎಂದು ಸ್ಮರಿಸುತ್ತಾರೆ ದೆಹಲಿಯ ಮಾಜಿ ಮುಖ್ಯ ಚುನಾವಣಾಧಿಕಾರಿ ಚಂದ್ರ ಭೂಷಣ್ ಕುಮಾರ್.

ಈಗ ಮತ್ತೆ ಲೋಕಸಭೆ ಚುನಾವಣೆಗೆ ಸಿದ್ಧತೆ ನಡೆದಿರುವ ಹೊತ್ತಿನಲ್ಲಿ ಸಾಕಷ್ಟು ಬದಲಾಗಿದೆ. ಸ್ಥಿತಿ ಬದಲಾಗಿದೆ. ಚುನಾವಣೆ ಪ್ರಕ್ರಿಯೆಯಿಂದ ಭದ್ರತೆವರೆಗೆ ಮಹಿಳೆಯರೇ ನಿರ್ವಹಿಸುವ 'ಪಿಂಕ್ ಬೂತ್'ಗಳು ಸ್ಥಾಪನೆಯಾಗುತ್ತಿವೆ. ಈಗ ದೇಶದಲ್ಲಿ ಇಂತಹ 27,527 ಮತಗಟ್ಟೆಗಳಿವೆ.



❦ ಸುಭಾಷಿತ ❦

ನೀವು ಕೆಳಗೇ ನೋಡುತ್ತಿದ್ದರೆ, ಕಾಮನಬಿಲ್ಲನ್ನು ಎಂದಿಗೂ ಕಾಣಲಾರಿರಿ.

-ಚಾರ್ಲಿ ಚಾಪ್ಲಿನ್

‘ಒಂದು ದೇಶ, ಒಂದು ಚುನಾವಣೆ’ ವಿವೇಕಯುತ ನಡೆಯಾಗಲಾರದು

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ನೇಮಿಸಿರುವ ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ನೇತೃತ್ವದ ಸಮಿತಿಯು ಎಲ್ಲ ಮೂರು ಹಂತಗಳ ಆಡಳಿತ ವ್ಯವಸ್ಥೆಗೆ ಏಕಕಾಲದಲ್ಲಿ ಚುನಾವಣೆ ನಡೆಸಬೇಕು ಎಂದು ಶಿಫಾರಸು ಮಾಡಿದೆ. ಇದರಲ್ಲಿ ಯಾವ ಅಚ್ಚರಿಯೂ ಇಲ್ಲ. ಏಕಕಾಲಕ್ಕೆ ಚುನಾವಣೆಯನ್ನು ಏಕೆ ನಡೆಸಬೇಕು ಎಂಬುದಕ್ಕೆ ಸಮರ್ಥನೆ ಹಾಗೂ ಅದನ್ನು ಜಾರಿ ಮಾಡುವುದಕ್ಕೆ ಅನುಸರಿಸಬೇಕಾದ ವಿಧಾನ ಹಾಗೂ ಪ್ರಕ್ರಿಯೆಗಳನ್ನು ಈ ಸಮಿತಿಯು ಶಿಫಾರಸು ಮಾಡಬಹುದು ಎಂಬ ನಿರೀಕ್ಷೆ ಇತ್ತು. ಹಾಗೆಯೇ ಈ ಸಮಿತಿಯು ಈ ವಿಚಾರವನ್ನು ವಸ್ತುನಿಷ್ಠವಾಗಿ ಪರಿಶೀಲನೆ ನಡೆಸಬಹುದು ಎಂಬ ನಿರೀಕ್ಷೆ ಇರಲಿಲ್ಲ. ಸಮಿತಿಯ ಶಿಫಾರಸುಗಳಿಗೆ ಋಜುತ್ವ ಮತ್ತು ಗೌರವ ತಂದುಕೊಡುವುದಕ್ಕಾಗಿ ಮಾಜಿ ರಾಷ್ಟ್ರಪತಿ ಕೋವಿಂದ್ ಅವರ ಹೆಸರು ಬಳಸಲಾಗಿದೆ. ಸಮಿತಿಯು ತನ್ನ ಕೆಲಸವನ್ನು ಅತ್ಯಂತ ತ್ವರಿತವಾಗಿ ಮಾಡಿದೆ. ಲೋಕಸಭೆ ಮತ್ತು ವಿಧಾನಸಭೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸಿದ ನಂತರ ನೂರು ದಿನಗಳ ಒಳಗೆ ಸ್ಥಳೀಯಾಡಳಿತ ಸಂಸ್ಥೆಗಳಿಗೆ ಚುನಾವಣೆ ನಡೆಸಬೇಕು ಎಂದು ಸಮಿತಿಯು ಶಿಫಾರಸು ಮಾಡಿದೆ. ಎಲ್ಲ ಮೂರು ಹಂತಗಳ ಚುನಾವಣೆಗಳಿಗೂ ಒಂದೇ ಮತದಾರರ ಪಟ್ಟಿ ಮತ್ತು ಫೋಟೊಸಹಿತ ಗುರುತು ಪತ್ರ ಇರಬೇಕು ಎಂದೂ ಸಮಿತಿಯು ಹೇಳಿದೆ. ರಾಜಕೀಯ ಪಕ್ಷಗಳು, ಸಂಬಂಧಪಟ್ಟ ಜನರು ಮತ್ತು ಗುಂಪುಗಳಿಂದ ಸಲಹೆಗಳನ್ನು ಪಡೆದುಕೊಳ್ಳಲಾಗಿದೆ. ಇದರಲ್ಲಿ ಬಹುಸಂಖ್ಯಾತರ ಅಭಿಪ್ರಾಯ ಮತ್ತು ಸಮಿತಿಯ ಅಭಿಪ್ರಾಯ ‘ಒಂದು ದೇಶ, ಒಂದು ಚುನಾವಣೆ’ ಯೋಚನೆಯ ಪರವಾಗಿಯೇ ಇತ್ತು ಎಂದು ಸಮಿತಿಯು ಹೇಳಿದೆ.



ಎಲ್ಲ ಮೂರು ಹಂತಗಳ ಆಡಳಿತ ವ್ಯವಸ್ಥೆಗೆ ಏಕಕಾಲದಲ್ಲಿ ಚುನಾವಣೆ ನಡೆಸುವುದು ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾದುದು

ಈಗ ಇರುವ ಚುನಾವಣಾ ವ್ಯವಸ್ಥೆಯನ್ನು ಕೈಬಿಟ್ಟು ಏಕಕಾಲಕ್ಕೆ ಚುನಾವಣೆ ನಡೆಸುವ ಯೋಚನೆಯನ್ನು ಅಳವಡಿಸಿಕೊಳ್ಳುವುದಕ್ಕೆ ಸಮಿತಿಯು ಕೊಟ್ಟ ಕಾರಣಗಳು ಮನದಟ್ಟಾಗುವ ರೀತಿಯಲ್ಲಿ ಇಲ್ಲ. ‘ಪ್ರತ್ಯೇಕ ಚುನಾವಣೆಯಿಂದ ಸಂಪನ್ಮೂಲ ವ್ಯರ್ಥವಾಗುತ್ತದೆ, ಅದು ಆಡಳಿತ ವ್ಯವಸ್ಥೆಯನ್ನು ನಿಷ್ಕ್ರಿಯಗೊಳಿಸುತ್ತದೆ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಭಾರಿ ಹೊರೆ ಹೊರಿಸುತ್ತದೆ. ಜೊತೆಗೆ ಮತದಾರರ ದಣಿವಿಗೂ ಕಾರಣವಾಗುತ್ತದೆ’ ಎಂದು ಸಮಿತಿಯು ಹೇಳಿದೆ. ‘ಒಂದು ದೇಶ, ಒಂದು ಚುನಾವಣೆ’ಗೆ ಸಂಬಂಧಿಸಿ ಸರ್ಕಾರ ಮುಂದಿಟ್ಟ ವಾದ ಹಾಗೂ ಈ ಯೋಚನೆಯನ್ನು ಸಮರ್ಥಿಸುವವರ ವಾದವನ್ನು ಇಲ್ಲಿ ಪುನರಾವರ್ತಿಸಲಾಗಿದೆ. ಈ ಪ್ರಸ್ತಾವದ ಗಂಭೀರ ಅಧ್ಯಯನವಾಗಲೀ ಈ ಕುರಿತು ಇರುವ ಟೀಕೆಗಳ ಮೌಲ್ಯಮಾಪನವಾಗಲೀ ಸಮಾಲೋಚನೆಯಲ್ಲಿ ವ್ಯಕ್ತವಾದ ಪರ್ಯಾಯ ಪ್ರಸ್ತಾವಗಳಾಗಲೀ ಗಂಭೀರವಾದ ಅಧ್ಯಯನಕ್ಕೆ ಒಳಗಾದಂತೆ ಕಾಣಿಸುತ್ತಿಲ್ಲ. ಏಕಕಾಲಕ್ಕೆ ಚುನಾವಣೆ ನಡೆಸಿದರೆ ಅದು ಸ್ಥಳೀಯಾಡಳಿತ ಸಂಸ್ಥೆಗಳ ಪರಿಣಾಮಕಾರಿತ್ವವನ್ನು ಕುಂಠಿತಗೊಳಿಸುತ್ತದೆ ಎಂಬ ಅಭಿಪ್ರಾಯವು ಸಮಿತಿಯ ಮುಂದೆ ವ್ಯಕ್ತವಾಗಿದೆ. ದೆಹಲಿ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎ.ಪಿ.ಶಾ ಅವರು ಮಹತ್ವದ ಅಂಶವೊಂದನ್ನು ಸಮಿತಿಯ ಮುಂದೆ ಮಂಡಿಸಿದ್ದರು: ‘ಏಕಕಾಲಕ್ಕೆ ಚುನಾವಣೆ ನಡೆಸುವುದರಿಂದ ಜನಪ್ರತಿನಿಧಿಗಳ ಕಾರ್ಯಕ್ಷಮತೆಯ ಪರಾಮರ್ಶೆ ಅಥವಾ ಅವರಿಗೆ ಅನಪೇಕ್ಷಿತವಾದ ಸ್ಥಿತಿ ದೊರೆಯುತ್ತದೆ. ಈ ಮೂಲಕ ರಾಜಕೀಯ ವಿಶ್ವಾಸಾರ್ಹತೆಗೆ ಕುಂದುಂಟಾಗುತ್ತದೆ’.

‘ಒಂದು ದೇಶ, ಒಂದು ಚುನಾವಣೆ’ ಯೋಚನೆಯ ಕುರಿತು ಇರುವ ಪ್ರಶ್ನೆಗಳು, ಕಳವಳಗಳು, ಟೀಕೆಗಳು ಮತ್ತು ವಿರೋಧಕ್ಕೆ ಉತ್ತರ ಕಂಡುಕೊಳ್ಳುವ ಪ್ರಯತ್ನವನ್ನು ಸಮಿತಿಯು ಮಾಡಿಲ್ಲ. ಸರ್ಕಾರ ಅಥವಾ ಈ ಯೋಚನೆಯ ಬೆಂಬಲಿಗರು ಕೂಡ ಈ ಯಾವುದಕ್ಕೂ ಉತ್ತರವನ್ನು ನೀಡಿಲ್ಲ. ಲೋಕಸಭೆ, ವಿಧಾನಸಭೆ ಮತ್ತು ಸ್ಥಳೀಯಾಡಳಿತ ಸಂಸ್ಥೆ ಚುನಾವಣೆಗಳು ಭಿನ್ನ ವಿಷಯಗಳ ಆಧಾರದಲ್ಲಿ ನಡೆಯುತ್ತವೆ. ಆದರೆ, ಏಕಕಾಲಕ್ಕೆ ಚುನಾವಣೆ ನಡೆದರೆ ಈ ವ್ಯತ್ಯಾಸಗಳು ಮರೆಯಾಗುವ ಅಪಾಯವಿದೆ. ರಾಷ್ಟ್ರೀಯ ಪಕ್ಷಗಳು ಮತ್ತು ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷಕ್ಕೆ ನ್ಯಾಯಯುತವಲ್ಲದ ರೀತಿಯ ಅನುಕೂಲಗಳು ದೊರಕುತ್ತವೆ. ‘ರಾಷ್ಟ್ರೀಯ ಮತ್ತು ಪ್ರಾದೇಶಿಕ ವಿಷಯಗಳ ನಡುವಣ ವ್ಯತ್ಯಾಸವನ್ನು ಗುರುತಿಸುವಷ್ಟು ವಿವೇಚನೆಯು ಮತದಾರರಿಗೆ ಇದೆ’ ಎಂದು ಸಮಿತಿಯು ಹೇಳಿದೆ. ಆದರೆ ಇಂತಹದ್ದೊಂದು ಹೇಳಿಕೆಯ ಮೂಲಕ ‘ಒಂದು ದೇಶ, ಒಂದು ಚುನಾವಣೆ’ ಕುರಿತು ಇರುವ ಎಲ್ಲ ಪ್ರಶ್ನೆಗಳನ್ನು ತಳ್ಳಿಹಾಕಲು ಸಾಧ್ಯವಿಲ್ಲ. ಏಕಕಾಲಕ್ಕೆ ಚುನಾವಣೆ ನಡೆಸುವುದು ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾದುದು. ಈ ಕುರಿತು ಇರುವ ಟೀಕೆ ಮತ್ತು ಕಳವಳಗಳನ್ನು ನಿರ್ಲಕ್ಷಿಸಿ ‘ಒಂದು ದೇಶ, ಒಂದು ಚುನಾವಣೆ’ ಯೋಚನೆಯ ಜಾರಿಗೆ ಮುಂದಾದರೆ ಅದು ಸರ್ಕಾರದ ತಪ್ಪು ಮತ್ತು ಅವಿವೇಕದ ನಡೆಯಾಗಲಿದೆ.

ದಿನದ ಟ್ವೀಟ್

ನೀರಿನ ಮಹತ್ವ ಅರಿಯಿರಿ...



ಉತ್ತಮವಾಗಿ ಮಳೆ ಬೀಳುವ (2023 ಹೊರತುಪಡಿಸಿ) ಕೆಲವೇ ದೊಡ್ಡ ನಗರಗಳ ಪೈಕಿ ಒಂದಾಗಿರುವ ಬೆಂಗಳೂರಿನಲ್ಲಿ ಬಹಳಷ್ಟು ನೀರಿದೆ. ಆದರೆ ಮಳೆ ನೀರನ್ನು ಹೇಗೆ ಹಿಡಿದಿಡಬೇಕು ಎಂಬುದನ್ನು ನಾವು ಅರಿಯಬೇಕಷ್ಟೆ. ಇದು, ಕಾರ್ಖಾನೆಗಳು, ಐ.ಟಿ. ಪಾರ್ಕ್‌ಗಳು, ಅಪಾರ್ಟ್‌ಮೆಂಟ್‌ಗಳು, ಮನೆಗಳು ಎಲ್ಲಕ್ಕೂ ಅನ್ವಯಿಸುತ್ತದೆ. ಹಲವರು ಇದನ್ನು ಮಾಡುತ್ತಾರೆ, ಆದರೆ ಎಲ್ಲರೂ ಅಲ್ಲ...

ಶ್ರೀನಿವಾಸ್ ಅಲವಿಲ್ಲಿ, ಸಹ ಸಂಸ್ಥಾಪಕ, ಸಿಟಿಜನ್ಸ್ ಫಾರ್ ಬೆಂಗಳೂರು

ಕಿಡಿನುಡಿ



ವೀಸಾ ಅರ್ಜಿಯು ಅತ್ಯಂತ ಅಮಾನವೀಯ, ಜುಗುಪ್ಸೆ ಹುಟ್ಟಿಸುವಂಥದ್ದು ಮತ್ತು ಅನಗತ್ಯವಾದ ನಮ್ರತೆಯನ್ನು ಬೇಡುವ ಒಂದು ಪ್ರಕ್ರಿಯೆ. ಇದು, ಭಾರತದಂತಹ ದೇಶಗಳ ನಾಗರಿಕರನ್ನು ನಿರ್ದಿಷ್ಟವಾಗಿ ಗುರಿಯಾಗಿಸಿಕೊಂಡು ತಾರತಮ್ಯ ಅನುಸರಿಸುತ್ತದೆ. ನಿಮ್ಮ ರಾಷ್ಟ್ರಗಳಲ್ಲಿ ನೆಲೆಯೂರಲು ಜನ ಹಂಬಲಿಸುತ್ತಿದ್ದ ಕಾಲ ಮುಗಿದುಹೋಗಿದೆ. ನಾವು ಪ್ರಯಾಣ ಮಾಡುತ್ತೇವೆ, ಕೆಲಸ ಮಾಡುತ್ತೇವೆ, ರಜಾ ದಿನಗಳನ್ನು ಕಳೆಯುತ್ತೇವೆ, ಹಣ ವ್ಯಯಿಸುತ್ತೇವೆ ಮತ್ತು ನಿಮ್ಮ ರಾಷ್ಟ್ರದ ಆರ್ಥಿಕತೆಯನ್ನು ಬಲಪಡಿಸುತ್ತೇವೆ. ನೀವು ನಮ್ಮನ್ನು ನಡೆಸಿಕೊಳ್ಳುವ ರೀತಿಯು ಎಲ್ಲ ರಂಗಗಳಲ್ಲೂ ನಿಮ್ಮ ದೇಶ ಎಷ್ಟು ದಯನೀಯವಾಗಿದೆ ಎಂಬುದನ್ನು ತೋರಿಸುತ್ತದೆ.

ಹನ್ಸಲ್ ಮೆಹ್ತಾ, ಚಲನಚಿತ್ರ ನಿರ್ದೇಶಕ

25 ವರ್ಷಗಳ ಹಿಂದೆ

ಶನಿವಾರ, 20-3-1999

- **ಬಿಹಾರದಲ್ಲಿ ನಿಲ್ಲದ ಹತ್ಯಾಕಾಂಡ ಉಗ್ರರ ದಾಳಿಗೆ 34 ಜನರ ಬಲಿ**

ಸೆನಾರಿ (ಜೆಹಾನಾಬಾದ್), ಮಾರ್ಚ್ 19 (ಪಿಟಿಐ)– ಬಿಹಾರದ ಜೆಹಾನಾಬಾದ್ ಜಿಲ್ಲೆಯ ಸೆನಾರಿ ಹಳ್ಳಿಗೆ ನಿನ್ನೆ ರಾತ್ರಿ ನಿಷೇಧಿತ ಮಾವೊವಾದಿ ಕಮ್ಯುನಿಸ್ಟ್ ಸೆಂಟರ್‌ಗೆ (ಎಂಸಿಸಿ)ಸೇರಿದ ಸುಮಾರು ಒಂದು ಸಾವಿರ ಮಂದಿ ಕಾರ್ಯಕರ್ತರು ಶಸ್ತ್ರಗಳಿಂದ ಸಜ್ಜಿತರಾಗಿ ದಾಳಿಯಿಟ್ಟು ಮೇಲ್ವರ್ಗಕ್ಕೆ ಸೇರಿದ 34 ಮಂದಿಯನ್ನು ಕೊಂದುಹಾಕಿದರು.

ರಾಬ್ಡಿದೇವಿ ನೇತೃತ್ವದ ಸರ್ಕಾರ ವಿಶ್ವಾಸಮತ ಗಳಿಸಿದ 24 ತಾಸುಗಳೊಳಗೇ ಸಂಭವಿಸಿದ ಈ ಘಟನೆಯಲ್ಲಿ 35 ಮಂದಿ ಸತ್ತಿದ್ದಾರೆ ಎಂದು ಅಧಿಕೃತ ಮೂಲಗಳು ಮೊದಲು ತಿಳಿಸಿದ್ದವು. ಆದರೆ ಗ್ರಾಮಸ್ಥರ ಪ್ರಕಾರ ಸತ್ತವರ ಸಂಖ್ಯೆ 70.

- **ಸರ್ಕಾರದ ಅಸ್ಥಿರಕ್ಕೆ ಪ್ರತಿಪಕ್ಷ ಯತ್ನ: ಪ್ರಧಾನಿ ಖಂಡನೆ**

ನವದೆಹಲಿ, ಮಾರ್ಚ್ 19 (ಪಿಟಿಐ)– ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಇಂದು ತನ್ನ ಅಧಿಕಾರಾವಧಿಯ ಒಂದು ವರ್ಷವನ್ನು ಪೂರೈಸಿತು. ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ರಾಜಧಾನಿ ಸಹಿತ ವಿವಿಧೆಡೆ ನಡೆದ ಸಮಾರಂಭಗಳಲ್ಲಿ, ಕೇಂದ್ರ ಸರ್ಕಾರವನ್ನು ಅಸ್ಥಿರಗೊಳಿಸಲು ಯತ್ನಿಸುತ್ತಿರುವ ವಿರೋಧ ಪಕ್ಷಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ವಿಜ್ಞಾನ ಭವನದಲ್ಲಿ ವಿಮಾ ಯೋಜನೆಗಳನ್ನು ಆರಂಭಿಸಿ ಮಾತನಾಡಿದ ಅವರು, ಕೇಂದ್ರದ ಸ್ಥಿರ ಸರ್ಕಾರವನ್ನು ಕಂಡು ವಿರೋಧ ಪಕ್ಷಗಳಿಗೆ ನಡುಕ ಉಂಟಾಗಿದೆ ಎಂದರು.

50 ವರ್ಷಗಳ ಹಿಂದೆ

ಬುಧವಾರ, 20-3-1974

- **ರಾಜ್ಯ ಕಾಂಗ್ರೆಸ್ ನಾಯಕತ್ವ ಬದಲಾವಣೆಗೆ ಕೆಲವು ಸಂಸತ್ ಸದಸ್ಯರ ಯತ್ನ**

ಬೆಂಗಳೂರು, ಮಾರ್ಚ್ 19– ರಾಜ್ಯದ ಕೆಲ ಸಂಸತ್ ಸದಸ್ಯರು ಈ ತಿಂಗಳ ಅಂತ್ಯದೊಳಗೆ ಪ್ರಧಾನಿ ಹಾಗೂ ಕಾಂಗ್ರೆಸ್ ಅಧ್ಯಕ್ಷರನ್ನು ಕಂಡು, ರಾಜ್ಯದ ಕಾಂಗ್ರೆಸ್ ಪಕ್ಷದ ನಾಯಕತ್ವದಲ್ಲಿ ಬದಲಾವಣೆಯಾಗಬೇಕೆಂದು ಒತ್ತಾಯ ಮಾಡಲಿದ್ದಾರೆ.

ವಿಧಾನಸಭೆಯ ಮರು ಚುನಾವಣೆಯಲ್ಲಿ ಕಾಂಗ್ರೆಸ್ಸಿಗಾದ ಸೋಲು ಹಾಗೂ ಅದಕ್ಕೆ ಸಂಬಂಧಿಸಿದ ಬೆಳವಣಿಗೆಯ ಕಾರಣ ‘ಏಕಾಭಿಪ್ರಾಯವುಳ್ಳ’ ಸಂಸತ್ ಸದಸ್ಯರು ಸರ್ಕಾರ ಹಾಗೂ ಸಂಸ್ಥೆಯಲ್ಲಿ ನಾಯಕತ್ವದ ಬದಲಾವಣೆಗೆ ಪ್ರಯತ್ನ ಮಾಡಲಿದ್ದಾರೆ ಎಂದು ಸಂಸದ ಎಸ್.ಬಿ. ಪಾಟೀಲ್ ತಿಳಿಸಿದರು.

- **ಬಿಹಾರದಲ್ಲಿ ವ್ಯಾಪಕ ಹಿಂಸಾಚಾರ ಐದು ಕಡೆ ಗುಂಡಿಗೆ 10 ಜನ ಬಲಿ**

ಪಟನಾ, ಮಾರ್ಚ್ 19– ಪಟನಾ, ಮುಂಘೇರ್, ಛಾಪ್ರ, ದೇವಗಢ ಮತ್ತು ರಾಂಚಿಗಳಲ್ಲಿ ಇಂದು ಲೂಟಿ ಮತ್ತು ಬೆಂಕಿ ಹಚ್ಚುವ ಕೃತ್ಯಗಳಲ್ಲಿ ತೊಡಗಿದ್ದ ಗುಂಪುಗಳ ಮೇಲೆ ಗುಂಡು ಹಾರಿಸಿದ ಪರಿಣಾಮ ಕನಿಷ್ಠ 10 ಜನ ಸತ್ತು 31 ಜನ ಗಾಯಗೊಂಡರು.

ಪಟನಾದಲ್ಲಿ ಇಡೀ ವಿಶ್ವವಿದ್ಯಾನಿಲಯದ ಆವರಣವನ್ನು ಸೇನೆಗೆ ಒಪ್ಪಿಸಲಾಗಿದೆ.

ಬಡವರು, ಮಧ್ಯಮ ವರ್ಗದವರ ಒಳಅರಿವು ಚುನಾವಣಾ ಅಲೆಯ ದಿಕ್ಕನ್ನು ಬದಲಿಸಬಹುದು

ಚುನಾವಣೆ: ಪ್ರಭಾವಿಸುವ ಅಂಶಗಳೇನು?



ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದ ಮತದಾರರು ಏಪ್ರಿಲ್ ಕೊನೆಯ ವಾರದಲ್ಲಿ ಹಾಗೂ ಮೇ ತಿಂಗಳ ಆರಂಭದಲ್ಲಿ, ಒಟ್ಟು ಎರಡು ಹಂತಗಳಲ್ಲಿ ಮತ ಚಲಾಯಿಸಲಿದ್ದಾರೆ. ಈಗ ಮತದಾನಕ್ಕೆ ದಿನಗಣನೆ ಆರಂಭವಾಗಿದೆ. ಬಿಜೆಪಿ-ಜೆಡಿಎಸ್ ಮೈತ್ರಿಕೂಟ ಹಾಗೂ ಕಾಂಗ್ರೆಸ್ ತಮ್ಮ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡಿವೆ. ಚುನಾವಣೆಯ ಕಣದಲ್ಲಿ ಯಾರು ಇರುತ್ತಾರೆ ಎಂಬುದು ಮುಂದಿನ ಕೆಲವು ದಿನಗಳಲ್ಲಿ ಸ್ಪಷ್ಟವಾಗುವ ನಿರೀಕ್ಷೆ ಇದೆ. ಎರಡೂ ಕಡೆಯವರು ತಮ್ಮ ತಾಕತ್ತಿನ ಲೆಕ್ಕಾಚಾರ ಹಾಕುತ್ತಿದ್ದಾರೆ. ಎರಡೂ ಕಡೆಯವರಿಗೆ ತಮ್ಮವೇ ಆದ ಸವಾಲುಗಳೂ ಇವೆ. ಅಭ್ಯರ್ಥಿಗಳ ಆಯ್ಕೆಯು ಸೂಚಿಸುತ್ತಿರುವುದು ಏನನ್ನು? ಅದು ಪಕ್ಷಗಳ ಒಗ್ಗಟ್ಟಿನ ಮೇಲೆ ಏನಾದರೂ ಪರಿಣಾಮ ಉಂಟುಮಾಡಿದೆಯೇ? ರಾಜ್ಯದಲ್ಲಿ ಕಾಣುತ್ತಿರುವ ಚುನಾವಣಾ ಅಲೆ ಹೇಗಿದೆ?

ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಘೋಷಿಸುವ ಸಂದರ್ಭದಲ್ಲಿ ಬಿಜೆಪಿಯು ಹಲವು ಸಮಸ್ಯೆಗಳನ್ನು ಪರಿಹರಿಸುವ ಯತ್ನ ನಡೆಸಿತು. ಮೊದಲನೆಯದಾಗಿ, ಅದು ಹಲವು ಅವಧಿಗಳಿಗೆ ಆಯ್ಕೆಯಾಗಿದ್ದ ಕೆಲವು ಹಾಲಿ ಸಂಸದರಿಗೆ ವಿಶ್ರಾಂತಿ ನೀಡುವ ಮೂಲಕ, ಅವರಲ್ಲಿನ ‘ಆಯಾಸ’ದ ಸಮಸ್ಯೆಗೆ ಉತ್ತರ ಕಂಡುಕೊಳ್ಳಲು ಯತ್ನಿಸಿತು. ಎರಡನೆಯದಾಗಿ, ಜಯದ ಸಾಧ್ಯತೆಯ ಬಗ್ಗೆ ತಳಮಟ್ಟದಲ್ಲಿ ಪರಿಶೀಲನೆ ನಡೆಸಿ ಕೆಲವು ಹಾಲಿ ಸಂಸದರನ್ನು ಕಣದಲ್ಲಿ ಉಳಿಸಿಕೊಂಡಿತು. ಕೊನೆಯದಾಗಿ, ಪಕ್ಷದ ಕೆಲವು ಹಿರಿಯರನ್ನು ಹಾಗೂ ಕೆಲವು ಹೊಸ ಮುಖಗಳನ್ನು ಕಣಕ್ಕೆ ಇಳಿಸಿತು. ಪಕ್ಷವು ಇದುವರೆಗೆ 20 ಅಭ್ಯರ್ಥಿಗಳ ಹೆಸರು ಘೋಷಿಸಿದೆ. ಈ ಪೈಕಿ ಒಂಬತ್ತು ಮಂದಿ ಹಾಲಿ ಸಂಸದರು ತಾವು 2019ರಲ್ಲಿ ಚುನಾವಣೆ ಎದುರಿಸಿದ್ದ ಕ್ಷೇತ್ರಗಳಿಂದಲೇ ಮತ್ತೆ ಕಣಕ್ಕೆ ಇಳಿಯಲಿದ್ದಾರೆ. ಒಬ್ಬ ಹಾಲಿ ಸಂಸದರನ್ನು ಬೇರೊಂದು ಕ್ಷೇತ್ರಕ್ಕೆ ವರ್ಗಾವಣೆ ಮಾಡಲಾಗಿದೆ. ಒಂಬತ್ತು ಕ್ಷೇತ್ರಗಳಲ್ಲಿ ಹಾಲಿ ಸಂಸದರಿಗೆ ಮತ್ತೆ ಸ್ಪರ್ಧೆಗೆ ಅವಕಾಶ ನೀಡದಿರಲು ಪಕ್ಷ ತೀರ್ಮಾನಿಸಿದೆ. ಈಗ ಕಾಂಗ್ರೆಸ್ಸಿನ ತೆಕ್ಕೆಯಲ್ಲಿರುವ ಒಂದು ಕ್ಷೇತ್ರದಲ್ಲಿ ಬಿಜೆಪಿಯು ಹೊಸ ಅಭ್ಯರ್ಥಿಯೊಬ್ಬರನ್ನು ಕಣಕ್ಕೆ ಇಳಿಸುತ್ತಿದೆ. ಹಾಲಿ ಸಂಸದರೂ ಕೇಂದ್ರ ಸಚಿವರೂ ಆಗಿರುವ ಮೂವರನ್ನು ಪಕ್ಷವು ಮತ್ತೆ ಕಣಕ್ಕಿಳಿಸಲು ನಿರ್ಧರಿಸಿದೆ.

ಬಿಜೆಪಿ ನಡೆಸಿರುವ ಬದಲಾವಣೆಯ ಯತ್ನದ ಪರಿಣಾಮಗಳು ಬಹಳ. ಪಕ್ಷವು ಅಭ್ಯರ್ಥಿಗಳನ್ನು ಘೋಷಿಸಿರುವ ಕನಿಷ್ಠ ಒಂಬತ್ತು ಕ್ಷೇತ್ರಗಳಲ್ಲಿ ಪಕ್ಷದೊಳಗಿಂದಲೇ ಆಕ್ಷೇಪಗಳು ಬಂದಿವೆ. ಕೆಲವೆಡೆ (ಮೈಸೂರು-ಕೊಡಗು, ಕೊಪ್ಪಳ) ಹಾಲಿ ಸಂಸದರು ಹಾಗೂ ಅವರ ಬೆಂಬಲಿಗರು ಅಸಮಾಧಾನಗೊಂಡಿದ್ದಾರೆ. ಇತರ ಕೆಲವೆಡೆ (ಹಾವೇರಿ, ಉಡುಪಿ-ಚಿಕ್ಕಮಗಳೂರು, ತುಮಕೂರು, ಚಾಮರಾಜನಗರ ಮತ್ತು ಬೆಂಗಳೂರು ಉತ್ತರ) ಟಿಕೆಟ್ ಆಕಾಂಕ್ಷಿಗಳಾಗಿದ್ದವರು ಪಕ್ಷಕ್ಕೆ ಹಾನಿ ಮಾಡಬಹುದು. ಒಂದು ಕಡೆ (ಶಿವಮೊಗ್ಗ) ಬಂಡಾಯ ಅಭ್ಯರ್ಥಿ ಕಣಕ್ಕಿಳಿಯಬಹುದು. ಇನ್ನು ಎಂಟು ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರು ಪ್ರಕಟಿಸುವುದು ಬಾಕಿ ಇದೆ. ಈ ಪೈಕಿ ಮೂರು ಸ್ಥಾನಗಳನ್ನು ಜೆಡಿಎಸ್‌ಗೆ ಬಿಟ್ಟುಕೊಡುವ ಸಾಧ್ಯತೆ ಇದೆ. ಎರಡು ಕಡೆಗಳಲ್ಲಿ (ಮಂಡ್ಯ ಮತ್ತು ಕೋಲಾರ) ಜೆಡಿಎಸ್‌ಗೆ ಕ್ಷೇತ್ರ ಬಿಟ್ಟುಕೊಡುವುದಕ್ಕೆ ಬಿಜೆಪಿ ಕಾರ್ಯಕರ್ತರಿಂದ ತೀವ್ರ ವಿರೋಧ ಇದೆ. ಈ ಎರಡು ಕಡೆ ಬಂಡಾಯ ಅಭ್ಯರ್ಥಿಗಳು ಕಣಕ್ಕಿಳಿಯುವ ಸಾಧ್ಯತೆಯೂ ಇದೆ. ಕಾಂಗ್ರೆಸ್ ವಶದಲ್ಲಿ ಇರುವ ಒಂದು (ಬೆಂಗಳೂರು ಗ್ರಾಮಾಂತರ) ಕ್ಷೇತ್ರದಲ್ಲಿ ಬಿಜೆಪಿಯು ಖ್ಯಾತ ಹೃದ್ರೋಗ ತಜ್ಞರನ್ನು ಕಣಕ್ಕೆ ಇಳಿಸಿದೆ. ಇವರು ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ಅವರ ಅಳಿಯ ಕೂಡ ಹೌದು. ವಿರೋಧಿಗಳ ವಶದಲ್ಲಿ ಇರುವ ಕ್ಷೇತ್ರಗಳನ್ನು ಗಮನದಲ್ಲಿ ಇರಿಸಿಕೊಂಡು ತನ್ನ ಅಭ್ಯರ್ಥಿಯನ್ನು ಎಚ್ಚರಿಕೆಯಿಂದ ಆಯ್ಕೆ ಮಾಡುವುದು ಬಿಜೆಪಿಯ ಕಾರ್ಯತಂತ್ರ.

ಆದರೆ, ಹಲವು ಕ್ಷೇತ್ರಗಳಲ್ಲಿ ಕಂಡುಬಂದಿರುವ ಅಸಮಾಧಾನವು ಕೊನೆಗೆ ಶಮನಗೊಳ್ಳುತ್ತದೆ, ಪಕ್ಷದ ಪ್ರಚಾರವು ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದ ಸುತ್ತ ಕೇಂದ್ರೀಕೃತವಾಗುತ್ತದೆ ಎಂದು ಬಿಜೆಪಿ ಆಶಿಸುತ್ತಿದೆ.

ದಕ್ಷಿಣದ ರಾಜ್ಯಗಳಲ್ಲಿ ಮೋದಿ ಅಲೆಯ ಪ್ರಭಾವವು ಕಳೆದ ಎರಡು ಲೋಕಸಭಾ ಚುನಾವಣೆಗಳಲ್ಲಿ ಸ್ಪಷ್ಟವಾಗಿ ಕಂಡುಬಂದಿದೆ. ಬಿಜೆಪಿಗೆ ಮತ ಚಲಾಯಿಸಿದ ಪ್ರತಿ 10 ಮಂದಿಯಲ್ಲಿ ಆರು ಮಂದಿ ಬಿಜೆಪಿಗೆ ಮತ ಚಲಾಯಿಸಿದ್ದಕ್ಕೆ ಕಾರಣ ನರೇಂದ್ರ ಮೋದಿ ಅವರು ಪ್ರಧಾನಿ ಅಭ್ಯರ್ಥಿಯಾಗಿರುವುದು ಎಂಬುದನ್ನು 2014ರಲ್ಲಿ ನಡೆದ ಲೋಕನೀತಿ–ಸಿಎಸ್‌ಡಿಎಸ್ ಮತದಾನೋತ್ತರ ಸಮೀಕ್ಷೆಯು ಕಂಡುಕೊಂಡಿತ್ತು. ಇದೇ ಬಗೆಯ, ಆದರೆ ತುಸು ಕಡಿಮೆ ತೀವ್ರತೆಯ ಪರಿಸ್ಥಿತಿಯು 2019ರಲ್ಲಿಯೂ ಕಂಡುಬಂದಿತ್ತು. ರಾಜ್ಯದಲ್ಲಿ ಒಂದು ವರ್ಷದ ಹಿಂದೆ ಬಿಜೆಪಿ ಅಧಿಕಾರ ಕಳೆದುಕೊಂಡಿತು. ರಾಜ್ಯದಲ್ಲಿನ ಬಿಜೆಪಿ ಆಡಳಿತದ ನಕಾರಾತ್ಮಕ ಪರಿಣಾಮಗಳನ್ನು ಮೋದಿ ಅಲೆಯು ಶಮನಗೊಳಿಸುತ್ತದೆ ಎಂಬ ನಿರೀಕ್ಷೆಯಲ್ಲಿ ಬಿಜೆಪಿ ಇರಬಹುದು.

ಅಭ್ಯರ್ಥಿಗಳ ಆಯ್ಕೆಯ ವಿಚಾರವಾಗಿ ಕಾಂಗ್ರೆಸ್ ಪಕ್ಷವು ತನ್ನದೇ ಆದ ಸವಾಲುಗಳೊಂದಿಗೆ ಗುದ್ದಾಟ ನಡೆಸುತ್ತಿದೆ. ಪಕ್ಷವು ಪ್ರಕಟಿಸಿರುವ ಮೊದಲ ಪಟ್ಟಿಯಲ್ಲಿ ರಾಜ್ಯ ಸರ್ಕಾರದಲ್ಲಿ ಸಚಿವರಾಗಿರುವ ಯಾರೊಬ್ಬರೂ ಇಲ್ಲ. ರಾಜ್ಯ ಸರ್ಕಾರದಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿರುವವರು ಲೋಕಸಭಾ ಚುನಾವಣೆಯ ಅಭ್ಯರ್ಥಿಗಳಾಗಲು ಹಿಂದೇಟು ಹಾಕುತ್ತಿದ್ದಾರೆ. ಪಕ್ಷವು ಕರ್ನಾಟಕದಲ್ಲಿ ಹೊಂದಿರುವ ಒಬ್ಬ ಸಂಸದರನ್ನು ಮತ್ತೆ ಕಣಕ್ಕೆ ಇಳಿಸಲಿದೆ. ಇತರ ಕ್ಷೇತ್ರಗಳಲ್ಲಿ ಪಕ್ಷವು 2019ರ ಲೋಕಸಭಾ ಚುನಾವಣೆಯಲ್ಲಿ ಸೋತವರನ್ನು ಕಣಕ್ಕೆ ಇಳಿಸಿದೆ ಹಾಗೂ ಕೆಲವೆಡೆ ಹೊಸ ಮುಖಗಳನ್ನು ಅಭ್ಯರ್ಥಿಗಳನ್ನಾಗಿ ಘೋಷಿಸಿದೆ. ಪಕ್ಷದ ಟಿಕೆಟ್ ಪಡೆಯಲು ಆಕಾಂಕ್ಷಿಗಳು ಹಲವರಿದ್ದಾರೆ ಎಂದು ಪಕ್ಷವು ಹೇಳಿಕೊಳ್ಳುತ್ತಿದೆಯಾದರೂ, ಅಭ್ಯರ್ಥಿಗಳಾಗಲು ಹಿಂಜರಿಕೆ ಇರುವುದು ಗೋಚರಿಸುತ್ತಿದೆ. ಸರ್ಕಾರದಲ್ಲಿ ಪ್ರಮುಖ ಖಾತೆಗಳನ್ನು ಹೊಂದಿರುವ ಸಚಿವರು ಹಾಗೂ ಹಿರಿಯ ಶಾಸಕರು ತಮ್ಮ ಸಂಬಂಧಿಕರಿಗೆ ಟಿಕೆಟ್ ನೀಡಬೇಕು ಎಂದು ಒತ್ತಡ ಹೇರುತ್ತಿದ್ದಾರೆ.

ಕಾಂಗ್ರೆಸ್ ಪಕ್ಷವು ತನ್ನನ್ನು ಕರ್ನಾಟಕದಲ್ಲಿ ಅಧಿಕಾರಕ್ಕೆ ತಂದ ಐದು ಗ್ಯಾರಂಟಿಗಳನ್ನು ನೆಚ್ಚಿಕೊಂಡಿರುವುದು ಸ್ಪಷ್ಟ. ಈ ಗ್ಯಾರಂಟಿಗಳ ಅನುಷ್ಠಾನದ ವಿಚಾರವಾಗಿ ಬಹುಜನರಲ್ಲಿ ಇರುವ ಅಭಿಪ್ರಾಯ ಹಾಗೂ ಗ್ಯಾರಂಟಿಗಳು ರಾಷ್ಟ್ರೀಯ ಚುನಾವಣೆಯಲ್ಲಿ ಪರಿಣಾಮ ಬೀರುತ್ತವೆ ಎಂದು ಜನ ಭಾವಿಸುವರೇ ಎಂಬುದು ಇಲ್ಲಿ ಪ್ರಮುಖ ಸಂಗತಿ.

ಇಲ್ಲಿ ಇನ್ನೂ ಎರಡು ಸಂಗತಿಗಳು ಪ್ರಮುಖವಾಗುತ್ತವೆ. ಮೊದಲನೆಯದು, ಬಿಜೆಪಿ ಹಾಗೂ ಕಾಂಗ್ರೆಸ್ಸಿನ ರಾಜ್ಯ ಘಟಕಗಳಲ್ಲಿ ಗಂಭೀರ ಸ್ವರೂಪದ ಆಂತರಿಕ ಭಿನ್ನಾಭಿಪ್ರಾಯ ಇದೆ. ಇದು ಎಲ್ಲ ಕ್ಷೇತ್ರಗಳಿಗೂ ಅಭ್ಯರ್ಥಿಗಳನ್ನು ಘೋಷಿಸಿದ ನಂತರದಲ್ಲಿ ಪ್ರಕಟವಾಗುತ್ತದೆಯೇ? ಇದು ಚುನಾವಣಾ ಪ್ರಚಾರದ ಮೇಲೆ ಪರಿಣಾಮ ಉಂಟುಮಾಡುತ್ತದೆಯೇ? ರಾಜ್ಯ ಮಟ್ಟದಲ್ಲಿ ಹೆಚ್ಚಿನ ಪ್ರಮಾಣದ ಒಗ್ಗಟ್ಟನ್ನು ಪ್ರದರ್ಶಿಸುವ ಪಕ್ಷವು ನಿರ್ಣಾಯಕ ಮುನ್ನಡೆ ಸಾಧಿಸಬಲ್ಲದು ಎಂಬುದು ಸ್ಪಷ್ಟ.

ಎರಡನೆಯದಾಗಿ, ಬಿಜೆಪಿ ಹಾಗೂ ಜೆಡಿಎಸ್ ನಡುವಿನ ಹೊಂದಾಣಿಕೆಯು ತಳಮಟ್ಟದಲ್ಲಿ ಎಷ್ಟು ಸುಗಮವಾಗಿ ಇರಲಿದೆ ಎಂಬುದು ಮುಖ್ಯವಾಗುತ್ತದೆ. ಮೈತ್ರಿಯ ವಿಚಾರವಾಗಿ, ಕ್ಷೇತ್ರ ಬಿಟ್ಟುಕೊಡುವ ವಿಚಾರದಲ್ಲಿ ಹಾಗೂ ಅಭ್ಯರ್ಥಿಗಳ ಆಯ್ಕೆಯ ವಿಚಾರದಲ್ಲಿ ಎರಡೂ ಪಕ್ಷಗಳಲ್ಲಿ ಈಗಾಗಲೇ ಗೊಣಗಾಟ ಶುರುವಾಗಿದೆ. ಇದು ತಳಮಟ್ಟದಲ್ಲಿ ಮತಗಳ ವರ್ಗಾವಣೆಯ ಮೇಲೆ ಪರಿಣಾಮ ಉಂಟುಮಾಡಲಿದೆಯೇ? ಇವೆಲ್ಲಕ್ಕಿಂತ ಹೆಚ್ಚಾಗಿ, ಮೈತ್ರಿಯು ರಾಜ್ಯದ ಜಾತಿ ಸಮೀಕರಣದ ಮೇಲೆ ಪರಿಣಾಮ ಬೀರಲಿದೆಯೇ? ಬಡವರು ಹಾಗೂ ಮಧ್ಯಮ ವರ್ಗದವರ ಒಳಅರಿವು ಚುನಾವಣಾ ಅಲೆಯ ದಿಕ್ಕನ್ನು ಬದಲಿಸಬಹುದು.



ಚುರುಮುರಿ



ಕಪ್ ನಮ್ದೇ...

• ಮಣ್ಣೆ ರಾಜು

‘ಶಕ್ತಿ ಯೋಜನೆ ಜಾರಿಯಾಗಿ ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣ ಶುರುವಾದ ನಂತರ ನಮ್ಮ ಮಹಿಳೆಯರು ಸ್ಟ್ರಾಂಗ್ ಆಗ್ತಿದ್ದಾರೆ ಕಣ್ರೀ...’ ಎನ್ನುತ್ತಾ ಬಂದಳು ಪಕ್ಕದ ಮನೆ ಪದ್ಮಾ.

‘ಹೌದು, ಇದುವರೆಗೂ ಬಸ್ಸಿನಲ್ಲಿ ‘ಅಯ್ಯೋ ಪಾಪ, ಅಸಹಾಯಕ ಮಹಿಳೆಗೆ ಸೀಟು ಬಿಟ್ಟುಕೊಡಿ’ ಎಂದು ಅವರಿವರು ಹೇಳುತ್ತಿದ್ದ ಪರಿಸ್ಥಿತಿ ಇತ್ತು ಅಲ್ಲವೇ?’ ಎಂದಳು ಸುಮಿ.

‘ಹೌದೌದು ಈಗ ನೋಡಿ ಹೇಗಾಗಿದೆ ಅಂತ’.

‘ಶಕ್ತಿ ಯೋಜನೆ ನಂತರ ಮಹಿಳೆಯರ ಶಕ್ತಿ ವೃದ್ಧಿಯಾಗಿದೆ. ಬಸ್ಸಿನ ಕಿಟಕಿಯಲ್ಲಿ ನುಸುಳಿ, ಡ್ರೈವರ್ ಡೋರಿನಲ್ಲಿ ನುಗ್ಗಿಹೋಗಿ ಸೀಟು ಹಿಡಿಯುತ್ತಾರೆ, ಲೇಡೀಸ್ ಸೀಟಿನಲ್ಲಿ ಕುಳಿತ ಗಂಡಸರನ್ನು ಎಳೆದು ಆಚೆ ಹಾಕಿ ಸೀಟು ಪಡೆಯುವ ಶಕ್ತಿ, ಸಾಮರ್ಥ್ಯ ಬೆಳೆಸಿಕೊಂಡಿದ್ದಾರೆ’.

‘ಶಕ್ತಿ ಯೋಜನೆ ಜಾರಿಯಾಗುವವರೆಗೂ ನಮ್ಮಲ್ಲಿ ಹುದುಗಿದ್ದ ಶಕ್ತಿ ನಮಗೇ ಗೊತ್ತಿರಲಿಲ್ಲ, ತಪ್ಪೆಲ್ಲ ನಮ್ದೇ ಅಲ್ವೇನ್ರೀ?’

‘ಈ ಬಾರಿ ಕಪ್ ನಮ್ದೇ ಅಂತ ಆರ್‌ಸಿಬಿ ಅಭಿಮಾನಿಗಳು ಪ್ರತಿ ಬಾರಿಯೂ ಆಸೆಪಡುತ್ತಿದ್ದರು. ಆದರೆ ಆರ್‌ಸಿಬಿ ಮಹಿಳೆಯರು ಈಗ ಟೂರ್ನಿ ಗೆದ್ದು ‘ಕಪ್ ನಮ್ದು’ ಅಂತ ಸಾಧಿಸಿಬಿಟ್ಟರು ನೋಡಿ’.

‘ಸರ್ಕಾರ ಪುರುಷರಿಗೂ ಶಕ್ತಿ ಯೋಜನೆಯನ್ನು ವಿಸ್ತರಿಸಿದರೆ ಆರ್‌ಸಿಬಿ ಪುರುಷರೂ ಈ ಬಾರಿ ಕಪ್ ಗೆಲ್ಲಬಹುದು ಕಣ್ರೀ’.

‘ಬೇಕಾಗಿಲ್ಲ, ಕಪ್ ಗೆದ್ದಿರುವ ಮಹಿಳೆಯರಿಂದ ಸ್ಫೂರ್ತಿ ಪಡೆದು ಈ ಬಾರಿ ಆರ್‌ಸಿಬಿ ಪುರುಷರೂ ಐಪಿಎಲ್ ಗೆದ್ದು ‘ಕಪ್ ನಮ್ದೇ’ ಅಂತಾರೆ. ಯಶಸ್ವಿ ಮಹಿಳೆಯರು ಪುರುಷರ ಗೆಲುವಿಗೆ ಪ್ರೇರಣೆ ಆಗ್ತಾರೆ’.

‘ನನಗೂ ಹಾಗೇ ಅನ್ನಿಸ್ತಿದೆ. ಅಂದಹಾಗೆ, ಮೊನ್ನೆ ನಿಮ್ಮ ಮನೆಯಿಂದ ಒಂದು ಕಪ್ ಸಕ್ಕರೆ ತಂದಿದ್ದೆನಲ್ಲ, ಈ ಎರಡರಲ್ಲಿ ನಿಮ್ಮ ಕಪ್ ಯಾವುದು?’ ಎಂದು ಸುಮಿ ಕಪ್‌ಗಳನ್ನು ತಂದು ತೋರಿಸಿದಳು.

ಅವುಗಳಲ್ಲಿ ತನ್ನ ಕಪ್ ಅನ್ನು ಗುರುತಿಸಿದ ಪದ್ಮಾ, ‘ಇದೇ ಕಪ್, ಈ ಕಪ್ ನಮ್ದೇ...’ ಎಂದು ತನ್ನ ಕಪ್ ಈಸ್ಕೊಂಡು ಮನೆಗೆ ಹೊರಟಳು.

ಚರ್ಚೆ

ಬೆಂಬಲ ಬೆಲೆ: ಬೇಕು ಖಾತರಿ

ಕೃಷಿ ಉತ್ಪನ್ನಕ್ಕೆ ಲಾಭದಾಯಕ ಧಾರಣೆಯನ್ನು ಖಾತರಿಗೊಳಿಸಬೇಕೆನ್ನುವ ರೈತರ ಬೇಡಿಕೆಯನ್ನು ಈಡೇರಿಸುವುದು ಒಂದು ನೈತಿಕ ಹೊಣೆಗಾರಿಕೆಯಾಗಿದೆ

• ಟಿ.ಎನ್.ಪ್ರಕಾಶ್ ಕಮ್ಮರಡಿ

ವರ್ಷಗಳಿಂದ ಮುಂದಿಡುತ್ತಿದ್ದ ಬೇಡಿಕೆಗಳ ಜೊತೆಗೆ ಕೃಷಿ ಉತ್ಪನ್ನಕ್ಕೆ ಲಾಭದಾಯಕ ಧಾರಣೆಯನ್ನು ಖಾತರಿಗೊಳಿಸಬೇಕೆನ್ನುವ ರೈತರ ಹೊಸ ಹಕ್ಕೊತ್ತಾಯ ಇಂದು ಬಲವಾಗಿ ಕೇಳಿಬರುತ್ತಿದೆ. ಇದನ್ನು ಜಾರಿಗೊಳಿಸುವ ಆಶ್ವಾಸನೆಯನ್ನು ರಾಜ್ಯ ಸರ್ಕಾರ ನೀಡಿದೆ. ನೋಂದಾಯಿಸಿದ ರೈತರಿಂದ ಬೆಂಬಲ ಬೆಲೆಯಲ್ಲಿ ದ್ವಿದಳ ಧಾನ್ಯ, ಜೋಳ, ಹತ್ತಿ ಬೆಳೆಗಳನ್ನು ಕೊಳ್ಳಲು ಸಿದ್ಧವಿರುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ. ಆಹಾರಧಾನ್ಯ ಉತ್ಪಾದನೆಯಲ್ಲಿ ಸ್ವಾವಲಂಬನೆ ಕಾಪಾಡಿಕೊಳ್ಳುವುದರ ಜೊತೆಗೆ ಇನ್ನೂ ಮುಕ್ತವಾಗದ ಹಸಿವು, ಅಪೌಷ್ಟಿಕತೆಯನ್ನು ಹೊಡೆದೋಡಿಸಬೇಕಾದ ಜವಾಬ್ದಾರಿ ಮುಂದಿರುವಾಗ, ರೈತರ ಈ ನ್ಯಾಯಯುತ ಬೇಡಿಕೆಯನ್ನು ಈಡೇರಿಸುವುದು ಒಂದು ನೈತಿಕ ಹೊಣೆಗಾರಿಕೆಯಾಗಿದೆ.

ಕೇಂದ್ರ ಸರ್ಕಾರ ಪ್ರತಿವರ್ಷ ಹಿಂಗಾರು ಮತ್ತು ಮುಂಗಾರು ಎರಡೂ ಹಂಗಾಮಿನಲ್ಲಿ ನಾಟಿಗಿಂತ ಮೊದಲು 23 ಬೆಳೆಗಳಿಗೆ ‘ಕನಿಷ್ಠ ಬೆಂಬಲ ಬೆಲೆ’ ಅಥವಾ ಎಂಎಸ್‌ಪಿ ಘೋಷಿಸುತ್ತದೆ. ಇವುಗಳಲ್ಲಿ ಬಹುತೇಕ ಏಕದಳ ಮತ್ತು ದ್ವಿದಳ ಧಾನ್ಯಗಳು, ಎಣ್ಣೆಕಾಳಿನಂತಹ ಜೀವನಾವಶ್ಯಕ ಉತ್ಪನ್ನಗಳಾಗಿವೆ. ಕೃಷಿ ವಲಯದ ವಿಶಿಷ್ಟ ಪರಿಸ್ಥಿತಿಯಲ್ಲಿ ರೈತ ತನ್ನ ಉತ್ಪನ್ನಕ್ಕೆ ಸ್ವತಃ ಧಾರಣೆ ನಿರ್ಧರಿಸಲಾರದಷ್ಟು ದುರ್ಬಲನಾಗಿದ್ದಾನೆ. ಈ ‘ಮಾರುಕಟ್ಟೆ ವೈಫಲ್ಯ’ಕ್ಕೆ ಪರಿಹಾರವಾಗಿ ರೈತ ನಿಶ್ಚಿಂತೆಯಿಂದ ಕೃಷಿ ಕಾರ್ಯ ಕೈಗೊಳ್ಳಲು ಎಂಎಸ್‌ಪಿ ಒಂದು ಪೂರ್ವಭಾವಿ ಭರವಸೆ ಎನ್ನಬಹುದು. ಹಾಗಿದ್ದರೂ ಈ ಬೆಂಬಲ ಬೆಲೆ ನೀತಿಯಿಂದ ರೈತಾಪಿ ವರ್ಗಕ್ಕೆ ಅಷ್ಟೇನೂ ಉಪಯೋಗವಾಗಿಲ್ಲ ಎನ್ನುವುದು ಕಟು ವಾಸ್ತವ.

ಕನಿಷ್ಠ ಬೆಂಬಲ ಬೆಲೆ ನೀತಿಯ ಅನುಕೂಲ ದೇಶದ ಶೇಕಡ 6ರಷ್ಟು ಮಂದಿಗೆ, ಅದರಲ್ಲೂ ಭತ್ತ ಮತ್ತು ಗೋಧಿ ಬೆಳೆಯುವ ಪಂಜಾಬ್, ಹರಿಯಾಣದಂಥ ರಾಜ್ಯಗಳ ರೈತರಿಗೆ ಮಾತ್ರ ಸಿಗುತ್ತಿದೆ. ಹಿಂದಿನ ಸಾಲಿನಲ್ಲಿ ರಾಜ್ಯದ ರೈತರು ಒಟ್ಟಾರೆಯಾಗಿ ಮಾರಾಟ ಮಾಡಿರುವ ಭತ್ತ, ರಾಗಿ, ಜೋಳದಂತಹ ಧಾನ್ಯಗಳಲ್ಲಿ ಶೇಕಡ 10ರಷ್ಟಕ್ಕೆ ಮಾತ್ರ ಬೆಂಬಲ ಬೆಲೆಗಿಂತ ಅಧಿಕ ಧಾರಣೆ ದೊರೆತಿದೆ. ಕನಿಷ್ಠ ಬೆಂಬಲ ಬೆಲೆ ಕೂಡ ಸಿಗದ ಕಾರಣ ನಮ್ಮ ಬಹುತೇಕ ಆಹಾರ ಬೆಳೆಗಳ ಕೃಷಿ ಇಂದು ನಷ್ಟದ ಕಸುಬಾಗಿದೆ. ಸಿದ್ಧ ವಸ್ತುಗಳನ್ನು ಕೊಳ್ಳುವ ಗ್ರಾಹಕರಿಗೆ ಶಾಸನಾತ್ಮಕವಾಗಿ ‘ಗರಿಷ್ಠ ಚಿಲ್ಲರೆ ದರ’ದ (ಎಂಆರ್‌ಪಿ) ನೆರವು ಇರುವಾಗ ಎಂಎಸ್‌ಪಿಗೂ ಈ ರೀತಿಯ ಕಾನೂನಿನ ರಕ್ಷಣೆ ಬೇಕೆಂದು ರೈತರು ಇಂದು ಪಟ್ಟು ಹಿಡಿದಿರುವುದು ನ್ಯಾಯಯುತ ಮಾತ್ರವಲ್ಲ ತರ್ಕಬದ್ಧವೂ ಆಗಿದೆ.

ಕಬ್ಬಿಗೆ ಈಗಾಗಲೇ ‘ಶಾಸನಬದ್ಧ ಬೆಂಬಲ ಬೆಲೆ’ (ಎಫ್‌ಆರ್‌ಪಿ) ಇದ್ದು, ಇದಕ್ಕಿಂತ ಕಡಿಮೆ ಧಾರಣೆಯಲ್ಲಿ ಖರೀದಿಸುವ ಪ್ರಶ್ನೆಯೇ ಇಲ್ಲ. ಕರ್ನಾಟಕ ಕೃಷಿ ಬೆಲೆ ಆಯೋಗವು ಬೆಂಬಲ ಬೆಲೆಯನ್ನು ಖಾತರಿಪಡಿಸುವ ದಿಸೆಯಲ್ಲಿ ಅಧ್ಯಯನ ನಡೆಸಿ 2018ರಲ್ಲೇ ವಿಸ್ತೃತವಾದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಕೇಂದ್ರ ಸರ್ಕಾರ ಘೋಷಿಸುವ ಎಂಎಸ್‌ಪಿ ಆಧಾರದ ಮೇಲೆ ರಾಜ್ಯದ ಎಲ್ಲಾ ಕೃಷಿ ಮತ್ತು ತೋಟಗಾರಿಕಾ ಬೆಳೆಗಳಿಗೆ ‘ಅಧಿಕೃತ ಕನಿಷ್ಠ ಖರೀದಿ ಬೆಲೆ’ (ಸ್ಟ್ಯಾಚುಟರಿ ಮಿನಿಮಮ್ ಪರ್ಚೇಸ್ ಪ್ರೈಸ್) ಘೋಷಿಸಬೇಕು. ಹಾಲಿ ಎಪಿಎಂಸಿ ಕಾಯ್ದೆಗೆ ಸೂಕ್ತ ತಿದ್ದುಪಡಿ ತಂದು, ಇದಕ್ಕಿಂತ ಕಡಿಮೆ ಬೆಲೆಯಲ್ಲಿ ರೈತರ ಯಾವುದೇ ಉತ್ಪನ್ನ ಖರೀದಿಯಾಗದಂತೆ ಕ್ರಮ ಕೈಗೊಳ್ಳಲು, ಉಲ್ಲಂಘನೆಗೆ ಶಿಕ್ಷೆ, ದಂಡದಂತಹ ಕ್ರಮಗಳನ್ನೂ ಸೂಚಿಸಲಾಗಿದೆ. ರಾಷ್ಟ್ರಮಟ್ಟದಲ್ಲಿ ‘ಅಗತ್ಯ ವಸ್ತು ಕಾಯ್ದೆ’ಗೂ ಈ ರೀತಿಯ ತಿದ್ದುಪಡಿ ಸೂಚಿಸಲಾಗಿದೆ. ಧಾರಣೆ ಕುಸಿದಾಗ ಸರ್ಕಾರ ತಡಮಾಡದೆ ‘ಮಧ್ಯಪ್ರವೇಶಿಸಿ’ ಖರೀದಿಸಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಇದೇನೂ ದೊಡ್ಡ ಹೊರೆಯಲ್ಲ.

ಮುಖ್ಯ ವಿಚಾರವೆಂದರೆ, ಎಲ್ಲಾ ಬೆಳೆಗಳನ್ನು ಸರ್ಕಾರ ಖರೀದಿಸುವ ಪರಿಸ್ಥಿತಿ ಎಂದೂ ಬರುವುದಿಲ್ಲ. ದೇಶದ ಪ್ರಮುಖ ಮಾರುಕಟ್ಟೆಗಳನ್ನು ಅವಲೋಕಿಸಿದರೆ, ಹಿಂದಿನ ಐದು ವರ್ಷಗಳಲ್ಲಿ ಮೂರು ವರ್ಷಗಳಲ್ಲಿ ಮಾತ್ರ ಬೆಳೆಯೊಂದರ ಧಾರಣೆಯು ಬೆಂಬಲ ಬೆಲೆಗಿಂತ ಕೆಳಗಿಳಿದ ಉದಾಹರಣೆಯಿದೆ, ಅದೂ ಕೊಯ್ಲೋತ್ತರದ ಮೂರೂವರೆ ತಿಂಗಳುಗಳಲ್ಲಿ ಮಾತ್ರ. ಕೊಯ್ಲಿನ ನಂತರ ಸರ್ಕಾರ ತಡಮಾಡದೆ ‘ಮಧ್ಯಪ್ರವೇಶಿಸಿ’ ಖರೀದಿಸುತ್ತದೆ ಎನ್ನುವ ಪ್ರಬಲ ಸಂಕೇತವೇ ಸಕಾರಾತ್ಮಕ ಪರಿಣಾಮ ಬೀರಿ, ಧಾರಣೆ ಮೇಲೇಳುವಂತೆ ಮಾಡುವುದು ಮಾರುಕಟ್ಟೆಯ ಒಂದು ಚಲನಾತ್ಮಕ ಗುಣವಾಗಿರುತ್ತದೆ.



ನೇರವಾಗಿ ಖರೀದಿಸುವುದರ ಜೊತೆಗೇ ಬೆಂಬಲ ಬೆಲೆ ಮತ್ತು ಮಾರುಕಟ್ಟೆ ಧಾರಣೆಯ ವ್ಯತ್ಯಾಸವನ್ನು ರೈತರಿಗೆ ಪಾವತಿಸುವ ‘ಬೆಲೆ ಕೊರತೆ ಪಾವತಿ’ಯಂತಹ ವಿನೂತನ ಕ್ರಮಗಳನ್ನೂ ಕೈಗೊಳ್ಳಬಹುದು. ಅಧಿಕ ಉತ್ಪಾದನೆ ನಿಯಂತ್ರಿಸಲು ಜಿಲ್ಲಾ ಮಟ್ಟದ ಬೆಳೆ ಯೋಜನೆ ರೂಪಿಸಿ ಸಂಸ್ಕರಣೆ, ಶೈತ್ಯಾಗಾರದಂತಹ ಮೂಲಸೌಕರ್ಯಗಳನ್ನು ಒದಗಿಸಬೇಕು. ಬೇಡಿಕೆ ಇಲ್ಲದಿರುವಾಗ ಕೂಡಿಡುವ ರೈತರಿಗೆ ಧಾರಾಳ ಅಡಮಾನ ಸಾಲ ಬೇಕೇಬೇಕು. ‘ಅಮೂಲ್’ ಮಾದರಿಯಲ್ಲಿ ಎಲ್ಲ ಬೆಳೆಗಳಿಗೂ ಸಹಕಾರ ಮಾರುಕಟ್ಟೆ ರೂಪಿಸಿದರಂತೂ ರೈತರೇ ಬೆಲೆ ನಿರ್ಧರಿಸುವಂತಹ ಸಾಮರ್ಥ್ಯ ಪಡೆಯುತ್ತಾರೆ.

ಬೆಂಬಲ ಬೆಲೆ, ಅದಕ್ಕೆ ಕಾನೂನಿನ ಸ್ವರೂಪ, ಆ ಮೂಲಕ ಖರೀದಿ, ಹಂಚಿಕೆ ಇವೆಲ್ಲವನ್ನೂ ಮೂಲ ಅರ್ಥದಲ್ಲಿ ‘ಸರ್ಕಾರದ ಮಧ್ಯಪ್ರವೇಶ’ ಎನ್ನಲಾಗುತ್ತದೆ. ಜಾಗತೀಕರಣ, ನವ ಉದಾರೀಕರಣದ ದಟ್ಟ ವಾತಾವರಣದಲ್ಲಿ ಇದು ಅಷ್ಟೇನೂ ಸಹ್ಯವಾದ ವಿಚಾರವಲ್ಲ. ‘ಮುಕ್ತ ಮಾರುಕಟ್ಟೆ’ಯ ಭ್ರಮೆ ಗಾಢವಾಗಿರುವಾಗ ‘ಸರ್ಕಾರದ ಮಧ್ಯಪ್ರವೇಶ’ ಬೇಕೆನ್ನುವ ರೈತರ ಈ ಕೂಗು ಚುನಾವಣೆಯ ಈ ಹೊತ್ತಿನಲ್ಲಿ ಯಾವ ರೂಪ ಪಡೆಯುತ್ತದೆ ಎಂದು ಕಾದು ನೋಡಬೇಕಾಗಿದೆ.

ವಾಚಕರ ವಾಣಿ

ಚುನಾವಣಾ ಪ್ರಕ್ರಿಯೆ: ಇಷ್ಟು ದೀರ್ಘ ಏಕೆ?

ಈ ಬಾರಿಯ ಲೋಕಸಭಾ ಚುನಾವಣೆ ಪ್ರಕ್ರಿಯೆ ಪೂರ್ಣಗೊಳ್ಳಲು ಸುಮಾರು ಎರಡೂವರೆ ತಿಂಗಳ ಸುದೀರ್ಘ ಅವಧಿ ತೆಗೆದುಕೊಳ್ಳಲಿರುವುದು ಪ್ರಶ್ನಾರ್ಹವಾಗಿದೆ. ಈ ಸಂಬಂಧ ಮುಖ್ಯ ಚುನಾವಣಾ ಆಯುಕ್ತರು, ಭಾರತವು ವಿಸ್ತಾರವಾಗಿರುವುದರಿಂದ ಹೆಚ್ಚು ಸಮಯಾವಕಾಶ ಬೇಕಾಗುತ್ತದೆ ಎಂದು ಹೇಳಿರುವುದು ವಿತಂಡ ಸಮರ್ಥನೆಯಂತೆ ಭಾಸವಾಗುತ್ತದೆ. ಹಾಗಾದರೆ ದೇಶದ ಭೂಪ್ರದೇಶ ಇತ್ತೀಚಿನ ವರ್ಷಗಳಲ್ಲಿ ವಿಸ್ತರಣೆಗೊಂಡಿತೇ ಅಥವಾ ಸುರಕ್ಷಿತವಾಗಿ ಚುನಾವಣೆಗಳನ್ನು ನಡೆಸುವಷ್ಟೂ ನಮ್ಮ ರಕ್ಷಣಾ ವ್ಯವಸ್ಥೆ ಬಲಿಷ್ಠವಾಗಿಲ್ಲವೇ? ಈವರೆಗಿನ ಲೋಕಸಭಾ ಚುನಾವಣೆಗಳಲ್ಲಿ ಪ್ರಕ್ರಿಯೆ ಮುಗಿಸಲು ಕೈಗೊಂಡಿರುವ ಗರಿಷ್ಠ ದಿನಗಳು 38. ಹೀಗಿರುವಾಗ, ಈ ಬಾರಿ ಮಾತ್ರ ಏನಾಗಿದೆ? ಮೊದಲ ಹಂತದಲ್ಲಿ ಮತದಾನ ಮಾಡಿದವರು ಫಲಿತಾಂಶಕ್ಕಾಗಿ ಬರೋಬ್ಬರಿ ಒಂದೂವರೆ ತಿಂಗಳು ಕಾಯಬೇಕು. ಹೆಚ್ಚು ಸುದೀರ್ಘ ಅವಧಿಗೆ ಚುನಾವಣೆ ಪ್ರಕ್ರಿಯೆ ನಡೆಸುವುದು ಅದರ ನ್ಯಾಯಬದ್ಧತೆಗೆ ಮಾನದಂಡವಲ್ಲ ಎಂಬುದನ್ನು ನಾವು ಮನಗಾಣಬೇಕಾಗಿದೆ.

ಪ್ರಜಾಪ್ರಭುತ್ವದ ಯಶಸ್ವಿ ಕಾರ್ಯಾಚರಣೆಗೆ ಸಾಂವಿಧಾನಿಕ ನೈತಿಕತೆಯನ್ನು ಅನುಸರಿಸುವ ಅವಶ್ಯಕತೆ ಎಷ್ಟಿದೆ ಎಂಬುದರ ಕುರಿತು ಅಂಬೇಡ್ಕರ್ ಅಂದೇ ಎಚ್ಚರಿಕೆ ನೀಡಿದ್ದರು. ಆದರೆ ಇಂದು ಪರಮೋಚ್ಚ ಸಾಂವಿಧಾನಿಕ ಸಂಸ್ಥೆಗಳೇ ಅನುಮಾನಾಸ್ಪದ ರೀತಿಯಲ್ಲಿ ವರ್ತಿಸುತ್ತಿರುವುದು ವಿಪರ್ಯಾಸ. ಇಂತಹ ದುಸ್ತರ ಕಾಲದಲ್ಲಿ ಸರಿಸುಮಾರು ಎರಡೂವರೆ ತಿಂಗಳ ಕಾಲ ದೇಶವನ್ನು ಚುನಾವಣಾ ಗುಂಗಿನಲ್ಲಿ ಇರಿಸುವ ಮೂಲಕ ಆಯೋಗ ಯಾರ ಹಿತಕ್ಕೆ ಮಣೆ ಹಾಕುತ್ತಿದೆ? ಮೇಲ್ನೋಟಕ್ಕೆ ಇದು, ಯಾರದ್ದೋ ಚುನಾವಣಾ ಪ್ರಚಾರದ ವೇಳಾಪಟ್ಟಿಗೆ ಪೂರಕವಾಗುವಂತೆ ಆಯೋಗ ತನ್ನ ವೇಳಾಪಟ್ಟಿಯನ್ನೇ ಹೊಂದಿಸಿಕೊಂಡಿರುವ ಹಾಗೆ ಭಾಸವಾಗುತ್ತದೆ. ಅಂತಹದ್ದೊಂದು ಅನುಮಾನ ಜನರಲ್ಲಿ ಮೂಡಿದರೆ ಅದರಲ್ಲಿ ಯಾವುದೇ ತಪ್ಪಿಲ್ಲ.

ಸುರೇಶ ತಾಕತರಾವ್, ಬೆಳಗಾವಿ

ದಳಕ್ಕೆ ಕಾಂಗ್ರೆಸ್‌ನಿಂದಲೂ ನಷ್ಟ!

ಜನತಾದಳಕ್ಕೆ ಕಮಲದ ಸಖ್ಯ ಮುಳುವಾಗಲಿದೆ ಎಂಬ ಮಾತು ಕೇಳಿಬರುತ್ತಿದೆ. ಆದರೆ ವಾಸ್ತವವಾಗಿ ದಳಕ್ಕೆ ಕಾಂಗ್ರೆಸ್‌ನ ಸಖ್ಯವೂ ಬಹಳಷ್ಟು ನಷ್ಟ ಉಂಟು ಮಾಡಿದೆ. ಮೂಲತಃ ಜನತಾದಳದಿಂದ ಬಂದ ಸಿದ್ದರಾಮಯ್ಯ ಅವರು ತಮ್ಮ ಹಳೇ ಸ್ನೇಹವನ್ನು ಬಳಸಿಕೊಂಡು ದಳದ ಒಬ್ಬೊಬ್ಬರನ್ನೇ ಗಾಳ ಹಾಕಿ ಕಾಂಗ್ರೆಸ್‌ನತ್ತ ಸೆಳೆದುಕೊಳ್ಳುತ್ತಿದ್ದಾರೆ. ಇದು ದೇವೇಗೌಡರಿಗೆ ಗೊತ್ತಿದೆ. ಆದ್ದರಿಂದ ಬಿಜೆಪಿ ಸಖ್ಯದ ಗುಮ್ಮವನ್ನು ಕಾಂಗ್ರೆಸ್ಸನ್ನು ಹೆದರಿಸಲು ಬಳಸುತ್ತಿದ್ದಾರೆ. ದುರಂತವೆಂದರೆ, ದಳ ಯಾರ ಸಖ್ಯವೂ ಇಲ್ಲದೆ ಸ್ವತಂತ್ರವಾಗಿ ಬೆಳೆಯುವ ಬಲ ದಿನೇದಿನೇ ಕಡಿಮೆ ಆಗುತ್ತಿರುವುದು.

ಗುರು ಜಗಳೂರು, ಹರಿಹರ

ಆಟಗಾರರು ಜಾತಿ ಮೀರಿದವರು

ಆರ್‌ಸಿಬಿ ಮಹಿಳಾ ಕ್ರಿಕೆಟ್ ತಂಡವು ಪ್ರೀಮಿಯರ್ ಲೀಗ್ ಗೆದ್ದದ್ದು ಒಂದು ಕಡೆ ಸಂತೋಷದ ಸಂಗತಿಯಾದರೆ, ಕೆಲವರು ಜಾತಿಯ ಹೆಸರಿನಲ್ಲಿ ಫ್ಲೆಕ್ಸ್, ಬ್ಯಾನರ್ ಹಾಕಿಕೊಂಡು, ‘ಈಕೆ ನಮ್ಮ ಸಮಾಜದ ಹೆಣ್ಣುಮಗಳು’ ಎಂದು ಪ್ರಚುರಪಡಿಸುತ್ತಿರುವುದನ್ನು ನೋಡಿದರೆ ಬೇಸರವಾಗುತ್ತದೆ. ಈ ಸಾಧಕಿಯರನ್ನು ಬರೀ ಒಂದು ಜಾತಿಗೆ ಸೀಮಿತಗೊಳಿಸುತ್ತಿರುವುದು ಖಂಡನೀಯ. ಜಾತಿಯಿಂದ ಯಾರೂ ಶ್ರೇಷ್ಠ ಅಥವಾ ಕನಿಷ್ಠ ಆಗಲು ಸಾಧ್ಯವಿಲ್ಲ. ಅವರ ಸಾಧನೆ, ಕಾರ್ಯ, ಗುಣದಿಂದ ಶ್ರೇಷ್ಠರಾಗಲು ಸಾಧ್ಯವಿದೆ. ಆ ಸಾಧಕರು, ಆಟಗಾರರು ಎಲ್ಲರಿಗೂ ಸೇರಿದವರು. ಅವರನ್ನು ಒಂದು ಜಾತಿಗೆ ಸೀಮಿತಗೊಳಿಸಿದರೆ ನಮ್ಮ ಸಣ್ಣತನವನ್ನು ತೋರಿಸಿದಂತೆ ಆಗುತ್ತದೆ.

ಎಂ.ಪರಮೇಶ್ವರ, ಮದ್ದಿಹಳ್ಳಿ, ಹಿರಿಯೂರು

ಚರ್ಚೆಯ ವಿಷಯ ಯಾವುದಾಗಬೇಕು?

ಈ ಬಾರಿಯ ಲೋಕಸಭಾ ಚುನಾವಣೆಯನ್ನು ‘ಶಕ್ತಿ’ಯನ್ನು ನಾಶ ಮಾಡಲು ಹೊರಟವರ ಮತ್ತು ‘ಶಕ್ತಿ’ಯ ಆರಾಧಕರ ನಡುವಿನ ಹೋರಾಟ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಬಣ್ಣಿಸಿರುವುದಾಗಿ ವರದಿಯಾಗಿದೆ. ಹಿಂದಿನ ಹತ್ತು ವರ್ಷಗಳಿಂದ ದೇಶದಲ್ಲಿ ಏನೇನು ಅಭಿವೃದ್ಧಿ ಕೆಲಸಗಳಾಗಿವೆ ಎಂಬುದು ಚುನಾವಣೆಯ ಸಂದರ್ಭದಲ್ಲಿ ಚರ್ಚೆಯ ವಿಷಯವಾಗಬೇಕಿತ್ತು. ಬದಲಾಗಿ, ಮತದಾರರ ಮುಂದೆ ‘ಶಕ್ತಿ’ ಆರಾಧನೆಯ ಬಗ್ಗೆ ಭಾವನಾತ್ಮಕವಾಗಿ ಮಾತನಾಡುವುದು ಎಷ್ಟು ಸರಿ? ಇದು ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆಯಲ್ಲವೇ?

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಕಾಣದ ಕೈ ಬಯಲಾಗಲಿ

ಎಸ್‌ಬಿಐ ಆಡಳಿತ ಮಂಡಳಿಯು ಚುನಾವಣಾ ಬಾಂಡ್‌ಗೆ ಸಂಬಂಧಿಸಿದಂತೆ ಸಂಪೂರ್ಣ ಮಾಹಿತಿ ನೀಡುವಲ್ಲಿ ಸುಪ್ರೀಂ ಕೋರ್ಟ್ ಆದೇಶಕ್ಕೆ ಮನ್ನಣೆ ನೀಡದೆ ಕಣ್ಣಾಮುಚ್ಚಾಲೆ ಆಡುತ್ತಿರುವುದು ಸ್ಪಷ್ಟವಾಗಿದೆ. ಅದಕ್ಕಾಗಿ ಆಡಳಿತ ಮಂಡಳಿಯ ವಿರುದ್ಧ ಕ್ರಮ ಕೈಗೊಳ್ಳಬೇಕು ಮತ್ತು ಇದರ ಹಿಂದೆ ಇರುವ ಕಾಣದ ಕೈ ಯಾವುದು ಎಂಬುದು ಸಹ ಬಯಲಾಗಬೇಕು.

ಹದಾಲ ಸಿದ್ದಯ್ಯ ಚಂದ್ರಶೇಖರ, ಬೆಂಗಳೂರು

ಪರಹಿತ ಚಿಂತಕರಿಗೆ ಸಿಗಲಿ ಮನ್ನಣೆ

ರಿಪ್ಪನ್‌ಪೇಟೆ ಸಮೀಪದ ಸೂಡೂರು ಗೇಟ್ ಬಳಿಯ ರೈತ ಮಂಜುನಾಥ ಭಟ್ ಅವರು ಪ್ರಾಣಿ ಪಕ್ಷಿಗಳ ದಾಹ ತಣಿಸುವ ಸಲುವಾಗಿ, ಬತ್ತಿದ ಕುಮುದ್ವತಿ ನದಿಗೆ ತಮ್ಮ ಜಮೀನಿನಲ್ಲಿರುವ ಕೊಳವೆಬಾವಿಯಿಂದ ನೀರು ಹರಿಸುತ್ತಿರುವ ಚಿತ್ರಸಹಿತ ವರದಿ (ಪ್ರ.ವಾ., ಮಾರ್ಚ್ 19) ಓದಿ ತುಂಬಾ ಖುಷಿಯಾಯಿತು. ಇಂದಿನ ದಿನಗಳಲ್ಲಿ ಸ್ವಾರ್ಥ ಗುಣವೇ ಹೆಚ್ಚಾಗಿರುವ ಮನುಜರ ನಡುವೆ, ನದಿಯ ನೀರನ್ನೇ ಅವಲಂಬಿಸಿದ ಪ್ರಾಣಿ ಪಕ್ಷಿಗಳಿಗಾಗಿ ನದಿಯ ದಂಡೆಯವರೆಗೂ ಪೈಪ್ ಅಳವಡಿಸಿ, ನಿತ್ಯವೂ ನದಿಗೆ ನೀರು ಹರಿಸುತ್ತಿರುವುದು ಖಂಡಿತ ಪ್ರಶಂಸಾರ್ಹ. ಇಷ್ಟೇ ಅಲ್ಲದೆ, ನದಿಯ ಪಾತ್ರಕ್ಕೆ ವಾರಾಂತ್ಯದಲ್ಲಿ ಬಂದು ಹೋಗುವ ಪ್ರವಾಸಿಗರು, ವಿಹಾರಾರ್ಥಿಗಳು ಬಿಟ್ಟು ಹೋಗುವ ಮಾಲಿನ್ಯವನ್ನು ಶ್ರಮದಾನದ ಮೂಲಕ ಸ್ವಚ್ಛಗೊಳಿಸಿ ಪರಿಸರ ಕಾಳಜಿಯನ್ನೂ ಅವರು ತೋರುತ್ತಿರುವುದು ಅನುಕರಣೀಯ. ಇಂತಹ ಮಾನವೀಯ, ಪರಹಿತ ಚಿಂತನೆಯ ವ್ಯಕ್ತಿಗಳ ಸಂಖ್ಯೆ ಅತ್ಯಂತ ಕಡಿಮೆ. ಇಂತಹವರನ್ನು ಗುರುತಿಸುವುದು ನಮ್ಮ ಕರ್ತವ್ಯ ಅಲ್ಲವೇ?

ರಘುನಾಥ ರಾವ್ ತಾಪ್ಸೆ, ದಾವಣಗೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕೇಂದ್ರ ಸರ್ಕಾರದಲ್ಲಿ 9 ಲಕ್ಷಕ್ಕೂ ಹೆಚ್ಚು ಹುದ್ದೆಗಳು ಖಾಲಿ

10.15 ಲಕ್ಷ ಕೇಂದ್ರ ಸರ್ಕಾರ ಅಧೀನದ ಅರೆಸೇನಾ ಪಡೆಗಳಿಗೆ ಮಂಜೂರಾದ ಹುದ್ದೆಗಳ ಒಟ್ಟು ಸಂಖ್ಯೆ




9.19 ಲಕ್ಷ ಕೇಂದ್ರ ಸರ್ಕಾರ ಅಧೀನದ ಅರೆಸೇನಾ ಪಡೆಗಳಲ್ಲಿ ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ


95,481 ತೆರವಾಗಿರುವ ಹುದ್ದೆಗಳು

• ಜಯಸಿಂಹ ಆರ್.

ಕೇಂದ್ರ ಸರ್ಕಾರದ ವಿವಿಧ ಸಚಿವಾಲಯಗಳು, ಇಲಾಖೆಗಳು ಮತ್ತು ಸಂಸ್ಥೆಗಳಲ್ಲಿ 9.83 ಲಕ್ಷಕ್ಕೂ ಹೆಚ್ಚು ಹುದ್ದೆಗಳು ತೆರವಾಗಿವೆ. ಕೇಂದ್ರ ಸರ್ಕಾರದ ಒಟ್ಟು ನೌಕರರ ಸಂಖ್ಯೆಯಲ್ಲಿ ಖಾಲಿ ಇರುವ ಹುದ್ದೆಗಳ ಪ್ರಮಾಣ ಶೇ 24ಕ್ಕಿಂತಲೂ ಹೆಚ್ಚು. ದೊಡ್ಡ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಯ ಘೋಷಣೆ ಮಾಡಿದ್ದ ಕೇಂದ್ರ ಸರ್ಕಾರವು, ಈಗಾಗಲೇ ಇರುವ ಸರ್ಕಾರಿ ಉದ್ಯೋಗಗಳಿಗೂ ನೇಮಕಾತಿಯನ್ನು ನಡೆಸುತ್ತಿಲ್ಲ. ಹೀಗೆ ನೇಮಕಾತಿ ನಡೆಸದೇ ಖಾಲಿ ಬಿಟ್ಟಿರುವ ಹುದ್ದೆಗಳ ಸಂಖ್ಯೆ ಪ್ರತಿ ವರ್ಷ ಏರಿಕೆಯಾಗುತ್ತಲೇ ಇದೆ ಎನ್ನುತ್ತದೆ ಕೇಂದ್ರ ಸರ್ಕಾರದ 'ವೇತನ ಪಾವತಿ ಸಂಶೋಧನಾ ಘಟಕ'ದ ವರದಿ.

ಈ ಘಟಕದ ಹತ್ತು ವರ್ಷಗಳ ವರದಿಗಳನ್ನು ಪರಿಶೀಲಿಸಿದರೆ ಖಾಲಿ ಹುದ್ದೆಗಳ ಸಂಖ್ಯೆ ಮತ್ತು ಪ್ರಮಾಣ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರದ ಅವಧಿಯಲ್ಲೇ ಏರಿಕೆಯಾಗಿದೆ ಎಂಬುದನ್ನು ತೋರಿಸುತ್ತವೆ. 2014–15ರಲ್ಲಿ ಯುಪಿಎ ಸರ್ಕಾರ ಅಧಿಕಾರ ಕಳೆದುಕೊಂಡಾಗ ಖಾಲಿ ಇದ್ದ ಹುದ್ದೆಗಳ ಸಂಖ್ಯೆ 4 ಲಕ್ಷದ ಆಸುಪಾಸಿನಲ್ಲಿ ಇತ್ತು. ಅದು ಅಂದು ಕೇಂದ್ರ ಸರ್ಕಾರಕ್ಕೆ ಮಂಜೂರಾಗಿದ್ದ ಒಟ್ಟು ಹುದ್ದೆಗಳಲ್ಲಿ ಶೇ 11.5ರಷ್ಟು ಮಾತ್ರ. ಆದರೆ ನಂತರದ ಪ್ರತಿ ವರ್ಷಗಳಲ್ಲೂ ಮಂಜೂರಾದ ಹುದ್ದೆಗಳು, ನೇಮಕವಾಗದೆ ಖಾಲಿ ಉಳಿದ ಹುದ್ದೆಗಳು ಮತ್ತು ಖಾಲಿ ಹುದ್ದೆಗಳ ಪ್ರಮಾಣ ಏರಿಕೆಯಾಗುತ್ತಿದೆ.






ಹೀಗೆ ಖಾಲಿ ಇದ್ದ ಹುದ್ದೆಗಳ ಸಂಖ್ಯೆ 2020–21ರಲ್ಲಿ ಗರಿಷ್ಠಮಟ್ಟಕ್ಕೆ ಏರಿಕೆಯಾಗಿತ್ತು. ಆ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಕೇಂದ್ರ ಸರ್ಕಾರದಲ್ಲಿ ಒಟ್ಟು 9.95 ಲಕ್ಷ ಹುದ್ದೆಗಳು ಖಾಲಿ ಇದ್ದವು. 2021–22ಕ್ಕೆ ಆ ಸಂಖ್ಯೆ 9.83 ಲಕ್ಷಕ್ಕೆ ಇಳಿಕೆಯಾಗಿತ್ತು. ಆದರೆ 2021–22ನೇ ಆರ್ಥಿಕ ವರ್ಷದಲ್ಲಿ ಮಂಜೂರಾದ ಒಟ್ಟು ಹುದ್ದೆಗಳಿಗೆ ಹೋಲಿಸಿದರೆ, ಖಾಲಿ ಇದ್ದ ಹುದ್ದೆಗಳ ಪ್ರಮಾಣ ಶೇ 24.29ಕ್ಕೆ ಏರಿಕೆಯಾಗಿದೆ. ಇದು ಆ ಹಿಂದಿನ ಹತ್ತು ವರ್ಷಗಳಲ್ಲೇ ಗರಿಷ್ಠ ಸಂಖ್ಯೆಯಾಗಿದೆ. ಆ ಅವಧಿಯಲ್ಲಿ ಸೇನೆ ಮತ್ತು ಅರೆಸೇನಾ ಪಡೆಗಳಲ್ಲೇ ಒಟ್ಟು 2.32 ಲಕ್ಷ ಹುದ್ದೆಗಳು ಖಾಲಿ ಇದ್ದವು. ರೈಲ್ವೆಯಲ್ಲಿ ಖಾಲಿ ಇದ್ದ ಹುದ್ದೆಗಳ ಸಂಖ್ಯೆ 3 ಲಕ್ಷಕ್ಕೂ ಹೆಚ್ಚು.

ಇನ್ನೊಂದೆಡೆ ಕೇಂದ್ರ ಸರ್ಕಾರವು ಮಂಜೂರಾಗಿದ್ದ ಹುದ್ದೆಗಳ ಸಂಖ್ಯೆಯನ್ನೂ ಕಡಿತ ಮಾಡುತ್ತಾ ಬಂದಿದೆ. 2021–22ನೇ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರವು 64 ಸಾವಿರಕ್ಕೂ ಹೆಚ್ಚು ಹುದ್ದೆಗಳನ್ನು ಕಡಿತ ಮಾಡಿದೆ. ಆ ವರ್ಷ ಇದ್ದ ಕೇಂದ್ರ ಸರ್ಕಾರದ ಹುದ್ದೆಗಳ ಸಂಖ್ಯೆ 40.44 ಲಕ್ಷ ಮಾತ್ರ. ಅದು 2018–19ನೇ ಸಾಲಿನಲ್ಲಿ ಇದ್ದ ಹುದ್ದೆಗಳಿಗಿಂತ (40.65 ಲಕ್ಷ) ಕಡಿಮೆ. ಹೀಗೆ ಕೇಂದ್ರ ಸರ್ಕಾರವು ಉದ್ಯೋಗಗಳ ಸಂಖ್ಯೆಯನ್ನೂ ಕಡಿಮೆ ಮಾಡುತ್ತಿದೆ ಮತ್ತು ಖಾಲಿ ಹುದ್ದೆಗಳನ್ನು ಭರ್ತಿ ಮಾಡುತ್ತಲೂ ಇಲ್ಲ. ಹೀಗಾಗಿ ಸೇವೆಯಲ್ಲಿರುವ ಸರ್ಕಾರಿ ನೌಕರರ ಸಂಖ್ಯೆ ಕಡಿಮೆಯೇ ಇದೆ.

4 ಲಕ್ಷದಿಂದ 9.95 ಲಕ್ಷಕ್ಕೆ ಏರಿಕೆ



ಯುಪಿಎ-2 ಸರ್ಕಾರದ ಅವಧಿ ಮುಗಿದಾಗ ಕೇಂದ್ರ ಸರ್ಕಾರದ ಮಂಜೂರಾದ ಹುದ್ದೆಗಳಲ್ಲಿ ಖಾಲಿ ಇದ್ದವುಗಳ ಸಂಖ್ಯೆ 4.20 ಲಕ್ಷದಷ್ಟಿತ್ತು. ಆನಂತರ ಖಾಲಿ ಹುದ್ದೆಗಳ ಸಂಖ್ಯೆ ಏರಿಕೆಯಾಗುತ್ತಲೇ ಇದೆ. ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಅಧಿಕಾರಕ್ಕೆ ಬಂದ ಮೂರನೇ ಆರ್ಥಿಕ ವರ್ಷಗಳಲ್ಲಿ ಖಾಲಿ ಹುದ್ದೆಗಳ ಸಂಖ್ಯೆ 6.83 ಲಕ್ಷಕ್ಕೆ ಏರಿಕೆಯಾಗಿತ್ತು. ಖಾಲಿ ಹುದ್ದೆಗಳಲ್ಲಿ ಆದ ಏರಿಕೆಯ ಪ್ರಮಾಣ ಶೇ 50ಕ್ಕಿಂತಲೂ ಹೆಚ್ಚು.


ಎನ್‌ಡಿಎಯ ಎರಡನೇ ಅವಧಿಯಲ್ಲೂ ಖಾಲಿ ಹುದ್ದೆಗಳ ಸಂಖ್ಯೆ ಪ್ರತಿ ವರ್ಷ ಏರಿಕೆಯಾಗುತ್ತಲೇ ಇತ್ತು. 2018–19ರಲ್ಲಿ ಅಂತಹ ಹುದ್ದೆಗಳ ಸಂಖ್ಯೆ 9 ಲಕ್ಷ ದಾಟಿತ್ತು. ಅದು ಆವರೆಗಿನ ಅತ್ಯಂತ ಗರಿಷ್ಠ ಸಂಖ್ಯೆಯಾಗಿತ್ತು. 19–20ನೇ ಸಾಲಿನ ಆರ್ಥಿಕ ವರ್ಷದಲ್ಲಿ ಖಾಲಿ ಹುದ್ದೆಗಳ ಸಂಖ್ಯೆ ಸ್ವಲ್ಪ ಇಳಿಕೆ ಆಯಿತಾದರೂ, ಅದು ಯುಪಿಎ ಅವಧಿಯಲ್ಲಿ ಇದ್ದುದ್ದಕ್ಕಿಂತ ದುಪ್ಪಟ್ಟೇ ಇತ್ತು. ಆನಂತರದ ಎಲ್ಲಾ ವರ್ಷಗಳಲ್ಲಿ ಖಾಲಿ ಹುದ್ದೆಗಳ ಸಂಖ್ಯೆ ಏರಿಕೆಯಾಗುತ್ತಲೇ ಇದೆ. 2022–23 ಮತ್ತು 2023–24ನೇ ಸಾಲಿನ ವರದಿಗಳು ಬಿಡುಗಡೆಯಾಗಿಲ್ಲದೇ ಇರುವ ಕಾರಣಕ್ಕೆ ಈಗ ಎಷ್ಟು ಹುದ್ದೆಗಳು ಖಾಲಿ ಇವೆ ಎಂಬ ಮಾಹಿತಿ ಲಭ್ಯವಿಲ್ಲ.

ಆಧಾರ: ಕೇಂದ್ರ ಹಣಕಾಸು ಸಚಿವಾಲಯದ 'ವೇತನ ಪಾವತಿ ಸಂಶೋಧನಾ ಘಟಕ'ದ ವರದಿಗಳು

ಉದ್ಯೋಗಗಳ ಕಡಿತಕ್ಕೆ ಮುಂದಾದ ಕೇಂದ್ರ

ಮೋದಿ ಅವರ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದ ಮೊದಲ ಕೆಲವು ವರ್ಷಗಳಲ್ಲಿ ಕೇಂದ್ರ ಸರ್ಕಾರಿ ನೌಕರರ ಸಂಖ್ಯೆ ಸ್ವಲ್ಪ ಏರಿಕೆಯಾಗಿತ್ತು. ಆದರೆ 2018–19ರ ನಂತರ ಕೇಂದ್ರ ಸರ್ಕಾರಿ ನೌಕರರ ಸಂಖ್ಯೆ ಇಳಿಕೆಯಾಗುತ್ತಲೇ ಇದೆ. 2014ರಲ್ಲಿ ಬಿಜೆಪಿ ಅಧಿಕಾರ ವಹಿಸಿಕೊಂಡಾಗ ಕೇಂದ್ರ ಸರ್ಕಾರದ ಎಲ್ಲಾ ಸಚಿವಾಲಯಗಳು ಮತ್ತು ಇಲಾಖೆಗಳ ಅಡಿಯಲ್ಲಿ ಒಟ್ಟು 36.49 ಲಕ್ಷ ಹುದ್ದೆಗಳಿಗೆ ಮಂಜೂರಾತಿ ಇತ್ತು. ಅಂದರೆ ಅಷ್ಟು ಮಂದಿಗೆ ಕೇಂದ್ರ ಸರ್ಕಾರವು ಉದ್ಯೋಗ ನೀಡಬಹುದಿತ್ತು. ಆದರೆ ಮರು ವರ್ಷವೇ ಮಂಜೂರಾದ ಹುದ್ದೆಗಳ ಸಂಖ್ಯೆ 36.33 ಲಕ್ಷಕ್ಕೆ ಇಳಿಕೆಯಾಗಿತ್ತು.

ಆನಂತರದ ಆರ್ಥಿಕ ವರ್ಷದಲ್ಲಿ ಎಷ್ಟು ಹುದ್ದೆಗಳು ಮಂಜೂರಾಗಿದ್ದವು ಎಂಬುದರ ಮಾಹಿತಿ ಲಭ್ಯವಿಲ್ಲ. ಆದರೆ, ನಂತರದ ವರ್ಷಗಳಲ್ಲಿ ಮಂಜೂರಾದ ಹುದ್ದೆಗಳ ಸಂಖ್ಯೆ ಏರಿಕೆಯ ಹಾದಿಯಲ್ಲಿತ್ತು. 2020–21ನೇ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರಿ ನೌಕರರ ಮಂಜೂರಾದ ಹುದ್ದೆಗಳ ಸಂಖ್ಯೆ ಈವರೆಗಿನ ಗರಿಷ್ಠಮಟ್ಟಕ್ಕೆ ತಲುಪಿತ್ತು. ಆದರೆ ಮರುವರ್ಷವೇ ಅದು ಇಳಿಕೆಯಾಯಿತು. ಒಂದೇ ವರ್ಷದಲ್ಲಿ ಕೇಂದ್ರ ಸರ್ಕಾರವು ಒಟ್ಟು 64,225 ಹುದ್ದೆಗಳನ್ನು ಕಡಿತ ಮಾಡಿತು. 2021–22ರಲ್ಲಿ ಇದ್ದ ಹುದ್ದೆಗಳ ಸಂಖ್ಯೆಯು, ಅದಕ್ಕಿಂತ ಹಿಂದಿನ ನಾಲ್ಕು ವರ್ಷಗಳಲ್ಲಿ ಇದ್ದ ಹುದ್ದೆಗಳಿಗಿಂತ ಕಡಿಮೆ. ಅಂದರೆ ಕೇಂದ್ರ ಸರ್ಕಾರವು, ಹೊಸ ಉದ್ಯೋಗಗಳನ್ನು ಸೃಷ್ಟಿಸುವ ಬದಲಿಗೆ ಇರುವ ಹುದ್ದೆಗಳನ್ನೇ ಕಡಿತ ಮಾಡಿದೆ ಎಂಬುದನ್ನು ಈ ದತ್ತಾಂಶಗಳು ಹೇಳುತ್ತವೆ.



64,225 2021–22ರಲ್ಲಿ ಕೇಂದ್ರ ಸರ್ಕಾರವು ಕಡಿತ ಮಾಡಿದ ಹುದ್ದೆಗಳ ಸಂಖ್ಯೆ

ಸಿನಿ ಬಿಟ್ಸ್

'ಕೃಷ್ಣಂ ಪ್ರಣಯ ಸಖಿ' ಶೂಟಿಂಗ್ ಪೂರ್ಣ



ಗಣೇಶ್, ಶೇಖರ್ ಮಾಸ್ಟರ್

ಗೋಲ್ಡನ್ ಸ್ಟಾರ್ ಗಣೇಶ್ ನಟನೆಯ 41ನೇ ಸಿನಿಮಾ 'ಕೃಷ್ಣಂ ಪ್ರಣಯ ಸಖಿ'ಯ ಚಿತ್ರೀಕರಣ ಮುಕ್ತಾಯವಾಗಿದ್ದು, ಚಿತ್ರತಂಡ ರೀರೆಕಾರ್ಡಿಂಗ್ ಆರಂಭಿಸಿದೆ.

ಶ್ರೀನಿವಾಸರಾಜು ಆ್ಯಕ್ಷನ್ ಕಟ್ ಹೇಳಿರುವ ಈ ಸಿನಿಮಾದ ಅಂತಿಮ ಹಂತದ ಚಿತ್ರೀಕರಣ ವಿಯೆಟ್ನಾಂನಲ್ಲಿ ಮುಕ್ತಾಯವಾಗಿದೆ. ಅಲ್ಲಿ ಚಿತ್ರದ ಎರಡು ಹಾಡುಗಳು ಹಾಗೂ ಕೆಲವು ಮಾತಿನ ಭಾಗದ ಚಿತ್ರೀಕರಣ ನಡೆದಿದೆ. ಹಾಡುಗಳಿಗೆ ಶೇಖರ್ ಮಾಸ್ಟರ್ ನೃತ್ಯ ನಿರ್ದೇಶನ ಮಾಡಿದ್ದಾರೆ. 'ನಿಮ್ಮ ಕೊರಿಯೋಗ್ರಫಿ ಹಾಡುಗಳಲ್ಲಿ ಮ್ಯಾಜಿಕ್ ಸೃಷ್ಟಿಸಿದೆ' ಎಂದು 'ಎಕ್ಸ್'ನಲ್ಲಿ ಹೇಳಿದ್ದಾರೆ ಗಣೇಶ್. ಇದರೊಂದಿಗೆ ಚಿತ್ರದ ಚಿತ್ರೀಕರಣ ಸಂಪೂರ್ಣವಾಗಿದೆ. ಗಣೇಶ್, ಮಾಳವಿಕ ನಾಯರ್, ಶರಣ್ಯ ಶೆಟ್ಟಿ ಮುಂತಾದವರು ಈ ಭಾಗದ ಚಿತ್ರೀಕರಣದಲ್ಲಿ ಭಾಗಿಯಾಗಿದ್ದರು. ಸದ್ಯದಲ್ಲೇ ಚಿತ್ರ ತೆರೆಗೆ ಬರಲು ಸಿದ್ಧವಾಗಲಿದೆ ಎಂದಿದೆ ಚಿತ್ರತಂಡ.

ಚಿತ್ರದಲ್ಲಿ ಐದು ಹಾಡುಗಳಿದ್ದು, ಅರ್ಜುನ್ ಜನ್ಯ ಸಂಗೀತ ನೀಡಿದ್ದಾರೆ. ವೆಂಕಟ್ ಪ್ರಸಾದ್ ಛಾಯಾಚಿತ್ರಗ್ರಹಣ ಹಾಗೂ ಕೆ.ಎಂ. ಪ್ರಕಾಶ್ ಸಂಕಲನ ಚಿತ್ರಕ್ಕಿದೆ. ಕೌಟುಂಬಿಕ ಕಥಾಹಂದರ ಹೊಂದಿರುವ ಈ ಚಿತ್ರವನ್ನು ಪ್ರಶಾಂತ್ ಜಿ. ರುದ್ರಪ್ಪ ನಿರ್ಮಾಣ ಮಾಡಿದ್ದಾರೆ. ಶ್ರೀನಿವಾಸಮೂರ್ತಿ, ಸಾಧು ಕೋಕಿಲ, ರಂಗಾಯಣ ರಘು, ಶಶಿಕುಮಾರ್, ಶ್ರುತಿ, ಭಾವನ, ಅಶೋಕ್, ರಾಮಕೃಷ್ಣ, ಶಿವಧ್ವಜ್, ರಘುರಾಮ್, ಮಾನಸಿ ಸುಧೀರ್ ಮುಂತಾದ ಕಲಾವಿದರು ತಾರಾಬಳಗದಲ್ಲಿದ್ದಾರೆ.

ಸಂವಿಧಾನದ ಮಹತ್ವ ಹೇಳುವ 'ರೂಲರ್ಸ್'



ಸಂವಿಧಾನದ ಮಹತ್ವ ಸಾರುವ 'ದಿ ರೂಲರ್ಸ್' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಚಿತ್ರ ಸಾಹಿತಿ ವಿ.ನಾಗೇಂದ್ರ ಪ್ರಸಾದ್ ಟ್ರೇಲರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

ಎಂ. ಸಂದೇಶ್ ಕಥೆ, ಚಿತ್ರಕಥೆ,ಸಂಭಾಷಣೆ ಬರೆದಿದ್ದಾರೆ. ಉದಯ್ ಭಾಸ್ಕರ್ ಆ್ಯಕ್ಷನ್ ಕಟ್ ಹೇಳಿರುವ ಚಿತ್ರಕ್ಕೆ ಅಶ್ವತ್ಥ್ ಬಳಗೆರೆ ಬಂಡವಾಳ ಹೂಡಿದ್ದಾರೆ. ಚಿತ್ರ ಶೀಘ್ರದಲ್ಲಿ ತೆರೆಗೆ ಬರಲು ಸಿದ್ಧವಾಗಿದೆ.

'ವರ್ಷಕ್ಕೆ ಇನ್ನೂರಕ್ಕೂ ಹೆಚ್ಚು ಕನ್ನಡ ಚಿತ್ರಗಳು ಸಿದ್ಧವಾಗುತ್ತವೆ. ಆದರೆ ಈ ಚಿತ್ರ ತುಂಬ ವಿಶೇಷವಾಗಿದ್ದು, ಬಾಬಾ ಸಾಹೇಬ್ ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳು ಹಾಗೂ ಹೋರಾಟದ ಮನೋಭಾವನೆಯನ್ನು ಇದರಲ್ಲಿ ತೋರಿಸಲಾಗಿದೆ. ಇಂತಹ ಚಿತ್ರವನ್ನು ಶಾಲಾ ಕಾಲೇಜುಗಳ ಮಕ್ಕಳು ನೋಡು ವುದರಿಂದ ತಿಳಿವಳಿಕೆ, ಜ್ಞಾನ ಹೆಚ್ಚುತ್ತದೆ' ಎಂದರು ನಾಗೇಂದ್ರ ಪ್ರಸಾದ್.

ಕರುಣ್ ಕೆ.ಜಿ.ಎಫ್ ಸಂಗೀತ ಸಂಯೋಜಿಸಿದ್ದು, ವಿಶಾಲ್, ರಿತಿಕಾ ಗೌಡ, ಪುನೀತ್ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ❖

ಪಿವಿ ಫ್ಯಾಕ್ಟ್ ಚೆಕ್

ಚುನಾವಣಾ ಬಾಂಡ್‌ಗೆ ಸಂಬಂಧಿಸಿದಂತೆ ಎಸ್‌ಬಿಐ ಆಲ್ಫಾ ನ್ಯೂಮರಿಕಲ್ ನಂಬರ್ ವಿವರಗಳನ್ನು ನೀಡದೇ ಇರುವ ಕುರಿತ ಪ್ರಕರಣದ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ನಡೆದ ವಿಚಾರಣೆಯ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ವಿಚಾರಣೆ ಮಧ್ಯದಲ್ಲಿಯೇ ಎದ್ದು ನಡೆದಿದ್ದಾರೆ ಎಂದು ಸಾರ್ವಜನಿಕರು ಆರೋಪಿಸುತ್ತಿದ್ದಾರೆ.'ವಾವ್! ವಕೀಲರು ಮಾತನಾಡುತ್ತಲೇ ಇದ್ದಾರೆ. ಆದರೆ, ಚಂದ್ರಚೂಡ್ ಏನೂ ಹೇಳದೆ, ಹೊರಟು ನಿಂತರು. ನ್ಯಾಯಾಂಗದಲ್ಲಿ ಕೌಟುಂಬಿಕ ಹಿನ್ನಲೆ ಹೊಂದಿರುವ ನ್ಯಾಯಮೂರ್ತಿಗಳಿಗೆ ಎಷ್ಟು ಅಹಂಕಾರ ಇದೆ ಮತ್ತು ಇದು ಎಷ್ಟು ಅಪಾಯಕಾರಿ ಎಂಬುದನ್ನು ಇದು ತೋರಿಸುತ್ತದೆ. ಇದು ನೋಡಿ ಸುಪ್ರೀಂ ಕೋರ್ಟ್. ಸುಪ್ರೀಂ ಕೋರ್ಟ್!' ಎಂದು ಅಜೀತ್ ಭಾರತಿ (@ajeetbharti) ಎಂಬುವರು ಎಕ್ಸ್ ಖಾತೆಯಲ್ಲಿ ಬರೆದುಕೊಂಡಿದ್ದರು. ಜಯೇಶ್ ಮೆಹ್ತಾ (@JMehta65) ಎಂಬುವರು, 'ಸಿಜೆಐ ಈ ರೀತಿ ವರ್ತಿಸಲು ಹೇಗೆ ಸಾಧ್ಯ? ಸಾಲಿಸಿಟರ್ ಜನರಲ್ ಅವರು ತಮ್ಮ ವಾದವನ್ನು ಮಂಡಿಸುತ್ತಿದ್ದಾರೆ. ವಿಚಾರಣೆಯನ್ನು ಮುಂದಕ್ಕೂ ಹಾಕದೆ, ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್ ಅವರೂ ಸೇರಿದಂತೆ ಇತರ ನ್ಯಾಯಮೂರ್ತಿಗಳು ಎದ್ದು ಹೊರಡುತ್ತಿದ್ದಾರೆ. ಇದು ಕೇಂದ್ರ ಸರ್ಕಾರಕ್ಕೆ ಮಾಡಿದ ಅವಮಾನ. ರಾಷ್ಟ್ರಪತಿ ಅವರು, ಚಂದ್ರಚೂಡ್ ಅವರಿಂದ ಒತ್ತಾಯಪೂರ್ವಕವಾಗಿ ರಾಜೀನಾಮೆ ಪಡೆದುಕೊಳ್ಳಬೇಕು' ಎಂದು ಬರೆದುಕೊಂಡಿದ್ದಾರೆ. ಆದರೆ, ಇದು ತಿರುಚಿದ ವಿಡಿಯೊ.

ಚುನಾವಣಾ ಬಾಂಡ್ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ವಿವಿಧ ರೀತಿ ಚರ್ಚೆ ನಡೆಯುತ್ತಿದೆ ಎಂಬುದರ ಕುರಿತು ಸಾಲಿಸಿಟರ್ ಜನರಲ್ ಅವರು ಪೀಠದ ಗಮನಕ್ಕೆ ತರುತ್ತಿದ್ದರು. 'ನೀವೂ (ಪೀಠ) ಬಯಸಿರದ, ಚುನಾವಣಾ ಬಾಂಡ್ ಯೋಜನೆ ಕೂಡ ಉದ್ದೇಶಿಸದ ಬೇರೆಯದೇ ಚರ್ಚೆಯೊಂದು ನಡೆಯುತ್ತಿದೆ. ಯಾರು ದೇಣಿಗೆ ನೀಡಿದ್ದಾರೆ ಎಂಬುದು ತಿಳಿದರೆ, ಮತದಾರರು ಯಾರಿಗೆ ಮತ ಹಾಕಬೇಕು ಎಂದು ಅವರೇ ನಿರ್ಧರಿಸುತ್ತಾರೆ ಎಂದು ನಾವು ತಿಳಿದಿದ್ದೆವು...' ಎಂದು ಅವರು ತಮ್ಮ ಮಾತು ಮುಂದುವರಿಸಿದ್ದರು. ಇದೇ ವೇಳೆ ಸಿಜೆಐ ಚಂದ್ರಚೂಡ್ ಅವರು ತಮ್ಮ ಕುರ್ಚಿಯನ್ನು ಸರಿಪಡಿಸಿಕೊಳ್ಳಲು ಎದ್ದಿದ್ದರು. ಇದೇ ಸಮಯಕ್ಕೆ ವಿಡಿಯೊವನ್ನು ಎಡಿಟ್ ಮಾಡಿ ತಪ್ಪು ಅರ್ಥ ಬರುವಂತೆ ಹಂಚಿಕೊಳ್ಳಲಾಗುತ್ತಿದೆ. ಕುರ್ಚಿ ಸರಿ ಮಾಡಿಕೊಂಡು ಸಿಜೆಐ ಅವರು ವಿಚಾರಣೆಯನ್ನು ಮುಂದುವರಿಸಿದ್ದರು. ಸುಪ್ರೀಂ ಕೋರ್ಟ್, ತನ್ನ ಯೂಟ್ಯೂಬ್ ಚಾನೆಲ್‌ನಲ್ಲಿ ವಿಚಾರಣೆಯ ಲೈವ್ ನೀಡುತ್ತದೆ. ಈ ವಿಡಿಯೊದಲ್ಲಿ ಸಿಜೆಐ ಅವರು ವಿಚಾರಣೆಯನ್ನು ಮುಂದುವರಿಸಿರುವ ವಿಡಿಯೊ ಸಿಗುತ್ತದೆ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಲೆಕ್ಕದ ಪುಸ್ತಕ





ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ತುಂಬಿದ ಮಧ್ಯಮ ವರ್ಗದ ಕುಟುಂಬ. ಅಪ್ಪ ಅಧಿಕಾರಿಯಾಗಿ ನಿವೃತ್ತರು. ಈಗ ಮಕ್ಕಳೆಲ್ಲಾ ಸ್ವಂತ ಕಾಲ ಮೇಲೆ ನಿಂತವರು. ಅಪ್ಪನಿಗೆ ಎಲ್ಲವನ್ನೂ ಬರೆದಿಡುವ ಅಭ್ಯಾಸ. ಯಾವುದಕ್ಕೆ ಎಷ್ಟು ಖರ್ಚಾಯಿತು, ಉಳಿದ ಹಣವೆಷ್ಟು, ಕೊಡಬೇಕಾದ ಸಾಲವೆಷ್ಟು? ಎಲ್ಲವೂ ಪುಸ್ತಕದಲ್ಲಿ ದಾಖಲು. ದುಡ್ಡುಕಾಸಿನ ವಿಷಯದಲ್ಲಿ ಕಠೋರ ವ್ಯಕ್ತಿ.

ಒಂದು ದಿನ ಕಿರಿ ಮಗನಿಗೂ ಅಪ್ಪನಿಗೂ ಹಣದ ಮಾತಿಗೆ ಜಗಳ. ಎಂದೂ ದುಸರಾ ಮಾತಾಡದ ಕೊನೆಯ ಮಗ ಹೆಂಡತಿ, ಮಗಳ ಮುಂದೆ ಅಪ್ಪ ಹಂಗಿಸಿ ಮಾತಾಡಿದರೆಂದು ಬೆಂಕಿಯಾಗಿದ್ದ. ಈತ ದುಡಿಯುತಿದ್ದರೂ ಅದು ಬೇರೆ ಮಕ್ಕಳಷ್ಟು ಹೆಚ್ಚಿನದಲ್ಲ. ಆ ದಿನ ಮಾತುಗಳು ಕೊಂಚ ವಿಕೋಪಕ್ಕೆ ಹೋದವು. ಅಪ್ಪ ಒಳಗೆ ಹೋಗಿ ಲೆಕ್ಕದ ಪುಸ್ತಕ ತಂದರು. ಕಿರಿ ಮಗನು ತಾಯ ಹೊಟ್ಟೆಯೊಳಗೆ ಇದ್ದಾಗಿನಿಂದ ಲಾಗಾಯ್ತು ಇಲ್ಲೀ ತನಕದ ಎಲ್ಲವೂ ಅಲ್ಲಿತ್ತು. ಹೆರಿಗೆಗೆ, ಹಾಲಿಗೆ, ಆಸ್ಪತ್ರೆಗೆ, ಬಟ್ಟೆಗೆ, ಔಷಧಿಗೆ, ಸ್ಕೂಲಿಗೆ, ಕಾಲೇಜಿಗೆ ಆದ ಖರ್ಚಿನ ವಿವರ ದಿನಾಂಕ ಸಮೇತವಿತ್ತು. ಇದೆಲ್ಲಾ ಮೊದಲು ಮಡಗಿ ಆಮೇಲೆ ಮಾತಾಡು ಎಂದರು.

ತನ್ನ ಹೆಸರಿನ ಒಂದು ಸಾಲದ ಖಾತೆ ಬಾಲ್ಯದಿಂದ ನಿರ್ವಹಣೆ ಆಗುತ್ತಿರುವುದು ಕಿರಿಯನಿಗೆ ಗೊತ್ತಿರಲಿಲ್ಲ. ಅಲ್ಲಿ ಮನೆಯ ಸಕಲರ ಖರ್ಚಿನ ವಿವರದ ಪ್ರತ್ಯೇಕ ಪುಟಗಳಿದ್ದವು. ಅಪ್ಪ ಲೆಕ್ಕ ತೆರೆದು ತೋರಿಸಿ ನಾನು ಅಪ್ಪನೆಂಬ ಮರ್ಯಾದೆ ನಿನಗಿಲ್ಲ ಎಂದಾದ ಮೇಲೆ ಇಷ್ಟು ಹಣವನ್ನು ಕೊಟ್ಟು ನಿನ್ನ ಸಂಬಂಧ ಕಡಿದುಕೊಂಡು ಹೋಗಬಹುದು ಎಂದು ನಿರ್ದಾಕ್ಷಿಣ್ಯವಾಗಿ ಕಿರುಚಿದರು.

ಕಿರಿಯನಿಗೆ ಅವಮಾನವೂ ಚಿತ್ರ ಹಿಂಸೆಯೂ ಒಟ್ಟಿಗೆ ಆದವು. ಮನೆಯವರೆಲ್ಲಾ ಥಂಡ ಹೊಡೆದು ನಿಂತಿದ್ದರು. ಅವನೆಂದೂ ಅಪ್ಪನಿಂದ ಈ ಲೆಕ್ಕದ ಒಕ್ಕಣಿಕೆ ನಿರೀಕ್ಷೆ ಮಾಡಿರಲಿಲ್ಲ. ಆಯಿತು ಸಂಜೆ ಒಳಗೆ ರೊಕ್ಕ ತರುತ್ತೇನೆ ಎಂದು ಹೇಳಿ ಹೋದ ಮಗ ಮತ್ತೆ ಬರಲೇ ಇಲ್ಲ. ಇದಾಗಿ ಸರಿ ಸುಮಾರು 30 ವರ್ಷಗಳಾಗಿವೆ. ಈಗ ಲೆಕ್ಕದ ಪುಸ್ತಕ, ಲೆಕ್ಕ ಹಾಕಿದವರು, ಲೆಕ್ಕ ಚುಕ್ತಾ ಮಾಡುತ್ತೇನೆಂದು ಹೋದವನು ಯಾರೂ ಇಲ್ಲ. ಬದುಕು, ಭಾವನೆ, ಸಂಬಂಧಗಳನ್ನು ಕೊಳ್ಳುವ ಇಲ್ಲವೇ ಮಾರುವ ಶಕ್ತಿ ಹಣಕ್ಕೆಂದೂ ಬರಬಾರದು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಮಾರ್ಚ್ 20, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ಏಕಾದಶಿ ಗಂ. 26-23 ನಕ್ಷತ್ರ: ಪುಷ್ಯ ಗಂ. 22-38 ಯೋಗ: ಅತಿಗಂಡ ಗಂ. 17-00 ಕರಣ: ವಣಿಜ ಗಂ. 30-20, ಮೀನ ಮಾಸದ 06 ನೇ ದಿನ, ಮಳೆನಕ್ಷತ್ರ: ಉತ್ತರಾಭಾದ್ರ 1.

ರಾಹುಕಾಲ : ಮಧ್ಯಾಹ್ನ 12-00 - 01-30

ಸೂರ್ಯೋದಯ : 06-38 ಸೂರ್ಯಾಸ್ತ : 06-38

ಮುಸ್ಲಿಂ ದಿನಾಂಕ : 09 ರಂಜಾನ್

ದಿನ ವಿಶೇಷ : ಅಮಲಕಿ ಏಕಾದಶಿ, ಅದೃಷ್ಟ ಸಂಖ್ಯೆ : 4, 5

ಮೇಷ : ಪ್ರಸ್ತುತ ಯೋಜನೆಗಳು ಹಾಗೂ ಅವುಗಳ ಬೆಳವಣಿಗೆಗಳ ಬಗ್ಗೆ ಪೋಷಣೆಯ ಬಗ್ಗೆ ಸಂಬಂಧಪಟ್ಟವರಲ್ಲಿ ಚರ್ಚಿಸುವುದು ಉತ್ತಮ. ಜೀವನದಲ್ಲಿ ನಿಮ್ಮದೇ ಆದ ಉತ್ತಮ ನಿಯಮವನ್ನು ರೂಢಿಸಿಕೊಳ್ಳಿ.

ವೃಷಭ: ಕೆಲಸದಲ್ಲಿ ಹಲವು ವಿಘ್ನಗಳು ಕಾಣುವುದರಿಂದ ಬೇಸರಗೊಳ್ಳುವಂತಿಲ್ಲ. ಏಕೆಂದರೆ ಪ್ರಯತ್ನವು ಅಧಿಕವಾಗಿರಬೇಕೆಂಬುವುದು ಅದರ ಸಂಕೇತ. ಮಹಾವಿಷ್ಣುವಿನ ಸ್ಮರಣೆಯಿಂದ ಮಾನಸಿಕವಾಗಿ ಸದೃಢರಾಗುವಿರಿ.

ಮಿಥುನ: ವರ್ತಮಾನದ ಸಮಯವನ್ನು ಚನ್ನಾಗಿ ಅರ್ಥೈಸಿಕೊಂಡು ಮುಂದಿನ ಹೆಜ್ಜೆ ಇಡುವುದು ಉತ್ತಮ. ಗೃಹ ತಾಪತ್ರಯಗಳಿಂದಲೂ ಮುಕ್ತರಾಗಿ ನಿಶ್ಚಿಂತತೆ ತೋರಿ ಬರುತ್ತದೆ. ಸಂತೋಷ ಮತ್ತು ಶಾಂತಿಯು ಇರುತ್ತದೆ.

ಕರ್ಕಾಟಕ: ಕೌಟುಂಬಿಕವಾಗಿ ಒಡಹುಟ್ಟಿದವರ ಜತೆಯಲ್ಲಿ ಇರುವ ಭಿನ್ನಾಭಿಪ್ರಾಯಗಳಿಗೆ ಮೂಲಕಾರಣಗಳು ಏನೆಂಬುವುದು ತಿಳಿಯುವುದು. ಆರನೆಯ ಇಂದ್ರಿಯದ ಸಹಾಯ ಉಪಯುಕ್ತವಾಗಲಿದೆ.

ಸಿಂಹ: ನಿರುದ್ಯೋಗಿಗಳು ಬಂದ ಅವಕಾಶವನ್ನು ಒಪ್ಪಿಕೊಳ್ಳುವುದು ಸದ್ಯದ ಪರಿಸ್ಥಿತಿಗೆ ಉತ್ತಮವಾಗಿ ಕಾಣುತ್ತದೆ. ಕಲಾವಿದರಿಗೆ ಕಿರುತೆರೆಯಲ್ಲಿ ಅಭಿನಯಿಸಲು ಅವಕಾಶಗಳು ಲಭಿಸುವುದು. ಸಾಗಣೆ ಒಪ್ಪಂದ ಏರ್ಪಡಲಿದೆ.

ಕನ್ಯಾ: ಸಮಾಜಸೇವೆಯನ್ನು ಹವ್ಯಾಸವನ್ನಾಗಿ ಬೆಳೆಸಿಕೊಂಡಿರುವ ನಿಮಗೆ ಬಹಳಷ್ಟು ಪ್ರಚಾರದ ಜೊತೆಗೆ ರಾಜಕೀಯ ಸೇರಲು ಆಹ್ವಾನ ದೊರೆಯಬಹುದು. ಷೇರು ವ್ಯವಹಾರಗಳು ಕೂಡಿ ಬರುತ್ತವೆ.

ತುಲಾ : ಸ್ವಂತ ಉದ್ಯೋಗದವರು ಕ್ಷೇತ್ರವನ್ನು ಹೆಚ್ಚು ವಿಸ್ತರಿಸಿಕೊಂಡು ಉನ್ನತ ಮಟ್ಟಕ್ಕೇರಿ ಅಭಿವೃದ್ಧಿ ಹೊಂದುವಿರಿ. ಹೋಟೆಲ್ ಅಥವಾ ಸಮಾರಂಭಗಳಲ್ಲಿ ಊಟ ಮಾಡುವಾಗ ಎಚ್ಚರದಿಂದಿರಿ. ಭೂ ವ್ಯವಹಾರದಲ್ಲಿ ಲಾಭವಿದೆ.

ವೃಶ್ಚಿಕ: ಬಹು ವಿಧದ ಉದ್ಯೋಗಾವಕಾಶಗಳು ಪಾಲಿಗೆ ಬರಲಿವೆ. ಸದುಪಯೋಗಪಡಿಸಿ ಕೊಳ್ಳುವಲ್ಲಿ ಪ್ರಾಮಾಣಿಕವಾಗಿ ತೊಡಗಿಸಿಕೊಳ್ಳಿ. ಧರ್ಮ ಕಾರ್ಯಗಳಲ್ಲಿ ಭಾಗವಹಿಸುವ ಯೋಗ ಸಿಗುವುದು.

ಧನು: ಸಾರಿಗೆ ವೃತ್ತಿಯಲ್ಲಿರುವವರಿಗೆ ಜೀವನೋಪಾಯಕ್ಕೆ ಪರ್ಯಾಯ ಮಾರ್ಗವನ್ನು ಕಂಡುಕೊಳ್ಳುವುದು ಅನಿವಾರ್ಯವಾಗಲಿದೆ. ಮಗನ ಮುಂದಿನ ಓದಿನ ವಿಷಯ ಮನೆಯಲ್ಲಿ ಚರ್ಚೆಗೆ ಬರುವುದು.

ಮಕರ: ದೇಹದಲ್ಲಿ ಕಫ ಅಧಿಕವಾಗಿರುವುದರಿಂದ ಅನಾರೋಗ್ಯ ಉಂಟಾಗಬಹುದು. ದಾಂಪತ್ಯದಲ್ಲಿ ಸಂಶಯದ ವಾತಾವರಣ ಸೃಷ್ಟಿಯಾಗದಂತೆ ಜೀವನವನ್ನು ನಡೆಸಿ. ಕಪ್ಪು ಬಣ್ಣವು ಅದೃಷ್ಟ ಬದಲಾಯಿಸಲಿದೆ.

ಕುಂಭ : ಸಮಸ್ಯೆಯಲ್ಲಿ ಸಿಲುಕಿರುವ ನಿಮಗೆ, ಎಂಥಾ ಪರಿಸ್ಥಿತಿಯಿಂದಲೂ ಹೊರಬರುವ ಸಾಮರ್ಥ್ಯ ನಿಮ್ಮಲ್ಲಿದೆ ಎಂಬುವುದು ನೆನಪಿರಲಿ. ವಾಸಸ್ಥಳದ ಬದಲಾವಣೆ ಮಾಡಲು ಚರ್ಚೆ ನಡೆಸುವಿರಿ.

ಮೀನ: ಮಕ್ಕಳು ವಿದ್ಯಾಭ್ಯಾಸದಲ್ಲಿ ಬಹಳ ಉತ್ಸಾಹವನ್ನು ತೋರಿ ಮುನ್ನಡೆಯುವುದನ್ನು ನೋಡಬಹುದು. ತಪ್ಪುಗಳು ಪುನರಾವರ್ತನೆ ಆಗದಂತೆ ಎಚ್ಚರವಹಿಸಿ. ಕಾಲು ನೋವಿನ ಸಮಸ್ಯೆ ಸ್ವಲ್ಪ ಜಾಸ್ತಿಯೇ ಕಾಡಬಹುದು.

ಪದಬಂಧ 5626


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಲೋಭ ನಡುವೆ ಇದ್ದಾಗ ಮೂಡಿದ ಆಸೆ (4)
3.ವಿಷ್ಣುವನ್ನು ಹೀಗೂ ಕರೆವರು (4)
5.ಮುಳ್ಳುಗಳ ನಡುವೆ ಅರಳುವ ಸುಂದರ ಹೂ (3)
7.ಸಜಾತಿಯಲ್ಲೇ ಜೈಲುವಾಸ! (2)
9.ಪದ್ಯದ ಸಾಲು (3)
12.ವಾರಕ್ಕೆ ಮೊದಲೇ ಸಿಕ್ಕಿದ ಒಡೆತನ! (3)
13.ಮಿತಿಗೆ ಒಳಪಟ್ಟಿದ್ದು ಮಿಡಿತದಲ್ಲಿದೆ! (2)
15.ಶುಕವನ್ನು ನೋಡುತ್ತಿರುವ ನಾಯಿ (3)
17.ಕಡ ಕೇಳಿ ಪಡೆದಿರುವ ಭರಣಿ (4)
18.ತಂದೆಯ ತಂದೆಯಿವನು (4)

ಮೇಲಿಂದ ಕೆಳಕ್ಕೆ

1.ಪ್ರಯಾಸದಿಂದ ಕೈಗೊಂಡಿರುವ ಸಂಚಾರ (3)
2.ನಡುಗುವುದನ್ನು ನೋಡಿದ್ದಕ್ಕೇ ಈ ಮಂದಹಾಸ (2)
3.ಬಿಂಕದಿಂದ ತಯಾರಿಸಿಕೊಟ್ಟ ಲೋಹದಎಳೆ (2)
4.ತಾರುಣ್ಯವನ್ನು ಹೊಂದಿದವನು (3)
6.ಅತಿಯಾದ ಆಸೆ (3)
8.ಮತ್ತೊಬ್ಬನ ಸಾಲಕ್ಕೆ ಹೊಣೆ ನಿಂತ ವ್ಯಕ್ತಿ (5)
10.ಮಾಘ ಶುದ್ಧ ಸಪ್ತಮಿಯನ್ನು ಹೀಗೂ ಹೇಳುವರು (5)
11.ಜನ ಮಾಡುತ್ತಿರುವ ಊಟ (3)
12.ಈತ ವಾದ್ಯವನ್ನು ನುಡಿಸುವವನು (3)
14.ಪ್ರಕಾರ ಈ ವಿಧವಾಗಿ ಬಂದಿದೆ (3)
15.ಶುನಕದ ಹತ್ತಿರವಿರುವ ಗಿಳಿ (2)
16.ಪಿನಾಕದ ಹತ್ತಿರ ಮಂಗ ಕಾಣುತ್ತಿದೆಯಲ್ಲಾ? (2)



5625ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಚರಕ 3.ಪಗಾರ
5.ಖರೆ 6.ಟಗರು
7.ನೆಪ 9.ಖಂಡುಗ
10.ಹೆಳವ 11.ತಹ
13.ಕರ್ತವ್ಯ 15.ಮನೆ
16.ಟಿಸಿಲು 17.ನರ್ತನ

ಮೇಲಿಂದ ಕೆಳಕ್ಕೆ:
1.ಚಹರೆ 2.ಕರಟ
3.ಪನ್ನೀರು 4.ರವಾನೆ
5.ಖಡಾಖಂಡಿತ 8.ಪರಿವರ್ತನೆ
12.ಹತೋಟಿ
13.ಕನಲು 14.ವ್ಯಸನ
15.ಮರ್ದನ

ಸುಡೊಕು 6011

3		2	1		4		6	7
							3	2
7			6		2	5		
2					3			5
				4		2	9	
			9					1
	4	1	2				8	
9				7	8		5	
	6			5		4	2	9


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6010 ಸುಡೊಕು

5	4	6	1	7	9	3	2	8
3	8	9	2	6	4	5	1	7
7	2	1	8	5	3	4	6	9
8	9	3	5	2	1	6	7	4
1	5	2	6	4	7	8	9	3
4	6	7	3	9	8	1	5	2
9	3	5	7	8	6	2	4	1
2	1	4	9	3	5	7	8	6
6	7	8	4	1	2	9	3	5

ಷೇರುಪೇಟೆ ವಹಿವಾಟು 736



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,055
ಇಂದಿನ ಅಂತ್ಯ	21,817
▼	238
ದಿನದ ಕನಿಷ್ಠ	21,793

ವಿನಿಮಯ ದರ

$ ಡಾಲರ್	83.06
£ ಪೌಂಡ್	105.21
€ ಯುರೊ	89.97
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು 100ಕ್ಕೆ	₹470
12 ಕ್ಕೆ	₹63
ಮೈಸೂರು 100ಕ್ಕೆ	₹472

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ದಿನದ ದರ)



ಶೇಂಗಾ (ರಿಫೈನ್ಡ್)	₹1510 (1510)
ಸೋಯಾ (ರಿಫೈನ್ಡ್)	₹1010 (1030)
ಸೂರ್ಯಕಾಂತಿ (ರಿಫೈನ್ಡ್)	₹985 (990)
ಪಾಮೋಲಿನ್	₹958 (967)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)



ಕೆ.ಆರ್.ಪೇಟೆ	₹7800-7800
ಪುತ್ತೂರು	₹5500-8600

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹183
ಆರ್‌ಎಸ್‌ಎಸ್-5	₹173
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹163

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹312-453
ದ್ವಿತಳಿ (ಬಿ.ವಿ)	₹275-546

22ಕ್ಕೆ ಎಚ್‌–1ಬಿ ವೀಸಾ ನೋಂದಣಿ ಮುಕ್ತಾಯ

ವಾಷಿಂಗ್ಟನ್ (ಪಿಟಿಐ): ಅಮೆರಿಕ ಅಧ್ಯಕ್ಷ ಜೋ ಬೈಡನ್ ಸರ್ಕಾರವು 2025ನೇ ಆರ್ಥಿಕ ಸಾಲಿನಡಿ ನೀಡಲು ಉದ್ದೇಶಿಸಿರುವ ಎಚ್‌–1ಬಿ ವೀಸಾ ನೋಂದಣಿ ಪ್ರಕ್ರಿಯೆಯು ಮಾರ್ಚ್ 22ರಂದು ಮುಕ್ತಾಯಗೊಳ್ಳಲಿದೆ.

ಎಚ್‌–1ಬಿ ವಲಸೆಯೇತರ ವೀಸಾ ಆಗಿದ್ದು, ಅಮೆರಿಕದ ಕಂಪನಿಗಳು ವಿದೇಶಿ ಉದ್ಯೋಗಿಗಳನ್ನು ನೇಮಿಸಿಕೊಳ್ಳಲು ಅವಕಾಶ ಕಲ್ಪಿಸುತ್ತದೆ. ತಾಂತ್ರಿಕ ನೈಪುಣ್ಯಕ್ಕೆ ಅನುಗುಣವಾಗಿ ನೇಮಕಾತಿ ನಡೆಯುತ್ತದೆ. ಈ ವೀಸಾ ಅಡಿಯಲ್ಲಿ ಪ್ರತಿವರ್ಷ ಭಾರತ ಹಾಗೂ ಚೀನಾದಿಂದ ಸಾವಿರಾರು ಉದ್ಯೋಗಿಗಳನ್ನು ನೇಮಕ ಮಾಡಿಕೊಳ್ಳುತ್ತವೆ. ವಾರ್ಷಿಕವಾಗಿ ಈ ವೀಸಾ ಹಂಚಿಕೆಗೆ ಸರ್ಕಾರವು ಗುರಿ ನಿಗದಿಪಡಿಸುತ್ತದೆ. ಗುರಿ ಮೀರಿದ ಬಳಿಕ ಸ್ನಾತಕೋತ್ತರ ಪದವಿ ಅಧ್ಯಯನಕ್ಕೆ ಹೆಚ್ಚುವರಿ ವೀಸಾ ನೀಡಲಾಗುತ್ತದೆ. ಇದರ ಆನ್‌ಲೈನ್ ನೋಂದಣಿ ಬಗ್ಗೆ ಶೀಘ್ರವೇ ಮಾಹಿತಿ ನೀಡಲಾಗುವುದು ಎಂದು ಅಮೆರಿಕದ ಪೌರತ್ವ ಮತ್ತು ವಲಸೆ ಸೇವೆಗಳ (ಯುಎಸ್‌ಸಿಐಎಸ್) ಇಲಾಖೆ ತಿಳಿಸಿದೆ.

ಕರಗಿದ ₹4.86 ಲಕ್ಷ ಕೋಟಿ ಸಂಪತ್ತು

ಸೆನ್ಸೆಕ್ಸ್ 736 ಅಂಶ ಇಳಿಕೆ



ನವದೆಹಲಿ (ಪಿಟಿಐ): ಎಂಟು ವರ್ಷಗಳ ಬಳಿಕ ಬ್ಯಾಂಕ್ ಆಫ್ ಜಪಾನ್ ಪ್ರಕಟಿಸಿದ ಬಡ್ಡಿದರ ಏರಿಕೆ ನೀತಿಯಿಂದಾಗಿ ಷೇರುಪೇಟೆಯಲ್ಲಿ ಮಂಗಳವಾರ ನಕಾರಾತ್ಮಕ ವಹಿವಾಟು ನಡೆಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 736 ಅಂಶಗಳಷ್ಟು ಕುಸಿತ ಕಂಡಿತು. ವಹಿವಾಟಿನಲ್ಲಿ ಹೂಡಿಕೆದಾರರ ಒಟ್ಟು ₹4.86 ಲಕ್ಷ ಕೋಟಿ ಸಂಪತ್ತು ಕರಗಿಹೋಯಿತು.

ಸೆನ್ಸೆಕ್ಸ್ 72,012ಕ್ಕೆ ಸ್ಥಿರಗೊಂಡಿತು. ದಿನದ ವಹಿವಾಟಿನಲ್ಲಿ 71,933 ಅಂಶಗಳಿಗೆ ಮುಟ್ಟಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 238 ಅಂಶ ಇಳಿಕೆ ಕಂಡು, 21,817ಕ್ಕೆ ಕೊನೆಗೊಂಡಿತು.

ಇಂಡಸ್‌ಇಂಡ್ ಬ್ಯಾಂಕ್, ವಿಪ್ರೊ, ನೆಸ್ಲೆ, ಎಚ್‌ಸಿಎಲ್ ಟೆಕ್ನಾಲಜೀಸ್, ಇನ್ಫೊಸಿಸ್, ಪವರ್‌ಗ್ರಿಡ್, ಐಟಿಸಿ, ಟೆಕ್ ಮಹೀಂದ್ರ, ಟಾಟಾ ಮೋಟರ್ಸ್ ಮತ್ತು ಅಲ್ಟ್ರಾ ಟೆಕ್ ಸಿಮೆಂಟ್‌ನ ಷೇರಿನ ಮೌಲ್ಯ ಇಳಿಕೆ ಆಗಿದೆ.

ಬಜಾಜ್ ಫೈನಾನ್ಸ್, ಕೋಟಕ್ ಮಹೀಂದ್ರ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್, ಬಜಾಜ್ ಫಿನ್‌ಸರ್ವ್, ಟೈಟನ್ ಮತ್ತು ಭಾರ್ತಿ ಏರ್‌ಟೆಲ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಬಿಎಸ್‌ಇ ಮಿಡ್‌ಕ್ಯಾಪ್ ಮತ್ತು ಸ್ಮಾಲ್‌ಕ್ಯಾಪ್ ಸೂಚ್ಯಂಕಗಳು ಕ್ರಮವಾಗಿ ಶೇ 1.36 ಮತ್ತು ಶೇ 1.04ರಷ್ಟು ಇಳಿಕೆಯಾಗಿವೆ.

ಎಲ್‌ಐಸಿ ಷೇರು ಇಳಿಕೆ: ಎಲ್‌ಐಸಿ ಷೇರಿನ ಮೌಲ್ಯ ಶೇ 3ರಷ್ಟು ಕುಸಿದಿದೆ.

ಬಿಎಸ್‌ಇಯಲ್ಲಿ ಷೇರಿನ ಮೌಲ್ಯ ಶೇ 2.77ರಷ್ಟು ಮತ್ತು ಎನ್‌ಎಸ್‌ಇಯಲ್ಲಿ ಶೇ 2.71 ಕಡಿಮೆ ಆಗಿದೆ. ಪ್ರತಿ ಷೇರಿನ ಬೆಲೆ ಕ್ರಮವಾಗಿ ₹879.50 ಮತ್ತು ₹879.85ಕ್ಕೆ ಮುಟ್ಟಿದೆ. ಬಿಎಸ್‌ಇಯಲ್ಲಿ ಮೂರು ದಿನಗಳ ವಹಿವಾಟಿನಲ್ಲಿ ಶೇ 8.27ರಷ್ಟು ಷೇರಿನ ಮೌಲ್ಯ ಇಳಿದಿದೆ.

ಐಟಿಸಿ ಷೇರಿನ ಮೌಲ್ಯವೂ ಇಳಿಕೆ: ಐಟಿಸಿ ಷೇರಿನ ಮೌಲ್ಯವು ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಕ್ರಮವಾಗಿ ಶೇ1.89 ಮತ್ತು ಶೇ1.84ರಷ್ಟು ಇಳಿದಿದೆ. ಷೇರಿನ ಬೆಲೆ ಕ್ರಮವಾಗಿ ₹409.50 ಮತ್ತು ₹409.75ಕ್ಕೆ ಮುಟ್ಟಿದೆ.

ಟಿಸಿಎಸ್‌ಗೆ ₹45,497 ಕೋಟಿ ನಷ್ಟ

ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್‌ನ (ಟಿಸಿಎಸ್) 2.3 ಕೋಟಿ (ಶೇ 0.65ರಷ್ಟು) ಈಕ್ವಿಟಿ ಷೇರುಗಳ ಮಾರಾಟಕ್ಕೆ ಪ್ರವರ್ತಕ ಕಂಪನಿಯಾದ ಟಾಟಾ ಸನ್ಸ್ ಮುಂದಾಗಿರುವ ಬೆನ್ನಲ್ಲೇ ಕಂಪನಿಯ ಷೇರಿನ ಮೌಲ್ಯ ಶೇ 4ಕ್ಕಿಂತಲೂ ಹೆಚ್ಚು ಇಳಿಕೆಯಾಗಿದೆ.

ಬಿಎಸ್‌ಇಯಲ್ಲಿ ಶೇ 4.03 ಮತ್ತು ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯ ಶೇ 4.37ರಷ್ಟು ಕುಸಿದಿದೆ. ಪ್ರತಿ ಷೇರಿನ ಬೆಲೆ ಕ್ರಮವಾಗಿ ₹3,977.55 ಮತ್ತು ₹3,977ಕ್ಕೆ ಮುಟ್ಟಿದೆ.

ಕಂಪನಿಯ ಮಾರುಕಟ್ಟೆ ಮೌಲ್ಯ ಒಂದೇ ದಿನ ₹45,497 ಕೋಟಿ ಕರಗಿದೆ. ಕಂಪನಿಯ ಒಟ್ಟು ಎಂ–ಕ್ಯಾಪ್ ₹14.54 ಲಕ್ಷ ಕೋಟಿ ಆಗಿದೆ.

ಬ್ಲಾಕ್‌ಡೀಲ್‌ನಲ್ಲಿ ಟಿಸಿಎಸ್‌ನ ಷೇರುಗಳನ್ನು ಮಾರಾಟ ಮಾಡಲು ಟಾಟಾ ಸನ್ಸ್ ಮುಂದಾಗಿದ್ದು, ಪ್ರತಿ ಷೇರಿಗೆ ₹4,001 ಬೆಲೆ ನಿಗದಿಪಡಿಸಿದೆ. ಅಂದರೆ ಪ್ರತಿ ಷೇರಿಗೆ ಶೇ 3.65ರಷ್ಟು ರಿಯಾಯಿತಿ ಪ್ರಕಟಿಸಿದೆ. ಈ ಷೇರುಗಳ ಮಾರಾಟದ ಒಟ್ಟು ಮೊತ್ತ ₹9 ಸಾವಿರ ಕೋಟಿ ಆಗಿದೆ ಎಂದು ಮೂಲಗಳು ತಿಳಿಸಿವೆ.

ಜಪಾನ್: ಬಡ್ಡಿದರ ಏರಿಕೆ

ಟೋಕಿಯೊ (ಪಿಟಿಐ): ಜಪಾನ್‌ನಲ್ಲಿ ಎಂಟು ವರ್ಷಗಳ ಕಾಲ ಕಾಯ್ದುಕೊಂಡಿದ್ದ ಋಣಾತ್ಮಕ ಬಡ್ಡಿದರ ನೀತಿಯು ಮುಕ್ತಾಯಗೊಂಡಿದ್ದು, ಶೇ 0.1ರಷ್ಟು ಬಡ್ಡಿದರ ಹೆಚ್ಚಿಸಲಾಗಿದೆ ಎಂದು ಬ್ಯಾಂಕ್ ಆಫ್ ಜಪಾನ್ ಮಂಗಳವಾರ ತಿಳಿಸಿದೆ.

ಹಾಗಾಗಿ, 17 ವರ್ಷಗಳ ಬಳಿಕ ಸಾಮಾನ್ಯ ಠೇವಣಿ ಮೇಲಿನ ಬಡ್ಡಿದರವನ್ನು ಹೆಚ್ಚಿಸಲು ಅಲ್ಲಿನ ಬ್ಯಾಂಕ್‌ಗಳು ಮುಂದಾಗಿವೆ.

ಋಣಾತ್ಮಕ ಬಡ್ಡಿದರ ನೀತಿ ಪಾಲಿಸುತ್ತಿರುವ ವಿಶ್ವದ ಏಕೈಕ ದೇಶ ಎಂಬ ಹೆಗ್ಗಳಿಕೆಗೆ ಜಪಾನ್ ಪಾತ್ರವಾಗಿತ್ತು. ಶೇ –0.1ರಷ್ಟು ಬಡ್ಡಿದರ ಕಾಯ್ದುಕೊಂಡಿತ್ತು. ಸದ್ಯ ಕೇಂದ್ರೀಯ ಬ್ಯಾಂಕ್‌ನಲ್ಲಿ ಇಡುವ ಠೇವಣಿಗೆ ಶೇ 0.1ರಷ್ಟು ಬಡ್ಡಿದರ ಹೆಚ್ಚಿಸಲಾಗಿದೆ.

ಜಪಾನ್ ಆರ್ಥಿಕ ಹಿಂಜರಿಕೆಗೆ ಸಿಲುಕಿದೆ. ಹಣದುಬ್ಬರವನ್ನು ನಿಯಂತ್ರಿಸುವುದು ಅಲ್ಲಿನ ಸರ್ಕಾರಕ್ಕೆ ಸವಾಲಾಗಿ ಪರಿಣಮಿಸಿದೆ. ಹಾಗಾಗಿ, ಬಡ್ಡಿದರ ಹೆಚ್ಚಳಕ್ಕೆ ಮುಂದಾಗಿದೆ ಎಂದು ಹೇಳಲಾಗಿದೆ.

ಕೇಂದ್ರೀಯ ಬ್ಯಾಂಕ್‌ನ ಈ ಘೋಷಣೆ ಬೆನ್ನಲ್ಲೇ ದೇಶದ ಪ್ರಮುಖ ಹಣಕಾಸು ಸಂಸ್ಥೆಗಳಾದ ಎಂಯುಎಫ್‌ಜಿ ಬ್ಯಾಂಕ್ ಹಾಗೂ ಸುಮಿಟೊಮೊ ಮಿಟ್ಸುಯಿ ಬ್ಯಾಂಕಿಂಗ್ ಕಾರ್ಪೊರೇಷನ್, ಸಾಮಾನ್ಯ ಠೇವಣಿಗಳ ಮೇಲಿನ ಬಡ್ಡಿದರವನ್ನು ಶೇ0.001ರಿಂದ ಶೇ 0.02ಕ್ಕೆ ಹೆಚ್ಚಿಸಲು ನಿರ್ಧರಿಸಿವೆ.

2007ರ ಬಳಿಕ ಈ ಎರಡು ಬ್ಯಾಂಕ್‌ಗಳು ಮೊದಲ ಬಾರಿಗೆ ಬಡ್ಡಿದರ ಹೆಚ್ಚಿಸಲಿವೆ. ಅಲ್ಲದೆ, ಮಿಜುಹೊ ಹಾಗೂ ರೆಸೋನಾ ಹೋಲ್ಡಿಂಗ್ಸ್ ಬ್ಯಾಂಕ್ ಕೂಡ ಬಡ್ಡಿದರ ಹೆಚ್ಚಿಸುವ ಸುಳಿವು ನೀಡಿವೆ.

‘ಋಣಾತ್ಮಕ ಬಡ್ಡಿದರ ನೀತಿಯು ಮುಕ್ತಾಯಗೊಂಡಿರುವುದು ಬ್ಯಾಂಕಿಂಗ್ ವಲಯದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಹೊಸ ನೀತಿಯು ಬ್ಯಾಂಕ್‌ಗಳ ನಿವ್ವಳ ಬಡ್ಡಿ ಆದಾಯ ಹೆಚ್ಚಳಕ್ಕೆ ಪೂರಕವಾಗಿದೆ’ ಎಂದು ಮಿಜುಹೊ ಹಣಕಾಸು ಸಂಸ್ಥೆಯ ಅಧ್ಯಕ್ಷ ಮತ್ತು ಸಿಇಒ ಮಸಾಹಿರೋ ಕಿಹರಾ ಹೇಳಿದ್ದಾರೆ.

ಆಹಾರ ಪದಾರ್ಥಗಳ ದರ ಏರಿಕೆ: ಹಣದುಬ್ಬರ ಇಳಿಕೆಗೆ ಸವಾಲು

ಮುಂಬೈ (ಪಿಟಿಐ): ದೇಶದಲ್ಲಿ ಆಹಾರ ಪದಾರ್ಥಗಳ ಬೆಲೆ ಹೆಚ್ಚಳವಾಗುತ್ತಿದೆ. ಹಾಗಾಗಿ, ಚಿಲ್ಲರೆ ಹಣದುಬ್ಬರವನ್ನು ಶೇ 4ರ ಮಿತಿಯಲ್ಲಿ ಕಾಯ್ದುಕೊಳ್ಳುವುದು ಸವಾಲಾಗಿ ಪರಿಣಮಿಸಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾಸಿಕ ವರದಿ ಹೇಳಿದೆ. ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಚಿಲ್ಲರೆ ಹಣದುಬ್ಬರವು ಡಿಸೆಂಬರ್‌ನಿಂದ ಇಳಿಕೆಯಾಗುತ್ತಿದೆ. ಫೆಬ್ರುವರಿಯಲ್ಲಿ ನಾಲ್ಕು ತಿಂಗಳ ಗರಿಷ್ಠ ಮಟ್ಟವಾದ ಶೇ 5.09ಕ್ಕೆ ಇಳಿಕೆಯಾಗಿದೆ.

‘ಹಣದುಬ್ಬರವು ನಿಧಾನಗತಿಯಲ್ಲಿ ಇಳಿಕೆಯ ಹಾದಿಯಲ್ಲಿ ಸಾಗುತ್ತಿದೆ. ಆದರೆ, ಆಹಾರ ಪದಾರ್ಥಗಳ ಧಾರಣೆಯಲ್ಲಿ ಏರಿಕೆಯಾಗುತ್ತಿದೆ. ಇದು ಆರ್‌ಬಿಐನ ನಿಗದಿತ ಗುರಿ ಸಾಧನೆಗೆ ಅಡ್ಡಿಯಾಗಿದೆ’ ಎಂದು ‘ಭಾರತದ ಆರ್ಥಿಕತೆ’ ಶೀರ್ಷಿಕೆಯಡಿ ಮಂಗಳವಾರ ಬಿಡುಗಡೆಯಾಗಿರುವ ವರದಿ ತಿಳಿಸಿದೆ.

ಕೆಲವು ಪ್ರಮುಖ ದೇಶಗಳ ಆರ್ಥಿಕತೆಯ ಚೇತರಿಕೆ ಮಂದಗತಿಯಲ್ಲಿದೆ. ಇದು ಜಾಗತಿಕ ಆರ್ಥಿಕತೆ ಮೇಲೆ ಪರಿಣಾಮ ಬೀರಿದೆ ಎಂದು ಹೇಳಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಅಶೋಕ್ ಕುಮಾರ್, ದಾವಣಗೆರೆ

• **ಪ್ರಶ್ನೆ:** ನಾನು ಡಿಮ್ಯಾಟ್ ಖಾತೆ ಹೊಂದಿದ್ದು, ಷೇರು ವ್ಯವಹಾರ ಮಾಡುತ್ತಿದ್ದೇನೆ. ನಾನು ಮ್ಯೂಚುವಲ್ ಫಂಡ್ ಹೂಡಿಕೆಯ ಎಸ್‌ಐಪಿ ವಿಭಾಗದಲ್ಲಿ ತಿಂಗಳಿಗೆ ₹20 ಸಾವಿರ ಹೂಡಿಕೆ ಮಾಡುತ್ತಿದ್ದೇನೆ. ನನ್ನ ಖಾತೆಯಲ್ಲಿ ವ್ಯವಹಾರ ಮಾಡುವಾಗ ಅನೇಕ ಷೇರುಗಳ ಎಸ್‌ಐಪಿಯಲ್ಲಿ ಹೂಡಿಕೆ ಮಾಡುವ ಬಗ್ಗೆ ಕೋರಿಕೆಗಳು ನನ್ನ ಕಂಪ್ಯೂಟರ್ ಮುಂದೆ ಪಾಪ್ ಅಪ್ ಆಗುತ್ತವೆ. ಆದರೆ, ಸಾಮಾನ್ಯವಾಗಿ ನಾನು ಸ್ವತಃ ಅಂದಿನ ದರ ನೋಡಿ, ಷೇರು ಕಂಪನಿಗಳ ಮಾಹಿತಿ, ಮಾರುಕಟ್ಟೆ ಮಾಹಿತಿ ಇತ್ಯಾದಿ ವಾರ್ತೆಗಳನ್ನು ನೋಡಿ ಹೂಡಿಕೆ ಮಾಡುತ್ತಿದ್ದೇನೆ. ಈ ಮಾಹಿತಿ ನೋಡಿಯೂ ಅಂತಹ ಉತ್ತಮ ಮಟ್ಟದ ಲಾಭ ಆಗಲಿಲ್ಲ. ಇದಕ್ಕೆ ಬದಲಾಗಿ ನಾನು ಷೇರುಗಳ ಎಸ್‌ಐಪಿಯಲ್ಲಿ ಹೂಡಿಕೆ ಮಾಡಿದರೆ ಏನಾದರೂ ಹೆಚ್ಚಿನ ಲಾಭ ಇದೆಯೇ? ಇದನ್ನು ಮುಂದೆ ಹೇಗೆ ನಿಭಾಯಿಸಬಹುದು.

ಉತ್ತರ: ನೀವು ಈಗಾಗಲೇ ಮ್ಯೂಚುವಲ್ ಫಂಡಿನ ಎಸ್‌ಐಪಿ ವಿಭಾಗದಲ್ಲಿ ಹೂಡಿಕೆ ಮಾಡುತ್ತಿದ್ದೀರಿ. ಆ ಅನುಭವ ನಿಮಗೆ ಇದ್ದೇ ಇದೆ. ಅದೇ ರೀತಿ ಷೇರುಗಳಲ್ಲೂ ಹೂಡಿಕೆ ಸಾಧ್ಯವೇ ಎನ್ನುವ ವಿಚಾರದ ಬಗ್ಗೆ ಇನ್ನಷ್ಟು ಮಾಹಿತಿ ಕೇಳಿದ್ದೀರಿ. ಮ್ಯೂಚುವಲ್ ಫಂಡ್‌ಗಳಂತೆ ಷೇರುಗಳಲ್ಲೂ ನೀವು ಎಸ್‌ಐಪಿ ಮಾಡುವ ಮೂಲಕ ಹೂಡಿಕೆ ಮಾಡಬಹುದು. ಈ ಬಗ್ಗೆ ನೀವು ಯಾವ ಸಮಯದ ಪರಿಧಿ ಹೊಂದಿ ಹೂಡಿಕೆ ಮಾಡುತ್ತೀರಿ ಹಾಗೂ ಯಾವ ವಿಭಾಗದ ಷೇರುಗಳಲ್ಲಿ ಹೂಡಿಕೆ ಮಾಡುತ್ತೀರಿ ಎಂಬ ಮಾಹಿತಿಯನ್ನು ಮೊದಲೇ ಗೊತ್ತು ಮಾಡಿಕೊಳ್ಳಿ.

ಷೇರುಗಳ ಖರೀದಿ ನಿಶ್ಚಿತ ಆವರ್ತಕ್ಕೆ ಸರಿಯಾಗಿ ಮರುಕಳಿಸುವ ಕಾರಣ ಮಾರುಕಟ್ಟೆಯ ಏರಿಳಿತಕ್ಕೆ ಸಂಬಂಧಿಸಿ ಷೇರುಗಳ ಪ್ರತಿ ಖರೀದಿಯ ಮೊತ್ತವೂ ಬದಲಾಗುತ್ತಿರುತ್ತದೆ. ಹೀಗಾಗಿ, ಒಮ್ಮೆಗೆ ಮಾರುಕಟ್ಟೆ ಮೇಲಕ್ಕೇರಿದಾಗ ಅಥವಾ ಇಳಿದಾಗ ಯಾವುದೇ ರೀತಿಯ ಮಹತ್ತರ ಪರಿಣಾಮ ಬೀರುವುದಿಲ್ಲ. ಕಾರಣ ನಿಮ್ಮ ಖರೀದಿಯ ಬೆಲೆ ಸರಾಸರಿ ಆಧಾರದಲ್ಲಿ ಗಣನೆಗೆ ಬರುತ್ತದೆ. ಇಷ್ಟೇ ಅಲ್ಲದೆ ಮಾರುಕಟ್ಟೆಯ ಗತಿಯನ್ನು ಪ್ರತಿ ಆವರ್ತಕ್ಕೊಮ್ಮೆ ಅವಲೋಕಿಸಿ ಉತ್ತಮ ಷೇರುಗಳಲ್ಲಿ ಹೆಚ್ಚುವರಿ ಹೂಡಿಕೆ ಮಾಡುವ ಅವಕಾಶವೂ ಇದೆ.

ಇನ್ನೂ ಒಂದು ವಿವರ ತಿಳಿದಿರಲಿ. ನಿಮ್ಮ ಲಾಭ-ನಷ್ಟ ಸಹಜವಾಗಿ ನೀವು ಖರೀದಿಸುವ ಷೇರುಗಳ ಕಂಪನಿಯ ಗುಣಮಟ್ಟ ಹಾಗೂ ಆಯಾ ಸಮಯದ ಮಾರುಕಟ್ಟೆ ಪರಿಸ್ಥಿತಿಯನ್ನು ಹೊಂದಿಕೊಂಡಿರುತ್ತದೆ. ಆದರೆ, ನಿಮ್ಮ ಬ್ಯಾಂಕ್ ಠೇವಣಿಗಿಂತ ಉತ್ತಮ ಲಾಭವನ್ನು ಒಟ್ಟಾರೆ ಹೂಡಿಕೆಯ ಅವಧಿಯಲ್ಲಿ ಸರಾಸರಿಯಾಗಿ ಗಳಿಸುತ್ತಿದ್ದೀರಾ ಎಂಬ ಬಗ್ಗೆ ಸದಾ ಗಮನವಿರಲಿ. ಈ ಮಾನದಂಡವನ್ನು ಕೆಲವು ತಿಂಗಳು ಪರಿಣಾಮಕಾರಿಯಾಗಿ ನಿಮ್ಮ ಹೂಡಿಕೆ ನಿರ್ಧಾರದಲ್ಲಿ ಅಳವಡಿಸಿಕೊಂಡು ಪರಿಣಾಮವನ್ನು ನೋಡಿ.

ವೀರೇಂದ್ರ ಕಾಮತ್, ಬೆಂಗಳೂರು

• **ಪ್ರಶ್ನೆ:** ನಾನು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುತ್ತಿದ್ದು ಕಳೆದ ವರ್ಷ ಈಕ್ವಿಟಿ ವಿಭಾಗದಲ್ಲಿ ಹೂಡಿಕೆ ಮಾಡಿದ್ದೆ. ಮನೆ ಕಟ್ಟುವ ನಿಮಿತ್ತ ಹಣದ ಅಗತ್ಯವಿದ್ದ ಕಾರಣ ನಷ್ಟದಲ್ಲೇ ಕೆಲವು ಫಂಡ್ ಮಾರಾಟ ಮಾಡಿದೆ. ಈ ಮೊತ್ತ ಸುಮಾರು ₹50 ಸಾವಿರದ ಅಂದಾಜು ಆಗಿರುತ್ತದೆ. ಆದರೆ, ಇದನ್ನು ನಾನು ಆದಾಯ ತೆರಿಗೆ ರಿಟರ್ನ್ಸ್‌ನಲ್ಲಿ ನಷ್ಟ ಎಂದು ಘೋಷಿಸಿರಲಿಲ್ಲ. ಈ ವರ್ಷ ನಾನು ಇದೇ ಮಾರ್ಚ್ ತಿಂಗಳೊಳಗೆ ಸುಮಾರು ₹25 ಲಕ್ಷ ಹಿಂಪಡೆಯುವವನಿದ್ದೇನೆ. ಇದರಲ್ಲಿ ಸುಮಾರು ₹3 ಲಕ್ಷದಷ್ಟು ಲಾಭ ಪ್ರಸ್ತುತ ಮಾರುಕಟ್ಟೆ ದರದಂತೆ ಕಂಡು ಬರುತ್ತಿದೆ.

ನನ್ನ ಪ್ರಶ್ನೆ ಏನೆಂದರೆ, ಕಳೆದ ವರ್ಷ ಮಾಡಿರುವ ನಷ್ಟವನ್ನು ಈ ಬಾರಿಯ ಲಾಭದೊಡನೆ ಸರಿದೂಗಿಸಿ ಉಳಿದ ಮೊತ್ತದ ಮೇಲೆ ತೆರಿಗೆ ಕಟ್ಟುವ ಅವಕಾಶ ಇದೆಯೇ? ಉಳಿದ ಲಾಭಕ್ಕೆ ತೆರಿಗೆ ಯಾವ ದರದಲ್ಲಿ ಅನ್ವಯವಾಗುತ್ತದೆ. ನನ್ನಲ್ಲಿ ಈಕ್ವಿಟಿ ಹೂಡಿಕೆಯಲ್ಲದೆ, ಡೆಬ್ಟ್ ಫಂಡ್ ಹಾಗೂ ಅಗ್ರೆಸ್ಸಿವ್ ಹೈಬ್ರೀಡ್ ಫಂಡ್‌ಗಳಲ್ಲಿಯೂ ಹೂಡಿಕೆ ಇದೆ. ಇದಕ್ಕೆ ಪ್ರತ್ಯೇಕ ತೆರಿಗೆ ದರ ಎಂಬುದಾಗಿ ಕೇಳಿದ್ದೇನೆ. ಈ ಬಗ್ಗೆ ಕೂಡ ಮಾಹಿತಿ ತಿಳಿಸಿ.

ಉತ್ತರ: ನೀವು ಪ್ರಶ್ನೆಯಲ್ಲಿ ತಿಳಿಸಿರುವಂತೆ ಕಳೆದ ವರ್ಷದ ತೆರಿಗೆ ವಿವರವನ್ನು ಈಗಾಗಲೇ ಸಲ್ಲಿಸಿದ್ದೀರಿ. ಈ ಅವಧಿಯಲ್ಲಿ ನೀವು ಹಿಂದಿನ ವರ್ಷ ಹೊಂದಿದ್ದ ₹50 ಸಾವಿರ ನಷ್ಟದ ಮೊತ್ತವನ್ನು ತೆರಿಗೆ ರಿಟರ್ನ್ಸ್ ಸಲ್ಲಿಸುವಾಗ ಯಾವುದೇ ವಿವರ ನೀಡಿಲ್ಲ. ಈಗ ಹಳೆಯ ರಿಟರ್ನ್ಸ್ ನವೀಕರಿಸುವ ಕಾಲಾವಕಾಶವೂ ಕಳೆದ ಡಿಸೆಂಬರ್ ತಿಂಗಳ ಕೊನೆಗೆ ಮುಗಿದಿರುತ್ತದೆ. ಹೀಗಾಗಿ ಈಗ ಆ ನಷ್ಟವನ್ನು ಏನೂ ಮಾಡಲಾಗದು.

ಪ್ರಸ್ತುತ ವರ್ಷ ನೀವು ಮಾರಾಟ ಮಾಡುವ ಮ್ಯೂಚುವಲ್ ಫಂಡ್ ಲಾಭದಲ್ಲಿದ್ದು ಈ ಸಂದರ್ಭದಲ್ಲಿ ತೆರಿಗೆ ಅನ್ವಯಿಸುತ್ತದೆ. ಒಂದು ವರ್ಷದೊಳಗೆ ಮಾರಾಟ ಮಾಡಿದ ಈಕ್ವಿಟಿ ಫಂಡ್‌ಗಳಿಗೆ ಲಾಭದ ಮೇಲೆ ಶೇ 15ರಷ್ಟು ತೆರಿಗೆ ದರ ಇದೆ. ಅದೇ ರೀತಿ ದೀರ್ಘಾವಧಿ ಹೂಡಿಕೆಗೆ ₹1 ಲಕ್ಷಕ್ಕೂ ಮೇಲ್ಪಟ್ಟ ಲಾಭದ ಮೇಲೆ ಶೇ 10ರ ದರದಲ್ಲಿ ತೆರಿಗೆ ಇದೆ. ಪ್ರಸ್ತುತ ವರ್ಷದಿಂದ (2023-24) ಡೆಟ್ ಫಂಡ್ ಖರೀದಿ- ಮಾರಾಟದಿಂದ ಬರುವ ಲಾಭಕ್ಕೆ ತೆರಿಗೆದಾರರಿಗೆ ಇರುವ ವೈಯಕ್ತಿಕ ತೆರಿಗೆ ದರವೇ ಅನ್ವಯವಾಗುತ್ತದೆ.

2023ರ ಮಾರ್ಚ್ 31ಕ್ಕಿಂತ ಹಿಂದೆ ಖರೀದಿಸಿದ ಮ್ಯೂಚುವಲ್ ಫಂಡ್‌ಗಳನ್ನು ದೀರ್ಘಾವಧಿ (36 ತಿಂಗಳು ಮೇಲ್ಪಟ್ಟು) ಲಾಭದೊಂದಿಗೆ ಮುಂದೆ ಮಾರಾಟ ಮಾಡಿದಾಗ ಶೇ 20ರಷ್ಟು ತೆರಿಗೆ ದರ ಈಗಲೂ ಅನ್ವಯಿಸುತ್ತದೆ. ನಿಮ್ಮ ವಿಚಾರದಲ್ಲಿ ಡೆಟ್ ಫಂಡ್‌ಗಳು ಅಲ್ಪಾವಧಿ (36 ತಿಂಗಳೊಳಗೆ) ಹೂಡಿಕೆಯಾಗಿದ್ದರೆ, ವೈಯಕ್ತಿಕ ತೆರಿಗೆ ದರವೇ ಅನ್ವಯವಾಗುತ್ತದೆ. ಇನ್ನು ಅಗ್ರೆಸ್ಸಿವ್ ಹೈಬ್ರಿಡ್ ಫಂಡ್‌ಗಳಿಗೂ ಕೂಡ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಿಗೆ ಅನ್ವಯಿಸುವ ತೆರಿಗೆ ನಿಯಮ ಅನ್ವಯವಾಗುತ್ತದೆ.

ನೀವು ಹಿಂದಿನ ವರ್ಷದ ನಷ್ಟವನ್ನು ಪ್ರಸ್ತುತ ವರ್ಷದ ಲಾಭದೊಡನೆ ಸರಿದೂಗಿಸಬಹುದೇ ಎಂಬ ಪ್ರಶ್ನೆ ಕೇಳಿದ್ದೀರಿ. ನಿಮ್ಮ ಹಳೆಯ ರಿಟರ್ನ್ಸ್‌ನಲ್ಲಿ ಈ ವಿವರ ಇಲ್ಲದ ಕಾರಣ ಪ್ರಸ್ತುತ ವರ್ಷ ಈ ಮೊತ್ತವನ್ನು ಲಾಭದೊಡನೆ ಸರಿದೂಗಿಸುವುದು ಅಸಾಧ್ಯ. ಹೀಗಾಗಿ ಮೇಲೆ ತಿಳಿಸಿದ ₹1 ಲಕ್ಷದ ರಿಯಾಯಿತಿಯಲ್ಲದೆ ಬೇರೆ ಯಾವುದೇ ತೆರಿಗೆ ರಿಯಾಯಿತಿ ಇರುವುದಿಲ್ಲ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್:businessdesk@prajavani.co.in

ಗೃಹ ಸಾಲದ ಬಡ್ಡಿದರ ಇಳಿಸಿದ ಬಿಒಐ

ಮುಂಬೈ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಇಂಡಿಯಾವು (ಬಿಒಐ) ಹೊಸ ಗೃಹ ಸಾಲದ ಮೇಲಿನ ಬಡ್ಡಿದರವನ್ನು ಶೇ 8.45ರಿಂದ ಶೇ 8.3ಕ್ಕೆ ಇಳಿಸಿದೆ.

ಅಲ್ಲದೆ, ಸಾಲ ಮಂಜೂರಾತಿಯ ಸಂಸ್ಕರಣಾ ಶುಲ್ಕದಲ್ಲಿ ಸಂಪೂರ್ಣ ವಿನಾಯಿತಿ ದೊರೆಯಲಿದೆ. ಈ ತಿಂಗಳ ಅಂತ್ಯದವರೆಗಷ್ಟೇ ಗ್ರಾಹಕರಿಗೆ ಈ ಸೌಲಭ್ಯ ಸಿಗಲಿದೆ ಎಂದು ಬ್ಯಾಂಕ್ ತಿಳಿಸಿದೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಗೃಹ ಸಾಲದ ಮೇಲಿನ ಬಡ್ಡಿದರ ಶೇ 8.4ರಷ್ಟಿದೆ. ಇವುಗಳಿಗೆ ಹೋಲಿಸಿದರೆ ನಮ್ಮಲ್ಲಿ ಬಡ್ಡಿದರ ತೀರಾ ಕಡಿಮೆ ಇದೆ ಎಂದು ತಿಳಿಸಿದೆ. ಈ ಸಾಲದ ಜೊತೆಗೆ ಹೊಸ ಮನೆಯ ತಾರಸಿ ಮೇಲೆ ಸೌರ ಫಲಕಗಳ ಅಳವಡಿಕೆಗೆ ಶೇ 7ರ ಬಡ್ಡಿದರದಲ್ಲಿ ಸಾಲ ನೀಡಲಾಗುತ್ತದೆ. ಇದಕ್ಕೂ ಸಂಸ್ಕರಣಾ ಶುಲ್ಕವಿಲ್ಲ ಎಂದು ತಿಳಿಸಿದೆ.

ಸಾಲದ ಮೊತ್ತದ ಶೇ95ರಷ್ಟು ಹಣವನ್ನು ಮಂಜೂರು ಮಾಡಲಾಗುವುದು. ಮರುಪಾವತಿ ಅವಧಿಯನ್ನು 120 ತಿಂಗಳಿಗೆ ನಿಗದಿಪಡಿಸಲಾಗಿದೆ. ಪಿಎಂ ಸೂರ್ಯ ಘರ್: ಮುಫ್ತ್ ಬಿಜ್ಲಿ ಯೋಜನೆಯಡಿ ಲಭಿಸಿರುವ ₹78 ಸಾವಿರ ಸಬ್ಸಿಡಿ ಸೌಲಭ್ಯವನ್ನೂ ಪಡೆಯಬಹುದಾಗಿದೆ ಎಂದು ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

19-03-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1520 (1520)
ಒಂದು ವಾರದ ಡೆಲಿವರಿ	1515 (1515)
ಸೋಯಾ ಕಚ್ಚಾ	990 (1012)
ಪಾಮ್ ವಾರದ ಡೆಲಿವರಿ	956 (965)
ಸೂರ್ಯಕಾಂತಿ ಎಣ್ಣೆ ಕಚ್ಚಾ	930 (925)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಚಿನ್ನ 10ಗ್ರಾಂ	₹65,200 (65,250)
ಬೆಳ್ಳಿ ಕೆ.ಜಿ	₹73,750 (74,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮಾರುಕಟ್ಟೆ ಧಾರಣೆ

ಮಾರುಕಟ್ಟೆ	ವಿಧ	ಧಾರಣೆ
ಬಂಟ್ವಾಳ (ಅಡಿಕೆ)	ಕೋಕ	18000-28500
	ಹೊಸತು	28500-34500
	ಹಳತು	34500-44000
ಚಿತ್ರದುರ್ಗ	ಅಪಿ	46719-47129
	ಬೆಟ್ಟೆ	34649-35079
	ಕೆಂಪುಗೋಟು	28609-29010
	ರಾಶಿ	46239-46669
ಕಾರ್ಕಳ	ಹೊಸತು	25000-35000
	ಹಳತು	30000-44500
ಸಾಗರ	ಬಿಳಿಗೋಟು	23499-25409
	ಚಾಲಿ	30899-33899
	ಕೋಕ	24989-28099
	ಕೆಂಪುಗೋಟು	30299-34189
	ರಾಶಿ	34699-47659
	ಸಿಪ್ಪೆಗೋಟು	14215-18099
ಶಿವಮೊಗ್ಗ	ಬೆಟ್ಟೆ	44100-54789
	ಗೊರಬಲು	18000-37869
	ರಾಶಿ	24406-48759
	ಸರಕು	48200-81660
ಸಿದ್ದಾಪುರ	ಬಿಳಿಗೋಟು	25289-31099
	ಚಾಲಿ	35609-37239
	ಕೋಕ	24399-28799
	ಹೊಸಚಾಲಿ	33299-36699
	ಕೆಂಪುಗೋಟು	31089-32889
	ರಾಶಿ	42669-46800
	ತಟ್ಟಿಬೆಟ್ಟೆ	35309-44899
ಶಿರಸಿ	ಬೆಟ್ಟೆ	37599-43899
	ಬಿಳಿಗೋಟು	23699-30499
	ಚಾಲಿ	30791-35711
	ಕೆಂಪುಗೋಟು	24899-28699
	ರಾಶಿ	42218-47099
ಯಲ್ಲಾಪುರ	ಬಿಳಿಗೋಟು	23012-31909
	ಚಾಲಿ	32110-38166
	ಕೋಕ	14899-27699
	ಕೆಂಪುಗೋಟು	24399-34489
	ರಾಶಿ	44069-55100
	ತಟ್ಟಿಬೆಟ್ಟೆ	35219-43399
ಪುತ್ತೂರು	ಕೋಕ	11500-26000
	ಹೊಸತು	26500-35000

ಶುದ್ಧ ಸಸ್ಯಾಹಾರ ಸೇವೆ ಆರಂಭಿಸಿದ ಜೊಮಾಟೊ

ನವದೆಹಲಿ (ಪಿಟಿಐ): ಸಸ್ಯಾಹಾರ ಸೇವಿಸುವ ಗ್ರಾಹಕರ ಮನೆ ಬಾಗಿಲಿಗೆ ಜೊಮಾಟೊ ಕಂಪನಿಯು, ಶುದ್ಧ ಸಸ್ಯಾಹಾರ ಪೂರೈಸುವ ಸೇವೆ ಆರಂಭಿಸಿದೆ.

ಸಸ್ಯಾಹಾರಿಗಳಿಗೆ ಅನುಕೂಲ ಕಲ್ಪಿಸಲು ಈ ಸೇವೆ ಆರಂಭಿಸಲಾಗಿದೆ. ಶೇ 100ರಷ್ಟು ಸಸ್ಯಾಹಾರ ಪೂರೈಸಲಾಗುತ್ತದೆ. ಇದಕ್ಕಾಗಿ ‘ಪ್ಯೂರ್ ವೆಜ್ ಫ್ಲೀಟ್’ ಹಾಗೂ ‘ಪ್ಯೂರ್ ವೆಜ್ ಮೋಡ್’ ಸೇವೆಗೆ ಚಾಲನೆ ನೀಡಲಾಗಿದೆ ಎಂದು ಜೊಮಾಟೊ ಸಂಸ್ಥಾಪಕ ಹಾಗೂ ಸಿಇಒ ದೀಪಿಂದರ್ ಗೋಯಲ್ ಅವರು, ಮಂಗಳವಾರ ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

ಪ್ಯೂರ್ ವೆಜ್ ಮೋಡ್‌ನಲ್ಲಿ ಸಸ್ಯಾಹಾರ ತಯಾರಿಸುವ ರೆಸ್ಟೊರೆಂಟ್‌ಗಳ ಪಟ್ಟಿ ಮಾತ್ರ ಇರುತ್ತದೆ. ಮಾಂಸಾಹಾರ ತಯಾರಿಸುವ ರೆಸ್ಟೊರೆಂಟ್‌ಗಳು ಈ ಪಟ್ಟಿಯಲ್ಲಿ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಸಸ್ಯಾಹಾರ ವಿತರಣೆಗೆ ಕೆಂಪು ಬಣ್ಣದ ಬದಲಾಗಿ ಹಸಿರು ಬಣ್ಣದ ಬಾಕ್ಸ್ ಬಳಸಲಾಗುತ್ತದೆ ಎಂದು ತಿಳಿಸಿದ್ದಾರೆ.

₹18.90 ಲಕ್ಷ ಕೋಟಿ ನೇರ ತೆರಿಗೆ ಸಂಗ್ರಹ

ನವದೆಹಲಿ (ಪಿಟಿಐ): ದೇಶದಲ್ಲಿ 2023–24ನೇ ಆರ್ಥಿಕ ಸಾಲಿನಡಿ ಮಾರ್ಚ್ 17ರ ವರೆಗೆ ನೇರ ತೆರಿಗೆಯ ನಿವ್ವಳ ಸಂಗ್ರಹವು ₹18.90 ಲಕ್ಷ ಕೋಟಿಗೆ ಮುಟ್ಟಿದೆ ಎಂದು ಆದಾಯ ತೆರಿಗೆ ಇಲಾಖೆಯು ಮಂಗಳವಾರ ತಿಳಿಸಿದೆ.

ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ತೆರಿಗೆ ಸಂಗ್ರಹದಲ್ಲಿ ಶೇ19.88ರಷ್ಟು ಏರಿಕೆಯಾಗಿದೆ. ಒಟ್ಟು ₹18,90,259 ಕೋಟಿ ತೆರಿಗೆ ಸಂಗ್ರಹವಾಗಿದೆ. ಇದರಲ್ಲಿ ಕಂಪನಿಗಳ ವರಮಾನ ತೆರಿಗೆ (ಸಿಐಟಿ) ಹಾಗೂ ವೈಯಕ್ತಿಕ ಆದಾಯ ತೆರಿಗೆ (ಪಿಐಟಿ) ಸಂಗ್ರಹ ₹9,14,469 ಕೋಟಿಯಾಗಿದೆ.

ಷೇರು ವಹಿವಾಟು ತೆರಿಗೆ (ಎಸ್‌ಟಿಟಿ) ಸಂಗ್ರಹ ₹9,72,224 ಕೋಟಿ ಆಗಿದೆ. ಇಲ್ಲಿಯವರೆಗೆ ₹3.37 ಲಕ್ಷ ಕೋಟಿಯನ್ನು ಮರುಪಾವತಿ (ರೀಫಂಡ್) ಮಾಡಲಾಗಿದೆ ಎಂದು ತಿಳಿಸಿದೆ. 2022–23ನೇ ಹಣಕಾಸು ವರ್ಷದಲ್ಲಿ ₹15,76,776 ಕೋಟಿ ತೆರಿಗೆ ಸಂಗ್ರಹಿಸಲಾಗಿತ್ತು ಎಂದು ಕೇಂದ್ರೀಯ ನೇರ ತೆರಿಗೆಗಳ ಮಂಡಳಿ (ಸಿಬಿಡಿಟಿ) ತಿಳಿಸಿದೆ. ಕೇಂದ್ರ ಸರ್ಕಾರವು 2023–24ನೇ ಹಣಕಾಸು ವರ್ಷದಲ್ಲಿ ₹19.45 ಲಕ್ಷ ಕೋಟಿ ತೆರಿಗೆ ಸಂಗ್ರಹಿಸಲು ಗುರಿಯನ್ನು ಪರಿಷ್ಕರಿಸಿತ್ತು.



ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ 'ಅನ್‌ಬಾಕ್ಸ್' ಕಾರ್ಯಕ್ರಮದ ವೇಳೆ ಹೊಸ ಪೋಷಾಕಿನಲ್ಲಿ ಆರ್‌ಸಿಬಿ ತಂಡದ ಆಟಗಾರರು –ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ

ಲೋಗೊ ಬದಲಾವಣೆ • ಬ್ಯಾಂಗಲೋರ್ ಬದಲಿಗೆ ಬೆಂಗಳೂರು • ಕ್ರೀಡಾಂಗಣದಲ್ಲಿ ಜನಸ್ತೋಮ

'ಇದು ಆರ್‌ಸಿಬಿ ಹೊಸ ಅಧ್ಯಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣ ಮಂಗಳವಾರ ರಾತ್ರಿ ಎಂದಿನಂತೆ ಇರಲಿಲ್ಲ. ಅಲ್ಲಿ ಚೆಂಡು ಬ್ಯಾಟಿಗೆ ಅಪ್ಪಳಿಸುವ ಸದ್ದಾಗಲೀ, ಹೌ ಇಸ್ ದ್ಯಾಟ್, ಕ್ಯಾಚ್ ಇಟ್ ಕೂಗುಗಳಾಗಲೀ ಇರಲಿಲ್ಲ. ಆದರೆ ಕನ್ನಡ ಚಿತ್ರಗೀತೆಗಳ ಕಲರವ ಇತ್ತು. ರಘು ದೀಕ್ಷಿತ್ ಸಂಗೀತದ ಅಬ್ಬರವಿತ್ತು. ಇಂಗ್ಲೆಂಡ್‌ನ ಅಲೆನ್ ವಾಕರ್ ಅವರ ಚೆಂದದ ಇಂಗ್ಲಿಷ್ ಗಾಯನ ಮತ್ತು ಡಿಜಿಟಲ್ ಕೌಶಲದ ದೃಶ್ಯಾವಳಿಗಳಿದ್ದವು. ಚೆನ್ನಾಟವಾಡುತ್ತಿದ್ದ ರಂಗುರಂಗಿನ ಬೆಳಕಿನ ಕಿರಣಗಳು ಹಸಿರು ಹುಲ್ಲಿನ ಮೇಲೆ ರಂಗೋಲಿ ಬಿಡಿಸಿದ್ದವು...

ಇದೆಲ್ಲವನ್ನೂ ಮೀರಿಸುವಂತೆ ಕ್ರೀಡಾಂಗಣದಲ್ಲಿ ಸೇರಿದ್ದ 25 ಸಾವಿರಕ್ಕೂ ಹೆಚ್ಚು ಜನರ 'ಆರ್‌ಸಿಬಿ..ಆರ್‌ಸಿಬಿ..', 'ಕೊಹ್ಲಿ.. ಕೊಹ್ಲಿ..' ಎಂಬ ಕೂಗುಗಳು ಪ್ರತಿಧ್ವನಿಸಿದವು. ಮಧ್ಯಾಹ್ನ 2 ಗಂಟೆಗೆ ಬಿರುಬಿಸಿಲಿನಲ್ಲಿಯೇ ಕಿಲೋಮೀಟರ್ ಗಟ್ಟಲೇ ಸಾಲುಗಟ್ಟಿ ಕ್ರೀಡಾಂಗಣಕ್ಕೆ ಪ್ರವೇಶಿಸಿದವರು, ರಾತ್ರಿ ಎಂಟರವರೆಗೂ 'ಆರ್‌ಸಿಬಿ ಅನ್‌ಬಾಕ್ಸ್' ಕಾರ್ಯಕ್ರಮದಲ್ಲಿ ತಮ್ಮ ನೆಚ್ಚಿನ ರಾಯಲ್ ಚಾಲೆಂಜರ್ಸ್ ಬೆಂಗಳೂರು ಆಟಗಾರರು ಮತ್ತು ಆಟಗಾರ್ತಿಯರನ್ನು ಕಣ್ತುಂಬಿಕೊಂಡರು.


ಮನರಂಜನೆ ಕಾರ್ಯಕ್ರಮಗಳ ನಂತರ ವೇದಿಕೆಯಲ್ಲಿದ್ದ ವಿರಾಟ್ ಕೊಹ್ಲಿ, 'ಇದು ಆರ್‌ಸಿಬಿಯ ಹೊಸ ಅಧ್ಯಾಯ' ಎಂದು ಕನ್ನಡದಲ್ಲಿ ಉದ್ಘರಿಸಿದರು. ಅವರು ಡಿಜಿಟಲ್ ಬಜರ್ ಒತ್ತಿದಾಗ ಬೃಹತ್ ಪರದೆಯ ಮೇಲೆ ಮೂಡಿದ ವಿಡಿಯೊ ತುಣುಕುಗಳಲ್ಲಿ ನಾಯಕ ಫಫ್ ಡುಪ್ಲೆಸಿ, ಮಹಿಳಾ ತಂಡದ ನಾಯಕಿ ಸ್ಮೃತಿ ಮಂದಾನ ಮತ್ತು ವಿರಾಟ್ ಅವರು ಹೊಸ ಜೆರ್ಸಿಯಲ್ಲಿ ಕಾಣಿಸಿಕೊಂಡರು. ಜೆರ್ಸಿಯ ಮೇಲ್ಭಾಗ ನೀಲಿ ಮತ್ತು ಕೆಳಭಾಗದಲ್ಲಿ ಕೆಂಪುಬಣ್ಣಗಳು ಗಮನ ಸೆಳೆದವು. ಇದೇ ಹೊತ್ತಿನಲ್ಲಿ ತಂಡದ ಎಲ್ಲ ಆಟಗಾರರು ಮತ್ತು ನೆರವು ಸಿಬ್ಬಂದಿಯು ವೇದಿಕೆಯಲ್ಲಿದ್ದು ಅಭಿಮಾನಿಗಳತ್ತ ಕೈಬೀಸಿದರು.

ಆರ್‌ಸಿಬಿಯ ಹೊಸ ಲೋಗೊ



ಆರ್‌ಸಿಬಿ ಮಹಿಳಾ ತಂಡದ ಆಟಗಾರ್ತಿಯರು ಡಬ್ಲ್ಯುಪಿಎಲ್ ಟ್ರೋಫಿಯನ್ನು ಪ್ರದರ್ಶಿಸಿದರು





ಆರ್‌ಸಿಬಿ ತಂಡದ ಹೊಸ ಪೋಷಾಕನ್ನು ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರಿಗೆ ಸ್ಮೃತಿ ಮಂದಾನ ನೀಡಿದರು (ಎಡಚಿತ್ರ). ಕ್ರಿಕೆಟಿಗ ಆರ್. ವಿನಯಕುಮಾರ್ ಅವರಿಗೆ ಆರ್‌ಸಿಬಿ ಹಾಲ್ ಆಫ್ ಫೇಮ್ ಗೌರವ ನೀಡಲಾಯಿತು.

ಬ್ಯಾಂಗಲೋರ್– ಬೆಂಗಳೂರು: ಇದೇ ಕಾರ್ಯಕ್ರಮದಲ್ಲಿ ತಂಡದ ಹೆಸರಿನಲ್ಲಿದ್ದ ಬ್ಯಾಂಗಲೋರ್ (ಇಂಗ್ಲಿಷ್ ಪದ) ಅನ್ನು ಬೆಂಗಳೂರು ಎಂದು ಬದಲಾಯಿಸಲಾಯಿತು. ಅಲ್ಲದೇ ಲೋಗೊದ ಹೊಸ ವಿನ್ಯಾಸವನ್ನೂ ಬಿಡುಗಡೆಗೊಳಿಸಲಾಯಿತು. ಕನ್ನಡ ಚಿತ್ರತಾರೆಗಳಾದ ಶಿವರಾಜ್ ಕುಮಾರ್, ರಿಷಭ್ ಶೆಟ್ಟಿ, ಸುದೀಪ್ ಹಾಗೂ ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರು ಈ ಬದಲಾವಣೆಯ ಕುರಿತು ಮಾಡಿದ್ದ ವಿಡಿಯೊ ಪ್ರದರ್ಶಿಸಿದಾಗ ಜನರ ಹರ್ಷೋದ್ಗಾರ ಮುಗಿಲು ಮುಟ್ಟಿದವು.

ಆರ್‌ಸಿಬಿ ಭುವನಕ್ಕೆ ವಿನಯ್: 'ದಾವಣಗೆರೆ ಎಕ್ಸ್‌ಪ್ರೆಸ್' ಖ್ಯಾತಿಯ ಕ್ರಿಕೆಟಿಗ ಆರ್. ವಿನಯಕುಮಾರ್ ಅವರಿಗೆ ಆರ್‌ಸಿಬಿ ಹಾಲ್ ಆಫ್ ಫೇಮ್ ಗೌರವ ನೀಡಲಾಯಿತು. ಈ ಹಿಂದೆ ಅವರು ಕೆಲವು ವರ್ಷ ಆರ್‌ಸಿಬಿ ತಂಡವನ್ನು ಪ್ರತಿನಿಧಿಸಿದ್ದರು. ಮಧ್ಯಮವೇಗಿ ವಿನಯ್ ಅವರು ಕರ್ನಾಟಕ ತಂಡವು ಎರಡು ಬಾರಿ ರಣಜಿ ಟ್ರೋಫಿ ಜಯಿಸಿದಾಗ ನಾಯಕರಾಗಿದ್ದರು. ಭಾರತ ತಂಡದಲ್ಲಿಯೂ ಆಡಿದ್ದರು.

ನೆಟ್ಸ್ ವೀಕ್ಷಿಸಿದ ಅಭಿಮಾನಿಗಳು: ಸಂಜೆಯ ಕಾರ್ಯಕ್ರಮಕ್ಕೆ ಮಧ್ಯಾಹ್ನದಿಂದಲೇ ಕ್ರೀಡಾಂಗಣಕ್ಕೆ ಪ್ರೇಕ್ಷಕರು ಬಂದಿದ್ದರು. ಇದೇ ಹೊತ್ತಿನಲ್ಲಿ ನಡೆಯುತ್ತಿದ್ದ ಆಟಗಾರರ ನೆಟ್ಸ್ ಅಭ್ಯಾಸವನ್ನು ನೋಡಿದರು. ಇನ್ನೊಂದೆಡೆ ಬರ್ಫಿ ಬ್ಯಾಂಡ್‌ನವರ ಸಂಗೀತ ನಡೆಯಿತು.

ಇದೇ 22ರಂದು ಚೆನ್ನೈನಲ್ಲಿ ನಡೆಯುವ ಮೊದಲ ಪಂದ್ಯದಲ್ಲಿ ಆರ್‌ಸಿಬಿಯು ಚೆನ್ನೈ ಸೂಪರ್ ಕಿಂಗ್ಸ್ ಎದುರು ಆಡಲಿದೆ.

ಟ್ರೋಫಿಯೊಂದಿಗೆ ಮಿಂಚಿದ ಕ್ವೀನ್ಸ್

ಎರಡು ದಿನಗಳ ಹಿಂದಷ್ಟೇ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಕಪ್ ಜಯಿಸಿದ್ದ ಸ್ಮೃತಿ ಮಂದಾನ ನಾಯಕತ್ವದ ಬಳಗವು ಆರ್‌ಸಿಬಿ ಅನ್‌ಬಾಕ್ಸ್ ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿತ್ತು.

ಸ್ಮೃತಿ, ಕರ್ನಾಟಕದ ಶ್ರೇಯಾಂಕ ಪಾಟೀಲ, ಸೋಫಿ ಮಾಲಿನೆ ಸೇರಿದಂತೆ ಎಲ್ಲ ಆಟಗಾರ್ತಿಯರು ಮತ್ತು ಸಿಬ್ಬಂದಿಯು ಟ್ರೋಫಿಯನ್ನು ಎತ್ತಿ ಹಿಡಿದು ಕ್ರೀಡಾಂಗಣದಲ್ಲಿ ಒಂದು ಸುತ್ತು ಹಾಕಿದರು. ಅಭಿಮಾನಿಗಳತ್ತ ಟ್ರೋಫಿ ತೋರಿಸಿ ಕೈ ಬೀಸಿ ಅಭಿನಂದಿಸಿದರು. ಕೃತಜ್ಞತೆ ಸಲ್ಲಿಸಿದರು.

ಐಪಿಎಲ್ ಜಯಿಸುವ ಕನಸು: ವಿರಾಟ್ ಕೊಹ್ಲಿ


ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ಪ್ರಶಸ್ತಿ ಜಯಿಸಿದ ಸಂತಸವನ್ನು ಅನುಭವಿಸುವ ಕನಸು ತಮ್ಮದಾಗಿತ್ತು. ಇದೀಗ ಮಹಿಳಾ ತಂಡ ಅಂತಹ ಸಾಧನೆ ಮಾಡಿದೆ. ಈ ಯಶಸ್ಸನ್ನು ದುಪ್ಪಟ್ಟು ಮಾಡಲು ತಾವು ಕಪ್ ಗೆಲ್ಲುವ ಸಂಪೂರ್ಣ ಪ್ರಯತ್ನ ಮಾಡುವುದಾಗಿ ವಿರಾಟ್ ಕೊಹ್ಲಿ ಹೇಳಿದರು.

ಮಂಗಳವಾರ ನಡೆದ 'ಆರ್‌ಸಿಬಿ ಅನ್‌ಬಾಕ್ಸ್' ಕಾರ್ಯಕ್ರಮದ ಸಂದರ್ಭದಲ್ಲಿ ಅವರು ಮಾತನಾಡಿದರು.

'ಐಪಿಎಲ್ ಟ್ರೋಫಿ ಜಯಿಸಿದರೆ ಉಂಟಾಗುವ ಸಂತಸ ಹೇಗಿರುತ್ತದೆ ಎಂಬ ನನ್ನ ಕನಸು ಬಹಳ ದಿನಗಳದ್ದು. ಮೊದಲ ಪ್ರಶಸ್ತಿ ಗೆಲ್ಲುವ ತಂಡದೊಂದಿಗೆ ನಾನೂ ಇರುತ್ತೇನೆ. ನನ್ನ ಸಂಪೂರ್ಣ ಸಾಮರ್ಥ್ಯದೊಂದಿಗೆ, ನನ್ನ ಅನುಭವಗಳನ್ನು ವಿನಿಯೋಗಿಸುತ್ತೇನೆ. ಅಭಿಮಾನಿಗಳೂ ಮತ್ತು ಫ್ರ್ಯಾಂಚೈಸಿಗಾಗಿ ಈ ಸಾಧನೆ ಮಾಡುವ ಛಲವಿದೆ' ಎಂದು ಕೊಹ್ಲಿ ಹೇಳಿದರು.

ಮುಂಬೈ ತಂಡದ ಆಟಗಾರನಿಗೆ ಸಿಗದ ಫಿಟ್ನೆಸ್ ಪ್ರಮಾಣಪತ್ರ

ಮೊದಲ ಪಂದ್ಯಕ್ಕೆ ಸೂರ್ಯ ಅಲಭ್ಯ



ಸೂರ್ಯ ಕುಮಾರ್

ಮುಂಬೈ (ಪಿಟಿಐ): ವಿಶ್ವದ ಅಗ್ರಮಾನ್ಯ ಟಿ20 ಬ್ಯಾಟರ್ ಸೂರ್ಯ ಕುಮಾರ್ ಯಾದವ್ ಅವರು ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಮುಂಬೈ ಇಂಡಿಯನ್ಸ್ ತಂಡದ ಮೊದಲ ಪಂದ್ಯ ಕಳೆದುಕೊಳ್ಳಲಿದ್ದಾರೆ. ಎನ್‌ಸಿಎನಿಂದ (ನ್ಯಾಷನಲ್ ಕ್ರಿಕೆಟ್ ಅಕಾಡೆಮಿ) ಅವರಿಗೆ ಇನ್ನೂ ಫಿಟ್ನೆಸ್ ಪ್ರಮಾಣಪತ್ರ ಲಭಿಸಿಲ್ಲ.

ಮುಂಬೈ ಮಾರ್ಚ್ 24ರಂದು ನಡೆಯುವ ತನ್ನ ಮೊದಲ ಪಂದ್ಯದಲ್ಲಿ ಕಳೆದ ಬಾರಿಯ ಫೈನಲಿಸ್ಟ್ ಗುಜರಾತ್ ಟೈಟನ್ಸ್ ವಿರುದ್ಧ ಆಡಲಿದೆ.

33 ವರ್ಷದ ಸೂರ್ಯ, 'ಸ್ಪೋರ್ಟ್ಸ್ ಅರ್ನಿಯಾ' ಶಸ್ತ್ರಚಿಕಿತ್ಸೆಗೊಳಗಾದ ನಂತರ ಬೆಂಗಳೂರಿನ ಎನ್‌ಸಿಎಯಲ್ಲಿ ಪುನಶ್ಚೇತನ ಶಿಬಿರದಲ್ಲಿ ಭಾಗಿಯಾಗಿದ್ದಾರೆ. ಡಿಸೆಂಬರ್‌ನಿಂದ ಅವರು ಯಾವುದೇ ಅಂತರರಾಷ್ಟ್ರೀಯ ಪಂದ್ಯ ಆಡಿಲ್ಲ. ಅವರು ಮಂಗಳವಾರ ಫಿಟ್ನೆಸ್ ಟೆಸ್ಟ್‌ಗೆ ಒಳಗಾಗಿದ್ದರು.

ಅವರು ಇನ್‌ಸ್ಟಾದಲ್ಲಿ 'ಹಾರ್ಟ್‌ಬ್ರೇಕ್' ಎಂಬ ಸೂಚ್ಯ ಸಂದೇಶ ಹಾಕಿದ್ದಾರೆ.

ಮುಂಬೈ ಇಂಡಿಯನ್ಸ್‌ನ ನಂತರದ ಮೂರು ಪಂದ್ಯಗಳಿಗೆ (27ರಂದು ಸನ್‌ರೈಸರ್ಸ್ ವಿರುದ್ಧ, ಏ. 1ರಂದು ರಾಜಸ್ಥಾನ್ ರಾಯಲ್ಸ್ ವಿರುದ್ಧ, ಏ. 7ರಂದು ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ) ಅವರ ಲಭ್ಯತೆ ನಂತರ ಗೊತ್ತಾಗಲಿದೆ.

3 ಪಂದ್ಯಗಳಿಗೆ ಹಸರಂಗ ಇಲ್ಲ: ಆಲ್‌ರೌಂಡರ್ ವನಿಂದು ಹಸರಂಗ ಅವರು ಐಪಿಎಲ್‌ನಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡದ ಮೊದಲ ಮೂರು ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ. ಬಾಂಗ್ಲಾದೇಶ ವಿರುದ್ಧ ಮಾರ್ಚ್ 22ರಂದು ಆರಂಭವಾಗುವ ಎರಡು ಟೆಸ್ಟ್‌ಗಳ ಸರಣಿಗೆ ಅವರನ್ನು ಶ್ರೀಲಂಕಾ ತಂಡಕ್ಕೆ ಆಯ್ಕೆ ಮಾಡಲಾಗಿದೆ.

ಸೀಮಿತ ಓವರುಗಳ ಪಂದ್ಯದಲ್ಲಿ ಹೆಚ್ಚು ಗಮನ ಹರಿಸಲು ಅವರು ಕಳೆದ ಆಗಸ್ಟ್‌ನಲ್ಲಿ ಟೆಸ್ಟ್ ಮಾದರಿಗೆ ವಿದಾಯ ಹೇಳಿದ್ದರು. ಆದರೆ 26 ವರ್ಷದ ಲೆಗ್ ಬ್ರೇಕ್ ಬೌಲರ್ ಮಂಗಳವಾರ ಪ್ರಕಟಿಸಿದ ಟೆಸ್ಟ್ ತಂಡಕ್ಕೆ ಆಯ್ಕೆಯಾಗಿದ್ದಾರೆ.

ಹಸರಂಗ ಅವರನ್ನು ₹1.5 ಕೋಟಿ ಮೊತ್ತಕ್ಕೆ ಸನ್‌ರೈಸರ್ಸ್ ತಂಡ ಪಡೆದಿತ್ತು. ಹೈದರಾಬಾದಿನ ತಂಡ ಮಾ.23ರಂದು ಮೊದಲ ಪಂದ್ಯವನ್ನು ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಆಡಲಿದೆ.

ಮುಂಬೈ ತಂಡಕ್ಕೆ ಲ್ಯೂಕ್ ವುಡ್: ನವದೆಹಲಿ (ಪಿಟಿಐ): ಕಾಲಿನ ಮೂಳೆ ಮುರಿತದಿಂದಾಗಿ ಆಸ್ಟ್ರೇಲಿಯಾದ ಎಡಗೈ ವೇಗಿ ಜೇಸನ್ ಬೆಹ್ರನ್‌ಡಾರ್ಫ್ ಅವರು ತಮಗೆ ಈ ಬಾರಿಯ ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ತಂಡಕ್ಕೆ ಆಡಲು ಸಾಧ್ಯವಾಗುತ್ತಿಲ್ಲ ಎಂದು ಹೇಳಿದ್ದಾರೆ. ತರಬೇತಿ ವೇಳೆ ಆಕಸ್ಮಿಕವಾಗಿ ಅವರಿಗೆ ಮೂಳೆಮುರಿತವಾಗಿದೆ. 33 ವರ್ಷದ ಜೇಸನ್ ಬದಲು ಇಂಗ್ಲೆಂಡ್‌ನ ಎಡಗೈ ವೇಗಿ ಲ್ಯೂಕ್ ವುಡ್ ಅವರು ಮುಂಬೈ ತಂಡ ಸೇರಿಕೊಳ್ಳಲಿದ್ದಾರೆ.

ಡೆಲ್ಲಿ ಕ್ಯಾಪಿಟಲ್ಸ್‌ಗೆ ಪಂತ್ ನಾಯಕ



ನವದೆಹಲಿ (ಪಿಟಿಐ): ವಿಕೆಟ್ ಕೀಪರ್ –ಬ್ಯಾಟರ್ ರಿಷಭ್ ಪಂತ್ ಅವರನ್ನು ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ನಾಯಕರನ್ನಾಗಿ ಮಂಗಳವಾರ ನೇಮಕ ಮಾಡಲಾಯಿತು. ಕಾರು ಅಪಘಾತದಲ್ಲಿ ಗಂಭೀರ ಗಾಯಗೊಂಡು 14 ತಿಂಗಳು ಕ್ರಿಕೆಟ್‌ನಿಂದ ಹೊರಗಿದ್ದರು. ಈಗ ಐಪಿಎಲ್ ತಂಡದ ನಾಯಕನಾಗಿ ನೇಮಕಗೊಳ್ಳುವ ಮೂಲಕ ಸಕ್ರಿಯ ಆಟಕ್ಕೆ ಮರಳಿದ್ದಾರೆ.

'ನಾಯಕರಾಗಿ ಮರಳುತ್ತಿರುವ ಪಂತ್ ಅವರನ್ನು ನಮ್ಮ ತಂಡಕ್ಕೆ ಸ್ವಾಗತಿಸಲು ಸಂತಸವಾಗುತ್ತಿದೆ. ಛಲ ಮತ್ತು ನಿರ್ಭೀತ ಸ್ವಭಾವ ಅವರ ಬ್ರ್ಯಾಂಡ್‌ನ ಕ್ರಿಕೆಟ್‌ನಲ್ಲಿ ಕಾಣುತ್ತದೆ. ಅವರ ಚೇತರಿಕೆಯಲ್ಲೂ ಇದು ಕಾಣಿಸಿಕೊಂಡಿತು' ಎಂದು ಫ್ರಾಂಚೈಸಿ ಸಹ ಮಾಲೀಕ ಪಾರ್ಥ ಜಿಂದಾಲ್ ತಿಳಿಸಿದ್ದಾರೆ.

ಡೆಲ್ಲಿ ಕ್ಯಾಪಿಟಲ್ಸ್ ಮೊದಲ ಪಂದ್ಯವನ್ನು ಚಂಡೀಗಢದಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ ಮಾರ್ಚ್ 23ರಂದು ಆಡಲಿದೆ.

ವೀಕ್ಷಕ ವಿವರಣೆಗೆ ಮರಳಲಿರುವ ಸಿಧು

ನವದೆಹಲಿ (ಪಿಟಿಐ): ಭಾರತ ತಂಡದ ಮಾಜಿ ಆಟಗಾರ ನವಜೋತ್ ಸಿಧು ಅವರು ದಶಕದ ನಂತರ ಮುಂಬರುವಐಪಿಎಲ್‌ನಲ್ಲಿ ವೀಕ್ಷಕ ವಿವರಣೆಗಾರರ ಬಾಕ್ಸ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಕ್ರಿಕೆಟ್‌ಗೆ ವಿದಾಯ ಹೇಳಿದ ಅಲ್ಪಾವಧಿಯಲ್ಲೇ ಸಿಧು ರಾಜಕೀಯ ರಂಗಕ್ಕೆ ಇಳಿದಿದ್ದರು. ಈಗ ಟಿವಿ ವಿವರಣೆಗಾರನ ಪಾತ್ರಕ್ಕೆ ಮರಳಿದ್ದಾರೆ. ವೀಕ್ಷಕ ವಿವರಣೆ ವೇಳೆ ಅವರು ಬಳಸುತ್ತಿದ್ದ ಲವಲವಿಕೆಯ ಮಾತುಗಳು, ಸ್ವಾರಸ್ಯಕರ ನುಡಿಗಟ್ಟುಗಳ ಬಳಕೆಯಿಂದ 'ಸಿಧುಯಿಸಂ' ಪದ ಹುಟ್ಟಿಕೊಂಡಿತ್ತು. ಈ ಲೀಗ್‌ನಿಂದ ಭಾರತ ಮಾತ್ರವಲ್ಲ, ಇತರ ಕೆಲವು ದೇಶಗಳೂ ಟಿ20 ವಿಶ್ವಕಪ್‌ಗೆ ತಮ್ಮ ತಂಡಗಳನ್ನು ನಿರ್ಧರಿಸಲು ಅನುಕೂಲವಾಗಲಿದೆ ಎಂದು ಹೇಳಿದ್ದಾರೆ.

'ವಿಶ್ವದ ಕಣ್ಣು ಐಪಿಎಲ್ ಮೇಲಿದೆ. ಟಿ20 ವಿಶ್ವಕಪ್ ತಂಡದಲ್ಲಿ ಸ್ಥಾನ ಪಡೆಯಲು ಆಟಗಾರರಿಗೆ ಸದವಕಾಶ ಇದೆ. ವಿದೇಶಿ ಆಟಗಾರರೂ ತಮ್ಮ ದೇಶದ ತಂಡಗಳಲ್ಲಿ ಸ್ಥಾನ ಪಡೆಯಲೂ ಈ ಲೀಗ್ ವೇದಿಕೆ ಕಲ್ಪಿಸುತ್ತಿದೆ' ಎಂದು ಸ್ಟಾರ್ ಸ್ಪೋರ್ಟ್ಸ್ ವಾಹಿನಿ ಮೂಲಕ ನಡೆದ ಸಂದರ್ಶನದಲ್ಲಿ ಸಿಧು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. 'ಹೊಸದಾಗಿ ವೀಕ್ಷಕ ವಿವರಣೆಗಾರನಾದಾಗ ಒಂದು ಇಡೀ ಟೂರ್ನಿಗೆ ನನಗೆ ₹60–70 ಲಕ್ಷ ಸಿಗುತಿತ್ತು. ಐಪಿಎಲ್‌ನಲ್ಲಿ ವೀಕ್ಷಕ ವಿವರಣೆಗಾರನಾದಾಗ ದಿನಕ್ಕೆ ₹25 ಲಕ್ಷ ಪಡೆಯುತ್ತಿದ್ದೆ. ಆದರೆ ಹಣದಿಂದಷ್ಟೇ ತೃಪ್ತಿ ಸಿಗುವುದಿಲ್ಲ. ಈ ಕೆಲಸ ಸುಂದರ ಅನುಭವ' ಎಂದರು.

ತ್ವರಿತ ನಿರ್ಣಯ: ಐಪಿಎಲ್‌ಗೆ 'ಸ್ಮಾರ್ಟ್ ರಿಪ್ಲೇ ಸಿಸ್ಟಂ'

ಮುಂಬೈ (ಪಿಟಿಐ): ತ್ವರಿತವಾಗಿ ಮತ್ತು ಕರಾರುವಾಕ್ ಆಗಿ ನಿರ್ಣಯ ನೀಡಲು ನೆರವಾಗುವ 'ಸ್ಮಾರ್ಟ್ ರಿಪ್ಲೇ ಸಿಸ್ಟಂ' ಅನ್ನು ಈ ಬಾರಿ ಐಪಿಎಲ್‌ನಲ್ಲಿ ಜಾರಿಗೊಳಿಸಲಾಗುವುದು.

ಟಿವಿ ಅಂಪೈರ್ ಅವರು ತಮ್ಮ ಕೊಠಡಿಯಲ್ಲಿ, ಹಾಕ್–ಐ ವ್ಯವಸ್ಥೆ ನಿರ್ವಹಿಸುವ ಇಬ್ಬರು ಅಪರೇಟರ್‌ಗಳಿಂದ ನೇರವಾಗಿ ಇನ್‌ಪುಟ್ಸ್ (ದೃಶ್ಯಾವಳಿಗಳನ್ನು) ಪಡೆಯಲಿದ್ದಾರೆ. ಈ ಅಪರೇಟರ್‌ಗಳೂ ಟಿವಿ ಅಂಪೈರ್ ಜೊತೆಗೇ ಇರುತ್ತಾರೆ. ಎಂಟು ಹೈಸ್ಪೀಡ್ ಕ್ಯಾಮೆರಾಗಳು ಸೆರೆಹಿಡಿಯುವ ದೃಶ್ಯಾವಳಿಗಳ ನೆರವಿನಿಂದ ಟಿವಿ ಅಂಪೈರ್‌ಗಳು ಕ್ಷಿಪ್ರವಾಗಿ ತೀರ್ಪು ನೀಡಲಿದ್ದಾರೆ. ಅವರಿಗೆ ವಿಶ್ಲೇಷಣೆ ನಡೆಸಲು ಹೆಚ್ಚು ಮತ್ತು ಸ್ಪಷ್ಟ ದೃಶ್ಯಾವಳಿಗಳು ಸಿಗಲಿದ್ದು, ಸ್ಪ್ಲಿಟ್ ಸ್ಕ್ರೀನ್ ಇಮೇಜ್‌ಗಳೂ ಲಭ್ಯವಿರಲಿವೆ. ಹೀಗಾಗಿ ಈ ಹಿಂದಿಗಿಂತ ಬೇಗನೇ ನಿರ್ಣಯಕ್ಕೆ ಬರಲು ಅನುಕೂಲವಾಗಲಿದೆ.

ಹೊಸ ವ್ಯವಸ್ಥೆಯಲ್ಲಿ ಟಿವಿ ಪ್ರಸಾರ ನಿರ್ವಾಹಕರ ಪಾತ್ರ ಹೆಚ್ಚು ಇರಲಿದೆ. ಅವರು ಅಂಪೈರ್ ಮತ್ತು ಹಾಕ್ ಐ ಅಪರೇಟರ್‌ಗಳ ಮಧ್ಯೆ ಸುಗಮ ನಿರ್ವಹಣೆಯ ಪಾತ್ರ ವಹಿಸುವರು. ಈ ವ್ಯವಸ್ಥೆಯಿಂದ ಅಂಪೈರ್‌ಗಳು ತೀರ್ಪಿನ ವೇಳೆ ವಿವಿಧ ಕೋನಗಳಿಂದ ದೃಶ್ಯಾವಳಿಗಳನ್ನು ಪಡೆಯಲಿದ್ದಾರೆ. ಇದರಿಂದ ಬೌಂಡರಿ ಗೆರೆಯಲ್ಲಿ ಹಿಡಿಯುವ ಕ್ಯಾಚ್‌ಗಳ ಬಗ್ಗೆ, ಕಾಟ್ ಬಿಹೈಂಡ್, ಲೆಗ್ ಬಿಫೋರ್, ಸ್ಟಂಪಿಂಗ್ ಕುರಿತು ಇಂಚಿಂಚೂ ನಿಖರವಾದ ಚಿತ್ರಣ ಸಿಗಲಿದೆ.

ಸ್ಮಾರ್ಟ್ ರಿಪ್ಲೇ ಸಿಸ್ಟಂ ಜೊತೆಗೆ ಕಾರ್ಯನಿರ್ವಹಿಸುವ ಬಗ್ಗೆ ಬಿಸಿಸಿಐ, ಆಯ್ದ ಅಂಪೈರ್‌ಗಳಿಗೆ ಎರಡು ದಿನಗಳ ಕಾರ್ಯಾಗಾರ ಏರ್ಪಡಿಸಿತ್ತು. ದೇಶದ ಮತ್ತು ಹೊರದೇಶಗಳ 15 ಅಂಪೈರ್‌ಗಳು ಭಾಗವಹಿಸಿದ್ದರು.

'ದಿ ಹಂಡ್ರೆಡ್' ಪಂದ್ಯಾವಳಿಗೂ ಈ ವ್ಯವಸ್ಥೆಯನ್ನು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ ಪ್ರಾಯೋಗಿಕವಾಗಿ ಬಳಸಿತ್ತು.

ದೋಹಾದಲ್ಲಿ ಪ್ಯಾರಿಸ್ ಒಲಿಂಪಿಕ್ಸ್ ಅರ್ಹತಾ ಟೂರ್ನಿ

12 ಸದಸ್ಯರ ಶಾಟ್‌ಗನ್ ತಂಡದ ಆಯ್ಕೆ

ನವದೆಹಲಿ (ಪಿಟಿಐ): ಕಾಮನ್ವೆಲ್ತ್ ಗೇಮ್ಸ್ ಚಿನ್ನದ ಪದಕ ವಿಜೇತೆ ಶ್ರೇಯಸಿ ಸಿಂಗ್, ಅನುಭವಿ ಮೈರಾಜ್ ಅಹ್ಮದ್ ಖಾನ್ ಮತ್ತು ವಿಶ್ವಕಪ್ ವಿಜೇತೆ ಗನೇಮತ್ ಸೆಖೋನ್ ಅವರು ದೋಹಾದಲ್ಲಿ ಏಪ್ರಿಲ್ 19 ರಿಂದ 29ರವರೆಗೆ ನಡೆಯಲಿರುವ ಪ್ಯಾರಿಸ್ ಒಲಿಂಪಿಕ್ಸ್ ಶೂಟಿಂಗ್ ಅರ್ಹತಾ ಪಂದ್ಯಾವಳಿಯಲ್ಲಿ ಭಾಗವಹಿಸಲಿರುವ 12 ಸದಸ್ಯರ ಭಾರತ ಶಾಟ್‌ಗನ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಜುಲೈ– ಆಗಸ್ಟ್‌ನಲ್ಲಿ ನಿಗದಿಯಾಗಿರುವ ಒಲಿಂಪಿಕ್ಸ್‌ಗೆ ಪೂರ್ವಭಾವಿಯಾಗಿ ನಡೆಯುವ ನಾಲ್ಕು ಪ್ರಮುಖ ಅಂತರರಾಷ್ಟ್ರೀಯ ಸ್ಪರ್ಧೆಗಳಿಗೆ ಭಾರತ ರಾಷ್ಟ್ರೀಯ ರೈಫಲ್ ಸಂಸ್ಥೆ (ಎನ್‌ಆರ್‌ಎಐ) ಮಂಗಳವಾರ ತಂಡಗಳನ್ನು ಪ್ರಕಟಿಸಿದೆ.

ಒಲಿಂಪಿಕ್ಸ್‌ಗೆ ಒಟ್ಟು ನಾಲ್ಕು ಕೋಟಾ ಸ್ಥಾನಗಳನ್ನು ಪಡೆಯಲು ದೋಹಾದಲ್ಲಿ ಅವಕಾಶ ಕಲ್ಪಿಸಲಾಗಿದೆ. ಪುರುಷರ ಮತ್ತು ಮಹಿಳೆಯರ ಟ್ರ್ಯಾಪ್ ಮತ್ತು ಸ್ಕೀಟ್ ವಿಭಾಗದಲ್ಲಿ ಮೊದಲ ಸ್ಥಾನ ಪಡೆದವರು ಅರ್ಹತೆ ಪಡೆಯುತ್ತಾರೆ. ಈಗಾಗಲೇ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದವರನ್ನು ಈ ಟೂರ್ನಿಯಿಂದ ಹೊರಗಿಡಲಾಗಿದೆ.

ಭಾರತ ಇದುವರೆಗೆ ಪ್ಯಾರಿಸ್ ಒಲಿಂಪಿಕ್ಸ್‌ಗೆ 19 ಕೋಟಾ ಸ್ಥಾನಗಳನ್ನು ಗಳಿಸಿದೆ. ಶಾಟ್‌ಗನ್ ವಿಭಾಗದಲ್ಲಿ ಅತಿ ಹೆಚ್ಚು ಮಂದಿ– ನಾಲ್ವರು ಒಲಿಂಪಿಕ್ಸ್ ಟಿಕೆಟ್ ಪಡೆದಿದ್ದಾರೆ.

ಅಫ್ಗಾನಿಸ್ತಾನ ಟಿ20 ಸರಣಿ ರದ್ದುಗೊಳಿಸಿದ ಆಸ್ಟ್ರೇಲಿಯಾ

ಸಿಡ್ನಿ (ಎಎಫ್‌ಪಿ): ಈ ವರ್ಷದ ಕೊನೆಯಲ್ಲಿ ಅಫ್ಗಾನಿಸ್ತಾನ ವಿರುದ್ಧ ಟಿ20 ಪುರುಷರ ಕ್ರಿಕೆಟ್ ಸರಣಿಯನ್ನು ಆಸ್ಟ್ರೇಲಿಯಾ ಮಂಗಳವಾರ ರದ್ದುಗೊಳಿಸಿದ್ದು, ತಾಲಿಬಾನ್ ಆಡಳಿತದ ದೇಶದಲ್ಲಿ ಮಹಿಳೆಯರ ಪರಿಸ್ಥಿತಿ ಹದಗೆಡುತ್ತಿದೆ ಎಂದು ಹೇಳಿದೆ.


ಅಫ್ಘಾನಿಸ್ತಾನದಲ್ಲಿ ಮಹಿಳೆಯರು ಮತ್ತು ಬಾಲಕಿಯರ ಪರಿಸ್ಥಿತಿಗಳು ಹದಗೆಡುತ್ತಿವೆ ಎಂಬ ಮಾಹಿತಿ ಬಂದಿದೆ. ಆದ್ದರಿಂದ ಆಗಸ್ಟ್‌ನಲ್ಲಿ ತಟಸ್ಥ ಸ್ಥಳದಲ್ಲಿ ನಿಗದಿಯಾಗಿದ್ದ ಮೂರು ಪಂದ್ಯಗಳ ಸರಣಿಯನ್ನು ಮುಂದೂಡಲಾಗಿದೆ ಎಂದು ಕ್ರಿಕೆಟ್ ಆಸ್ಟ್ರೇಲಿಯಾ ಹೇಳಿದೆ.

ವಿಶ್ವದಾದ್ಯಂತ ಕ್ರಿಕೆಟ್‌ನಲ್ಲಿ ಮಹಿಳೆಯರು ಮತ್ತು ಹುಡುಗಿಯರ ಭಾಗವಹಿಸುವಿಕೆಯನ್ನು ಬೆಂಬಲಿಸುವ ಬಲವಾದ ಬದ್ಧತೆಯ ತನ್ನ ನಿಲುವನ್ನು ಮುಂದುವರಿಸಿದೆ ಎಂದು ಆಸ್ಟ್ರೇಲಿಯಾದ ಕ್ರಿಕೆಟ್ ಆಡಳಿತ ಮಂಡಳಿ ಹೇಳಿದೆ.

'ಕ್ರೀಡಾ ಕ್ಷೇತ್ರದಿಂದ ಬ್ರಿಜ್ ಭೂಷಣ್ ಹೊರಹಾಕಿ'



ವಿನೇಶಾ



ಸಾಕ್ಷಿ ಮಲಿಕ್

ನವದೆಹಲಿ (ಪಿಟಿಐ): ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರಂತಹ ದಬ್ಬಾಳಿಕೆಗಾರರನ್ನು ಭಾರತದ ಕ್ರೀಡಾ ಕ್ಷೇತ್ರದಿಂದ ಹೊರಹಾಕಲು ಏನಾದರೂ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಕುಸ್ತಿಪಟುಗಳಾದ ವಿನೇಶಾ ಫೋಗಾಟ್ ಮತ್ತು ಸಾಕ್ಷಿ ಮಲಿಕ್ ಒತ್ತಾಯಿಸಿದ್ದಾರೆ. ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ)ಗೆ ಆಡಳಿತಾತ್ಮಕ ಅಧಿಕಾರ ಹಸ್ತಾಂತರಿಸಿರುವ ಐಒಎ ನಿರ್ಧಾರವನ್ನು ಸಹ ಖಂಡಿಸಿದ್ದಾರೆ.

ಮಹಿಳಾ ಕುಸ್ತಿಪಟುಗಳಿಗೆ ಶರಣ್ ಸಿಂಗ್ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿದ ಇಬ್ಬರು ಕುಸ್ತಿಪಟುಗಳು ಪ್ರಧಾನಿ ಅವರು ಮಧ್ಯಪ್ರವೇಶಿಸಬೇಕು ಎಂದು ಎಕ್ಸ್‌ನಲ್ಲಿ ಮನವಿ ಮಾಡಿದ್ದಾರೆ.

ನರೇಂದ್ರ ಮೋದಿ ಅವರೇ ಮಹಿಳಾ ಶಕ್ತಿಯ ನಿಜವಾದ ಸತ್ಯವನ್ನು ನಾವು ತಿಳಿದುಕೊಳ್ಳೋಣ' ಎಂದು ಫೋಗಾಟ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಮಹಿಳಾ ಕುಸ್ತಿಪಟುಗಳನ್ನು ಶೋಷಿಸಿದ ಬ್ರಿಜ್ ಭೂಷಣ್ ಮತ್ತೆ ಕುಸ್ತಿಯ ಚುಕ್ಕಾಣಿ ಹಿಡಿದಿದ್ದಾರೆ. ನೀವು (ಪ್ರಧಾನಿ) ಮಹಿಳೆಯರನ್ನು ಗುರಾಣಿಗಳಾಗಿ ಬಳಸುವುದಲ್ಲದೆ, ಅಂತಹ ದಬ್ಬಾಳಿಕೆಗಾರರನ್ನು ದೇಶದ ಕ್ರೀಡಾ ಸಂಸ್ಥೆಗಳಿಂದ ಹೊರಹಾಕಲು ಏನಾದರೂ ಮಾಡುತ್ತೀರಿ ಎಂದು ಆಶಿಸುತ್ತೇವೆ' ಎಂದು ಹೇಳಿದ್ದಾರೆ.

ಕ್ರಿಕೆಟ್: ಪರ್ತ್‌ನಲ್ಲಿ ಮೊದಲ ಟೆಸ್ಟ್

ಮೆಲ್ಬರ್ನ್ (ಪಿಟಿಐ); ವರ್ಷದ ಕೊನೆಯಲ್ಲಿ ಭಾರತದ ಬಹುನಿರೀಕ್ಷಿತ ಆಸ್ಟ್ರೇಲಿಯಾ ಪ್ರವಾಸದ ಸಂದರ್ಭದಲ್ಲಿ ಐದು ಟೆಸ್ಟ್‌ಗಳು ಇರಲಿದ್ದು, ಸರಣಿಯ ಮೊದಲ ಟೆಸ್ಟ್ ಪಂದ್ಯ ಪರ್ತ್‌ನಲ್ಲಿ ನಡೆಯಲಿದೆ.

'ಸಿಡ್ನಿ ಮಾರ್ನಿಂಗ್ ಹೆರಾಲ್ಡ್' ವರದಿ ಪ್ರಕಾರ, ಅಡಿಲೇಡ್‌ನಲ್ಲಿ ಎರಡನೇ ಟೆಸ್ಟ್, ಬ್ರಿಸ್ಬೇನ್‌ನಲ್ಲಿ ಮೂರನೇ ಟೆಸ್ಟ್ ನಡೆಯಲಿದೆ. ಬಾಕ್ಸಿಂಗ್ ಡೇ ಟೆಸ್ಟ್ (ಡಿಸೆಂಬರ್ 26ರಿಂದ) ಸಂಪ್ರದಾಯದಂತೆ ಮೆಲ್ಬರ್ನ್‌ನಲ್ಲಿ ನಡೆಯಲಿದೆ. ಅಂತಿಮ ಟೆಸ್ಟ್ ಹೊಸ ವರ್ಷದ ಆರಂಭದಲ್ಲಿ ಸಿಡ್ನಿಯಲ್ಲಿ ನಡೆಯಲಿದೆ ಎಂದು ವರದಿ ತಿಳಿಸಿದೆ.

ಅಡಿಲೇಡ್ ಟೆಸ್ಟ್ ಹಗಲು-ರಾತ್ರಿ ಪಂದ್ಯವಾಗಲಿದೆ. ಪ್ರವಾಸ ನವೆಂಬರ್ ಕೊನೆಯಲ್ಲಿ ಆರಂಭವಾಗಲಿದೆ. ಅಂತಿಮ ವೇಳಾಪಟ್ಟಿ ಈ ತಿಂಗಳ ಕೊನೆಯಲ್ಲಿ ಘೋಷಣೆಯಾಗುವ ನಿರೀಕ್ಷೆಯಿದೆ.

'ಹಾಲ್ ಆಫ್ ಫೇಮ್'ಗೆ ಪಂಕಜ್



ಪಂಕಜ್ ಅಡ್ವಾಣಿ

ನವದೆಹಲಿ (ಪಿಟಿಐ): ವಿಶ್ವ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಚಾಂಪಿಯನ್ ಪಂಕಜ್ ಅಡ್ವಾಣಿ ಅವರು ಚೀನಾದ ಶಾಂಗ್ರಾ ನಗರದಲ್ಲಿನ ವಿಶ್ವ ಬಿಲಿಯರ್ಡ್ಸ್ ಮ್ಯೂಸಿಯಂನಲ್ಲಿ ಹಾಲ್ ಆಫ್ ಫೇಮ್‌ಗೆ ಸೇರ್ಪಡೆಗೊಳ್ಳುವ ಮೂಲಕ ತಮ್ಮ ವೃತ್ತಿಜೀವನದಲ್ಲಿ ಮತ್ತೊಂದು ಮೈಲಿಗಲ್ಲು ಸಾಧಿಸಿದ್ದಾರೆ.

ಕಳೆದ ನವೆಂಬರ್‌ನಲ್ಲಿ 38 ವರ್ಷದ ಕರ್ನಾಟಕದ ತಾರೆ, ಬಿಲಿಯರ್ಡ್ಸ್‌ನ ದೀರ್ಘ-ಸ್ವರೂಪದ ಸ್ಪರ್ಧೆಯಲ್ಲಿ ಆರಂಭದಿಂದಲೂ ಪೈಪೋಟಿ ನೀಡುತ್ತಿದ್ದ ತಮ್ಮ ಸಹ ಆಟಗಾರ ಸೌರವ್ ಕೊಠಾರಿ ಅವರನ್ನು ಸೋಲಿಸುವ ಮೂಲಕ ತಮ್ಮ 26 ನೇ ಐಬಿಎಸ್‌ಎಫ್ (ಅಂತರರಾಷ್ಟ್ರೀಯ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಫೆಡರೇಶನ್) ಪ್ರಶಸ್ತಿ ಗೆದ್ದರು.

ಸ್ಪಿನ್ ಮೋಡಿಯಿಂದ ಆರ್‌ಸಿಬಿಗೆ ಕಪ್ ಗೆದ್ದು ಕೊಟ್ಟ ಜೇವರ್ಗಿ ಹುಡುಗಿ

ಕೋಳಕೂರಿನ ಪ್ರತಿಭೆ 'ಶ್ರೇಯಾಂಕ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಅಪ್ಪನೊಂದಿಗೆ ಕ್ರಿಕೆಟ್ ಮೈದಾನಕ್ಕೆ ಹೋಗಿ, ಸುಮ್ಮನೆ ಬಾಲ್ ಎಸೆಯುತ್ತಿದ್ದ ಮೊಮ್ಮಗಳು ಮುಂದೊಂದು ದಿನ ಭಾರತದ ರಾಷ್ಟ್ರೀಯ ಮಹಿಳಾ ಕ್ರಿಕೆಟ್ ತಂಡ ಪ್ರತಿನಿಧಿಸಿ, ಆರ್‌ಸಿಬಿಗೆ ಕಪ್ ಗೆದ್ದು ಕೊಡುತ್ತಾಳೆ ಅಂದುಕೊಂಡಿರಲಿಲ್ಲ. ಇವತ್ತು ಆಕೆಯಿಂದ ಹಿಂದುಳಿದ ಜೇವರ್ಗಿ ತಾಲ್ಲೂಕಿನ ಕೋಳಕೂರು ಇಂಡಿಯಾ ಮ್ಯಾಪ್‌ನಲ್ಲಿ ಗುರುತಿಸಿಕೊಂಡಾದ್ ನೋಡ್ರಿ...'

ಹೀಗೆ ಹೆಮ್ಮೆಯಿಂದ ನುಡಿದಿದ್ದು ಕರ್ನಾಟಕದ ಕ್ರಿಕೆಟ್ ಆಟಗಾರ್ತಿ ಶ್ರೇಯಾಂಕ ಪಾಟೀಲ ಅವರ ಅಜ್ಜ ಎ.ಎಂ.ಪಾಟೀಲ. ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಎರಡನೇ ಆವೃತ್ತಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರಿಗೆ (ಆರ್‌ಸಿಬಿ) ಸ್ಪಿನ್ ಮೋಡಿಯಿಂದ ಕಪ್ ಗೆದ್ದು ಕೊಡುವಲ್ಲಿ ಅಮೋಘ ಪ್ರದರ್ಶನ ನೀಡಿದ್ದು ಇದೇ ಶ್ರೇಯಾಂಕ ಪಾಟೀಲ. ಆಕೆಯ ಅಜ್ಜನ ಊರಲ್ಲಿ ಸಂಭ್ರಮ ಮನೆ ಮಾಡಿದೆ. ಮನೆಗೆ ಬಂದವರು, ಫೋನ್ ಮಾಡಿದವರೆಲ್ಲ, 'ಶ್ರೇಯಾಂಕ ಊರಿಗೆ ಬರುವುದು ಯಾವಾಗ?' ಎಂಬ ಪ್ರಶ್ನೆ ಮುಂದಿಡುತ್ತಿದ್ದಾರೆ.

ಶ್ರೇಯಾಂಕ ಹುಟ್ಟಿ ಬೆಳೆದಿದ್ದು ಬೆಂಗಳೂರಲ್ಲಿ. ಆದರೆ, ಆಕೆಯ ಅಪ್ಪ, ಅಜ್ಜ, ಪೂರ್ವಿಕರ ತವರು ಕಲಬುರಗಿಯ ಕೋಳಕೂರ ಗ್ರಾಮ. ಕಾರ್ಮಿಕರಾಗಿದ್ದ ಎ.ಎಂ.ಪಾಟೀಲ ಅವರು ದಶಕಗಳ ಹಿಂದೆಯೇ ಬೆಂಗಳೂರಿಗೆ ವರ್ಗಾವಣೆಯಾಗಿದ್ದರು. ನಿವೃತ್ತಿಯ ಬಳಿಕ ಸ್ವಗ್ರಾಮಕ್ಕೆ ವಾಪಸಾದರು. ಆದರೆ, ಕ್ರಿಕೆಟ್ ಮೇಲಿನ ಪ್ರೀತಿಯಿಂದಾಗಿ ಅವರ ಮಗ ರಾಜೇಶ ಪಾಟೀಲ ಬೆಂಗಳೂರಿನಲ್ಲಿ ನೆಲೆಯೂರಿದರು.



ಅಜ್ಜಿ, ತಾತನೊಂದಿಗೆ ಶ್ರೇಯಾಂಕ ಪಾಟೀಲ

'ನನ್ನ ಮಗ (ರಾಜೇಶ) ಒಳ್ಳೆಯ ಕ್ರಿಕೆಟಿಗ. ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ಬಲಗೈ ಬಂಟನಂತೆ ಇದ್ದ. ಮಗನನ್ನು ರಾಷ್ಟ್ರೀಯ ತಂಡಕ್ಕೆ ಸೇರ್ಪಡೆ ಮಾಡಬೇಕೆಂದು ಸಾಕಷ್ಟು ಕಷ್ಟಪಟ್ಟಿದ್ದೆ. ಜೀವರಾಜ್ ಆಳ್ವ ಕ್ರೀಡಾ ಸಚಿವರಾಗಿದ್ದಾಗ ಶಾಸಕರಾಗಿದ್ದ ಎಂ.ವೈ. ಪಾಟೀಲ, ಎಸ್.ಕೆ. ಕಾಂತಾ, ಬಿ.ಆರ್. ಪಾಟೀಲ ಅವರೂ ಯತ್ನಿಸಿದ್ದರೂ ಸಾಧ್ಯವಾಗಲಿಲ್ಲ. ಆದರೆ, ನನ್ನ ಮೊಮ್ಮಗಳು ನನ್ನ ಕನಸು ನನಸು ಮಾಡಿ, ನಮ್ಮ ಮನೆತನಕ್ಕೆ ಒಳ್ಳೆಯ ಹೆಸರು ತಂದುಕೊಟ್ಟಿದ್ದಾಳೆ' ಎನ್ನುತ್ತಾರೆ ಎ.ಎಂ.ಪಾಟೀಲ.

'ಬ್ಯುಸಿಯಾದ ಕ್ರಿಕೆಟ್ ಶೆಡ್ಯೂಲ್ ನಿಂದಾಗಿ ಹೆಚ್ಚಿನ ಸಮಯ ಮೈದಾನದಲ್ಲಿ ಕಳೆಯುತ್ತಾಳೆ. 15 ದಿನಗಳ ಹಿಂದೆ ಬೆಂಗಳೂರಿಗೆ ಹೋಗಿದ್ದೆವು. ಆದರೆ, ಆಕೆ ಕ್ರಿಕೆಟ್‌ನಲ್ಲಿ ಬ್ಯುಸಿಯಾಗಿದ್ದಳು. ಫೋನ್‌ನಲ್ಲಿ ಮಾತ್ರ ಮಾತಾಡಿದ್ದಳು' ಎಂದರು.

ಮಗಳ ಸಾಧನೆ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ರಾಜೇಶ ಪಾಟೀಲ, 'ಬೆಂಗಳೂರಿನ ಬಸವೇಶ್ವರ ನಗರದಲ್ಲಿ ಎಫಿಷಿಯಂಟ್ ಕ್ರಿಕೆಟ್ ಅಕಾಡೆಮಿ ಕ್ರಿಕೆಟ್ ಕ್ಯಾಂಪ್ ನಡೆಸುತ್ತಿದ್ದೆ. ಶ್ರೇಯಾಂಕ ಆಗ ಏಳೆಂಟು ವರ್ಷದವಳು ಇದ್ದಳು. ಸುಮ್ಮನೆ ಆಕೆಯನ್ನೂ ಕ್ಯಾಂಪ್‌ಗೆ ಕರೆದೊಯ್ಯುತ್ತಿದ್ದೆ. ನೆಟ್‌ನಲ್ಲಿ ತನಗೆ ತೋಚಿದಂತೆ ಬೌಲ್ ಮಾಡುತ್ತಿದ್ದಳು. ಸ್ವಲ್ಪ ದಿನಗಳ ಬಳಿಕ ಕ್ರಿಕೆಟ್ ಅನ್ನು ಗಂಭೀರವಾಗಿ ತೆಗೆದುಕೊಂಡು ರಾಷ್ಟ್ರೀಯ ತಂಡವನ್ನು ಪ್ರತಿನಿಧಿಸಿದಳು. ಇವತ್ತು ಆರ್‌ಸಿಬಿ ಕಪ್ ಗೆಲ್ಲಲು ತಾನೂ ಕಾರಣವಾದಳು' ಎಂದು ನುಡಿದರು.

'ಕರ್ನಾಟಕದ ಜೂನಿಯರ್ ತಂಡದಲ್ಲಿ ದೊಡ್ಡ ಗಣೇಶ್, ಶ್ರೀನಿವಾಸ ಮೂರ್ತಿ, ವಿಜಯ ಭಾರದ್ವಾಜ್ ಜೊತೆಗೆ ಸಾಕಷ್ಟು ಕ್ರಿಕೆಟ್ ಆಡಿದ್ದೇನೆ. ರಣಜಿ, ಭಾರತ ತಂಡವನ್ನು ಪ್ರತಿನಿಧಿಸಲು ನನ್ನಿಂದ ಆಗಲಿಲ್ಲ. ಆದರೆ, ನನ್ನ ಮಗಳು ನನ್ನ ಆಸೆಗಳನ್ನು ಈಡೇರಿಸಿದ್ದಾಳೆ. ಆರ್‌ಸಿಬಿಗೂ ಒಳ್ಳೆಯ ಹೆಸರು ತಂದುಕೊಟ್ಟಿದ್ದಾಳೆ' ಎಂದರು.

ಮಿಯಾಮಿ ಓಪನ್ ಟೆನಿಸ್: ನಗಾಲ್ ನಿರ್ಗಮನ

ನವದೆಹಲಿ (ಪಿಟಿಐ): ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ಅಮೆರಿಕದ ನಡೆಯುತ್ತಿರುವ ಮಿಯಾಮಿ ಓಪನ್ ಟೆನಿಸ್ ಟೂರ್ನಿಯ ಮುಖ್ಯ ಸುತ್ತು ಪ್ರವೇಶಿಸಲು ವಿಫಲವಾದರು.

ಮಂಗಳವಾರ ಇಲ್ಲಿ ನಡೆದ ಕ್ವಾಲಿಫೈಯರ್ ಹಂತದ ಅಂತಿಮ ಸುತ್ತಿನ ಪಂದ್ಯದಲ್ಲಿ 26 ವರ್ಷದ ನಗಾಲ್ 6-3 1-6 5-7ರಿಂದ ಹಾಂಗ್‌ಕಾಂಗ್‌ನ 19 ವರ್ಷದ ಕೋಲ್ಮನ್ ವಾಂಗ್ ವಿರುದ್ಧ ಪರಾಭವಗೊಂಡರು.



ಸುಮಿತ್ ನಗಾಲ್

ಇದಕ್ಕೂ ಮೊದಲು ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ನಗಾಲ್ 7-6(3), 6-2 ರಿಂದ ಕೆನಡಾದ ಗೇಬ್ರಿಯಲ್ ಡಯಲೊ ವಿರುದ್ಧ ನೇರ ಸೆಟ್‌ಗಳ ಗೆಲುವು ಸಾಧಿಸಿ ಶುಭಾರಂಭ ಮಾಡಿದ್ದರು. ಏಳನೇ ಗೇಮ್‌ನಲ್ಲಿ ಬ್ರೇಕ್ ಪಾಯಿಂಟ್ ಉಳಿಸಿದ ನಂತರ ನಗಾಲ್ ಮೊದಲ ಸೆಟ್‌ಅನ್ನು ಟೈಬ್ರೇಕರ್ ಮೂಲಕ ಗೆದ್ದರು. ಎರಡನೇ ಸೆಟ್‌ನಲ್ಲಿ ಅವರು ಪ್ರಾಬಲ್ಯ ಮೆರೆದರು. ಮೊದಲ ಮತ್ತು 7ನೇ ಗೇಮ್ಸ್‌ನಲ್ಲಿ ಎದುರಾಳಿಯ ಸರ್ವ್ ಬ್ರೇಕ್ ಮಾಡಿದರು. ಈ ಗೆಲುವಿನಿಂದಾಗಿ ಅವರು ಎಟಿಪಿ ಕ್ರಮಾಂಕ ಪಟ್ಟಿಯಲ್ಲಿ ಜೀವನಶ್ರೇಷ್ಠ 92ನೇ ಸ್ಥಾನಕ್ಕೇರುವ ಸಾಧ್ಯತೆ ಇದೆ.



ಶರತ್ ಕಮಲ್

ರ್‍ಯಾಂಕಿಂಗ್: ಶರತ್‌ಗೆ ಬಡ್ತಿ, ಒಲಿಂಪಿಕ್ಸ್ ಹಾದಿ ಸುಗಮ

ನವದೆಹಲಿ (ಪಿಟಿಐ): ಭಾರತದ ಅನುಭವಿ ಟೇಬಲ್ ಟೆನಿಸ್ ಆಟಗಾರ ಶರತ್ ಕಮಲ್ ಅವರು ಮಂಗಳವಾರ ಪ್ರಕಟಗೊಂಡ ಐಟಿಟಿಎಫ್ ವಿಶ್ವ ರ್‍ಯಾಂಕಿಂಗ್‌ನಲ್ಲಿ 54 ಸ್ಥಾನಗಳ ಬಡ್ತಿಯೊಂದಿಗೆ 34ನೇ ಸ್ಥಾನಕ್ಕೆ ಏರಿದ್ದಾರೆ. ಹೀಗಾಗಿ, ಅವರಿಗೆ ಪ್ಯಾರಿಸ್ ಒಲಿಂಪಿಕ್ಸ್ ಹಾದಿ ಸುಗಮವಾಗಿದೆ.

41 ವರ್ಷದ ಶರತ್ ಅವರು ಈ ಹಿಂದೆ ದೀರ್ಘಕಾಲ ಅಗ್ರ 50ರಲ್ಲಿ ಸ್ಥಾನ ಪಡೆದಿದ್ದರು. ವಾರದ ಹಿಂದೆ 88ನೇ ಕ್ರಮಾಂಕದಲ್ಲಿದ್ದ ಅವರು ಸಿಂಗಪುರ ಸ್ಮ್ಯಾಶ್ ಟಿಟಿ ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್ ಹಂತ ತಲುಪಿದ್ದರು.

ಈ ಹಾದಿಯಲ್ಲಿ ಅವರು 15ನೇ ರ್‍ಯಾಂಕ್‌ನ ಡಾರ್ಕೊ ಜಾರ್ಜಿಕ್ (ಸ್ಲೋವೇನಿಯಾ) ಮತ್ತು 17ನೇ ರ್‍ಯಾಂಕ್‌ನ ಒಮರ್ ಅಸ್ಸಾರ್ (ಈಜಿಪ್ಟ್) ಅವರಿಗೆ ಆಘಾತ ನೀಡಿದ್ದರು. ಹೀಗಾಗಿ, ಕೊನೆಯ ಎಂಟು ಪಂದ್ಯಗಳಿಂದ 400 ಪಾಯಿಂಟ್ಸ್ ಸಂಪಾದಿಸಿರುವ ಅವರು, ರ್‍ಯಾಂಕಿಂಗ್‌ನಲ್ಲಿ ಸುಧಾರಣೆ ಕಂಡಿದ್ದಾರೆ.

ಪುರುಷರ ಸಿಂಗಲ್ಸ್‌ನಲ್ಲಿ ಇಬ್ಬರು ಆಟಗಾರರನ್ನು ಭಾರತ ಟೇಬಲ್ ಟೆನಿಸ್ ಫೆಡರೇಷನ್ ಮೇ 16ರೊಳಗೆ ಅವರ ವಿಶ್ವ ರ್‍ಯಾಂಕಿಂಗ್ ಆಧಾರದ ಮೇಲೆ ಪ್ಯಾರಿಸ್ ಒಲಿಂಪಿಕ್ಸ್‌ಗೆ ಆಯ್ಕೆ ಮಾಡುತ್ತದೆ. ಪ್ರಸ್ತುತ ಶರತ್ ಮತ್ತು ಹರ್ಮೀತ್ ದೇಸಾಯಿ (65ನೇ ರ್‍ಯಾಂಕ್) ಮೊದಲೆರಡು ಸ್ಥಾನದಲ್ಲಿದ್ದಾರೆ.

ಭಾರತದ ಪುರುಷ ಮತ್ತು ಮಹಿಳಾ ಟೇಬಲ್ ಟೆನಿಸ್ ತಂಡಗಳು ಮೊದಲ ಬಾರಿಗೆ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದು ಈಗಾಗಲೇ ಇತಿಹಾಸ ನಿರ್ಮಿಸಿವೆ.